ಸಂವಾದ

ಜುಲೈ ೨೦೦೬ ರೂ.೨೦

ಮೀಸಲಾತಿ ವಿಶೇಷಾಂಕ

ಬೆಂಕಿ ಮತ್ತು ಬೆಳಕು

ಸಂವಾದ

ಮಾಸ ಪತ್ರಿಕೆ

ಸಂಪುಟ ೪ ಸಂಚಿಕೆ ೯
ಜುಲೈ ೨೦೦೬

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
✆ ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306
e-mail : samvaada@hotmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೩
- ❑ ಹೊಸ ಪುಸ್ತಕ ೪
- ❑ ಅಂತರಂಗ ೫
- ❑ ಮೀಸಲಾತಿ: ಬೆಂಕಿ ಮತ್ತು ಬೆಳಕು ೬
  - ○ ಶಿವಸುಂದರ್
- ❑ 'ಮಾರ್ಕ್ಸ್‌ಕಾರ್ಡ್ ಪ್ರತಿಭೆ'ಯ ಸುತ್ತ ಮುತ್ತ ೧೦
  - ○ ಎನ್.ಎಸ್. ಶಂಕರ್

- ❑ ಕುತರ್ಕ ವಿತಂಡವಾದಗಳ ನಡುವೆ ೧೪
  - ○ ಪ್ರೊ॥ ವಿ.ಎಸ್. ಶ್ರೀಧರ್
- ❑ ದಕ್ಷಿಣದ ಮೀಸಲಾತಿ ಪ್ರಯೋಗ ೧೮
  - ○ ವೆಂಕಟೇಶ್ ರಾಮಕೃಷ್ಣನ್
- ❑ ಮೀಸಲಾತಿ: ಪ್ರಶ್ನೋತ್ತರ ೨೨
  - ○ ಡಾ॥ ಎಲ್. ಬಸವರಾಜು
  - ○ ಜಿ. ರಾಜಶೇಖರ್
  - ○ ಡಾ॥ ಯು. ಆರ್. ಅನಂತಮೂರ್ತಿ
  - ○ ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮೀಜಿ
  - ○ ಶ್ರೀ ಶಿವಮೂರ್ತಿ ಮುರುಘಾ ಶರಣರು
  - ○ ಪ್ರೊ॥ ಕೆ. ಮರುಳಸಿದ್ದಪ್ಪ
  - ○ ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳು
  - ○ ಪ್ರೊ॥ ಕಾರ್ಲೋಸ್
  - ○ ಡಾ॥ ಸಿದ್ದನಗೌಡ ಪಾಟೀಲ್







- ❑ ಭಾರತೀಯ ಜಾತಿ ಮಾಧ್ಯಮಗಳು ೩೦
  - ○ ಸಿದ್ಧಾರ್ಥ ವರದರಾಜನ್
- ❑ ಜಾತಿ ಎಂದರೆ ಅಭಿವ್ಯಕ್ತಿಯ ಕ್ರಮ ೩೨
  - ○ ಡಾ॥ ಲಕ್ಷ್ಮೀಪತಿ ಸಿ.ಜಿ.
- ❑ ಮೀಸಲಾತಿ; ಅಮೆರಿಕಾ ಅನುಭವ ೩೫
  - ○ ಪ್ರೊ॥ ಕೆವಿನ್ ಡಿ. ಬ್ರೌನ್
- ❑ ದಲಿತ್ ಡೈರಿ ೩೮
  - ○ ಚಂದ್ರ ಭಾನ್ ಪ್ರಸಾದ್
- ❑ ಬುದ್ಧಾಯಣ ೪೨
  - ○ ಸಿ. ಎಚ್. ರಾಜಶೇಖರ್



ಕವನಗಳು : ❑ ಪ್ರಮಾದ ಮನ್ನಿಸು ಪ್ರಭುವೇ ೧೩ ❑ ಹನಿಗವನ ೩೪
❑ ಸೂಜಿಕಣ್ಣು ೩೭

ಮುಖಪುಟ ಕಲೆ: ವೆಂಕಟಾಚಲಪತಿ, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಜಾತೀಯತೆಯ ರಾಜಕೀಯ ಮುಖ

ಪ್ರಿಯ ಸಂಪಾದಕರೇ,

ಭಾರತೀಯ ಸಮಾಜದಲ್ಲಿರುವ ಧರ್ಮ, ಜಾತಿ, ಜನಾಂಗಗಳ ಪರಂಪರೆ ಮತ್ತು ಆಚರಣೆಗಳನ್ನು ಒಳಗೊಂಡ ಒಂದು ಮೌಲಿಕ, ಚಲನಶೀಲ ಕ್ರಿಯೆಯೇ ಸಂಸ್ಕೃತಿ. ಇವು ಯಾವದರಲ್ಲಾದರೂ ದೋಷವುಂಟಾದರೆ ಅದು ಸಂಸ್ಕೃತಿಯ ದೋಷವೆಂಬಂತೆ ಕಂಡುಬರುತ್ತದೆ. ಅದನ್ನು ಸಂಸ್ಕೃತಿಯ ದೌರ್ಬಲ್ಯವೆಂಬಂತೆ ವ್ಯಾಖ್ಯಾನಿಸುವವರೂ ಇದ್ದಾರೆ. ಪಾರಂಪರಿಕ ಸಂಪ್ರಾದಯ ವಾದಿಗಳು ಈ ರೀತಿ ಮಾಡಲು ಒಂದು ಹೆಜ್ಜೆ ಮುಂದಿರುತ್ತಾರೆ. ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳನ್ನು ಇಂದು ಎಡ, ಬಲ, ಮಧ್ಯ, ಪಂಥಗಳ ಎಲ್ಲ ಪರಂಪರೆಯವರೂ ಒಕ್ಕೊರಲಿನಿಂದ ವಿರೋಧಿಸುತ್ತಿದ್ದಾರೆ. ಆದರೆ ಎಲ್ಲರ ವಿರೋಧಗಳಿಗೆ ಕಾರಣಗಳು ಮಾತ್ರ ಒಂದೇ ಆಗಿಲ್ಲ. ಬೇರೆ ಬೇರೆಯಾಗಿದೆ. ಇವೆಲ್ಲವುಗಳ ಫಲಶೃತಿಯಾಗಿ ಜಾತೀಯತೆಯೆಂಬುದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಮುಕ್ತ ಸಾರ್ವಭೌಮತ್ವ ಪಡೆದಿರುವ ಮತದಾರನಿಗೂ ಮತ ಚಲಾಯಿಸುವಾಗ ದ್ವಂದ್ವಕ್ಕೆ, ಸಂಕೀರ್ಣಕ್ಕೆ ಸಿಲುಕಿಸುತ್ತಿದೆ. ಮೀಸಲಾತಿ, ಒಳಮೀಸಲಾತಿಗಳು ಲಿಂಗಾಧಾರಿತ, ಸಂಖ್ಯಾಧಾರಿತ, ಆರ್ಥಿಕ ಸ್ಥಿತಿ ಆಧಾರಿತ ಎಂಬೆಲ್ಲ ನಿಕಷಗಳಿಗೆ ಒಡ್ಡಲ್ಪಟ್ಟು ರಾಜಕಾರಣಿಗಳ ಅಸ್ತ್ರವಾಗುತ್ತಿವೆ. ಇಂತಹ ಸಂಘರ್ಷಮಯ ಸಂಗತಿಯನ್ನೇ ರಾಜಕೀಯ ಧುರೀಣರು ಒಡೆದು ಆಳಲು ಅನುಕೂಲಕರವಾಗಿ ಬಳಸಿಕೊಳ್ಳುತ್ತಿದ್ದಾರೆ.

ಇವುಗಳ ಮಧ್ಯ ಈಚೆಗೆ ದಿನ ಕ್ಕೊಂದರಂತೆ ಜಾತಿ ಸಂಘಟನೆಗಳು ಹುಟ್ಟುತ್ತಲೇ ಇವೆ. ಈ ಸಂಘಗಳು ಉದಯವಾಗುವಾಗ ಉದಾತ್ತ ಉದ್ದೇಶವನ್ನೇ ಪ್ರಚಾರ ಮಾಡುತ್ತವೆ. ಆದರೆ ಕಾರ್ಯಾಚರಣೆಯ ಪ್ರಸಂಗದಲ್ಲಿ ಮಾತ್ರ ಜಾತಿ ಸಂಘರ್ಷದ ದಾರಿಯೇ ಇವಕ್ಕೆ ಮುಖ್ಯವಾಗುತ್ತದೆ. ಮಠಪೀಠಗಳ ಸ್ಥಾಪನೆ, ಅವುಗಳಿಗಾಗಿ ಚರ-ಸ್ಥಿರ ಆಸ್ತಿಗಳ ಸಂಪತ್ತಿನ ಸಂಗ್ರಹ ಆರಂಭವಾಗುತ್ತದೆ. ಈ ರೀತಿಯ ಸಂಪತ್ತಿನ ಆಧಿಕ್ಯ ಸಹಜವಾಗಿ ಅಧಿಕಾರದ ವ್ಯಾಮೋಹಕ್ಕೆ ಕಾರಣವಾಗುತ್ತದೆ. ಅಧಿಕಾರ ವ್ಯಾಮೋಹ ತಮ್ಮ-ತಮ್ಮವರನ್ನೇ ಅಧಿಕಾರದ ಗದ್ದುಗೆಯಲ್ಲಿ ವಿರಾಜಮಾನರಾಗುವಂತೆ ಮಾಡುತ್ತದೆ. ಚುನಾವಣೆ ಅಕ್ರಮಗಳು ಆರಂಭವಾಗುತ್ತವೆ. ತಮ್ಮ ಜಾತಿ-ಜನಾಂಗದ ಅಭ್ಯರ್ಥಿಯ ಆಯ್ಕೆಗಾಗಿ ಅನೈತಿಕ ಸಂವಿಧಾನಿಕ ಚಟುವಟಿಕೆಗಳು ಕಾರ್ಯಗತಗೊಳ್ಳುತ್ತವೆ.

ಇಷ್ಟಾದರೂ ಜಾತಿಸಂಘಟನೆಯೊಂದು ಕಟ್ಟಲ್ಪಡುವಾಗ ಇದ್ದ ಕನಸುಗಳು ನನಸಾದವೇ? ಎಂದರೆ ನಿಷೇಧಾತ್ಮಕ ಉತ್ತರವೇಕಾದಿರುತ್ತದೆ. ಆಯಾ ಜಾತಿಯ-ಜನಾಂಗದ ಜನತೆ, ಮಹಿಳೆಯರು, ದುರ್ಬಲರು ಸುಶೀಕ್ಷಿತರಾದರೇ? ಆರ್ಥಿಕವಾಗಿ ಔದ್ಯೋಗಿಕವಾಗಿ ತಮ್ಮ ಜೀವನವನ್ನು ಸ್ವಾವಲಂಬಿಯಾಗಿ ನಡೆಸುತ್ತಿರುವರೇ? ಸಂಘಟನೆ ಮೂಲಕ ಸಂಗ್ರಹವಾದ ಸಂಪತ್ತಿನ ವಿತರಣೆ ನ್ಯಾಯಬದ್ಧವಾಗಿ ನಡೆದಿದೆಯೇ? ಸಂಘದ ಕೊನೆಯ ವ್ಯಕ್ತಿ (ಜನಸಾಮಾನ್ಯ ಮನುಷ್ಯ) ಇದರಿಂದ ಏನನ್ನು ಪಡೆದ? ಬಡತನ ನಿವಾರಣೆ ಆಯಿತೇ? ಲಿಂಗಸಮಾನತೆ ಸಾಧಿಸಲ್ಪಟ್ಟಿತೆ? ಯಾವುದಕ್ಕೂ ಧನಾತ್ಮಕ ಉತ್ತರಗಳಿಲ್ಲ. ಸಾಧಿಸಿದ್ದು ಅಷ್ಟಿಷ್ಟು ರಾಜಕೀಯ ಪ್ರಬಲ್ಯ, ಒಂದಷ್ಟು ಅಧಿಕಾರದ ಹುದ್ದೆಗಳು ಮಾತ್ರ. ಇಷ್ಟನ್ನು ಪಡೆಯುವದಕ್ಕಾಗಿ ಕೈಗೊಂಡ ಅಕ್ರಮಗಳು ಎಷ್ಟು? ಒಮ್ಮೆ ಸಿಂಹಾವಲೋಕನಗೈದರೆ ದುರಂತಮಯ ಮಾರ್ಗ ಕಣ್ಣಿಗೆ ರಾಚುತ್ತದೆ.

ಜಾತಿ ಸಂಘಟನೆಗಳಲ್ಲಿ ಜನ ಒಗ್ಗೂಡುತ್ತಿರುವುದು ವೈಚಾರಿಕತೆಯ ವಿಸ್ತಾರಕ್ಕಂತೂ ಅಲ್ಲ. ಪ್ರತಿ ಸಂಘಟನೆಯೂ ಒಬ್ಬೊಬ್ಬ ಸುಧಾರಕನನ್ನು ಮುಂದಿರಿಸಿಕೊಂಡು ವ್ಯಕ್ತಿಪೂಜೆ ಮಾಡುವದರಲ್ಲಿಯೇ ಮೈಮರೆತಿವೆ. ಆ ಸುಧಾರಕರು ತಮ್ಮ ಜೀವನವಿಡೀ ಯಾವ ಕಂದಾಚಾರಗಳನ್ನು ಧಿಕ್ಕರಿಸಿದ್ದರೋ ಅದೇ ಆಚರಣೆಗಳನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುತ್ತ ಮುಂದುವರಿಸಲಾಗುತ್ತದೆ. ತೀರ ಆತಂಕದ ವಿಷಯವೆಂದರೆ ಈ ಸಂಘಗಳು ತಮ್ಮವರ ಭ್ರಷ್ಟಾಚಾರ, ಕರ್ತವ್ಯಲೋಪಗಳಿಗೂ ನೈತಿಕ ಬೆಂಬಲ ನೀಡಿ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವುದು. ಈ ಬೆಳವಣಿಗೆಗಳು ಪ್ರಗತಿಪರವೇ?

ಡಿ.ಎಂ. ನದಾಫ್, ಅಫಜಲಪುರ,
ಗುಲ್ಬರ್ಗ



ಪತ್ರಾಗಾರ

ವೈಚಾರಿಕತೆಯ ಸಮರ್ಥ ಪ್ರತಿನಿಧಿ

ಯ ಶ್ರೀ ಇಂದೂಧರ
ಹೊನ್ನಾಪುರ,

ಸಾಕಷ್ಟು ಕಾಲದಿಂದ ನೀವು ಶ್ವಾಸ ದಿಂದ 'ಸಂವಾದ' ಪತ್ರಿಕೆಯನ್ನು ನನಗೆ ಕಳುಹಿಸುದ್ದೀರಿ. ಪತ್ರಿಕೆ ತುಂಬ ಚೆನ್ನಾಗಿರುತ್ತಿದೆ. ಸಮಕಾಲೀನ ಸಾಮಾಜಿಕ ವೈಚಾರಿಕತೆಯ ಸಮರ್ಥವಾದ ಪ್ರತಿನಿಧಿಯಂತಿರುವ ಈ ಪತ್ರಿಕೆಗೆ ನನ್ನನ್ನು ದಯಮಾಡಿ ಚಂದಾದಾರರನ್ನಾಗಿ ನೋಂದಾಯಿಸಿಕೊಳ್ಳಿರಿ. ಇದರೊಂದಿಗೆ ೧೫೦೦ ರೂ.ಗಳ ಒಂದು ಚೆಕ್ ಇದೆ. ವಂದನೆಗಳು,

ನಿಮ್ಮ ವಿಶ್ವಾಸಿ

ಡಾ॥ ಜಿ. ಎಸ್. ಶಿವರುದ್ರಪ್ಪ,
ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ.೧೦೦/-	ರೂ.೩೦೦/-	ರೂ.೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಗೂಂಡಾಗಿರಿಗೆ ಇಳಿದ ಡೋಂಗಿ ನಾಯಕರು

ಸನ್ಮಾನ್ಯ ಸಂಪಾದಕರೇ

ಏಪ್ರಿಲ್ ೧೪ ಬಂದರೆ, ಅಂಬೇಡ್ಕರರು ಹುಟ್ಟಿದ ದಿನವೆಂದು ನಾಡಿನ ದಲಿತರು ಪಡುವಷ್ಟೇ ಸಂತೋಷ ನನಗೂ ಆಗುತ್ತದೆ. ಆದರೆ, ಇನ್ನೊಂದು ದೃಷ್ಟಿಯಿಂದ ಭಯವೂ ಆಗುತ್ತದೆ. ಏಕೆಂದರೆ, ನಾನೊಬ್ಬ ಅತೀ ಚಿಕ್ಕ ಹಾಗೂ ಬಡ ಚಿತ್ರ ಕಲಾವಿದ. ನಾನಿರುವ ಊರಿನಲ್ಲಿಯೇ ಸಣ್ಣದೊಂದು ಪೇಂಟಿಂಗ್ ಅಂಗಡಿ ಹಾಕಿಕೊಂಡು ಬದುಕು ಸಾಗಿಸುತ್ತಿದ್ದೇನೆ.

ಅಂಥಹದ್ದರಲ್ಲಿ ಏಪ್ರಿಲ್ ೧೪ ಬಂದರೆ ಸಾಕು ದಲಿತ ಸಂಘರ್ಷ ಸಮಿತಿಯ ವಿವಿಧ ಬಣದ ಕಾರ್ಯಕರ್ತರು, ಅಂಬೇಡ್ಕರ್, ಬುದ್ಧ, ಅಶೋಕ ಚಕ್ರ, ಬ್ಯಾನರ್‌ಗಳು, ಹಾಗೂ ಗೋಡೆಬರಹ ಇನ್ನಿತರ ಚಿತ್ರಕಲೆಗೆ ಸಂಬಂಧಪಟ್ಟ ಕೆಲಸವನ್ನು ಮಾಡಿಸಿಕೊಂಡು ಹಣ ನೀಡದೆಯೇ ಹಾಗೆಯೇ ಹೊರಟು ಹೋಗುತ್ತಾರೆ. ಅವರನ್ನು ಕುರಿತು ವಿನಂತಿ ಪೂರಕವಾಗಿ ಹಣ ಕೇಳಿದರೆ ನಾವೇನು ನಮ್ಮ ಮನೆಯ ಕೆಲಸ ಮಾಡಿಸಿಲ್ಲ. ಬಾಬಾಸಾಹೇಬರ ಕೆಲಸ ವಿದು. ದಲಿತನಾದ ನೀನು ಹಣ ಕೇಳಲೇ ಬಾರದು ಏಕೆ ನಿನಗೆ ಅಂಬೇಡ್ಕರ್‌ರವರ ಬಗ್ಗೆ ಅಭಿಮಾನವಿಲ್ಲವೇ...? ಎಂದು ಗೂಂಡಾಗಳಂತೆ ಉದ್ಗರಿಸಿ ಮರು ಉತ್ತರ ನೀಡುತ್ತಾರೆ. ನಾವುಗಳು ಅಂಬೇಡ್ಕರ್ ಅಭಿಮಾನಿಗಳು ನಿಜ, ಅದನ್ನು ಕೊರಳಿಗೆ ನೀಲಿ ಶಾಲು ಹಾಕಿ ಎದೆ ಸೀಳಿ ತೋರಿಸಬೇಕಾಗಿಲ್ಲ.

ಅನೇಕ ಬಾರಿ ರಿಯಾಯಿತಿ ದರದಲ್ಲಿಯೇ ಕೆಲಸ ಮಾಡಿಕೊಡುತ್ತೇನೆ. ಸಣ್ಣ ಪುಟ್ಟ ಕೆಲಸಗಳಿಗೆ ಯಾವುದೇ ರೀತಿಯ ಹಣ ಕೇಳುವುದೇ ಇಲ್ಲ. ಹೀಗೆಯೇ ಬರುವವರೆಲ್ಲರಿಗೂ ಉಚಿತವಾಗಿ ಚಿತ್ರಿಸಿಕೊಟ್ಟರೆ ನಾವುಗಳು ಬದುಕುವುದಾದರೂ ಹೇಗೆ.? ಈ ಸತ್ಯ ಅಂಬೇಡ್ಕರ್ ಅಭಿಮಾನಿಗಳಿಗೆ ಅರ್ಥವಾಗದೇ ಇರುವುದು ವಿಪರ್ಯಾಸವೇ ಸರಿ. ಈ ರೀತಿಯ ನಡುವಳಿಕೆ ಹೀಗೆಯೇ ಮುಂದುವರಿದರೆ, ಬರುವ ದಿನಗಳಲ್ಲಿ, ಊದುವವರು, ಭಾರಿಸುವವರು, ಪಬ್ಲಿಸಿಟಿಯವರು, ಚಿತ್ರಕಲಾವಿದರು, ಕರಪತ್ರ ಪ್ರಿಂಟ್ ಮಾಡುವವರು ಅಂಬೇಡ್ಕರ್ ಹೆಸರು ಹೇಳಿಕೊಂಡು ಬರುವವರನ್ನು ಕಂಡರೆ ಕಣ್ಣು ತಪ್ಪಿಸಿ ಓಡಿಹೋಗುವಂತಹ ದಿನಗಳು ಬರುತ್ತವೆ. ದಯವಿಟ್ಟು ಹೀಗಾಗದಿರಲಿ ಈ ಕುರಿತು ವಿಚಾರ ನೀಡುವಲ್ಲಿ 'ಸಂವಾದ' ಲೇಖನಗಳನ್ನು ಪ್ರಕಟಿಸಲಿ.

ಮಡಿವಾಳಪ್ಪ ಎಸ್.ಕೆ, ವಾಡಿ(ಜಂ)

ಭೂಮಿಗೀತೆ
ಲೇ: ಟಿ.ಎಸ್.ವಿವೇಕಾನಂದ
ಬೆಲೆ: ರೂ. ೧೮೦/-

ಪರಿಸರದ ಬಗ್ಗೆ ಮಾತಾಡುವುದು, ಸಭೆ-ಸಮಾರಂಭ ಏರ್ಪಡಿಸಿ ಭಾಷಣ ಬಿಗಿಯುವುದು ಈಗೀಗ ಫ್ಯಾಷನ್. ಇಂಥ ತೋರಿಕೆಯ ಬಡಬಡಿಕೆಯ ಹಿಂದೆ ನಿಜವಾದ ಕಾಳಜಿ ಜೀವಂತವಾಗಿರುವು ದಿಲ್ಲ. ಹತ್ತರಲ್ಲಿ ಹನ್ನೊಂದು ಎನ್ನುವಂತೆ ಪರಿಸರ ಕೂಡ 'ಲಾಭದ ಸರಕು' ಎನ್ನಿಸಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ವಿವೇಕಾನಂದ ಅವರ 'ಭೂಮಿಗೀತೆ' ಕೃತಿ ಅತಿ ಹೆಚ್ಚು ಅರ್ಥ ಉಳ್ಳದ್ದು. ನಮ್ಮ ಮಣ್ಣು, ನೀರು, ಕಾಡು ಮತ್ತು ಕನಿಜ ಹೇಗೆ ಹಗಲು ದರೋಡೆಯಾಗುತ್ತಿದೆ ಅನ್ನುವುದನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ.

ಪ್ರಕಾಶಕರು: ಇಂದ್ರಪ್ರಸ್ಥ ಪ್ರಕಾಶನ, ಗವಿಪುರಂ, ಬೆಂಗಳೂರು



ಸೂರು ಸೂರಿನ ದೀಪ
(ಜನಪರ ಹಾಡುಗಳ ಸಂಗ್ರಹ)
ಲೇ: ಹುರುಗಲವಾಡಿ ರಾಮಯ್ಯ
ಬೆಲೆ: ರೂ. ೩೦/-

ನಾಡಿನ ಜನಪರ ಚಳವಳಿಗಳ ಒಡಲಿನಲ್ಲಿ ಮೂಡಿ ಬಂದ ಹೊಸ ಬದುಕಿನ ಹಾಡುಗಳ ಸಂಗ್ರಹವಿದು. ಇಲ್ಲಿನ ಹಾಡುಗಳನ್ನು ರಾಮಯ್ಯ ಕರ್ನಾ ಟಕದ ಹಳ್ಳಿ ಹಳ್ಳಿಗಳಲ್ಲಿ ಹಾಡಿದ್ದಾರೆ, ಹಾಡುತ್ತಿ ದ್ದಾರೆ. ಇವರ ಹಾಡು ಕೇಳಿದವರು ಕೈತುತ್ತು ನೀಡಿ ಹರಸಿದ್ದಾರೆ. ಕೈಕುಲುಕಿ ಅಭಿನಂದಿಸಿದ್ದಾರೆ. ತಾನು ಹಾಡುತ್ತಿದ್ದಂಥ ಹಾಡುಗಳನ್ನು ಇಲ್ಲಿ ಕಲೆ ಹಾಕಿದ್ದಾರೆ. ಈಗ ಸೂರು ಸೂರಿನ ದೀಪ ಹಚ್ಚಲು ಹೊರಟಿದ್ದಾರೆ. ಈ ದೀಪ ಎಲ್ಲರ ಮನೆ-ಮನ ಬೆಳಗಲಿ.

ಪ್ರಕಾಶಕರು: ಜನ ಕಲಾ ರಂಗ, ಮದ್ದೂರು, ಮಂಡ್ಯ ಜಿಲ್ಲೆ.



ಹೊಸ ಪುಸ್ತಕ

ನುಡಿಗವಳ
ಲೇ: ಡಾ॥ ಸಬಿಹಾ ಭೂಮಿಗೌಡ
ಬೆಲೆ. ರೂ.೪೫/-

ಮಹಿಳೆಯರ ಸೃಜನೇತರ ಸಾಹಿತ್ಯದ ಅವಲೋಕನ ಈ ಕೃತಿ ಮುಖ್ಯವಾಗಿ ಮಹಿಳೆಯರ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು ಅಧ್ಯಯನಾರ್ಹವಾಗಿದೆ. ಒಟ್ಟು ಸಾಹಿತ್ಯ ಚರಿತ್ರೆಯ ದಾಖಲೆಯೇ ಲಿಂಗ ತಾರತಮ್ಯದಿಂದ ಕೂಡಿರುವುದರಿಂದ ಈ ಕೃತಿಯ ಅಗತ್ಯ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಮಹಿಳೆಯರ ಸೃಜನೇತರ ಸಾಹಿತ್ಯದ ದಾಖಲಾತಿ ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ನಡೆದಿರುವುದಾದರೂ ಸಬಿಹಾ ಅವರ ಈ ಪ್ರಯತ್ನ ಅಮೂಲ್ಯ ವಾದುದಾಗಿದೆ.

ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು.





ರೋಸಾ ಪಾರ್ಕ್ಸ್ ನನ್ನ ಕಥೆ
ಲೇ: ಎಂ.ಆರ್. ಕಮಲ
ಬೆಲೆ. ರೂ. ೮೦/-

ಅಮೆರಿಕಾದ ಕಪ್ಪು ಜನರ ಹೋರಾಟಕ್ಕೆ ಸ್ಫೂರ್ತಿ ನೀಡಿದ ಧೀಮಂತ ಹೋರಾಟಗಾರ್ತಿ ರೋಸಾ ಪಾರ್ಕ್ಸ್. ಛಲವಂತಿಕೆಯನ್ನು ನರನಾಡಿಗಳಲ್ಲಿ ತುಂಬಿಕೊಂಡ ಸಮುದಾಯದಿಂದ ಬಂದ ದಿಟ್ಟ ಮಹಿಳೆ ರೋಸಾ ಹೋರಾಟವನ್ನು ಸಮರ್ಥವಾಗಿ ನಿಭಾಯಿಸಿ ಅಮೆರಿಕನ್ ಕಪ್ಪು ಜನಾಂಗದ ನಾಗರಿಕ ಹಕ್ಕುಗಳನ್ನು ಪಡೆಯುವಲ್ಲಿ ಹೊಸ ಹಾದಿ ತೋರಿಸಿಕೊಟ್ಟಳು. ರೋಸಾ ಪಾರ್ಕ್ಸ್‌ಳ ಜೀವನ ಗಾಥೆಯ ಈ ಪುಸ್ತಕ ನಾಗರಿಕ ಹಕ್ಕುಗಳ ಆದ್ಯ ಮಹಿಳೆ ರೋಸಾ ಪಾರ್ಕ್ಸ್‌ಳ ಕಥೆ ಹೇಳುತ್ತಲೇ ಆ ಕಾಲಘಟ್ಟದ ಸಾಮಾಜಿಕ ಪರಿವರ್ತನೆಯನ್ನೂ ಅನಾವರಣಗೊಳಿಸುವ ಈ ಪುಸ್ತಕ ಕನ್ನಡ ಭಾಷೆಗೆ ಐತಿಹಾಸಿಕ ದಾಖಲೆ.

ಪ್ರಕಾಶಕರು: ಕಥನ ಪ್ರಕಾಶನ, ನಾಗರ ಭಾವಿ, ಬೆಂಗಳೂರು

ಲೋಹಿಯಾ ಸಮಾಜವಾದ ದರ್ಶ
ಲೇ: ಡಿ. ಎಸ್. ನಾಗಭೂಷಣ
ಬೆಲೆ. ರೂ. ೪೫/-

ಸಮಾಜವಾದದ ಕಾಲ ಮ
ಯಿತು ಎಂಬ ಅಭಿಪ್ರಾಯ ಪ್ರಚಲಿತವ
ತೊಡಗಿರುವ ಸಂದರ್ಭದಲ್ಲಿ ಡಿ.ಎ
ನಾಗಭೂಷಣ ಅವರ ಲೋಹಿ
ಸಮಾಜವಾದದ ದರ್ಶನ ಕುರಿತ
ಪುಸ್ತಕ ಹೊರ ಬಂದಿದೆ. ಯಾವು
ಪ್ರಮುಖ ಚಿಂತನಾ ಕ್ರಮಗಳು ಕಾಲಮಿ
ಒಳಗಾಗಿರುವುದಿಲ್ಲ ಎಂಬುದಕ್ಕೆ ಸಮಾ
ವಾದ ಕೂಡ ಸಾಕ್ಷಿ. ರಾಮಮನೋ
ಲೋಹಿಯಾರವರ ಸಮಾಜವಾದ ದರ್ಶ
ಈಗ ಕೂಡ ಎಷ್ಟು ಪ್ರಸ್ತುತವೆಂಬು
ಈ ಪುಸ್ತಕ ಓದಿದ ಯಾರಿಗಾದ
ತಿಳಿಯುತ್ತದೆ.

ಪ್ರಕಾಶಕರು: ನೆಲಸಿರಿ, ಸಪ್ತಗಿರ ಬಡಾ
ತುಮಕುರು



ಲೋಕಾಯತ ದರ್ಶನ
ಲೇ: ಎಸ್.ಎಸ್. ಹಿರೇಮಠ
ಬೆಲೆ. ರೂ. ೯೦/-

ಸಾಂಸ್ಕೃತಿಕ ರಾಜಕಾ
ಏಕೀಕೃತವಾಗುತ್ತಿರುವ ಈ ಆಧುನಿಕ
ವೇಶದಲ್ಲಿ ಈ ರೀತಿಯ ಅವೈದಿಕ ದರ್ಶ
ಪರಂಪರೆ ಬಹುಜನ ಸಮಾಜವನ್ನು ಸ
ಮಾನಿ ಮತ್ತು ಸಶಕ್ತ ಮಾಡಬೇಕಿದೆ.
ತಿಯ ಹಿಂಜರಿಕೆಗೆ ಈಡಾಗಿದ್ದ ಸಮು
ಯಕ್ಕೆ ಈ ಮಾಲಿಕೆಯ ಪ್ರಯತ್ನ ಖಂ
ಸಾಂಸ್ಕೃತಿಕ ನಿಖರತೆ ಮತ್ತು ಪ್ರಾಚೀ
ಯನ್ನು ತಂದುಕೊಡಲು ಸಾಧ್ಯ.
ದರ್ಶನಗಳ ಬಗೆಗೆ ಆಳವಾದ ಅಧ್ಯ
ಮಾಡಿರುವ ಹಿರೇಮಠರ ಈ ಕೃತಿ ಕ
ವ್ಯಚಾರಿಕ ವಲಯಕ್ಕೆ ನೀಡಿದ ಅ
ಕೊಡುಗೆಯಾಗಿದೆ.

ಪ್ರಕಾಶಕರು: ಸಮತಾ ಪ್ರಕಾಶನ, ಕೊಟ್ಟೂರು, ಬಳ್ಳಾರಿ ಜಿಲ್ಲೆ

ಸಂಪಾದಕೀಯ



ಅಂತರಂಗ



ವ್ಯವಸ್ಥೆಗೆ ಹೂಂ...ಗುಡುವವರು!

ಕಳೆದೆರಡು ತಿಂಗಳಿಂದೀಚೆಗೆ ತಲೆ ಚಿಟ್ಟು ಹಿಡಿಯವಷ್ಟು ಚರ್ಚೆ-ವಾದ-ವಿವಾದಗಳು ಮೀಸಲಾತಿ ಕುರಿತಂತೆ ನಡೆಯುತ್ತಿವೆ. ಕೆಲವರು ಪರವಾಗಿದ್ದರೆ ಕೆಲವರು ವಿರೋಧವಾಗಿದ್ದಾರೆ. ಅದರಲ್ಲೂ ಮಾಧ್ಯಮಗಳು ಮೀಸಲಾತಿ ಕುರಿತಂತೆ ಸಮತೋಲನ ಹಾಗೂ ತಾಳ್ಮೆ ಎರಡನ್ನು ಕಳೆದುಕೊಂಡಂತೆ ವರ್ತಿಸುತ್ತಿವೆ. ಸುಪ್ರಿಂ ಕೋರ್ಟ್‌ನ ಮಧ್ಯಪ್ರವೇಶದಿಂದಾಗಿ ಪರಿಸ್ಥಿತಿ ಈಗ ತಣ್ಣಗಾಗಿದ್ದರೂ ಒಳಗುದಿ ಇನ್ನೂ ಆರಿಲ್ಲ.

ಮೀಸಲಾತಿ ಕುರಿತಂತೆ ನಡೆಯುತ್ತಿರುವ ಚರ್ಚೆಗಳಲ್ಲಿ ಭಾವಾವೇಶ, ಆಕ್ರೋಶ, ಅಸೂಯೆ ಮತ್ತು ತಿಳುವಳಿಕೆಯ ಕೊರತೆ ಎದ್ದು ಕಾಣುತ್ತಿವೆ. ನನಗೆ ಗೊತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದ OBC ವಿದ್ಯಾರ್ಥಿನಿಯೊಬ್ಬಳು 'ನಿಮಗೆ (ಪರಿಶಿಷ್ಟ ಜಾತಿಯವರಿಗೆ) ಎಷ್ಟು ಕೊಟ್ಟರೂ ಸಾಲುವುದಿಲ್ಲ!' ಎಂದು ಪ್ರೀತಿಯಿಂದ ಛೇಡಿಸಿದಳು. 'ಯಾಕೆ ಹಾಗಂತಿ?' ಎಂದು ಮರುಪ್ರಶ್ನೆ ಹಾಕಿದೆ. 'ನಿಮಗೆ ಎಲ್ಲವೂ ಫ್ರೀಯಾಗಿದೆ. ಅಷ್ಟಿದ್ದರೂ ಮತ್ತೆ ಮೀಸಲಾತಿ ನಿಮಗೆ ಯಾಕೆ ಬೇಕು?' ಎಂದು ಮುಗ್ಧವಾಗಿ ಕೇಳಿದಳು. ಆಕೆ ಎಂ.ಎ. ಓದುತ್ತಿರುವ ವಿದ್ಯಾರ್ಥಿನಿ! ಆಕೆಯ ಪ್ರಕಾರ ಉನ್ನತಶಿಕ್ಷಣದಲ್ಲಿ OBCಗಳಿಗೆ ನಿಗಧಿ ಪಡಿಸಲು ಉದ್ದೇಶಿಸಿರುವ ಶೇ. ೨೭ರ ಮೀಸಲಾತಿ ಕೂಡ ಪರಿಶಿಷ್ಟ ಜಾತಿಯವರಿಗೆ ಸೇರಿದ್ದು!.

ಅರ್ಜಿಗಳಲ್ಲಿ ಜಾತಿ ಕಾಲಂ ತೆಗೆದರೆ ಜಾತಿ ಇರುವುದೇ ಇಲ್ಲ ಎಂದು ನಂಬವ ನನ್ನ ಮಗಳ ಗೆಳತಿಯೊಬ್ಬಳದ್ದು ಇದೇ ಪ್ರಶ್ನೆ. ಆಕೆ ಕೂಡ OBC. ಅದರೆ ಆಕೆ ಬಲವಾಗಿ ನಂಬಿರುವುದು ಶೇ. ೨೫ರ ಮೀಸಲಾತಿಯ ಹೊಸ ಪ್ರಸ್ತಾಪ ಕೂಡ ಪರಿಶಿಷ್ಟ ಜಾತಿಯವರಿಗೆ ಸೇರಿದ ವಿಚಾರ. ಆಕೆ OBC ಪ್ರವರ್ಗ ೧ಕ್ಕೆ ಸೇರಿದ ಉಪ್ಪಾರ ಜಾತಿಯ ಹುಡುಗಿ. ತನ್ನ ಶಿಕ್ಷಣದುದ್ದಕ್ಕೂ ಜಾತಿ ಪತ್ರ ಪಡೆದು ಹಿಂದುಳಿದ ವರ್ಗದ ಮೀಸಲಾತಿಯ ಲಾಭ ಪಡೆಯುತ್ತಿರುವವಳು. ಆಕೆಗೆ ಇದು ಹಿಂದುಳಿದ ವರ್ಗಕ್ಕೆ ಸೇರಿದ ಮೀಸಲಾತಿ ಪ್ರಸ್ತಾಪ ಅಂದರೆ ಒಪ್ಪಲು ರೆಡಿ ಇಲ್ಲ. ಅರ್ಧ ಗಂಟೆ ಆಕೆಯೊಂದಿಗೆ ಚರ್ಚಿಸಿದ ಮೇಲೆ ಆಕೆ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದಳು!

ನನ್ನ ಗೆಳೆಯನ ಮಗನೊಬ್ಬ ಸಾಫ್ಟ್‌ವೇರ್ ಇಂಜಿನಿಯರ್. ತಮಿಳು ಅಯ್ಯರ್ ಹುಡುಗ. ತುಂಬಾ ಸಂಭಾವಿತ. ನಾನು ಕಂಡಂತೆ ಜಾತಿ ಮನೋಭಾವ ಅವನಲ್ಲಿಲ್ಲ. ಆತನ ತಂದೆ ತಾಯಿ ಅಷ್ಟೇ ಏಕೆ ಅಜ್ಜ ಅಜ್ಜಿ ಕೂಡ ನಮ್ಮ ಕುಟುಂಬದ ಸ್ನೇಹಿತರು. ಆತನದ್ದು ಒಂದೇ ಪ್ರಶ್ನೆ. 'ಅಲ್ಲಾ ಅಂಕಲ್, ನಾವೆಲ್ಲಾ ಒಟ್ಟಿಗೇ ಇದ್ದೇವೆ. ಒಟ್ಟಿಗೇ ಓಡಾಡ್ತೀವಿ. ಒಟ್ಟಿಗೆ ಊಟ ಮಾಡ್ತೀವಿ. ಆದ್ರೆ ಕೆಲಸಕ್ಕೆ ಸೇರುವಾಗ ಮಾತ್ರ ನಿಮಗ್ಯಾಕೆ ರಿಯಾಯ್ತಿ? ಇದರಿಂದ ನಮಗೆ ಅನ್ಯಾಯ ಆಗೊಲ್ಲವಾ? ಜಾತಿಯತೆ ಹೆಚ್ಚಾಗೋದಿಲ್ಲವಾ? ನಮ್ಮ ನಮ್ಮಲ್ಲಿ ಭೇದ ಭಾವ ಬೆಳೆಯೋದಿಲ್ಲವಾ?'

ಆತನಿಗೆ ತುಂಬಾ ಹೊತ್ತು ವಿವರಿಸಬೇಕಾಯ್ತು. ಜಾತಿಯ ಹುಟ್ಟು, ಬೆಳವಣಿಗೆ, ಮೀಸಲಾತಿಯ ಅಗತ್ಯ ಅದರಿಂದ ತಳಸಮುದಾಯಕ್ಕೆ ಸಿಗುವ ಅವಕಾಶಗಳು ಇತ್ಯಾದಿ ಇತ್ಯಾದಿ. ಆತ ಒಪ್ಪಲೇ ಇಲ್ಲ. 'ಯಾರೋ ಮಾಡಿದ ತಪ್ಪಿಗೆ ನಮಗ್ಯಾಕೆ ಶಿಕ್ಷೆ' ಅಂದ. 'ಅದನ್ನು ಶಿಕ್ಷೆ, ಅಂತ ಯಾಕೆ ಅಂದುಕೊಳ್ಳುತ್ತೀಯ? ಅದು ದುರ್ಬಲರಿಗೆ, ಅಶಕ್ತರಿಗೆ ಒದಗಿಸಿ ಕೊಡುವ ಒಂದು ಅವಕಾಶ ಅಂದುಕೋ' ಅಂತ ವಿವರಿಸಿದೆ. ಆದರೂ ಆತ ಬಗ್ಗಲಿಲ್ಲ. 'ಮೀಸಲಾತಿ ಇಲ್ಲದಿದ್ದರೆ ನಾನು ಇಲ್ಲಿ ನಿನ್ನ ಜತೆ ಕುಳಿತು ಮಾತಾಡಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲೋ ಯಾವೂದೋ ಜಮೀನ್ದಾರನ ಹೊಲದಲ್ಲಿ ಕೂಲಿ ಕೆಲಸ ಮಾಡಿಕೊಂಡು ಇರಬೇಕಾಗುತ್ತಿತ್ತು' ಎಂದು ವಿವರಿಸತೊಡಗಿದೆ. ಆತ ನಿಧಾನವಾಗಿ ಕರಗತೊಡಗಿದ. 'ಹೌದಾ ಅಂಕಲ್!' ಎಂದು ಉದ್ಗಾರ ತೆಗೆದ. ಮತ್ತಷ್ಟು ವಿವರಿಸಿದೆ. 'ಸಾರಿ, ಅಂಕಲ್. ಈ ದೃಷ್ಟಿಕೋನದಿಂದ ಮೀಸಲಾತಿ ಸಮಸ್ಯೆಯನ್ನು ನೋಡಬಹುದೆಂಬ ಕಲ್ಪನೆ ಕೂಡ ನನ್ನಲ್ಲಿರಲಿಲ್ಲ' ಎಂದ.

ಅವನಿಗೆ ಮನದಟ್ಟಾಗಿತ್ತು. ಇಷ್ಟೆಲ್ಲ ಚರ್ಚಿಸಿದ ನಂತರ ಆತನೇ ವಿವರಿಸತೊಡಗಿದ. ತನ್ನ ಗೆಳೆಯರನ್ನು ಚರ್ಚೆಗೆ ಕರೆತರುವುದಾಗಿ ತಿಳಿಸಿದ. ಆ ಹುಡುಗ ಪ್ರಾಮಾಣಿಕನಾಗಿದ್ದ. ಮತ್ತು ಆತನಿಗೆ ಪೂರ್ವಾಗ್ರಹಗಳು ಇರಲಿಲ್ಲ. ಮೇಲ್ನೋಟಕ್ಕೆ ಕಾಣುವ ಅಥವಾ ಅವನ ಸಂಗಡಿಗರು, ಬಂಧುಗಳು ಹೇಳುವ ವಿಷಯಗಳ ಆಧಾರದ ಮೇಲೆ ಒಂದು ಅಭಿಪ್ರಾಯವನ್ನು ರೂಢಿಸಿಕೊಂಡಿದ್ದ. ಪ್ರಾಮಾಣಿಕವಾಗಿ 'ಮೀಸಲಾತಿ ಅಂದರೆ ರಾಜಕೀಯ ಕಾರಣಗಳಿಗಾಗಿ ಅಯೋಗ್ಯರಿಗೆ ನೀಡುವ ಅವಕಾಶ' ಎಂದೇ ತಿಳಿದಿದ್ದ. ಆತನಂತ ಮುಗ್ಧ ಯುವಕ-ಯುವತಿಯರು ಮೀಸಲಾತಿ ವಿರೋಧಿ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದೇ ನನಗೆ ಅನಿಸುತ್ತಿದೆ.

ಆದರೆ ನಾನು ಮೇಲೆ ಉದಾಹರಿಸಿದಂತ ಘಟನೆಗಳಲ್ಲಿ ಹೆಸರಿಸಿರುವ ವಿದ್ಯಾರ್ಥಿ ಯುವಜನರು ಬಹಳಷ್ಟು ಜನರು ಅಂದುಕೊಂಡಂತೆ ಜಾತಿ ವಾದಿಗಳೂ ಅಲ್ಲ. ಕೋಮುವಾದಿಗಳೂ ಅಲ್ಲ. ಯಾವುದೇ ಬಲಪಂಥೀಯ ಸಂಘಟನೆಗಳೊಂದಿಗೆ ಸಂಬಂಧವನ್ನು ಹೊಂದಿದವರಲ್ಲ. ವ್ಯವಸ್ಥೆಯ ಆಲೋಚನಾ ಕ್ರಮಗಳಿಗೆ ಹೂಂ...ಗುಡುವವರು ಅಷ್ಟೇ! ಅವರಿಗೆ ವಸ್ತು ಸ್ಥಿತಿಯನ್ನು, ವೈಜ್ಞಾನಿಕವಾಗಿ ಅಂಕಿ ಅಂಶಗಳೊಂದಿಗೆ ವಿವರಿಸಿದರೆ ಅವರು ತಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳುತ್ತಾರೆ. ಸತ್ಯವನ್ನು ಅರ್ಥ ಮಾಡಿಕೊಂಡು ಅದರೊಂದಿಗೆ ಸ್ಪಂದಿಸುತ್ತಾರೆ.

ಇಂಥ ಸಾಮರಸ್ಯದ ವಾತವರಣದಲ್ಲಿ, ಅರಿವಿನ ಬೆಳಕಿನಲ್ಲಿ ನಾವು ವಿವಾದಗಳನ್ನು ಇಂದು ಬಗೆಹರಿಸಿಕೊಳ್ಳಬೇಕಾಗಿದೆ. ಕಿಚ್ಚು ಹಚ್ಚುವವರು ಯಾವಗಲೂ ಅಲ್ಪ ಸಂಖ್ಯಾತರಾಗಿರುತ್ತಾರೆ. ಅದಕ್ಕೆ ಬಲಿಯಾಗುವವರು ಮಾತ್ರ ಬಹುಸಂಖ್ಯಾತರು. ಬಹುಸಂಖ್ಯಾತರ ಮನವೊಲಿಸುವಲ್ಲಿ ನಾವು ಯಶಸ್ವಿಯಾದರೆ ಕಿಚ್ಚು ಹಚ್ಚುವವರು ತಮ್ಮಷ್ಟಕ್ಕೆ ತಾವೇ ಕಾಣೆಯಾಗುತ್ತಾರೆ. ಮೀಸಲಾತಿ ವಿವಾದ-ವಿರೋಧದ ಹಿನ್ನೆಲೆಯಲ್ಲಿ ನಾವು ಮಾಡಬೇಕಾದುದು ಇದೇ ಆಗಿದೆ. ವಿರೋಧಿಸುತ್ತಿರುವ ಬೆರಳಣಿಕೆಯಷ್ಟು ಮಂದಿಯ ಪಿತೂರಿಗೆ ಬಲಿಯಾಗದಂತೆ ಬಹುಸಂಖ್ಯಾತ ಮುಗ್ಧರನ್ನು ತಡೆಯುವ ಕೆಲಸ ವ್ಯಾಪಕವಾಗಿ ನಡೆಯಬೇಕು. ಅದಕ್ಕಾಗಿ ಅವರೊಂದಿಗೆ ಚರ್ಚಿಸುವ, ಒಡನಾಟ ಬೆಳೆಸಿಕೊಳ್ಳುವ ಕೆಲಸ ಆಗಬೇಕಾಗಿದೆ.

ಅದಕ್ಕಾಗಿಯೇ ಮೀಸಲಾತಿ ಕುರಿತ ವಸ್ತು ನಿಷ್ಠ, ವೈಜ್ಞಾನಿಕ ವಿಶ್ಲೇಷಣೆಗಳನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ. ಯಾವುದೇ ಉದ್ವೇಗ, ಆಕ್ರೋಶಗಳಿಗೆ ಅವಕಾಶವಿಲ್ಲದ ವಿಶ್ಲೇಷಣೆಗಳು ಇವು. ಇವುಗಳ ಬೆಳಕಿನಲ್ಲಿ ನಮ್ಮ ನಡುವಿನ ಸಮಸ್ಯೆಗೆ ಪರಿಹಾರ ಖಂಡಿತ ಸಾಧ್ಯ. ಅದಕ್ಕಾಗಿ ಮೀಸಲಾತಿಯ ಸಾಧಕ ಬಾದಕಗಳನ್ನು ಕುರಿತು ಯೋಚಿಸುವ ಮುನ್ನ ತಲೆಯಲ್ಲಿರುವ ಪೂರ್ವಾಗ್ರಹಗಳಿಂದ ಮುಕ್ತರಾಗಬೇಕು. ವಿಚಾರಗಳನ್ನು ಅವು ಇರುವಂತೆಯೇ ಸ್ವೀಕರಿಸಬೇಕಾದ ಕನಿಷ್ಠ ಪ್ರಾಮಾಣಿಕತೆ ತೋರಬೇಕು. ವಸ್ತು ಸ್ಥಿತಿ ಮತ್ತು ಅಧ್ಯಯನಗಳನ್ನು ಆಧರಿಸಿದ ಅಂಕಿ ಅಂಶಗಳನ್ನು ನೋಡಬೇಕು. ಇದೆಲ್ಲಕ್ಕಿಂತ ಹೆಚ್ಚಾಗಿ, ಇರುವ ಅವಕಾಶಗಳನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳುವ ಉದಾತ್ತತೆ ತೋರಬೇಕು.

○ ಇಂದೂಧರ ಹೊನ್ನಾಪುರ

ಮೀಸಲಾತಿ ವಿವಾದ:
ಬೆಂಕಿ ಮತ್ತು ಬೆಳಕು...

ಮೀಸಲಾತಿ ವಿರೋಧಕ್ಕೆ ಈ ದೇಶದಲ್ಲಿ ದೊಡ್ಡ ಇತಿಹಾಸವೇ ಇದೆ. ಇದೇ OBC ಮೀಸಲಾತಿಗೆ ಸಂಬಂಧಪಟ್ಟಂತೆ ೧೯೫೩ ರಲ್ಲಿ ಕಾಕಾ ಕಾಲೆಲ್ಕರ್ ಆಯೋಗ ಸಾಕಷ್ಟು ಅಧ್ಯಯನ ಮಾಡಿ ಜಾತಿ ಎಂಬುದು ಹಿಂದುಳಿದಿರುವಿಕೆಗೆ ಒಂದು ಪ್ರಮುಖ ಮಾನದಂಡ ಎಂದು ಪ್ರಸ್ತಾಪ ಮಾಡಿದಾಗ ಯಾವುದೇ ಚರ್ಚೆ ಮಾಡದೇ ಅದನ್ನು ಕಸದ ಬುಟ್ಟಿಗೆ ಸೇರಿಸಲಾಯಿತು. ನಂತರ ೧೯೮೦ರ ದಶಕದಲ್ಲಿ ಗುಜರಾತ್ ಮತ್ತು ಆಂಧ್ರಪ್ರದೇಶಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಘೋಷಿಸಿದಾಗ ಮೇಲ್ಜಾತಿ ಶಕ್ತಿಗಳು ಅದರ ವಿರುದ್ಧದ ಹೋರಾಟದಲ್ಲಿ ಭೂಮ್ಯಾಕಾಶಗಳನ್ನು ಒಂದು ಮಾಡಿದ್ದರು. ಅದೇ ರೀತಿ ೧೯೯೦ರಲ್ಲಿ ಮಂಡಲ್ ಆಯೋಗದ ಜಾರಿಯ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ಈ ನಾಗರೀಕ ದೇಶದಲ್ಲಿ ಒಂದು ಅಂತರ್ಯುದ್ಧದ ಪರಿಸ್ಥಿತಿಯೇ ನಿರ್ಮಾಣವಾಗಿಬಿಟ್ಟಿತ್ತು. ಈಗ ಮತ್ತೆ ಅದೇ ಇತಿಹಾಸ ಪುನರಾವರ್ತನೆಯಾಗುತ್ತಿದೆ.

❍ ಶಿವಸುಂದರ್

ಕೇಂದ್ರ ಸರ್ಕಾರ ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ OBC ವಿದ್ಯಾರ್ಥಿಗಳಿಗೆ ೨೦೦೭ ರಿಂದ ಮೀಸಲಾತಿ ಕಲ್ಪಿಸುವ ನಿರ್ಧಾರ ಪ್ರಕಟಿಸಿದೆ. ಅದೇ ವೇಳೆಯಲ್ಲಿ ಮೆರಿಟ್ ವಿದ್ಯಾರ್ಥಿಗಳಿಗೂ ಅನ್ಯಾಯವಾಗದಂತೆ ಸೀಟುಗಳ ಒಟ್ಟಾರೆ ಸಂಖ್ಯೆಯನ್ನು ಹೆಚ್ಚಿಸುವ ಪ್ರಸ್ತಾಪ ಮಾಡಿದೆ. ಆದರೆ ಈ ಖಾಜಿ ನ್ಯಾಯ ಮೀಸಲಾತಿ ವಿವಾದವನ್ನು ಶಮನ ಮಾಡುವ ಯಾವುದೇ ಸೂಚನೆಗಳಿಲ್ಲ. ಏಕೆಂದರೆ ಮೀಸಲಾತಿ ವಿರೋಧಿಗಳ ಪ್ರತಿಭಟನೆ ತಮ್ಮ ಸೀಟುಗಳ ಸಂಖ್ಯೆ ಕಡಿಮೆ ಆಗುತ್ತದೆ ಎಂಬುದು ಮಾತ್ರವಲ್ಲ. ಬದಲಿಗೆ ಕೆಳಜಾತಿಗಳ ಜನ ತಮಗೆ ಸರಿಸಮಾನವಾಗಿ ಬೆಳೆಯುತ್ತಾರೆ ಎಂಬುದೇ ಅವರ ಅಸಹನೆಯ ಮೂಲ. ಹೀಗಾಗಿ ಸೀಟುಗಳ ಸಂಖ್ಯೆ ಜಾಸ್ತಿಯಾಗಿ ಈ ಮೆರಿಟ್ ವಿದ್ಯಾರ್ಥಿಗಳಿಗೆ ಮೊದಲು ಸಿಕ್ಕಷ್ಟೇ ಸೀಟುಗಳೇ ಮುಂದೆಯೂ ದಕ್ಕುವುದು ಖಾತರಿಯಾದರೂ ಯಾವ ಕಾರಣಕ್ಕೂ ಕೆಳಜಾತಿ ವಿದ್ಯಾರ್ಥಿಗಳಿಗೆ ಉನ್ನತ ಸಂಸ್ಥೆಗಳಿಗೆ ಪ್ರವೇಶ ಕೊಡಬಾರದೆಂಬ ಅವರ ಮೇಲ್ಜಾತಿ ಅಸಹನೆಯ ಹೋರಾಟ ಮುಂದುವರೆಯಲಿದೆ.

ಏಕೆಂದರೆ ಮೀಸಲಾತಿ ವಿರೋಧದ ಹಿನ್ನೆಲೆ ಅತ್ಯಂತ ಅನಾಗರೀಕವಾದದ್ದು ಮತ್ತು ಅಪ್ರಜಾತಾಂತ್ರಿಕವಾದದ್ದು. ಈ ಮೀಸಲಾತಿ ವಿರೋಧಕ್ಕೆ ಈ ದೇಶದಲ್ಲಿ ದೊಡ್ಡ ಇತಿಹಾಸವೇ ಇದೆ. ಇದೇ OBC ಮೀಸಲಾತಿಗೆ ಸಂಬಂಧಪಟ್ಟಂತೆ ೧೯೫೩ ರಲ್ಲಿ ಕಾಕಾ ಕಾಲೆಲ್ಕರ್ ಆಯೋಗವೊಂದನ್ನು ನೇಮಿಸಲಾಗಿತ್ತು. ಆ ಸಮಿತಿ ಸಾಕಷ್ಟು ಅಧ್ಯಯನ ಮಾಡಿ ಜಾತಿ ಎಂಬುದು ಹಿಂದುಳಿದಿರುವಿಕೆಗೆ ಒಂದು ಪ್ರಮುಖ ಮಾನದಂಡ ಎಂದು ಪ್ರಸ್ತಾಪ ಮಾಡಿದಾಗ ಯಾವುದೇ ಚರ್ಚೆ ಮಾಡದೇ ಅದನ್ನು ಕಸದ ಬುಟ್ಟಿಗೆ ಸೇರಿಸಲಾಯಿತು. ನಂತರ ೧೯೮೦ರ ದಶಕದಲ್ಲಿ ಗುಜರಾತ್ ಮತ್ತು ಆಂಧ್ರಪ್ರದೇಶಗಳಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಘೋಷಿಸಿದಾಗ ಮೇಲ್ಜಾತಿ ಶಕ್ತಿಗಳು ಅದರ ವಿರುದ್ಧದ ಹೋರಾಟದಲ್ಲಿ ಭೂಮ್ಯಾಕಾಶಗಳನ್ನು ಒಂದು ಮಾಡಿದ್ದರು. ಅದೇ ರೀತಿ ೧೯೯೦ರಲ್ಲಿ ಮಂಡಲ್ ಆಯೋಗದ ಜಾರಿಯ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ಈ ನಾಗರೀಕ ದೇಶದಲ್ಲಿ ಒಂದು ಅಂತರ್ಯುದ್ಧದ ಪರಿಸ್ಥಿತಿಯೇ ನಿರ್ಮಾಣವಾಗಿಬಿಟ್ಟಿತ್ತು. ಈಗ ಮತ್ತೆ ಅದೇ ಇತಿಹಾಸ ಪುನರಾವರ್ತನೆಯಾಗುತ್ತಿದೆ.

ಈ ಎಲ್ಲಾ ಪ್ರಕರಣಗಳಲ್ಲೂ ಅತ್ಯಂತ ಸ್ಪಷ್ಟವಾಗಿ ಪ್ರದರ್ಶಿತವಾಗಿರುವುದು ಕೇವಲ ಮೇಲ್ಜಾತಿ ಅಸಹನೆ ಮಾತ್ರವಲ್ಲ. ಅದು ಈ ದೇಶದ ನಾಗರಿಕತೆಯಲ್ಲಿರುವ ವಿಕೃತಿಯನ್ನೂ ಮತ್ತು ಈ ದೇಶದಲ್ಲಿ ಪ್ರ[...] ತಂತ್ರ ಇನ್ನೂ ಬೇರುಬಿಡದಿರುವುದನ್ನು ಸೂಚಿಸುತ್ತದೆ. ಏಕೆಂದರೆ [...] ದೇಶದಲ್ಲಿ ಪ್ರಧಾನವಾಗಿ ಮೀಸಲಾತಿ ಎಂಬುದು ಪ್ರಜಾತಂತ್ರ[...] ಪ್ರಶ್ನೆಯೇ ಆಗಿದೆ.

ಸ್ವಾತಂತ್ರ್ಯ ಮತ್ತು ಸಮಾನತೆ ಎಂಬುದು ಒಂದು ಮೌಲ್ಯ ಅ[...] ಮೇಲೆ ಭೌತಿಕ ಮತ್ತು ಬೌದ್ಧಿಕ ಸಂಪನ್ಮೂಲಗಳ ಮೇಲೆ ಇದ್ದ ಪ[...] ಸ್ವಾಮ್ಯತೆ ನಶಿಸಿ ಅದು ಎಲ್ಲರಿಗೂ ದಕ್ಕಬೇಕೆಂಬುದೇ ನಿಜವಾದ ಪ್ರ[...] ತಾಂತ್ರಿಕ ಮೌಲ್ಯ. ಈ ದೇಶದ ಭೌತಿಕ ಸಂಪನ್ಮೂಲ್ಮದಂತೆ ಭೌದ್ಧಿ[...] ಸಂಪನ್ಮೂಲಗಳ ಸಮಾನ ವಿತರಣೆಗೂ ಹಾಗೂ ಅವುಗಳನ್ನು ಪಡೆ[...] ಕೊಳ್ಳಲು ಸಮಾನ ಅವಕಾಶ ಕಲ್ಪಿಸುವುದೇ ನಿಜವಾದ ಪ್ರಜಾತಾಂತ್ರಿ[...] ನೀತಿಯಾಗುತ್ತದೆ. ಮೀಸಲಾತಿ ನೀತಿ ಈ ಬಗೆಯ ಕ್ರಮಗಳ[...] ಅತ್ಯಂತ ಸಾಂಕೇತಿಕ ಮತ್ತು ದುರ್ಬಲ ಕ್ರಮಗಳಲ್ಲಿ ಒಂದು.

ಮೀಸಲಾತಿ ಒಂದು ಪ್ರಜಾತಂತ್ರಿಕ ಮೌಲ್ಯ

ಮೀಸಲಾತಿ ಎಂದರೆ ಚಾರಿತ್ರಿಕವಾಗಿ ಅವಕಾಶ ವಂಚಿತರಾ[...] ಸಮುದಾಯಗಳಿಗೆ ವರ್ತಮಾನದಲ್ಲಾದರೂ ಸಮಾನ ಅವಕಾ[...] ಕೊಡಲೆಂದೇ ರೂಪಿಸಲಾದ ಒಂದು ಬಗೆಯ ವಿಶೇಷ ಆದ್ಯತ[...] ವ್ಯವಸ್ಥೆ. ಲಿಂಗ, ಜಾತಿ, ವರ್ಣ ಹಾಗೂ ವರ್ಗಗಳ ಆಧಾರದ[...] ಭೇದಭಾವ ಮಾಡಬಾರದೆಂಬ ಸಂವಿಧಾನ ಸೂತ್ರವಿದ್ದರೂ [...] ಬಗೆಯ ವಿಶೇಷ ಆದ್ಯತೆ ಕೊಡುವುದೂ ಸಮಾನತೆಯ ಸೂತ್ರ[...] ವಿರುದ್ಧವಾಗುವುದಿಲ್ಲವೇ?

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಪ್ರಜಾತಾಂತ್ರಿ[...] ಮೌಲ್ಯಗಳು ಈ ಇಪ್ಪತ್ತನೇ ಶತಮಾನದಲ್ಲಿ ಸಮಾಜದ ಮೌಲ್ಯಗಳ[...] ಗುವ ಮೊದಲು ಎಲ್ಲಾ ದೇಶಗಳಲ್ಲೂ ಬಹುಸಂಖ್ಯಾತ ಸಮುದಾಯ[...] ವನ್ನು ಅಲ್ಪಸಂಖ್ಯಾತ ಸಮುದಾಯವು ಜಾತಿ, ವರ್ಣ ಅಥವ[...]

ಮೀಸಲಾತಿ ಚರ್ಚೆ

ನಾಂಗೀಯ ಶ್ರೇಷ್ಠತೆಯ ಹೆಸರಲ್ಲಿ ಶೋಷಿಸುತ್ತಲೇ ಂದಿದೆ. ಅದು ಈಗಲೂ ಹಲವು ದೇಶಗಳಲ್ಲಿ ಪ್ರತ್ಯಕ್ಷ ತ್ತು ಪರೋಕ್ಷ ರೂಪಗಳಲ್ಲಿ ಮುಂದುವರೆದುಕೊಂಡೇ ಂದಿದೆ. ಎಲ್ಲೆಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ರುವ ವ್ಯವಸ್ಥೆಗಳು ಅಸ್ಥಿತ್ವಕ್ಕೆ ಬಂದವೋ ಅಲ್ಲೆಲ್ಲಾ ಈ ಾರಿತ್ರಿಕವಾಗಿ ಅವಕಾಶವಂಚಿತ ಸಮುದಾಯವನ್ನು ುಖ್ಯಧಾರೆಗೆ ತರುವ ಪ್ರಯತ್ನದಲ್ಲಿ ಈ ವಿಶೇಷ ಆದ್ಯತಾ ೀತಿಗಳನ್ನು ಜಾರಿಗೆ ತರಲಾಯಿತು.

ಅದನ್ನು ಭಾರತದಲ್ಲಿ ಮೀಸಲಾತಿ ಪದ್ಧತಿ ಎಂದರೆ, ಮೆರಿಕಾದಲ್ಲಿ Affirmative action ಅಂದರೆ ಕಾರಾತ್ಮಕ ಕ್ರಿಯಾಶೀಲ ಕ್ರಮಗಳೆಂದು ಕರೆಯುತ್ತಾರೆ. ುರೋಪ್ ದೇಶಗಳಲ್ಲಿ ಅದನ್ನೇ Equal discrimi-ation ಅಂದರೆ ಸಕಾರಾತ್ಮಕ ತಾರತಮ್ಯ ನೀತಿ ಎಂದೂ ರೆಯುತ್ತಾರೆ. ಈ ಬಗೆಯ ನೀತಿಗಳು ಭಾರತವನ್ನೂ ಳಗೊಂಡಂತೆ ಏಷಿಯಾದ ಮಲೇಷಿಯ, ಪಾಕಿಸ್ತಾನ, ೀನಾ, ಜಪಾನ್ ಮತ್ತು ಇಂಡೊನೇಷಿಯ ದೇಶಗಳಲ್ಲೂ, ಫ್ರಿಕಾದ ನೈಜೀರಿಯಾ, ಸೂಡಾನ್ ಹಾಗೂ ದ.ಆಫ್ರಿಕಾ ಲ್ಲೂ, ದ.ಅಮೆರಿಕದ ಬ್ರೆಜಿಲ್, ಬೊಲಿವಿಯ ಮತ್ತು ರು ದೇಶಗಳಲ್ಲೂ ಹಾಗೂ ಶ್ರೀಮಂತ ದೇಶಗಳಲ್ಲಿ ಮೆರಿಕ, ಇಂಗ್ಲೆಂಡ್, ಐರ್ಲೆಂಡ್, ಮತ್ತು ಯುಗೋಸ್ಲ ಯಾ ದೇಶಗಳಲ್ಲು ಈ ಬಗೆಯ ಸಕಾರಾತ್ಮಕ ತಾರ ಮ್ಯ ಪದ್ಧತಿಗಳು ಜಾರಿಯಲ್ಲಿವೆ. ಇನ್ನೂ ವಿಶೇಷವೆಂದರೆ ಾರತವೊಂದು ದೇಶವನ್ನು ಬಿಟ್ಟರೆ ಮಿಕ್ಕ ಬಹುಪಾಲು ೀಶಗಳು ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳೆರಡರಲ್ಲೂ ಸಕಾರಾತ್ಮಕ ತಾರತಮ್ಯ ನೀತಿಯನ್ನು ಅನುಸರಿಸಲಾ ತ್ತದೆ. ಆದರೆ ಭಾರತದಲ್ಲಿ ಮಾತ್ರ ಮೀಸಲು ನೀತಿ ುನ್ನು ಖಾಸಗಿ ಕ್ಷೇತ್ರಕ್ಕೆ ಅಳವಡಿಸಬೇಕೋ ಬೇಡವೋ ಂಬ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಲು ಸಾಧ್ಯವಿಲ್ಲ ಂಬ ಪರಿಸ್ಥಿತಿ ಇದೆ!

ಾತಿ ಆಧಾರಿತ ವಂಚನೆ ಮತ್ತು ಜಾತಿ ಆಧಾರಿತ ೀಸಲಾತಿ

ನಮ್ಮ ಸಂವಿಧಾನದ ನೀತಿಯ ಭಾಗವಾಗಿಯೇ ರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಒಂದು ಸಮುದಾ ುವಾಗಿಯೇ ಅವರು ಜನಸಂಖ್ಯಾ ಪ್ರಮಾಣಕ್ಕನುಸಾರ ಾಗಿಯೇ ಮೀಸಲಾತಿ ಅಗತ್ಯವೆಂದು ನಿರ್ದೇಶನ ನೀಡು ದೆ. ಅಂದರೆ ನಮ್ಮ ದೇಶದಲ್ಲಿ ಚಾರಿತ್ರಿಕವಾಗಿ ಅವಕಾಶ ಳ ವಂಚನೆಯು ವ್ಯಕ್ತಿಗಳ ಮಾತ್ರವಲ್ಲ ಒಂದು ಸಮುದಾ ುದ ಮೇಲೆ ಅಂದರೆ ಜಾತಿಗಳ ಮೇಲೆ ನಡೆದಿದೆ ಂಬುದನ್ನು ನಮ್ಮ ಸಂವಿಧಾನ ಒಪ್ಪಿಕೊಳ್ಳುತ್ತದೆ. ಅಂದರೆ ಂದು ಜಾತಿಗೆ ಸೇರಿದ್ದ ಕಾರಣಕ್ಕೆ ಒಬ್ಬ ವ್ಯಕ್ತಿಗೆ ಈ ದೇಶ ಲ್ಲಿ ಅವಕಾಶಗಳ ನಿರಾಕರಣೆಯಾಗಿದೆ ಎಂಬುದು ಇದ ರ್ಥ. ಮತ್ತು ಈ ಸಾಮಾಜಿಕ ತಾರತಮ್ಯ ಜಾತಿ ಆಧಾರ ಲ್ಲೇ ನಡೆದಿರುವದರಿಂದ ಸಾಮಾಜಿಕ ಹಿಂದುಳಿದಿರು ಕೆಗೆ ಭಾರತೀಯ ಸಮಾಜದಲ್ಲಿ ಆರ್ಥಿಕ ಪರಿಸ್ಥಿತಿಗಳು ಾತ್ರವಲ್ಲದೆ ಆ ವ್ಯಕ್ತಿ ಸೇರುವ ಜಾತಿಯೂ ಕಾರಣ ವಾಗುತ್ತದೆ ಎಂದೇ ಇದರರ್ಥ. ಆದ್ದರಿಂದಲೇ ಜಾತಿ ಮೀಸಲಾತಿಯೂ ನ್ಯಾಯ ಸಮ್ಮತವೆಂಬುದು ನಮ್ಮ ಸಂವಿಧಾನದ ಆಶಯಗಳ ತಾತ್ಪರ್ಯ.

ಮೀಸಲಾತಿ ಎಂದರೆ ಚಾರಿತ್ರಿಕವಾಗಿ ಅವಕಾಶ ವಂಚಿತರಾದ ಸಮುದಾಯಗಳಿಗೆ ವರ್ತಮಾನದಲ್ಲಾದರೂ ಸಮಾನ ಅವಕಾಶ ಕೊಡಲೆಂದೇ ರೂಪಿಸಲಾದ ಒಂದು ಬಗೆಯ ವಿಶೇಷ ಆದ್ಯತಾ ವ್ಯವಸ್ಥೆ. ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವೆಂಬ ಪ್ರಜಾತಾಂತ್ರಿಕ ಮೌಲ್ಯಗಳು ಈ ಇಪ್ಪತ್ತನೇ ಶತಮಾನದಲ್ಲಿ ಸಮಾಜದ ಮೌಲ್ಯಗಳಾಗುವ ಮೊದಲು ಎಲ್ಲಾ ದೇಶಗಳಲ್ಲೂ ಬಹುಸಂಖ್ಯಾತ ಸಮುದಾಯವನ್ನು ಅಲ್ಪಸಂಖ್ಯಾತ ಸಮುದಾಯವು ಜಾತಿ, ವರ್ಣ ಅಥವಾ ಜನಾಂಗೀಯ ಶ್ರೇಷ್ಠತೆಯ ಹೆಸರಲ್ಲಿ ಶೋಷಿಸುತ್ತಲೇ ಬಂದಿದೆ. ಅದು ಈಗಲೂ ಹಲವು ದೇಶಗಳಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ರೂಪಗಳಲ್ಲಿ ಮುಂದುವರೆದುಕೊಂಡೇ ಬಂದಿದೆ. ಎಲ್ಲೆಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ನಂಬಿಕೆ ಇರುವ ವ್ಯವಸ್ಥೆಗಳು ಅಸ್ಥಿತ್ವಕ್ಕೆ ಬಂದವೋ ಅಲ್ಲೆಲ್ಲಾ ಈ ಚಾರಿತ್ರಿಕವಾಗಿ ಅವಕಾಶವಂಚಿತ ಸಮುದಾಯವನ್ನು ಮುಖ್ಯಧಾರೆಗೆ ತರುವ ಪ್ರಯತ್ನದಲ್ಲಿ ಈ ವಿಶೇಷ ಆದ್ಯತಾ ನೀತಿಗಳನ್ನು ಜಾರಿಗೆ ತರಲಾಯಿತು.

ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳನ್ನು ಹೊರತುಪಡಿಸಿ ಇತರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಯಾವ ರೀತಿಯ ಕ್ರಮತೆಗೆದುಕೊಳ್ಳಬೇಕೆಂಬ ಬಗ್ಗೆಯೂ ೩೪೦ ನೇ ಕಲಮಿನಲ್ಲಿ ಸ್ಪಷ್ಟ ಮಾರ್ಗದರ್ಶನವಿದೆ. ಅದರ ಪ್ರಕಾರ 'ಇತರ ಹಿಂದುಳಿದ ವರ್ಗಗಳನ್ನು ಪತ್ತೆ ಹಚ್ಚಿ ಅವರ ಅಭಿವೃದ್ಧಿಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಬಹುದೆಂಬ' ನಿರ್ದೇಶನ ಸಂವಿಧಾನದಲ್ಲಿದೆ.

ಅದರಂತೆ ಮೊದಲ ಕೇಂದ್ರಿಯ ಹಿಂದುಳಿದ ವರ್ಗಗಳ ಆಯೋಗವನ್ನು ಕಾಕಾ ಕಾಲೆಲ್ಕರ್‌ರವರ ನೇತೃತ್ವದಲ್ಲಿ ೧೯೫೩ ರಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿತ್ತು ಅದು ಹಿಂದುಳಿದವರು ಯಾರೆಂದು ಪತ್ತೆ ಹಚ್ಚಲು ೪ ಮಾನದಂಡಗಳನ್ನು ಹಾಕಿಕೊಂಡಿತ್ತು. ೧) ಸಮಾಜದಲ್ಲಿ ಕೀಳಾಗಿ ಕಾಣಲ್ಪಡುವುದು, ೨) ಶಿಕ್ಷಣವಿಲ್ಲದಿರುವುದು, ೩) ಸಾರ್ವಜನಿಕ ಸೇವೆಗಳಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿರುವುದು ೪) ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದಿರುವುದು. ಈ ಎಲ್ಲಾ ಮಾನದಂಡಗಳು ಸಾರಾಂಶದಲ್ಲಿ ಜಾತಿ ಶ್ರೇಣೀಕರಣವನ್ನೆ ಸೂಚಿಸುತ್ತಿದ್ದರಿಂದ ಜಾತಿಯೂ ಹಿಂದುಳಿದಿರುವಿಕೆಗೆ ಒಂದು ಪ್ರಮುಖ ಮಾನದಂಡವೆಂದು ಆ ಸಮಿತಿ ಅಭಿಪ್ರಾಯ ಪಟ್ಟಿತು. ಹಾಗೂ ಅದೇ ಆಧಾರದಲ್ಲಿ ೨೩೯೯ ಜಾತಿಗಳನ್ನು ಅಂದರೆ ಭಾರತ ಸಮಾಜದ ಶೇ. ೩೨ ರಷ್ಟನ್ನು ಹಿಂದುಳಿದ ಜಾತಿಗಳೆಂದು ಗುರುತಿಸಿ ಅವರಿಗೆ ಸರ್ಕಾರಿ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಬೇಕೆಂದು ಸಲಹೆ ಮಾಡಿತು. ಆದರೆ ಆಗಿನ ಗೃಹಮಂತ್ರಿ ಪಂತ್‌ರವರು ಇದು ಭಾರತೀಯ ಸಮಾಜವನ್ನು ಮತ್ತಷ್ಟು ಛಿದ್ರಗೊಳಿಸುತ್ತದೆಂದು ಆ ವರದಿಯನ್ನು ತಿರಸ್ಕರಿಸಿದರು. ನಂತರ ಕೇಂದ್ರದಲ್ಲಿ ಬಂದ ಮೊದಲ ಕಾಂಗ್ರೆಸ್ಸೇತರ ಜನತಾ ಪಕ್ಷದ ಸರ್ಕಾರ ಇತರ ಹಿಂದುಳಿದ ವರ್ಗಗಳನ್ನು ಗುರುತಿಸಿ ಅವರ ಅಭಿವೃದ್ಧಿಗೆ ಕ್ರಮಗಳನ್ನು ಸೂಚಿಸಲು ಬಿ.ಪಿ. ಮಂಡಲ್‌ರವರ ಅಧ್ಯಕ್ಷತೆಯಲ್ಲಿ ೧೯೭೮ ರಲ್ಲಿ ಎರಡನೇ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಕ ಮಾಡಲಾಯಿತು. ಅದನೇ ಮಂಡಲ್ ಆಯೋಗವೆಂದು ಕರೆಯಲಾಗುತ್ತದೆ.

ಮಂಡಲ್ ಆಯೋಗವು ಸಮಾಜಿಕವಾಗಿ ಹಿಂದುಳಿದವರನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾದ ೧೧ ಮಾನದಂಡಗಳನ್ನು ನಿಗದಿ ಪಡಿಸಿತು. ಸಾಮಾಜಿಕವಾಗಿ ಯಾವುದೇ ಜಾತಿ ಅಥವಾ ವರ್ಗಗಳ ಇತರರಿಂದ ಕೀಳಾಗಿ ಕಾಣಿಸಿಕೊಳ್ಳಲ್ಪಡುವುದು, ರಾಜ್ಯದ ಸರಾಸರಿಗಿಂತ ಶೇ. ೨೫ ರಷ್ಟು ಪ್ರಧಾನವಾಗಿ ದೈಹಿಕ ಶ್ರಮದಲ್ಲೇ ತೊಡಗಿರುವುದು, ೧೭ ನೇ ವಯಸ್ಸಿನೊಳಗೆ ಮದುವೆಯಾದ ಹೆಣ್ಣು ಮಕ್ಕಳು ಸಂಖ್ಯೆ ರಾಜ್ಯದ ಸರಾಸರಿಗಿಂತ ೨೫ರಷ್ಟು ಹೆಚ್ಚಿರುವುದು, ರಾಜ್ಯದ ಸರಾಸರಿಗಿಂತ ಶೇ. ೨೫ ರಷ್ಟು ಹೆಚ್ಚು ಹೆಣ್ಣು ಮಕ್ಕಳ ದೈಹಿಕ ಶ್ರಮದಲ್ಲಿ ತೊಡಗಿರುವುದುವುಗಳನ್ನು ಮಾನದಂಡಗಳಾಗಿ ಪರಿಗಣಿಸಲಾಯಿತು. ಅದೇ ರೀತಿ ಶೈಕ್ಷಣಿಕವಾಗಿ ಯಾವುದೇ ಜಾತಿ ಅಥವಾ ವರ್ಗಗಳ ಮಕ್ಕಳಲ್ಲಿ ರಾಜ್ಯದ ಸರಾಸರಿಗಿಂತ ಶೇ ೨೫ರಷ್ಟು ಹೆಚ್ಚಿನ ಮಕ್ಕಳು ಶಾಲೆಗೆ ಸೇರಿರದಿದ್ದರೆ, ಸರಾಸರಿಗಿಂತ ಶೇ. ೨೫ ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡದೆ ಶಾಲೆಯಿಂದ ಹೊರಬೀಳುತ್ತಿದ್ದರೆ, ೧೦ನೇ ತರಗತಿ ಪಾಸು ಮಾಡಿದವರ ಸಂಖ್ಯೆ ರಾಜ್ಯದ ಸರಾಸರಿಗಿಂತ ಶೇ. ೨೫ ರಷ್ಟು ಕಡಿಮೆ ಇರುವುದನ್ನು ಶೈಕ್ಷಣಿಕ ಮಾನದಂಡವನ್ನಾಗಿಯೂ ಪರಿಗಣಿಸಲಾಯಿತು. ಅದೇ ರೀತಿ ಆರ್ಥಿಕವಾಗಿ ಯಾವ ಜಾತಿ ಅಥವಾ ವರ್ಗಗಳ ಕುಟುಂಬಗಳ ಆಸ್ತಿಪಾಸ್ತಿಗಳು ರಾಜ್ಯದ ಸರಾಸರಿಗಿಂತ ಶೇ.೨೫ ರಷ್ಟು ಕಡಿಮೆ ಇರುತ್ತದೋ, ರಾಜ್ಯದ ಸರಾಸರಿಗಿಂತ ಸೇ.೨೫ ರಷ್ಟು ಹೆಚ್ಚು ಜನ ಕಚ್ಚಾ ಮನೆಗಳಲ್ಲಿ ವಾಸವಾದುದನ್ನೂ, ಕುಡಿಯುವ ನೀರಿಗಾಗಿ ಶೇ. ೫೦ ರಷ್ಟು ಕುಟುಂಬಗಳು ಅರ್ಧ ಕಿ.ಮಿ.ಗಿಂತ ಜಾಸ್ತಿ ದೂರ ಹೋಗಬೇಕಾಗಿರುವುದನ್ನೂ ಮತ್ತು ರಾಜ್ಯದ ಸರಾಸರಿಗಿಂತ ಶೇ. ೨೫ರಷ್ಟು ಜನ ಸಾಲಗಾರರಾಗಿರುವುದನ್ನು ಆರ್ಥಿಕ ಮಾನದಂಡವನ್ನಾಗಿ ಸ್ವೀಕರಿಸಿತು. ಮತ್ತು ಭಾರತದ ಸಾಮಾಜಿಕ ಪರಿಸ್ಥಿತಿಯಲ್ಲಿ ಈ ಎಲ್ಲಾ ಮಾನದಂಡಗಳೂ ಜಾತಿ ಹಿಂದುಳಿದಿರುವಿಕೆಯ ಭಾಗವಾಗಿಯೇ ಇರುವುದನ್ನು ಮನಗಂಡಿತು.

ಇದೇ ಆಧಾರದಲ್ಲಿ ಮಂಡಲ್ ಕಮೀಷನ್ನು ೩೭೪೩ ಜಾತಿಗಳನ್ನು ಅಂದರೆ ಭಾರತದ ಶೇ. ೫೨ ನ್ನು ದಾಟಬಾರದೆಂದು ಆದೇಶ ನೀಡಿದ್ದರಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಾಂವಿಧಾನಕ ಶೇ. ೨೩ ರಷ್ಟು ಮೀಸಲಾತಿ ಈಗಾಗಲೇ ನಿಗದಿಯಾಗಿದ್ದರಿಂದ ೫೦-೨೩=೨೭% ಮೀಸಲಾತಿಯನ್ನು ಸರ್ಕಾರದ ಶಿಕ್ಷಣ ಸಂಸ್ಥೆಗಳು ಮತ್ತು ಉದ್ಯೋಗಗಳನ್ನು ಮೀಸಲಿಡಬೇಕೆಂದು ಶಿಫಾರಸ್ಸು ಮಾಡಿತು. ಅದೇ ರೀತಿ ದೇಶದ ನ್ಯಾಯಾಲಯಗಳು ಮೊದಲು ಜಾತಿಯನ್ನು ಹಿಂದುಳಿದಿರುವಿಕೆಗೆ ಮಾನದಂಡವೆಂದು ಕ್ರಮೇಣವಾಗಿ ಪರಿಗಣಿಸಲು ಪ್ರಾರಂಭಿಸಿವೆ. ೧೯೬೩ ರಲ್ಲಿ ಮೈಸೂರು ಸರ್ಕಾರದ ವಿರುದ್ಧ ಬಾಲಾಜಿ ಎಂಬರು ಸರ್ಕಾರ ಜಾತಿ ಆಧಾರಿತ ಮೀಸಲಾತಿ ನೀಡಿರುವುದರಿಂದ ತನಗೆ ಅನ್ಯಾಯವಾಗಿದೆಯೆಂದು ಕೋರ್ಟಿನ ಮೆಟ್ಟಿಲನ್ನು ಹತ್ತಿದರು.

ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ೧೯೬೩ ರಲ್ಲಿ ಒಂದು ಆದೇಶ ನೀಡಿ ಹಿಂದುಳಿದಿರುವಿಕೆಗೆ ಜಾತಿಯನ್ನು ಮಾನ ದಂಡವಾಗಿ ಬಳಸುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿತು. ಆದರೆ ಕ್ರಮೇಣವಾಗಿ ಭಾರತದಲ್ಲಿ ಬದಲಾಗುತ್ತಾ ಬಂದ ಸಾಮಾಜಿಕ ತಿಳುವಳಿಕೆಯ ಭಾಗವಾಗಿ ೧೯೯೨ ರಲ್ಲಿ ಸುಪ್ರೀಂ ಕೋರ್ಟಿನ ಸಾಂವಿಧಾನಿಕ ಬೆಂಚೊಂದು 'ಭಾರತದಲ್ಲಿ ಜಾತಿಯೆಂಬುದು ಒಂದು ಸಾಮಾಜಿಕ ವರ್ಗವಾಗಿದೆ' ಎಂದು ನಿಶ್ಚಿತ ತೀರ್ಮಾನ ನೀಡಿದೆ. ಹೀಗೆ ಭಾರತ ಸಮಾಜದಲ್ಲಿ ಹಿಂದುಳಿದ ವರ್ಗಗಳು ಹಿಂದುಳಿದ ಜಾತಿಗಳೇ ಆಗಿವೆ ಎಂಬುದು ಸಂವಿಧಾನಬದ್ಧವೂ ನ್ಯಾಯ ಬದ್ಧವೂ ಆಗಿದೆ.

ಪ್ರಸ್ತುತ ವಿವಾದವೇಕೆ?

ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಾದ IIT, IIM, AIMSS ಇನ್ನಿತ್ಯಾದಿ ಸಂಸ್ಥೆಗಳಲ್ಲಿ ಸಂವಿಧಾನಿಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶೇ. ೨೨.೫ ರಷ್ಟು ಮೀಸಲಾತಿ ಇದೆ. ಇದೀಗ ಅರ್ಜುನ್ ಸಿಂಗ್‌ರ ಪ್ರಸ್ತಾಪ ಅಲ್ಲಿ ಒ.ಬಿ.ಸಿ. ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆಂದು ಶೇ.೨೭.೫ ರಷ್ಟು ಮೀಸಲಾತಿ ನಿಗದಿಗೊಳಿಸಬೇಕೆಂಬುದು. ಒಟ್ಟಾರೆ ಈ ಉನ್ನತ ಸಂಸ್ಥೆಗಳಲ್ಲಿ ೩೫೦೦ರಷ್ಟು ಸೀಟುಗಳು ಲಭ್ಯ. ಈಗ ದೇಶಾದ್ಯಂತ ಚಳವಳಿ ನಡೆಯುತ್ತಿರುವುದು ಅದರಲ್ಲಿ ೧೦೦೦ ದಷ್ಟು ಸೀಟುಗಳನ್ನೂ ಇತರೆ ಹಿಂದುಳಿದ ಜಾತಿಗಳಿಗೆ ಮೀಸಲಿಡಬಾರದೆಂಬ ಬಗ್ಗೆ!

ಈ ೩೫೦೦ ಸೀಟುಗಳಿಗಾಗಿ ೩೫೦೦೦೦ ವಿದ್ಯಾರ್ಥಿಗಳು ಅರ್ಜಿ ಹಾಕುತ್ತಾರೆ. ಅರ್ಜಿ ಹಾಕಲು ಕನಿಷ್ಟ ಅರ್ಹತೆ ಶೇ.೫೫ ಅಂಕಗಳನ್ನು ಜನರಲ್ ಮೆರಿಟ್‌ವರೂ ಪಡೆದಿರಬೇಕು ಹಾಗೂ ಮೀಸಲಾತಿ ಪಡೆಯುವವರೂ ಪಡೆದಿರಲೇಬೇಕು. ಆ ನಂತರ ನಡೆಯುವ ವಿವಿಧ ಪ್ರತಿಭಾ ಪರೀಕ್ಷೆಗಳಲ್ಲಿ ಮೀಸಲಾತಿ ವಿದ್ಯಾರ್ಥಿಗಳು ಪಾಸಾ ಆಗಲೇ ಬೇಕು.. ಇಲ್ಲದಿದ್ದರೆ ಮೀಸಲು ಇದ್ದರೂ ಸೀಟು ಸಿಗುವುದಿಲ್ಲ. ಹೀಗಾಗಿ ಮೀಸಲು ಸೀಟು ಪಡೆದವ್ರಿಗೆ ಪ್ರತಿಭೆ ಇರುವುದಿಲ್ಲವೆಂಬ ವಾದವೇ ಸುಳ್ಳು. ವಾಸ್ತವಾಗಿ ನಡೆಯುವುದೇನಂದರೆ ಈ ಮೀಸಲು ಸೀಟುಗಳು ಸಹಾ ಕ್ರಮೇಣ ಸೂಕ್ತ ಅಭ್ಯಾರ್ಥಿ ಇಲ್ಲವೆಂಬ ನೆಪದಿಂದ ಕ್ರಮೇಣ ಅವೂ ಜನರಲ್ ಮೆರಿಟ್‌ನ ಪಾಲಾಗುತ್ತದೆ. ಅಂದರೆ ಅರ್ಥವೇನು?

ಜಾತಿ ವ್ಯವಸ್ಥೆ ಮತ್ತು ಜಾತಿ ವಂಚನೆಯ ಪುನುರುತ್ಪಾದನೆ

> **ಮಂಡಲ್ ಆಯೋಗವು ಸಮಾಜಿಕವಾಗಿ ಹಿಂದುಳಿದವರನ್ನು ಗುರುತಿಸಲು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾದ ೧೧ ಮಾನದಂಡಗಳನ್ನು ನಿಗದಿಪಡಿಸಿತು. ಸಾಮಾಜಿಕವಾಗಿ ಯಾವುದೇ ಜಾತಿ ಅಥವಾ ವರ್ಗಗಳ ಇತರರಿಂದ ಕೀಳಾಗಿ ಕಾಣಿಸಿಕೊಳ್ಳಲ್ಪಡುವುದು, ರಾಜ್ಯದ ಸರಾಸರಿಗಿಂತ ಶೇ. ೨೫ ರಷ್ಟು ಪ್ರಧಾನವಾಗಿ ದೈಹಿಕ ಶ್ರಮದಲ್ಲೇ ತೊಡಗಿರುವುದು, ೧೭ ನೇ ವಯಸ್ಸಿನೊಳಗೆ ಮದುವೆಯಾದ ಹೆಣ್ಣು ಮಕ್ಕಳು ಸಂಖ್ಯೆ ರಾಜ್ಯದ ಸರಾಸರಿಗಿಂತ ೨೫ರಷ್ಟು ಹೆಚ್ಚಿರುವುದು, ರಾಜ್ಯದ ಸರಾಸರಿಗಿಂತ ಶೇ. ೨೫ ರಷ್ಟು ಹೆಚ್ಚು ಹೆಣ್ಣು ಮಕ್ಕಳ ದೈಹಿಕ ಶ್ರಮದಲ್ಲಿ ತೊಡಗಿರುವುದುವುಗಳನ್ನು ಮಾನದಂಡಗಳಾಗಿ ಪರಿಗಣಿಸಲಾಯಿತು.**

ಇದೆಲ್ಲದರ ಅರ್ಥವಿಷ್ಟೇ. ಜಾತಿ ಆಧಾರಿತ ವ್ಯವಸ್ಥೆ ಮತ್ತು ಜಾತಿ ವಂಚನೆ ಪುನುರುತ್ಪಾದನೆಯಾಗುತ್ತಿದೆ ಎಂದರ್ಥ. ಈ ಹಿಂದೆ ೧೯೫೦ ರ ದಶಕದಲ್ಲಿ ಕೇವಲ ೨೭೦೦ ಜಾತಿಗಳು ಹಿಂದುಳಿದ ಜಾತಿಗಳೆಂದು ಕಾಕಾ ಕಾಲೆಲ್ಕರ್ ಸಮಿತಿ ಪತ್ತೆ ಹಚ್ಚಿದ್ದರೆ ಸ್ವಾತಂತ್ರ್ಯ ಬಂದು ೩೦ ವರ್ಷಗಳ ನಂತರ ರಚಿತವಾದ ಮಂಡಲ್; ಕಮೀಷನ್ ೩೪೦೦ ಜಾತಿಗಳು ಹಿಂದುಳಿದವೆಂದು ಗುರುತಿಸಿತು. ಅಷ್ಟು ಮಾತ್ರವಲ್ಲದೆ ಅದೇ ಸಮಯದಲ್ಲಿ ದೇಶ ಆಡಳಿತ, ನ್ಯಾಯಾಂಗ, ಜನಸಂಖ್ಯೆಯ ಕೇವಲ ಶೇ. ೧ ರಷ್ಟಿರುವ ಮೇಲ್ಜಾತಿಗಳ ಪಾಲು ದೇಶದ ಉನ್ನ ಉದ್ಯೋಗಗಳಲ್ಲಿ ಹಾಗೂ ಉನ್ನತ ಶಿಕ್ಷಣದಲ್ಲಿ ಮ ಖಾಸಗೀ ಕ್ಷೇತ್ರದ ಉನ್ನತ ಹುದ್ದೆಗಳಲ್ಲೂ ಹಾಗೂ ಒಡೆತನದಲ್ಲೂ ಶೇ. ೭೦ ಕ್ಕಿಂತ ಜಾಸ್ತಿ. ಉನ್ನತ ಶಿಕ್ಷ ಮತ್ತು ಉನ್ನತ ಉದ್ಯೋಗಗಳಲ್ಲಿ ಇತರ ಹಿಂದುಳಿ ಜಾತಿಗಳ ಪಾಲು ಶೇ. ೧೪.೫ ರಷ್ಟು ಮಾತ್ರ ಅ ಮಾತ್ರವಲ್ಲ, ಹೊಸ ಆರ್ಥಿಕತೆ ಎಂದು ಕರೆಸಿಕೊಳ್ಳಲ್ಪಡು ಸಾಫ್ಟ್‌ವೇರ್ ಇನ್ನಿತ್ಯಾದಿ ಕ್ಷೇತ್ರಗಳಲ್ಲೂ ಇಂದು ಅತಿ ಹೆ ಜನಪ್ರಾತಿನಿಧ್ಯ ಮೇಲ್ಜಾತಿಗಳದ್ದೇ ಆಗಿದೆ. ಮ ಹಿಂದುಳಿದ ಜಾತಿಗಳು ಈಗಲೂ ತಮ್ಮ ಪಾರಂಪರ ಉದ್ಯೋಗಗಳಲ್ಲೇ ಶೇಣಿಕರಣ ವ್ಯವಸ್ಥೆಯ ಬದುಕುತ್ತಿದ್ದಾರೆ.

> **ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಾದ IIT, IIM, AIMSS ಇನ್ನಿತ್ಯಾದಿ ಸಂಸ್ಥೆಗಳಲ್ಲಿ ಸಂವಿಧಾನಿಕವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶೇ. ೨೨.೫ ರಷ್ಟು ಮೀಸಲಾತಿ ಇದೆ. ಇದೀಗ ಅರ್ಜುನ್ ಸಿಂಗ್‌ರ ಪ್ರಸ್ತಾಪ ಅಲ್ಲಿ ಒ.ಬಿ.ಸಿ. ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆಂದು ಶೇ.೨೭.೫ ರಷ್ಟು ಮೀಸಲಾತಿ ನಿಗದಿಗೊಳಿಸ ಬೇಕೆಂಬುದು. ಒಟ್ಟಾರೆ ಈ ಉನ್ನತ ಸಂಸ್ಥೆಗಳಲ್ಲಿ ೩೫೦೦ರಷ್ಟು ಸೀಟುಗಳು ಲಭ್ಯ. ಈಗ ದೇಶಾದ್ಯಂತ ಚಳವಳಿ ನಡೆಯುತ್ತಿರು ವುದು ಅದರಲ್ಲಿ ೧೦೦೦ ದಷ್ಟು ಸೀಟು ಗಳನ್ನೂ ಇತರೆ ಹಿಂದುಳಿದ ಜಾತಿಗಳಿಗೆ ಮೀಸಲಿಡಬಾರದೆಂಬ ಬಗ್ಗೆ!**

ಈ ಹೊಸ ಆರ್ಥಿಕತೆಯು ಯಾವುದೇ ಸಾಮಾಜಿಕ ಜವಾಬ್ದಾರಿಯಿಂದ ಸಂಪೂರ್ಣವಾಗಿ ಮುಕ್ತವಾಗಿರ ವುದರಿಂದ ಅಲ್ಲಿ ಯಾವುದೇ ಸಾಮಾಜಿಕ ನ್ಯಾಯದ ಕ್ರಮ ಗಳನ್ನು ಹರಸುವುದೇ ತಪ್ಪಾಗುತ್ತದೆ. ಆದ್ದರಿಂದಲೇ ಅ ಆಧುನಿಕ ಅಗ್ರಹಾರಗಳಾಗಿಯೇ ಹೊಸ ವರ್ಣಾಶ್ರಮವನ ಹುಟ್ಟುಹಾಕುತ್ತಿವೆ. ಆದ್ದರಿಂದಲೇ ಮೀಸಲಾತಿ ಹಿಂದಿ ತಲೆಮಾರು ಮಾಡಿದ ತಪ್ಪಿಗೆ ಇಂದಿನ ತಲೆಮಾರು ತೆರು ರುವ ದಂಡವಲ್ಲ. ಬದಲಿಗೆ ಈಗಲೂ ಪುನರುತ್ಪಾದ ಯಾಗುತ್ತಿರುವ ಜಾತಿ ಅಸಮಾನತೆ ಹಾಗೂ ವಂಚ ಯನ್ನು ತಡೆಯಲು ಒಂದು ಸಾಂಕೇತಿಕ ಕ್ರಮ ಮಾ ಹಾಗೂ ಮೊದಲಿನಿಂದಲೂ ಕೆಳಜಾತಿಗಳನ್ನು ಹೊ ಗಿಡಲು ಮೇಲ್ಜಾತಿಗಳು ಬಳಸುತ್ತಿರುವ ಕುತಂತ್ರ ಕೆಳಜಾ ಗಳಿಗೆ ಪ್ರತಿಭೆಯಿಲ್ಲ ಎಂಬುದು.

ಪ್ರತಿಭೆ: ತೂಗುವ ತಕ್ಕಡಿಯಲ್ಲೇ ಮೋಸವಿದ್ದಾಗ ತೂಕದ ನ್ಯಾಯ ಹೇಗೆ ದಕ್ಕೀತು?

ವಾಸ್ತವವಾಗಿ ಈ ಪ್ರತಿಭೆಯೆಂಬ ಕಲ್ಪನೆಯೆ ಅತ್ಯಂತ ಮೋಸಪೂರಿತವಾದದ್ದು ಹಾಗೂ ಅನ್ಯಾಯ ಯುತವಾದದ್ದು ಮತ್ತು ಅವೈಜ್ಞಾನಿಕವಾದದ್ದು. ಈವರೆ ಪ್ರತಿಭೆ ಎಂದರೇನು ಎಂಬುದಕ್ಕೆ ಒಂದು ಸಾರ್ವತ್ರಿ ಮಾನದಂಡಗಳಿಲ್ಲ. ಪ್ರತಿಭೆ ಎಂದರೆ ಪರೀಕ್ಷೆಯಲ್ಲಿ ಪಡೆದು ಕೊಳ್ಳುವ ಅಂಕಗಳೆಂಬುದು ಈವರೆಗೆ ನಾವು ಅಂದು ಕೊಂಡಿರುವ ಮಾನದಂಡ. ಆದರೆ ಒಬ್ಬ ವ್ಯಕ್ತಿಯ ಹುದುಗಿರುವ ಪ್ರತಿಭೆಯನ್ನು ಅಳೆಯಲು ಅದು ಅತ್ಯಂತ ಅವೈಜ್ಞಾನಿಕವಾದದ್ದು. ಆದ್ದರಿಂದಲೇ ಹಲವು ಖಾಸಗಿ ಕಂಪನಿಗಳು ಮತ್ತು ಹಲವು ಮುಂದುವರೆದ ದೇಶಗಳು ನಿಜವಾದ ಪ್ರತಿಭೆಯನ್ನು ಅಳೆಯಲು ಬೇರೆಬೇರೆ ಮಾರ್ಗ ಗಳನ್ನು ಅನುಸರಿಸುತ್ತವೆ.

ನಮ್ಮಲ್ಲೂ ಪ್ರತಿಭೆಯನ್ನು ಅಳೆಯಲು ಬಳಸುತ್ತಿ ರುವ ಮಾನದಂಡಗಳು ದಿನೇದಿನೇ ಬದಲಾಗುತ್ತಾ ಬರುತ್ತಿ ವೆಯಾದರೂ ಅವೆಲ್ಲಾ ಮೇಲ್ಜಾತಿ ಪ್ರತಿಭೆಗಳನ್ನು ಅಳೆ ಯಲು ಮಾತ್ರ ಸಹಾಯಕವಾಗುತ್ತಿದೆ. ಒಂದು ಜಾತಿ ಶ್ರೇಣೀಕರಣವುಳ್ಳ ಸಮಾಜದಲ್ಲಿ ಆತ್ಮವಿಶ್ವಾಸವನ್ನು ಹಾಗೂ ಸ್ವಂತಿಕೆಯನ್ನು ಕೊಲ್ಲುವ ಪರಿಸರದಲ್ಲಿ ದಮನಕ್ಕೆ ಒಳ ಗಾದವರ ಪ್ರತಿಭೆಯನ್ನು ಅಳೆಯುವ ಮಾನದಂಡಗಳೇ ಬೇರೆಯಾಗಿರಬೇಕು. ಪಾರಂಪರಿಕವಾಗಿ ಹುದುಗಿಕೊಂಡೆ ಬಂದಿರುವ ಶ್ರಮ ಆಧಾರಿತ ಹಾಗೂ ಜೀವನಾನುಭವ ಆಧಾರಿತ ಪ್ರತಿಭೆಯನ್ನು ಮತ್ತು ಒಂದು ಬಹುಸಂಸ್ಕೃತಿ ದೇಶಗಳಲ್ಲಿ ವಿವಿಧ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ವರಳುವ

ಪ್ರತಿಭೆಗಳನ್ನು ಅಳೆಯುವ ಮಾನದಂಡಗಳೆ ನಮ್ಮ ಸಮಾಜದಲ್ಲಿ ಅವಿಷ್ಕಾರಗೊಂಡಿಲ್ಲ. ಹೀಗಾಗಿಯೇ ಪ್ರತಿಭೆಯನ್ನು ತೂಗುವ ತಕ್ಕಡಿಯಲ್ಲೆ ಮೋಸವಿದ್ದಾಗ ತೂಕದಲ್ಲಿ ನ್ಯಾಯ ಹೇಗೆ ಸಿಕ್ಕೀತು?

ಮೀಸಲಾತಿಯ ಮಿತಿ ಮತ್ತು ಸಾಂಕೇತಿಕ ರಾಜಕಾರಣದ ಆತ್ಮಘಾತುಕತೆ:

ಮೀಸಲಾತಿ ನೀತಿಯ ಹಿಂದೆ ಅವಕಾಶ ವಂಚಿತರಿಗೆ ಆದ್ಯತೆ ನೀಡುವ ಆದರ್ಶ ಮತ್ತು ಪ್ರಜಾತಾಂತ್ರಿಕ ತಿಳುವಳಿಕೆ ಇದ್ದರೂ ಇಂದಿನ ಖಾಸಗೀಕರಣ ಮತ್ತು ಜಾಗತೀಕರಣದ ಯುಗದಲ್ಲಿ ಅದು ಕೇವಲ ಸಮಸ್ಯೆಯ

> **ಮೀಸಲಾತಿ ನೀತಿಯ ಹಿಂದೆ ಅವಕಾಶ ವಂಚಿತರಿಗೆ ಆದ್ಯತೆ ನೀಡುವ ಆದರ್ಶ ಮತ್ತು ಪ್ರಜಾತಾಂತ್ರಿಕ ತಿಳುವಳಿಕೆ ಇದ್ದರೂ ಇಂದಿನ ಖಾಸಗೀಕರಣ ಮತ್ತು ಜಾಗತೀಕರಣದ ಯುಗದಲ್ಲಿ ಅದು ಕೇವಲ ಸಮಸ್ಯೆಯ ಮೂಲವನ್ನು ಸ್ಪರ್ಶಿಸಲೂ ಆಗದ ಕೇವಲ ಸಾಂಕೇತಿಕ ಕ್ರಮಗಳು ಮಾತ್ರ, ಜಾಗತೀಕರಣವೆಂಬ ಪಾಶ್ಚಿಮಾತ್ಯ ಬಂಡವಾಳಶಾಹಿ ಮತ್ತು ಸ್ಥಳೀಯ ದಲ್ಲಾಳಿ ಬಂಡವಾಳಶಾಹಿ ಈ ದೇಶದ ಶೋಷಿತ ಜನತೆಯ ಮೇಲೆ ನಡೆಸಿರುವ ಯುದ್ಧದಲ್ಲಿ ಈ ದೇಶದ ಪ್ರಭುತ್ವ ಸಂಪೂರ್ಣವಾಗಿ ಉಳ್ಳವರ ಉಪಕರಣವಾಗಿದೆ.**

ಮೂಲವನ್ನು ಸ್ಪರ್ಶಿಸಲೂ ಆಗದ ಕೇವಲ ಸಾಂಕೇತಿಕ ಕ್ರಮಗಳು ಮಾತ್ರ, ಜಾಗತೀಕರಣವೆಂಬ ಪಾಶ್ಚಿಮಾತ್ಯ ಬಂಡವಾಳಶಾಹಿ ಮತ್ತು ಸ್ಥಳೀಯ ದಲ್ಲಾಳಿ ಬಂಡವಾಳಶಾಹಿ ಈ ದೇಶದ ಶೋಷಿತ ಜನತೆಯ ಮೇಲೆ ನಡೆಸಿರುವ ಯುದ್ಧದಲ್ಲಿ ಈ ದೇಶದ ಪ್ರಭುತ್ವ ಸಂಪೂರ್ಣವಾಗಿ ಉಳ್ಳವರ ಉಪಕರಣವಾಗಿದೆ. ಈ ಬಂಡವಾಳ ಈ ದೇಶಕ್ಕೆ ಹರಿದು ಬರುತ್ತಿರುವುದೇ ಯಾವುದೇ ಸಾಮಾಜಿಕ ನ್ಯಾಯದ ಸಂಕೋಲೆಗಳನ್ನು ತಮ್ಮ ಸುಲಿಗೆಗೆ ತೊಡಿಸಕೂಡದೆಂಬ ಶರತ್ತಿನ ಮೇಲೆ. ಆದ್ದರಿಂದಲೇ ಈ ದೇಶದ ಯಾವುದೇ ಬಂಡವಾಳಶಾಹಿ ಸಂಸ್ಥೆಗಳು ತನ್ನ ಸಂಸ್ಥೆಯಲ್ಲಿ ಮೀಸಲಾತಿ ಅನುಸರಿಸುವುದಿಲ್ಲವೆಂದು ಸ್ಪಷ್ಟವಾಗಿ ಘೋಷಿಸುತ್ತಿವೆ. ಅಲ್ಲದೆ ತಮ್ಮ ದೇಶದಲ್ಲಿ ವಿವಿಧ ಬಗೆಯ ಸಮಾನಾವಕಾಶ ನೀತಿಗಳನ್ನು ಅನುಸರಿಸುವ ವಿದೇಶಿ ಕಂಪನಿಗಳು ಸಹಾ ನಮ್ಮ ದೇಶದಲ್ಲಿ ಯಾವುದೇ ಸಾಮಾಜಿಕ ನ್ಯಾಯದ ನೀತಿಯನ್ನು ಕಡ್ಡಾಯ ಮಾಡಿದರೆ ದೇಶ ಬಿಟ್ಟು ಹೋಗುವುದಾಗಿ ಗಂಭೀರ ಎಚ್ಚರಿಕೆಯನ್ನು ನೀಡಿವೆ.

ಈ ದೇಶದ ಪ್ರಭುತ್ವ ಸಹ ಈ ದೇಶದ ಮತ್ತು ಈ ದೇಶಕ್ಕೆ ಬರುವ ಬಂಡವಾಳದ ಮೇಲೆ ಅರ್ಥಾತ್ ಉದ್ಯೋಗ ಸೃಷ್ಟಿಸುವ ಎಲ್ಲಾ ಮೂಲಗಳಿಗೂ ಎಲ್ಲಾ ಬಗೆಯ ಸಾಮಾಜಿಕ ಜವಾಬ್ದಾರಿಯಿಂದ ವಿನಾಯಿತಿ ನೀಡಿವೆ. ಅಲ್ಲದೆ ಅದೇ ಶಕ್ತಿಗಳ ಅಣತಿಗೆ ಬಗ್ಗಿ ಈ ದೇಶದಲ್ಲಿ ಸರ್ಕಾರ ಇನ್ನು ಮುಂದೆ ಯಾವುದೇ ಶಾಲೆ ಕಾಲೇಜು, ಕಾರ್ಖಾನೆ ಮತ್ತು ಅಸ್ಪತ್ರೆಗಳನ್ನು ಕಟ್ಟುವ ಬಾಬತಿಗೆ ಕೈ ಹಾಕುವುದಿಲ್ಲವೆಂಬ ಆರ್ಥಿಕ ನೀತಿಗೆ ಸಹಿ ಹಾಕಿದೆ.

ಹೀಗಾಗಿ ಇಂದಿನ ಮೀಸಲಾತಿ ಚರ್ಚೆ ಒಂದು ವಿಚಿತ್ರ ವೈರುಧ್ಯವಿರುವ ಸನ್ನಿವೇಶದಲ್ಲಿ ನಡೆಯುತ್ತಿದೆ. ಸರ್ಕಾರಿ ಕ್ಷೇತ್ರವೇ ಕಣ್ಮರೆಯಾಗುವ ದೊಡ್ಡ ಘಾತುಕ ಸನ್ನಿವೇಶ ಎದುರಾಗಿರುವಾಗ ಆ ಅಸಲೀ ಪ್ರಶ್ನೆಯ ಬಗ್ಗೆ ಯೋಚಿಸದೆ ಅದರಲ್ಲಿ ಒಂದಷ್ಟು ಪಾಲಿಗೆ ಹೋರಾಡುವುದೆ ಆತ್ಮಘಾತುಕತನವಾಗಿ ಬಿಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕೇಂದ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳು ಉತ್ಪಾದಿಸುತ್ತಿರುವ ಟೆಕ್ನೋಕ್ರಾಟ್‌ಗಳು, ಬ್ಯುರೋಕ್ರಾಟ್‌ಗಳು ಮೂಲಭೂತವಾಗಿ ದಲಿತ ಹಾಗೂ ಹಿಂದುಳಿದ ಸಮುದಾಯದ ಬದುಕನ್ನೇ ಬೀದಿಪಾಲು ಮಾಡಿ ಈ ದೇಶದ ಸಂಪನ್ನರ ಲೂಟಿಯನ್ನು ಸುಗಮಗೊಳಿಸುವ ಆರ್ಥಿಕ ನೀತಿಗಳ ಉಸ್ತುವಾರಿ ನೋಡಿಕೊಳ್ಳಲೆಂದೇ ಆಗಿದೆ. ಹೀಗೆ ಶೋಷಿತ ಪ್ರತಿಭೆಗಳ ಕೈಯಿಂದ ಶೋಷಿತ ಜನತೆಯ ಬದುಕನ್ನು ಬೀದಿಪಾಲು ಮಾಡುವ ಈ ವ್ಯವಸ್ಥೆಯ ಷಡ್ಯಂತ್ರದ ಬಗ್ಗೆ ಶೋಷಿತ ಜನತೆ ಮತ್ತು ಮೀಸಲಾತಿ ಪರಧ್ವನಿ ಎತ್ತುತ್ತಿರುವ ನಾಯಕರು ಎಷ್ಟರ ಮಟ್ಟಿಗೆ ಎಚ್ಚರರಾಗಿದ್ದಾರೆ?

ಜಾಗತೀಕರಣವೆಂಬ ವಿಶ್ವವ್ಯಾಪ್ತಿ ನವ ಜಾಗತಿಕ ವ್ಯವಸ್ಥೆ ಅತ್ಯಂತ ಪ್ರತಿಗಾಮಿ ಶೋಷಿಕ ಆರ್ಥಿಕ ನೀತಿ ಮತ್ತು ಅದರ ಆಧಾರಿತ ಸಾಮಾಜಿಕ ವ್ಯವಸ್ಥೆಯನ್ನು ಮತ್ತು ಅತ್ಯಂತ ಸ್ವಾರ್ಥಪೂರಿತ ಹಾಗೂ ಕತ್ತು ಕೊಯ್ಯುವ ಸ್ಪರ್ಧೆಯನ್ನು ಹುಟ್ಟುಹಾಕುತ್ತಿದೆ. ಈ ವ್ಯವಸ್ಥೆ ಎಂತಹ ವಿಷಜಾಲವೆಂದರೆ ಶೋಷಿತ ಕೈಯಿಂದಲೇ ಶೋಷಿತ ಸಮುದಾಯದ ಕಣ್ಣನ್ನು ಚುಚ್ಚಿಸುತ್ತದೆ. ಈ ಆರ್ಥಿಕ ನೀತಿಗಳಿಂದ ಸಮುದಾಯಕ್ಕೆ ಆಗುವ ಅನ್ಯಾಯದ ಬಗ್ಗೆ ಕುರುಡಾಗಿಸಿ ತನ್ನ ವ್ಯಕ್ತಿಗತ ಅಭಿವೃದ್ಧಿಯನ್ನು ಮಾತ್ರ ಪ್ರಧಾನವನ್ನಾಗಿ ಮಾಡುತ್ತದೆ. ಸಮುದಾಯದ ಪ್ರಗತಿ ಎಂದರೆ ಜಾಗತೀಕರಣವೆಂಬ ಮಹಾ ವ್ಯವಸ್ಥೆಯನ್ನು ಎದುರು ಹಾಕಿಕೊಳ್ಳಬೇಕು ಮತ್ತು ಮೂಲಭೂತ ರಾಜಕೀಯಾಧಿಕಾರ ಸಂಬಂಧಗಳ ಸಮೀಕರಣಗಳ ಬದಲಾವಣೆಗೆ ಅರ್ಥಾತ್ ಒಂದು ಮೂಲಭೂತ ಕ್ರಾಂತಿಗೆ ಸಜ್ಜಾಗಬೇಕಾದ ಅಗತ್ಯ ಉಂಟಾಗುತ್ತದೆ. ಅದಕ್ಕೆ ಸಿದ್ಧರಿಲ್ಲದ ಶೋಷಿತ ಸಮುದಾಯವನ್ನು ಪ್ರತಿನಿಧಿಸುವ ಆ ಜನಾಂಗದ ಮಧ್ಯಮ ವರ್ಗದ ನಾಯಕತ್ವದಲ್ಲಿರುವ ಹೋರಾಟಗಳು ಆ ಪ್ರಶ್ನೆಯನ್ನೇ ಹಾಕಿಕೊಳ್ಳಲು ನಿರಾಕರಿಸುತ್ತವೆ.

ಈ ನವ ಸಾಮ್ರಾಜ್ಯಶಾಹಿ ವ್ಯವಸ್ಥೆ ಕೂಡಾ ಸಾಂಕೇತಿಕವಾಗಿ ಶೋಷಿತ ಸಮುದಾಯದ ಕೆಲವು ವ್ಯಕ್ತಿಗಳನ್ನು ತನ್ನ ಸುಲಿಗೆಯ ವಸ್ತುವಾಗಿ ನೇಮಿಸಿಕೊಳ್ಳಲು ಹಿಂಜರಿಯುವುದಿಲ್ಲವಾದ್ದರಿಂದ ಅದನ್ನೇ ಜಯವೆಂದು ಭ್ರಮಿಸುವಂತೆ ಮಾಡುವ ಆತ್ಮಘಾತುಕ ರಾಜಕೀಯವೂ ಇದೇ ಸಂದರ್ಭದಲ್ಲಿ ನಡೆಯುತ್ತಿದೆ. ಆದ್ದರಿದಂಲೇ ಮೀಸಲಾತಿಯ ಸಾಂಕೇತಿಕ ಪ್ರಯೋಜನಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಲೇ ಮೂಲಭೂತವಾಗಿ ಇಡೀ ಸಮುದಾಯವನ್ನು ಶೋಷಣೆಯಿಂದ ಮುಕ್ತಗೊಳಿಸುವ ಮೂಲ ಹೋರಾಟಗಳಿಗೆ ಮರುಳುವುದು ಹಿಂದೆಂದಿಗಿಂತಲೂ ಅತ್ಯಗತ್ಯವಾಗಿದೆ. □

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

'ಮಾರ್ಕ್ಸ್‌ಕಾರ್ಡ್ ಪ್ರತಿಭೆ'ಯ ಸುತ್ತ ಮುತ್ತ

ಅರ್ಜುನ್ ಸಿಂಗ್, ಮಂಡಲ್ ವರದಿ ಪ್ರಕಾರ ಉನ್ನತ ಶಿಕ್ಷಣದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ತರುವ ಮಾತಾಡಿದ್ದೇ ತಡ, ಜೀವ ಉಳಿಸುವ ವೃತ್ತಿಯ ವೈದ್ಯರು, ತಮ್ಮನ್ನು ನೆಚ್ಚಿದ ರೋಗಿಗಳು ಕಣ್ಣೆದುರೇ ಸತ್ತರೂ ಪರವಾಗಿಲ್ಲ ವೆಂದು ದೇಶಾದ್ಯಂತ ಮುಷ್ಕರಕ್ಕೆ ನಿಂತಿದ್ದಾರೆ. ಜ್ಞಾನ ಆಯೋಗ ಎಂಬ ಭಾರೀ ತೂಕದ ಹೆಸರಿನ ಸಂಸ್ಥೆಯ ಎಂಟು ಜನರಲ್ಲಿ ಆರು ಜನ, ವಿರುದ್ಧ ದನಿಯೆತ್ತಿದ್ದಾರೆ; ಇಬ್ಬರು ರಾಜೀನಾಮೆಯನ್ನೂ ಬಿಸಾಕಿಬಿಟ್ಟರು. ಐಎಂಎ (ಭಾರತೀಯ ವೈದ್ಯಕೀಯ ಸಂಘ) ಎರಡು ಹೋಳಾಗಿದೆ. ಸೋನಿಯಾ ಗಾಂಧಿ ಲೋಕಸಭಾ ಚುನಾವಣೆ ಯಲ್ಲಿ ಗೆದ್ದು ಬರುವವರೆಗೆ ತೆಪ್ಪಗಿದ್ದ ಕಾಂಗ್ರೆಸ್ಸು, ಎರಡೂ ಕಡೆ ನ್ಯಾಯವಿದೆ ಎಂಬ-ರಾಹುಲ್ ಗಾಂಧಿಯ ಹುಂಬ ಹೇಳಿಕೆಗೆ ತಲೆದೂಗುತ್ತ ಸಮಿತಿ ರಚಿಸುವ ಮಾತಾಡುತ್ತಿದೆ.

○ ಎನ್. ಎಸ್. ಶಂಕರ್

ಭಾರತ ಮತ್ತೆ ಕುದಿಯತೊಡಗಿದೆ.

ಯಾಕೆ? ಯಾಕೆಂದರೆ ಜಾತಿ, ಧರ್ಮ, ಸಾಮಾಜಿಕ ನ್ಯಾಯ- ಇಂಥ ಯಾವುದೇ ಸುದ್ದಿ ತೆಗೆದರೂ ಕುದಿಯುವುದು ನಮ್ಮ ರಕ್ತದ ಜಾಯಮಾನ.

ಎರಡು ವರ್ಷಗಳ ಹಿಂದೆ ಸರ್ಕಾರದ ಯಾವುದೋ ಹಿರಿ ತಲೆಗೆ ಒಂದು ಲಹರಿ ಬಂತು: ಖಾಸಗಿ ವಲಯಗಳಲ್ಲೂ ದಲಿತರು ಹಿಂದುಳಿದವರು ಮತ್ತಿತರ ವಂಚಿತ ಜನವರ್ಗಕ್ಕೆ ಮೀಸಲಾತಿ ಸೌಲಭ್ಯ ಇರಬೇಕು ಅಂತ. ಹಾಗಂದಿದ್ದೇ ತಡ ದೇಶದ ಉದ್ಯಮಪತಿಗಳಿಗೆಲ್ಲ ಒಮ್ಮೆಲೇ ರಕ್ತ ಕುದಿಯತೊಡಗಿತು. ಎಲ್ಲಾದರೂ ಸಾಧ್ಯವೇ? ಪ್ರತಿಭೆ? ಪೈಪೋಟಿ? ಅಂತರ್‍ರಾಷ್ಟ್ರೀಯ ಸೆಣಸಾಟಕ್ಕೆ ತೆರೆದುಕೊಂಡ ಆರ್ಥಿಕ ರಂಗದ ಮಾನ, ಭವಿಷ್ಯ...?

ಅವರ ವಾದಗಳಲ್ಲಿ ಹೊಸದೂ ಇಲ್ಲ, ಅನಿರೀಕ್ಷಿತ ವಾದುದೂ ಇಲ್ಲ. ಒಟ್ಟಾರೆಯಾಗಿ ಪ್ರತಿಭೆಯನ್ನು ರಕ್ತಗತವಾಗಿ ಗುತ್ತಿಗೆ ಪಡೆದುಕೊಂಡ ಕೆಲವರ ಹೊರತು ಇನ್ಯಾರಿಗೂ ತಮ್ಮ ಮಟ್ಟಕ್ಕೆ ಬರುವ ಯೋಗ್ಯತೆ ಇಲ್ಲ; ಈವತ್ತೇ ಅಲ್ಲ, ಇನ್ನು ಎಷ್ಟು ಶತಮಾನ ಗಳು ಹೋದರೂ ಈ ಜನಕ್ಕೆ ಆ ಯೋಗ್ಯತೆ ಬರುವ ಛಾನ್ಸೂ ಇಲ್ಲ- ಇದು ಅವರ ವಾದ. ಸರಿ, ಆಗ ಅವರ ಅಬ್ಬರದ ಎದುರು ಮೀಸಲಾ ತಿಯ ಪ್ರಸ್ತಾಪ ತಣ್ಣಗಾಯಿತು. ಒಂದು ವರ್ಷ ಕಳೆಯಿತು. ಸರ್ಕಾರ ದಿಂದ ಮೆಲು ದನಿಯಲ್ಲಿ ಮತ್ತೆ ಅದೇ ಮಾತು ಬಂತು. ಬಂದ ತಕ್ಷಣ ಮತ್ತೆ ಈ ಬಲಾಢ್ಯ ಧನಿಕರ ರಕ್ತ ಕುದಿಯತೊಡಗಿತು! ಇಪ್ಪ ತ್ತೇಳು ಜನ ಪ್ರಮುಖ ಉದ್ಯಮಪತಿಗಳು ಕೇಂದ್ರಕ್ಕೆ ಪತ್ರ ಬರೆದು ಒಕ್ಕೊರಲಿನ ಬೊಬ್ಬೆ ಶುರು ಮಾಡಿದರು. ಅಷ್ಟಕ್ಕೂ ನಿಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಯಾವ ಶತಮಾನಕ್ಕೂ ಉದ್ಧಾರವಾ ಗಲು ಸಾಧ್ಯವಿಲ್ಲದ ಈ ಅರೆ ನಾಗರಿಕರಿಗೆ ಬೇಕಾದರೆ ವಿಶೇಷ ತರ ಬೇತಿ, ಶಿಕ್ಷಣ ಕೊಟ್ಟು ಅವರನ್ನು ಮನುಷ್ಯರೂಪಕ್ಕೆ ತರಲು ತಾವು ತಯಾರು, ಆದರೆ ಮೀಸಲಾತಿಯ ಮಾತೆತ್ತಬೇಡಿ ಎಂಬ "ಉದಾರ ಕಳಕಳಿ" ಅವರಿಂದ ವ್ಯಕ್ತವಾಯಿತು. ಅಷ್ಟಕ್ಕೇ, ಅದೇ ದೊಡ್ಡದು ಎಂಬಂತೆ ಕೇಂದ್ರ ಸಚಿವೆ ಮೀರಾ ಕುಮಾರ್ ಸಂಭ್ರಮಪಟ್ಟು ಗೆಲುವು ಸಾಧಿಸಿದವರ ಕಳೆಯಿಂದ ಮುಗುಳ್ನಕ್ಕರು!

ಮೀಸಲಾತಿ? ಅದಕ್ಕೆ ಮತ್ತೆ ತಾತ್ಕಾಲಿಕ ಸಾವು.

ಇನ್ನು ಈ ವರ್ಷ ಮಂತ್ರಿ ಅರ್ಜುನ್ ಸಿಂಗ್, ಮಂಡಲ್ ವರದಿ ಪ್ರಕಾರ ಉನ್ನತ ಶಿಕ್ಷಣದಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ತರುವ ಮಾತಾಡಿದ್ದೇ ತಡ, ಮತ್ತೆ ಯಾರ್‍ಯಾರದೋ ರಕ್ತ ಕುದಿಯಲು ಮೊದಲಾಗಿದೆ! ಜೀವ ಉಳಿಸುವ ವೃತ್ತಿಯ ವೈದ್ಯರು, ತಮ್ಮನ್ನು ನೆಚ್ಚಿದ ರೋಗಿಗಳು ಕಣ್ಣೆದುರೇ ಸತ್ತರೂ ಪರವಾಗಿಲ್ಲವೆಂದು ದೇಶಾದ್ಯಂತ ಮುಷ್ಕರಕ್ಕೆ ನಿಂತಿದ್ದಾರೆ. ಜ್ಞಾನ ಆಯೋಗ ಎಂಬ ಭಾರೀ ತೂಕದ ಹೆಸರಿನ ಸಂಸ್ಥೆಯ ಎಂಟು ಜನರಲ್ಲಿ ಆರು ಜನ, ವಿರುದ್ಧ ದನಿಯೆತ್ತಿದ್ದಾರೆ; ಇಬ್ಬರು ರಾಜೀನಾಮೆಯನ್ನೂ ಬಿಸಾಕಿ ಬಿಟ್ಟರು. ಐಎಂಎ (ಭಾರತೀಯ ವೈದ್ಯಕೀಯ ಸಂಘ) ಎರಡು ಹೋಳಾಗಿದೆ. ಸೋನಿಯಾ ಗಾಂಧಿ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಬರುವವರೆಗೆ ತೆಪ್ಪಗಿದ್ದ ಕಾಂಗ್ರೆಸ್ಸು, ಎರಡೂ ಕಡೆ ನ್ಯಾಯವಿದೆ ಎಂಬ-ರಾಹುಲ್ ಗಾಂಧಿಯ ಹುಂಬ ಹೇಳಿಕೆಗೆ ತಲೆದೂಗುತ್ತ ಸಮಿತಿ ರಚಿಸುವ ಮಾತಾಡುತ್ತಿದೆ. ಇತ್ತ ಮುಷ್ಕರವೀರರು ಪ್ರಧಾನಿ ಯಾಗಲಿ, ರಾಷ್ಟ್ರಪತಿಯಾಗಲಿ-ಯಾರಿಗೂ ಕೇರೇ ಮಾಡದೆ, ಈ



ದೇಶಕ್ಕೊಂದು ಸಂವಿಧಾನವೂ ಇಲ್ಲವೇನೋ ಅನ್ನುವಂತೆ, ತ
ಪಾಡಿಗೆ ತಾವು ಬ್ಲಾಕ್‌ಮೇಲ್ ಧೋರಣೆಯಲ್ಲಿದ್ದಾರೆ. ಎಷ್ಟರ ಮ
ಗೆಂದರೆ ಬನ್ನಿ, ಸೀಟ್ ಜಾಸ್ತಿ ಮಾಡೋಣ ಬೇಕಾದರೆ, ನಿಮ
ಅನ್ಯಾಯವಾಗುವುದಿಲ್ಲ ಅನ್ನುವ ಪ್ರಧಾನಿಗಳ ಆಹ್ವಾನಕ್ಕೂ ಮೂ
ಕಾಸಿನ ಬೆಲೆ ಬರುತ್ತಿಲ್ಲ.

ವಿ.ಪಿ. ಸಿಂಗ್ ಮೊದಲ ಬಾರಿ ಮಂಡಲ್ ಆಯೋಗ
ವರದಿ ತಂದಾಗ ರಾಜೀವ್ ಗೋಸ್ವಾಮಿ ಅನ್ನುವವನು ಮೈಗೆ ಬೆ
ಹಚ್ಚಿಕೊಂಡು ಪ್ರತಿಭಟನೆ ತೋರಿಸಿದ್ದ. (ಆ ಮನುಷ್ಯ ಈಗ ಎರ
ವರ್ಷದ ಹಿಂದೆ ತೀರಿಕೊಂಡ.) ಈಗ ಅದನ್ನು ಎತ್ತಿ ಹೇಳು
ಅದ್ಯಾವಳೋ ಸಮಾಜಸೇವಕಿ ಎಂದು ಕರೆದುಕೊಳ್ಳುವ ಕನ್ನಡ
ಟೀವಿ ನಟಿಯೊಬ್ಬಳು ಆ ರೀತಿ ಆತ್ಮಾರ್ಪಣೆಗೆ ತಯಾರಾದವ
ಈಗ್ಯಾರೂ ಇಲ್ಲವಲ್ಲ ಅನ್ನುತ್ತ ಹಲುಬಿದಳಂತೆ. ಆ ಆತ್ಮಾರ್ಪಣೆ ಅ
ಳಿಂದಲೇ ಶುರುವಾಗಲಿ ಅನ್ನುವುದರ ಹೊರತು ಇಲ್ಲಿ ಇನ್ನೇ
ಹೇಳಲು ಸಾಧ್ಯ?

ಅಂತೂ ದೇಶದ ರಕ್ತ ಕುದಿಯುತ್ತಿದೆ.

ಮೊದಲೇ ಹೇಳಿದ ಹಾಗೆ ಅವರ ವಾದ ಅನಿರೀಕ್ಷಿತವ
ಅಲ್ಲ, ಹೊಸದೂ ಅಲ್ಲ. ಇದಕ್ಕೆ ಪ್ರತಿಯಾಗಿ ಮೀಸಲಾತಿ ಪ
ನಿಂತವರು, ಶತಮಾನಗಳ ಅನ್ಯಾಯವನ್ನು ಸರಿಪಡಿಸುವ ಬ

ಸಮಾನತೆಯ ದಿಕ್ಕಿನಲ್ಲಿ ರೂಢಿಸಬೇಕಾದ ಅವಕಾಶಗಳ ಬಗ್ಗೆ, ಮತ್ತೀಗ ಅಮೆರಿಕದ *ಅಫರ್ಮೇಟೀವ್ ಆಕ್ಷನ್* ಮಾದರಿಯಲ್ಲಿ ವಿಭಿನ್ನ ಅನುಭವಗಳು ತರುವ ಪ್ರತಿಭಾ ಸಂಪನ್ನತೆಯ ವೈವಿಧ್ಯದ ಬಗ್ಗೆ ಎಷ್ಟು ಮಾತಾಡಿದರೂ, ತಾವು ಆ ಕಿನ್ನರಿ ನುಡಿಸುತ್ತಿರುವುದು ಕೋಣಗಳ ಮುಂದೆ ಎಂಬ ಪರಿವೆಯೇ ಅವರಿಗಿದ್ದಂತಿಲ್ಲ!

ಒಟ್ಟಿನಲ್ಲಿ ಪರ ವಿರೋಧಿಗಳಿಬ್ಬರೂ ಒಂದೇ ನೆಲದಲ್ಲಿ ನಿಂತಿದ್ದಾರೆ. ಮತ್ತು ಈ ವಿಷಯದಲ್ಲಿ ಇಡೀ ದೇಶದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ!– ಅಂದರೆ ಇವರೆಲ್ಲ ಬಯಸುವ ಪ್ರತಿಭೆ– ಅಂದರೆ ಮಾರ್ಕ್ಸ್‌ಕಾರ್ಡಿನ ಹಿರಿಮೆ, ಅಹಿಂದ ಸಮಾಜದ ಮಕ್ಕಳಲ್ಲಿ ಇಲ್ಲ; ಇದ್ದರೂ ಸಾಲದು ಎನ್ನುವ ಒಂದೇ ಅಂಶದ ಬುನಾದಿಯ ಮೇಲೆ ಇವರ ವಾದದ ಇಡೀ ಸೌಧ ನಿಂತಿದೆ. ಹಾಗಾಗಿಯೇ ಮೀಸಲಾತಿಯೆಂಬುದು ವಿರೋಧಿಗಳ ಮರ್ಜಿ ಮತ್ತು ಬೆಂಬಲಿಗರ ಚೌಕಾಶಿಗಳ ಹಗ್ಗ ಜಗ್ಗಾಟದ ಮಟ್ಟಕ್ಕೆ ಬಂದು ನಿಂತಿದೆ.

ಹೇಳುವುದೇನು? ಮಾರ್ಕ್ಸ್‌ಕಾರ್ಡೇ– ಈಗ ಎಲ್ಲರ ಪಾಲಿನ ಬೈಬಲ್! ದುರಂತವೆಂದರೆ ಎಲ್ಲರ ಕಣ್ಣೂ

ಪರ ವಿರೋಧಿಗಳಿಬ್ಬರೂ ಒಂದೇ ನೆಲದಲ್ಲಿ ನಿಂತಿದ್ದಾರೆ. ಮತ್ತು ಈ ವಿಷಯದಲ್ಲಿ ಇಡೀ ದೇಶದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ!– ಅಂದರೆ ಇವರೆಲ್ಲ ಬಯಸುವ ಪ್ರತಿಭೆ– ಅಂದರೆ ಮಾರ್ಕ್ಸ್‌ಕಾರ್ಡಿನ ಹಿರಿಮೆ, ಅಹಿಂದ ಸಮಾಜದ ಮಕ್ಕಳಲ್ಲಿ ಇಲ್ಲ; ಇದ್ದರೂ ಸಾಲದು ಎನ್ನುವ ಒಂದೇ ಅಂಶದ ಬುನಾದಿಯ ಮೇಲೆ ಇವರ ವಾದದ ಇಡೀ ಸೌಧ ನಿಂತಿದೆ. ಹಾಗಾಗಿಯೇ ಮೀಸಲಾತಿಯೆಂಬುದು ವಿರೋಧಿಗಳ ಮರ್ಜಿ ಮತ್ತು ಬೆಂಬಲಿಗರ ಚೌಕಾಶಿಗಳ ಹಗ್ಗ ಜಗ್ಗಾಟದ ಮಟ್ಟಕ್ಕೆ ಬಂದು ನಿಂತಿದೆ.

ಎಸ್ಸೆಸ್ಸೆಲ್ಸಿ ಮಾರ್ಚ್ ೨೦೦೫

ಪಂಗಡ	ರಿ.ನಂಬರ್	ಹೆಸರು	ಅಂಕಗಳು	ಶೇಕಡಾ (%)	ಪಾಸಾದ ವಿದ್ಯಾರ್ಥಿಗಳು
ಸಾಮಾನ್ಯ ವರ್ಗ	20050681588	ಸುಷ್ಮಾ ಆರ್.	620	99.20	3,64,781
	20050207702	ಗಣಪತಿ ಭಟ್	534	85.44	
ಪರಿಶಿಷ್ಟ ಜಾತಿ	20050557361	ರಾಜೇಂದ್ರ ಬಿ.ಎನ್.	614	98.24	67,205
	20050230035	ರಾಜು ರಾಠೋಡ್	478	76.48	
ಪರಿಶಿಷ್ಟ ಪಂಗಡಗಳು	20050472091	ಅಮಿತ್ ನಾಯಕ ಕೆ.ಎಸ್.	604	96.64	21,500
	20050507965	ರಾಮಚಂದ್ರ ಎಂ.ಜೆ.	477	76.32	
ಹಿಂದುಳಿದ ಬುಡಕಟ್ಟು	20050681798	ಭರತ್ ಕೆ. ರಾಜ್	607	97.12	10,752
	20050369015	ಪುನೀತ್‌ಕುಮಾರ್ ಎ.ಎಸ್.	489	78.24	
ಆರ್ಥಿಕ ದುರ್ಬಲರು	20050427826	ಅಕ್ಷತಾ	600	96.00	2,172
	20050422022	ಸಂಗೀತಾ	489	78.24	

ಗುಬ್ಬು! ಈ ಬೈಬಲಿನ ಪುಟವನ್ನೂ ತಿರುವಬೇಕು; ತಮ್ಮ ವಾದಗಳ ತಳಪಾಯವಾದ ಆ ಮೆರಿಟ್ಟಿನ ಪ್ರಶ್ನೆಯನ್ನು ಮುತ್ತೆ ಮುಟ್ಟಿ ನೋಡಬೇಕು, ಆಮೇಲೆ ಬೇಕಾದರೆ ಮಾತಿಗೆ ಕೂರಬಹುದು ಎಂದು ಯಾರಿಗೂ ಅನಿಸಲೇ ಇಲ್ಲ. ಯಾವುದೋ ಕಾಲದಲ್ಲಿ "ಅಯ್ಯೋ, ೪೦ ಪರ್ಸೆಂಟ್ ತಗೊಂಡಿದ್ರೂ ಶೆಡ್ಯೂಲ್‌ಗಳಿಗೆ ಮೆಡಿಕಲ್ ಸೀಟ್ ಕೊಟ್ಟುಬಿಡ್ತಾರೆ, ಅದೇ ಮುಂದುವರೆದ ಜಾತೀಲಿ ೭೦ ಪರ್ಸೆಂಟ್ ತಗೊಂಡ್ರೂ ಸಿಗಲ್ಲ. ೪೦ ಪರ್ಸೆಂಟ್‌ನವನು ಇನ್ಯಾವ ಸೀಮೆ ಡಾಕ್ಟರಾದಾನು? ೮೦ ತೆಗೆದವನಿಗೆ ಅನ್ಯಾಯ ಆಗಲಿಲ್ವಾ?.." ಈ ಥರದ "ಸಂತ್ರಸ್ತ ಬ್ರಾಹ್ಮಣ" ತಕರಾರುಗಳಿದ್ದವು. ಆದರೆ ಈಗಲೂ ಅದೇ ಸ್ಥಿತಿಯಿದೆಯೇ? ಯಾರೂ ಕೇಳಿಲ್ಲ, ಉತ್ತರಿಸಿಯೂ ಇಲ್ಲ. (ತಮಾಷೆಯೆಂದರೆ ಅವರ್‍ಯಾರೂ ಕ್ಯಾಪಿಟೇಷನ್ ತೆತ್ತು ಸೀಟ್ ಗಿಟ್ಟಿಸಿಕೊಳ್ಳುವ ಹಣವಂತರ ವಿರುದ್ಧ ಆಗಲೂ ಎತ್ತಿಲ್ಲ, ಈಗಲೂ ಎತ್ತುವುದಿಲ್ಲ.)...

ಆ ಮೆರಿಟ್ಟಿನ ವಿಷಯಕ್ಕೇ ಬರೋಣ.

ವಿದ್ಯಾರ್ಥಿಗಳ ಜೀವನದಲ್ಲಿ ನಿರ್ಣಾಯಕ ಘಟ್ಟಗಳೆಂದರೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯೂಸಿ. ಜೀವನದ ಆಯ್ಕೆಗಳ ಹೊಸ್ತಿಲಲ್ಲಿ ನಿಂತು ನಮ್ಮ ವಿದ್ಯಾರ್ಥಿಗಳು ತಮ್ಮ ಬುದ್ಧಿವಂತಿಕೆಯನ್ನು ಒರೆಗೆ ಹಚ್ಚುವ ಕಾತರದ ಹಂತಗಳು ಇವೇ. ಈ ಹಂತದಲ್ಲಿ ಬೇರೆ ಬೇರೆ ಹಿನ್ನೆಲೆಯ ಮಕ್ಕಳ ಸಾಧನೆ ಹೇಗಿದೆ ಎಂದು ತಿಳಿಯಲು ನಮ್ಮ ಎಸ್ಸೆಸ್ಸೆಲ್ಸಿ ಮತ್ತು ಪಿಯೂಸಿ ಮಂಡಳಿಗಳನ್ನು ಕಳೆದ ವರ್ಷ ಅಂಕಿ ಅಂಶಗಳಿಗಾಗಿ ಕೇಳಿಕೊಂಡಾಗ ಅವರು ಕೊಟ್ಟ ವಿವರಗಳು ಇಲ್ಲಿವೆ.

ಮೊದಲು ಎಸ್‌ಎಸ್‌ಎಲ್‌ಸಿ. ನಾನು ಅವರನ್ನು ಕೇಳಿದ್ದು, ಫಲಿತಾಂಶಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳ ವರ್ಗವಾರು ವಿವರ. ಇದರ ಜೊತೆಗೆ ಆಯಾ ವರ್ಗಗಳಲ್ಲಿ ಮೇಲಿನ ಶೇಕಡಾ ಐದರಷ್ಟು ವಿದ್ಯಾರ್ಥಿಗಳ ಸಾಧನೆಯ ವಿವರಗಳು. ನೋಡಿ:

ಮೀಸಲಾತಿ ಚರ್ಚೆ

ಇಲ್ಲಿ ನೋಡಿದ ತಕ್ಷಣ ಕಣ್ಣಿಗೆ ಹೊಡೆಯುವುದು: ಮಾರ್ಕ್ಸ್‌ಕಾರ್ಡ್ ಮಾನದಂಡದ ಪ್ರಕಾರ ಇಲ್ಲಿ ಯಾವ ವರ್ಗದ ಮಕ್ಕಳೂ "ದಡ್ಡ"ರಲ್ಲ.

ಸಾಮಾನ್ಯವರ್ಗದ ಬುದ್ಧಿವಂತರು ೯೯.೨೦ ಪರ್ಸೆಂಟೇಜ್ ತೆಗೆದಿದ್ದರೆ, ಪರಿಶಿಷ್ಟ ಜಾತಿಗಳ ಬಾಲಕ ೯೮.೨೪ ಅಂಕ ಗಳಿಸಿದ್ದಾನೆ. ವ್ಯತ್ಯಾಸ ಎಷ್ಟು?... ಪರಿಶಿಷ್ಟ ಪಂಗಡಗಳು (೯೬.೬೪), ಹಿಂದುಳಿದ ಬುಡಕಟ್ಟುಗಳು (೯೭.೧೨), ಆರ್ಥಿಕ ದುರ್ಬಲ ವರ್ಗಗಳ ಬಾಲಕಿ (೯೬), ಒಟ್ಟಾರೆಯಾಗಿ "ನಾಲಾಯಕ್" ಪಟ್ಟಿಗೆ ಬರುವವರು ಯಾರಾದರೂ ಇದ್ದಾರೆಯೇ?

ಯಾರೂ ಇಲ್ಲ!

ಅಂಕ ಪಟ್ಟಿಯಲ್ಲಿ ಸಾಮಾನ್ಯ ವರ್ಗದ ಅತಿ ಮೇಲಿನವನಿಗೂ, ಆರ್ಥಿಕ ದುರ್ಬಲ ವರ್ಗದ ಅತಿ ಕೆಳಗಿನವನಿಗೂ ವ್ಯತ್ಯಾಸ ಎಷ್ಟು? ಕೇವಲ ೩.೨೨ ಪರ್ಸೆಂಟ್ ಅಷ್ಟೇ! ಇನ್ನು "೪೦ ಪರ್ಸೆಂಟಿನ ದಡ್ಡ ೮೦ ಪರ್ಸೆಂಟ್ ಬುದ್ಧಿವಂತನ" ಅವಕಾಶ ಕಸಿಯುವ ಮಾತು ಎಲ್ಲಿಂದ ಬಂತು?

ಆ ಪಟ್ಟಿಯಲ್ಲಿ ಪ್ರತಿಯೊಂದು ವರ್ಗದಲ್ಲೂ ಎರಡನೇ ಹೆಸರಿದೆಯಲ್ಲ, ಅದು ಮೇಲಿನಿಂದ ಶೇಕಡಾ ಐದರಷ್ಟು ವಿದ್ಯಾರ್ಥಿಗಳ ಲೆಕ್ಕ ಹಿಡಿದರೆ, ಅದರಲ್ಲಿ ಕಡೆಯವನು ಗಳಿಸಿದ ಪರ್ಸೆಂಟೇಜ್ ಅದು. ಉದಾಹರಣೆಗೆ ಸಾಮಾನ್ಯ ವರ್ಗದಲ್ಲಿ ಪಾಸಾದವರು ೩,೬೪,೭೮೧. ಇದರಲ್ಲಿ ಶೇಕಡಾ ಐದು ಅಂದರೆ ೧೮,೨೩೯. ಅಂದರೆ ಸುಷ್ಮಾ ಆರ್. ೯೯.೨೦ ಅಂಕ ಗಳಿಸಿದ್ದರೆ, ೮೫.೪೪ ಅಂಕ ಗಳಿಸಿದ ಗಣಪತಿ ಭಟ್ ೧೮,೨೩೯ನೆಯವನು ಎಂದರ್ಥ. ಹಾಗೇ ಪರಿಶಿಷ್ಟ ಪಂಗಡಗಳಲ್ಲಿ ಪಾಸಾದವರು ೨೧,೫೦೦ ಮಂದಿ. ಅದರಲ್ಲಿ ಶೇಕಡಾ ಐದು– ೧೦೭೫ ವಿದ್ಯಾರ್ಥಿಗಳು. ಆ ಪಂಗಡದಲ್ಲಿ ಮೇಲಿನವನು ೯೬.೪೪ ಅಂಕ ತೆಗೆದಿದ್ದರೆ, ೭೬.೩೨ ಅಂಕ ಪಡೆದ ರಾಮಚಂದ್ರ ಎಂ.ಜೆ. ೧೦೭೫ ನೇ ಯವನು....

ಅಂದರೆ ಈ "ಮಾರ್ಕ್ಸ್‌ಕಾರ್ಡ್ ಪ್ರತಿಭೆ" ಅಚಾನಕ್ಕಾಗಿ ಘಟಿಸಿದ ಪವಾಡವಲ್ಲ, ಬದಲಿಗೆ ಎಲ್ಲ ವರ್ಗಗಳ ವಿದ್ಯಾರ್ಥಿಗಳೂ ಈಗ ಪರಸ್ಪರ ಪೈಪೋಟಿ ನೀಡಬಲ್ಲ ಸಮಬಲರೇ ಅನ್ನುವುದನ್ನು ಈ ಅಂಕಿ ಅಂಶ ತೋರಿಸುತ್ತವೆ....

ಇಲ್ಲಿ ಪಿಯೂಸಿ ಫಲಿತಾಂಶಗಳನ್ನೂ ನೋಡಿ:

ಇಲ್ಲೂ ಅಷ್ಟೇ. ಸಾಮಾನ್ಯ ವರ್ಗದವನು ಅತಿ ಹೆಚ್ಚು ಅಂದರೆ ೯೭.೬೬ ಅಂಕ ತೆಗೆದಿದ್ದರೆ ದಲಿತ ವಿದ್ಯಾರ್ಥಿಯ ಸಾಧನೆ ೯೬.೩೩. ಇನ್ನು ಅತಿ ಕಡಿಮೆ ತೆಗೆದ ಅತಿ ಹಿಂದುಳಿದ ಪಂಗಡದವನು ೯೩.೯೯ರಲ್ಲಿದ್ದಾನೆ! ವ್ಯತ್ಯಾಸವೆಷ್ಟು?...

ಇನ್ನು ಕಡೆ ಕಾಲಮ್ಮಿನಲ್ಲಿರುವುದು ಆ ವರ್ಗದಲ್ಲಿ ಶೇಕಡಾ ೯೦ಕ್ಕಿಂತ ಹೆಚ್ಚು ಗಳಿಸಿದ ವಿದ್ಯಾರ್ಥಿಗಳ ಸಂಖ್ಯೆ.

ಮತ್ತೆ ಅಲ್ಲಿಗೇ ಬರುತ್ತೇವೆ. ಅಂಕಗಳ ಬುದ್ಧಿವಂತಿಕೆಯಲ್ಲಿ ಯಾವ ವರ್ಗದ ಮಕ್ಕಳೂ ಹಿಂದೆ ಬಿದ್ದಿಲ್ಲ. ಅಷ್ಟೇಕೆ, ಪ್ರತಿಭೆಯ ಮಂತ್ರ ಹಿಡಿದು ಮೀಸಲಾತಿಯನ್ನು ವಿರೋಧಿಸಲು ನಿಂತವರ ಎದೆ ಒಡೆದು ಹೋಗುವಂಥ ಶೈಕ್ಷಣಿಕ ಸಾಧನೆಯನ್ನೇ ಎಲ್ಲರೂ ಮಾಡಿ ತೋರಿಸಿದ್ದಾರೆ!...

ಪಿಯುಸಿ ಮಾರ್ಚ್ ೨೦೦೫

ವರ್ಗ	ರಿ. ನಂಬರ್	ಹೆಸರು	ಅಂಕಗಳು	ಶೇ.90ಕ್ಕೂ ಹೆಚ್ಚು ಪಡೆದವರು
ಸಾಮಾನ್ಯ ವರ್ಗ	124163	ಬಸವರಾಜ ಎಫ್. ಕುರುವತ್ತಿ	586 (97.66%)	1332
ಪರಿಶಿಷ್ಟ ಜಾತಿ	675453	ರಾಘವ ಎಂ. ಮೋಗರ್	578 (96.33%)	41
ಪರಿಶಿಷ್ಟ ಪಂಗಡ	566611	ಸುನಿಲ್‌ಕುಮಾರ್ ಕೆ.	567 (94.49%)	11
ಅತಿ ಹಿಂದುಳಿದವರು	121693	ಶಿಲ್ಪಾ ಎಸ್.	564 (93.99%)	30
ಇತರೆ ಹಿಂದುಳಿದವರು	679192	ಪ್ರವೀಣ್ ದಾಮೋದರ್ ಎಂ.	578 (96.33%)	126
ಮುಸ್ಲಿಮರು	362982	ಮುಜ್ತಬಾ ನೌಶೀನ್	572 (95.33%)	35
ಮಧ್ಯಮ ಜಾತಿಗಳು	214681	ಕಾವ್ಯಶ್ರೀ ಎಂ.ಎನ್.	575 (95.83%)	133
ಕ್ರೈಸ್ತರು	**670624**	ಮೇರಿ ಜೋಯ್ಸ್ ಬುಕಲೋ	581 (96.83%)	170

ಇವು ಕಳೆದ ವರ್ಷದ ಅಂಕಿ ಅಂಶಗಳು. ಇದೇ ರೀತಿ ಈ ವರ್ಷದ ವಿವರಗಳನ್ನೂ ಪಡೆದು ನೋಡಬಹುದು. ಹಾಗೆಯೇ ಆಸಕ್ತರು ದೇಶಾದ್ಯಂತ ಇಂಥದೇ ಅಂಕಿ ಅಂಶ ಸಂಗ್ರಹಿಸಿ ತುಲನಾತ್ಮಕ ಅಧ್ಯಯನ ಮಾಡಬಹುದು. ಅಷ್ಟೇ ಅಲ್ಲ, ಹಿಂದಿನ ಹಲವಾರು ವರ್ಷಗಳ ವಿವರ ಶೇಖರಿಸಿ, ವರ್ಷ ವರ್ಷವೂ ಹೇಗೆ ಅಹಿಂದ ಬಳಗದ ಸಾಧನೆ ವೃದ್ಧಿಸುತ್ತಾ ಬಂತು ಎಂದು ತಿಳಿಯುವುದು ಇನ್ನೂ ಉಪಯುಕ್ತವಾಗಬಹುದು. ಯಾಕೆಂದರೆ ಇಂದು ಎಲ್ಲ ಮಕ್ಕಳೂ ಸರಿಸಮಾನ ಸಾಧನೆ ಮಾಡಿದ್ದರೆ ಅದು ಸಾಧ್ಯವಾಗಿದ್ದು– ಅವಕಾಶಗಳ ಬಾಗಿಲು ತೆರೆದ ಮೀಸಲಾತಿಯಿಂದಲೇ. ಈ ಅಂಕಿ ಅಂಶಗಳು ಸಾಬೀತು ಮಾಡುವುದೂ ಅದನ್ನೇ. ಮತ್ತು ಮೀಸಲಾತಿಯ ಲಾಭ ಪಡೆದು ಬೆಳೆದ ಈ ಮಕ್ಕಳ ಸಾಧನೆಯ ವೇಗ ನೋಡಿದರೆ ಇನ್ನು ಹತ್ತು ವರ್ಷಗಳಲ್ಲಿ ಮುಂದುವರೆದ ಜಾತಿಯ ಮಕ್ಕಳು ಇವರೊಂದಿಗೆ ಸ್ಪರ್ಧಿಸಲಾಗದೆ ತಾವೇ ಮೀಸಲಾತಿಯ ಬೇಡಿಕೆ ಮುಂದಿಟ್ಟರೂ ಆಶ್ಚರ್ಯವಿಲ್ಲ...!

ಮೇಲಿನ ಎರಡು ಕೋಷ್ಟಕಗಳಲ್ಲಿ ಕಳೆದ ವರ್ಷದ ಅಂಕಿ ಅಂಶಗಳು ಇವೆ. ಇದೇ ರೀತಿ ಈ ವರ್ಷದ ವಿವರಗಳನ್ನೂ ಪಡೆದು ನೋಡಬಹುದು. ಹಾಗೆಯೇ ಆಸಕ್ತರು ದೇಶಾದ್ಯಂತ ಇಂಥದೇ ಅಂಕಿ ಅಂಶ ಸಂಗ್ರಹಿಸಿ ತುಲನಾತ್ಮಕ ಅಧ್ಯಯನ ಮಾಡಬಹುದು. ಅಷ್ಟೇ ಅಲ್ಲ, ಹಿಂದಿನ ಹಲವಾರು ವರ್ಷಗಳ ವಿವರ ಶೇಖರಿಸಿ, ವರ್ಷ ವರ್ಷವೂ ಹೇಗೆ ಅಹಿಂದ ಬಳಗದ ಸಾಧನೆ ವೃದ್ಧಿಸುತ್ತಾ ಬಂತು ಎಂದು ತಿಳಿಯುವುದು ಇನ್ನೂ ಉಪಯುಕ್ತವಾಗ ಬಹುದು. ಯಾಕೆಂದರೆ ಇಂದು ಎಲ್ಲ ಮಕ್ಕಳೂ ಸರಿಸಮಾನ ಸಾಧನೆ ಮಾಡಿದ್ದರೆ ಅದು ಸಾಧ್ಯವಾಗಿದ್ದು– ಅವಕಾಶಗಳ ಬಾಗಿಲು ತೆರೆದ ಮೀಸಲಾತಿಯಿಂದಲೇ. ಈ ಅಂಕಿ ಅಂಶಗಳು ಸಾಬೀತು ಮಾಡುವುದೂ ಅದನ್ನೇ. ಮತ್ತು ಮೀಸಲಾತಿಯ ಲಾಭ ಪಡೆದು ಬೆಳೆದ ಈ ಮಕ್ಕಳ ಸಾಧನೆಯ ವೇಗ ನೋಡಿದರೆ ಇನ್ನು ಹತ್ತು ವರ್ಷಗಳಲ್ಲಿ ಮುಂದುವರೆದ ಜಾತಿಯ ಮಕ್ಕಳು ಇವರೊಂದಿಗೆ ಸ್ಪರ್ಧಿಸಲಾಗದೆ ತಾವೇ ಮೀಸಲಾತಿಯ ಬೇಡಿಕೆ ಮುಂದಿಟ್ಟರೂ ಆಶ್ಚರ್ಯವಿಲ್ಲ...!

ಅದು ಮುಂದಿನ ಮಾತು ಬಿಡಿ. ಈಗ ಸದ್ಯಕ್ಕೆ ಮೆರಿಟ್‌ನ ಸೊಲ್ಲೆತ್ತಿ ವಿವಿಧ ವರ್ಗಗಳಿಗೆ ಅವಕಾಶ ನಿರಾಕರಿಸಲು ಹವಣಿಸುತ್ತಿರುವ ಮೀಸಲಾತಿ ವಿರೋಧಿಗಳ ಮೂತಿಗೆ ಈ ಅಂಕಿ ಅಂಶಗಳನ್ನು ಹಿಡಿದು ಅವರ ಬಾಯಿ ಮುಚ್ಚಿಸಬೇಕು. ಇದನ್ನೇ ಸರ್ಕಾರದ ಮುಂದೆಯೂ ಮಂಡಿಸಿ "ಉನ್ನತ ಶಿಕ್ಷಣವಾಗಲಿ, ಖಾಸಗಿ ರಂಗದಲ್ಲಾಗಲಿ ಮೀಸಲಾತಿ ತರಲು ಇನ್ನೇಕೆ ತಡ?" ಎಂದು ಜಕ್ಕಿಸಿ ಕೇಳಬೇಕು.

ಮತ್ತೊಂದು ಮಾತು. ಹೀಗೆ ಎಲ್ಲರ ಸಾಧನೆಯೂ ಸಮಾನ ಮಟ್ಟದಲ್ಲಿದೆ ಅಂದ ಕೂಡಲೇ ಈ ನಾರಾಯಣಮೂರ್ತಿಗಳು ಮತ್ತವರ ಬಂಧು ಬಾಂಧವರು– "ಸರಿ, ನಿಮ್ಮಲ್ಲೇ ಮೆರಿಟ್ ಇದೆ ಅಂದ ಮೇಲೆ ಮೀಸಲಾತಿ ಯಾಕೆ ಕೇಳುತ್ತೀರಿ? ಹಾಗೇ ಬರಬಹುದಲ್ಲ?" ಎಂದು ಕೊಂಕು ತೆಗೆಯುವುದು ಖಂಡಿತ.

ಆದರೆ ಜಾತಿ ಹೊಲಸನ್ನು ತಲೆ ತುಂಬ, ನರನಾಡಿಗಳ ತುಂಬ ತುಂಬಿಕೊಂಡ ಭಾರತೀಯರು ನಾವು; ಇಂಥ ವಿಷಯಗಳು ಬಂದ ಕೂಡಲೇ ಚಾಪೆ ಕೆಳಗೆ, ರಂಗೋಲಿ ಕೆಳಗೆ ನುಸುಳುವ ನಿಸ್ಸೀಮರು. ನೀವು ೯೫ ಪರ್ಸೆಂಟಿನ ಬ್ರಾಹ್ಮಣನೊಬ್ಬನ ಮುಂದೆ ೯೬ ಪರ್ಸೆಂಟಿನ ದಲಿತನನ್ನು ನಿಲ್ಲಿಸಿ ನೋಡಿ. ಆಗಲೂ ಅವರಿಬ್ಬರ ಪೈಕಿ ೯೫ರ ಬ್ರಾಹ್ಮಣನ ಆಯ್ಕೆಯೇ ಅತ್ಯಂತ ನ್ಯಾಯಬದ್ಧ ಎಂದು ನಂಬಿಸುವ ದಾರಿ ಹುಡುಕಬಲ್ಲವರು! ಅದಕ್ಕೇ ಸಾಮಾಜಿಕ ನ್ಯಾಯ ಅಂದ ಕೂಡಲೇ ಸರ್ಕಾರದ ಕಾನೂನು ಬೇಕಾಗುತ್ತವೆ, ಶಿಸ್ತಿನ ಕಟ್ಟುಪಾಡುಗಳು ಬೇಕಾಗುತ್ತವೆ, ಶಿಕ್ಷೆಯ ಎಚ್ಚರಿಕೆ ಬೇಕಾಗುತ್ತದೆ. ಸಮಾಜದ ಮಧ್ಯಪ್ರವೇಶ ಅಗತ್ಯವಾಗುತ್ತದೆ. □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಅಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಪ್ರಮಾದ ಮನ್ನಿಸು ಪ್ರಭುವೇ

ನಾವೆಲ್ಲ ನಿನ್ನವರೇ ಈಗ
ದಾರಿ ತಪ್ಪಿದ ಮಕ್ಕಳು
ನಾಳೆಯೇ ನಿನಗೆದುರು ನಿಂತು
ಸಿಂಹಾಸನ ಕೇಳುತ್ತೇವೆ
ಕುಡುಗೋಲು ಹಿಡಿದು ನಿನ್ನಸುತ್ತ
ಹಬ್ಬಿದ ಕಳೆ ಕೀಳುತ್ತೇವೆ.
ಯಾಕೆಂದು ಕೇಳಬೇಡ
ನಿನ್ನ ತೊಡೆಯ ಮೇಲಿದೆ ನಮ್ಮ ಬೇಕು ಬೇಡ
ಕಲಿಯಬೇಕಿರುವ ಅಕ್ಷರ ಎದೆಯ ಮೇಲೆ
ಸಕಲೆಂಟು ಮಂತ್ರಗಳು ನಾಲಿಗೆಯಲಿ

ನಾಳೆಯೇ ಧುತ್ತೆಂದು ಎದ್ದು ನಿಂತು
ನಿನ್ನ ಅರಮನೆ ಚಪ್ಪರದ ನಕ್ಷತ್ರ ಕೇಳುವಾಗ
ಅಂತಃಪುರದಲ್ಲಿ ಅವಿತ
ಸೂರ್ಯ ಚಂದ್ರರ ಸೀಳುವಾಗ
ಮಂತ್ರಗಳ ನಾಲಿಗೆ ಕಿತ್ತು ಹದ್ದಿಗೆ ಹಾಕುವಾಗ
ನಾವು ನಿನ್ನ ಮಕ್ಕಳೆಂಬುದು ನೆನಪಾಗಲಿ
ಕತ್ತಲಂಗಿಗಳ ಕಳಚಿ ಬೆಳಕು ತೊಡುವಾಗ
ನೀವು ನೆಟ್ಟ ಬೆಳಕಿನ ಬೀಜ ನಾವೆಂದು ಅರಿವಾಗಲಿ
ಊರಿಗೆ ನೀನು ಅಮೃತದೆಡೆ ಹಂಚುವಾಗ
ಬಟ್ಟಲಲಿ ನಮಗೆ ತುಂಬಿಕೊಟ್ಟ ವಿಷ
ಗಂಟಲಲಿ ನೀಲಿ ಗಂಟಾಗಿರುವುದು ಕಾಣಲಿ
ನೀನು ಹೂಡಿದ ಬಾಣಗಳನ್ನು ನೆಟ್ಟು
ನಮ್ಮ ಹಟ್ಟ ದನಕರುಗಳ ಕಟ್ಟಿದ್ದೇವೆ
ನಾವು ಉಂಡ ಎಂಜಲೆಲೆಗಳು
ನಿನ್ನ ಗರ್ಭಗುಡಿ ಗೋಪುರದ ಬಾವುಟಗಳಾಗಿವೆ
ಕಣ್ತೆರೆದೊಮ್ಮೆ ನೋಡು
ನಿನ್ನ ಕೋವಿಗಳೊಂದಿಗೆ ನಮ್ಮ ಹೈಕಳು ಆಡುತ್ತಿವೆ!
ಸಾವು ಸುಳಿಯದ ನಮ್ಮ ಹೊಸ್ತಿಲಲ್ಲಿ ನೀನು
ಸಾವಿನ ಗಿಡ ನೆಟ್ಟದ್ದು ಗೊತ್ತು
ಅದಕ್ಕೆ ವಿಷವುಣಿಸಿದ್ದು ನಾವು ನಿನಗೇನು ಗೊತ್ತು?
ನೀನು ಎಸೆದ ಚೂರಿ ನುಂಗಿ ನೀರು ಕುಡಿದದ್ದು
ನಿನಗೇನು ಗೊತ್ತು?
ಈಗ ಗೊತ್ತಾಗುವ ಕಾಲ ಬಂದಿದೆ
ನಿನಗೆಲ್ಲ ಗೊತ್ತಾಗಲೇ ಬೇಕು
ನಿನ್ನ ಇಡೀ ದೇಹ ಕುಯ್ದು ಪಾಲು ಮಾಡಿ
ಈ ದೇಶದ ಜನಕೆ ಎಚ್ಚರಿಕೆ ಚೀಟಿಯೊಂದಿಗೆ ಹಂಚುವಾಗ
ನಾವು ನೀನೇ ಬೆಳೆಸಿದ ಬುದ್ಧಿ ಭಾವಗಳೆಂಬುದು ಗೊತ್ತಾಗಬೇಕು
ಅದಕ್ಕೇ ಇದೊಂದು ಪ್ರಮಾದ ಮನ್ನಿಸು ಪ್ರಭುವೇ
ನಿನ್ನ ಕತ್ತು ಕೊಯ್ಯಲು ಕತ್ತಿ ಮಸೆಯುತ್ತಿದ್ದೇವೆ.

○ ಮಂಜುನಾಥ್ ಲತಾ

ಕುತರ್ಕ–ವಿತಂಡವಾದಗಳ ನಡುವೆ...

ಪ್ರೊ|| ಬಿ.ಎಸ್. ಶ್ರೀಧರ್

ಒಂದೂವರೆ ದಶಕದ ಹಿಂದೆ ನಡೆದ ಮಂಡಲ್ ವಿರೋಧಿ ಚಳುವಳಿಯ ಸಂದರ್ಭದಲ್ಲಿ ಶೋಷಿತ ವರ್ಗಗಳ ಬಗ್ಗೆ ಇದ್ದ ಅಲ್ಪಸ್ವಲ್ಪ ಕಾಳಜಿ, ಮೀಸಲಾತಿ ಬಗ್ಗೆ ಇದ್ದ ಕೊಂಚ ಅನುಮಾನಾಸ್ಪದ ಒಪ್ಪಿಗೆ ಈಗ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಮೀಸಲಾತಿ ವಿರೋಧಿಗಳ ಬತ್ತಳಿಕೆಯಲ್ಲಿ ಹೊಸ ಅಸ್ತ್ರಗಳು ಏನೂ ಇಲ್ಲವಾದರೂ ಇದ್ದ ಹಳೇ ಹತಾರಗಳಿಗೇ ಈಗ ಹೊಸ ಮೆರುಗು, ಶಕ್ತಿ, ಜನಬಲ ಬಂದಂತಿದೆ. ಈ ಬದಲಾವಣೆಗೆ ಅನೇಕ ಕಾರಣಗಳಿವೆ. ಮತ್ತು ಈ ಕಾರಣಗಳ ನೆಲೆಗಳನ್ನು ಗುರುತಿಸದೇ ಇದ್ದರೆ ಈಗ ಎದ್ದಿರುವ ಮೀಸಲಾತಿ ವಿರೋಧಿ ಅಲೆಯ ಮೂಲ ಸೆಲೆಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಇಲ್ಲಿ ಈ ಬದಲಾದ ಸನ್ನಿವೇಶದ ಮೂರು ಮುಖ್ಯ ನೆಲೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕಳೆದ ಹದಿನಾರು ವರ್ಷಗಳಲ್ಲಿ ಭಾರತದೊಳಗೆ ಪಸರಿಸಿರುವ ಜಾಗತೀಕರಣದ ಶಕ್ತಿ ಮತ್ತು ಇದರಿಂದ ನಮ್ಮ ಅರ್ಥವ್ಯವಸ್ಥೆ, ಸಾಮಾಜಿಕ ಸಂಬಂಧಿಗಳಲ್ಲಿ ಕಾಣತೊಡಗಿರುವ ಬದಲಾವಣೆ. ಮಂಡಲ್–ಮಸೀದಿಗಳ ವಿವಾದದ ಅಬ್ಬರದಲ್ಲಿ ಸದ್ದಿಲ್ಲದೆ ನಮ್ಮ ದೇಶಕ್ಕೆ ನುಸುಳಿದ ಜಾಗತೀಕರಣ–ಖಾಸಗೀಕರಣದಿಂದಾಗಿ ನಿಧಾನವಾಗಿ (ಆದರೆ ಸ್ಪಷ್ಟವಾಗಿ) ಪ್ರಭುತ್ವ ತನ್ನ ಸಾಮಾಜಿಕ ಬದ್ಧತೆಯಿಂದ ಹಿಂದೆಗೆಯುತ್ತಿದೆ. ಈ ಬೇಜವಾಬ್ದಾರಿತನವನ್ನೇ ಪ್ರಗತಿ ಮತ್ತು ಬೆಳವಣಿಗೆ ಎಂದು ನಮ್ಮ ಮಧ್ಯಮವರ್ಗ ನಂಬಿಕೊಂಡಿರುವುದು ಮೀಸಲಾತಿ ವಿವಾದ ಅಡ್ಡದಾರಿ ಹಿಡಿಯುತ್ತಿರುವುದಕ್ಕೆ ಮುಖ್ಯ ಕಾರಣವಾಗಿದೆ.

– ೧ –

ಮೀಸಲಾತಿ ಕುರಿತಂತೆ ಈಗ ನಡೆಯುತ್ತಿರುವ 'ಹೋರಾಟ'ದ ಬಗ್ಗೆ ಮಧ್ಯಮ ವರ್ಗದ ಜನರಲ್ಲಿ ಚರ್ಚೆ ಏನಾದರೂ ಶುರುಮಾಡಿದ ಕೂಡಲೇ ಒಂದು ಗೆರಿಲ್ಲಾಯುದ್ಧವೇ ಪ್ರಾರಂಭವಾಗಿ ಬಿಡುತ್ತದೆ. ನೀವು ಸಾಮಾಜಿಕ ನ್ಯಾಯದ ಬಗ್ಗೆಯಾಗಲೀ. ಮೆರಿಟ್ ಎಂಬ ಅಳತೆಗೋಲಿನ ಅಸಮಾರ್ಪಕತೆಯ ಕುರಿತಾಗಲೀ ನೀಡಬಹುದಾದ ಎಲ್ಲ ವಿಶ್ಲೇಷಣೆಗೂ ಮೀಸಲಾತಿ ವಿರೋಧಿಗಳಲ್ಲಿ ಸಿದ್ಧ ಉತ್ತರಗಳು ಪುಂಖಾನುಪುಂಖವಾಗಿ ಮೂಡಿಬರುತ್ತದೆ. ನೀವು ಸಾಮಾಜಿಕ ಅನ್ಯಾಯದ ಬಗ್ಗೆ ಪ್ರಶ್ನೆ ಎತ್ತಿದರೆ ಅವರು ಶ್ರೇಷ್ಠತೆಯ ಹಿರಿಮೆಯ ಬಗ್ಗೆ; ನೀವು ಜಾತಿ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಅವಕಾಶಗಳ ಕೊರತೆ ಬಗ್ಗೆ ಹೇಳತೊಡಗಿದರೆ ನೀವೇ ಜಾತಿವಾದಿಗಳೆಂಬಂತೆ, ನಿಮ್ಮ ವಾದವನ್ನೆಲ್ಲಾ ತಿರುಚ ನಿಮ್ಮ ಕೊರಲಿಗೇ ಅವರ ತರ್ಕದ ಉರುಲು ಸುತ್ತಿಬಿಡುತ್ತಾರೆ. ಮೀಸಲಾತಿ ಸಮರ್ಥನೆಗೆ ನೀಡಬಹುದಾದ ಎಲ್ಲ ಅಂಕಿ–ಅಂಶಗಳು, ಸಾಮಾಜಿಕ–ಸಾಂಸ್ಕೃತಿಕ ಕಾರಣಗಳು ಅವರ ಸೀಮಿತ ಸಾಮಾನ್ಯಜ್ಞಾನದ ದರ್ಪದಲ್ಲಿ ನಿರುಪಯುಕ್ತ ಕಸದಂತೆ ಕಾಣುತ್ತದೆ. ಯಾರೋ ತಮಗೆ ತಿಳಿದಿರುವವರಿಗೆ ೯೫% ಬಂದರೂ ಸಿಗದ ಮೆಡಿಕಲ್ ಸೀಟು, 'ಕೇವಲ' ೮೦% ಪಡೆದಿರುವ 'ಇತರೆ ಜಾತಿ'ಯವರಿಗೆ ಸಿಕ್ಕಿರುವ ಅನುಭವದ ಆಧಾರ ಒಂದರಿಂದಲೇ ಇಡೀ ಭಾರತದ ಸಾಮಾಜಿಕ ಸ್ಥಿತಿ–ಗತಿಗಳ ವ್ಯಾಖ್ಯಾನ ನಿಮ್ಮೆದುರು ಅನಾವರಣಗೊಳ್ಳುತ್ತದೆ.

ಮೀಸಲಾತಿ ಎಂಬ ಗಂಭೀರ ಹಾಗೂ ಸಂಕೀರ್ಣ ವಿಷಯದ ಬಗ್ಗೆ ಬೇಕಾದ ಕನಿಷ್ಟಮಟ್ಟದ ವಸ್ತುನಿಷ್ಟತೆ, ಸಿದ್ಧತೆ ಚಾರಿತ್ರಿಕ ಹಿನ್ನೆಲೆಯ ತಿಳುವಳಿಕೆ, ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಸೀಮಿತ ಅನುಭವದ ಆಚೆಗೂ ಇರಬಹುದಾದ ಅನೇಕ ಸತ್ವಗಳ ಬಗ್ಗೆ ಇರಬೇಕಾದ ಆರೋಗ್ಯ ಪೂರ್ಣ ಎಚ್ಚ, ಕಾಳಜಿಗಳು ಇಂದು ಬಹುತೇಕ ಮಧ್ಯಮವರ್ಗದಲ್ಲಿ ಕಣ್ಮರೆಯಾಗಿವೆ. ಇದರಿಂದಾಗಿ ವಿಷಯದಿಂದ ವಿಷಯಕ್ಕೆ ಜಿಗಿಯುತ್ತಾ, ನಿಮ್ಮ ವಾದದ ತೆಕ್ಕೆಗೆ ಬೀಳದಂತೆ ನುಣಿಚಿಕೊಳ್ಳುವ ಜಾಣ್ಮೆ ಪ್ರದರ್ಶನ ಮಾತ್ರ ಇವರಿಗೆ ಸಾಧ್ಯ. ನಮ್ಮ ಮಾಧ್ಯಮಗಳೂ ಕೂಡ ಹೈಸ್ಕೂಲು ಚರ್ಚಾ ಸ್ಪರ್ಧೆಯ ಮಟ್ಟಕ್ಕೆ ಮೀಸಲಾತಿ ವಿವಾದವನ್ನು ಇಳಿಸಿಬಿಟ್ಟಿವೆ. ಅದಕ್ಕೇ ಇದೊಂದು ನೇರ ಮಾರ್ಗವನ್ನು ಅನುಸರಿಸಿದ, ಹಠತ್ ದಾಳಿಯನ್ನು ಅವಲಂಬಿಸಿದ ಗೆರಿಲ್ಲಾ ಯುದ್ಧವಾಗಿರುವುದು ಕಟ್ಟಾ ಕೋಮುವಾದಿಗಳನ್ನಾದರೂ ಕಷ್ಟಪಟ್ಟರೆ ಜಾತ್ಯತೀತವಾದದ ಬಗ್ಗೆ ಕೋಮು ಸೌಹಾರ್ದದ ಬಗ್ಗೆ ಮನವೊಲಿಸಬಹುದೇನೋ, ಆದರೆ ಮೇಲ್ಜಾತಿ, ಮಧ್ಯಮವರ್ಗಕ್ಕೆ ಮೀಸಲಾತಿಯ ಅನಿವಾರ್ಯತೆ ಕುರಿತಂತೆ ಕಿಂಚತ್ತೂ ಮನವರಿಗಕೆಯಾಗದಂಥ ಸನ್ನಿವೇಶ ಉಂಟಾಗಿದೆ.

ಒಂದೂವರೆ ದಶಕದ ಹಿಂದೆ ನಡೆದ ಮಂಡಲ್ ವಿರೋಧಿ ಚಳುವಳಿಯ ಸಂದರ್ಭದಲ್ಲಿ ಶೋಷಿತ ವರ್ಗಗಳ ಬಗ್ಗೆ ಇದ್ದ ಅಲ್ಪ ಸ್ವಲ್ಪ ಕಾಳಜಿ, ಮೀಸಲಾತಿ ಬಗ್ಗೆ ಇದ್ದ ಕೊಂಚ ಅನುಮಾನಾಸ್ಪದ ಒಪ್ಪಿಗೆ ಈಗ ಸಂಪೂರ್ಣವಾಗಿ ಕಣ್ಮರೆಯಾಗಿದೆ. ಮೀಸಲಾತಿ ವಿರೋಧಿಗಳ ಬತ್ತಳಿಕೆಯಲ್ಲಿ ಹೊಸ ಅಸ್ತ್ರಗಳು ಏನೂ ಇಲ್ಲವಾದರೂ ಇದ್ದ ಹಳೇ ಹತಾರಗಳಿಗೇ ಈಗ ಹೊಸ ಮೆರುಗು, ಶಕ್ತಿ, ಜನಬಲ ಬಂದಂತಿದೆ. ಈ ಬದಲಾವಣೆಗೆ ಅನೇಕ ಕಾರಣಗಳಿವೆ. ಮತ್ತು ಈ ಕಾರಣಗಳ ನೆಲೆಗಳನ್ನು ಗುರುತಿಸದೇ ಇದ್ದರೆ ಈಗ ಎದ್ದಿರುವ ಮೀಸಲಾತಿ ವಿರೋಧಿ ಅಲೆಯ ಮೂಲ ಸೆಲೆಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಇಲ್ಲಿ ಈ ಬದಲಾದ ಸನ್ನಿವೇಶದ ಮೂರು ಮುಖ್ಯ ನೆಲೆಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮೊದಲನೆಯದು, ಕಳೆದ ಹದಿನಾರು ವರ್ಷಗಳಲ್ಲಿ ಭಾರತದೊಳಗೆ ಪಸರಿಸಿರುವ ಜಾಗತೀಕರಣದ ಶಕ್ತಿ ಮತ್ತು ಇದರಿಂದ ನಮ್ಮ ಅರ್ಥವ್ಯವಸ್ಥೆ, ಸಾಮಾಜಿಕ ಸಂಬಂಧಿಗಳಲ್ಲಿ ಕಾಣತೊಡಗಿರುವ ಬದಲಾವಣೆ. ಮಂಡಲ್–ಮಸೀದಿಗಳ ವಿವಾದದ ಅಬ್ಬರದಲ್ಲಿ ಸದ್ದಿಲ್ಲದೆ ನಮ್ಮ ದೇಶಕ್ಕೆ ನುಸುಳಿದ ಜಾಗತೀಕರಣ–ಖಾಸಗೀಕರಣದಿಂದಾಗಿ ನಿಧಾನವಾಗಿ (ಆದರೆ ಸ್ಪಷ್ಟವಾಗಿ) ಪ್ರಭುತ್ವ ತನ್ನ ಸಾಮಾಜಿಕ ಬದ್ಧತೆಯಿಂದ ಹಿಂದೆಗೆಯುತ್ತಿದೆ. ಈ ಬೇಜವಾಬ್ದಾರಿತನವನ್ನೇ ಪ್ರಗತಿ ಮತ್ತು ಬೆಳವಣಿಗೆ ಎಂದು ನಮ್ಮ ಮಧ್ಯಮವರ್ಗ ನಂಬಿಕೊಂಡಿರುವುದು ಮೀಸಲಾತಿ ವಿವಾದ ಅಡ್ಡದಾರಿ ಹಿಡಿಯುತ್ತಿರುವುದಕ್ಕೆ ಮುಖ್ಯ ಕಾರಣವಾಗಿದೆ.

ಎರಡನೆಯದು, ಮಂಡಲ್ ಕಾಲಕ್ಕಿಂತಲೂ ಈಗ ಬೃಹತ್ ಪ್ರಮಾಣದಲ್ಲಿ ಬೆಳೆದಿರುವ ಮಾಧ್ಯಮಗಳ ಪ್ರಭಾವ. ಇದು ನಿರಂತರವಾಗಿ ಜನಾಭಿಪ್ರಾಯವನ್ನು ರೂಪಿಸುವ ಕಾಯಕವನ್ನು ಮಾಡುತ್ತಾ ಸುದ್ದಿ, ಸಾಮಾಜಿಕ ಚರ್ಚೆಗಳನ್ನೇ ತಮ್ಮ ಮಾರಾಟದ ಸರಕನ್ನಾಗಿ ಪರಿವರ್ತಿಸಿರುವುದು.

ಮೂರನೆಯದು, ಪ್ರಗತಿಪರ ಚಿಂತನೆ ಮತ್ತು ಹೋರಾಟಗಳ ಮುಖ್ಯ ಧಾತುವಾಗಿದ್ದ ಸಾಮಾಜಿಕ ನ್ಯಾಯ ಸಮಾನತೆ, ಮಾನವ ಹಕ್ಕು ಜಾತಿ ವಿನಾಶ ಇತ್ಯಾದಿ ಪರಿಕಲ್ಪನೆಗಳನ್ನು ಕೂಡ, ಈಗ ಬಂಡವಾಳಶಾಹಿ ಶೋಷಕವರ್ಗ ಹೈಜಾಕ್ ಮಾಡಿ ತಮ್ಮ ಮೂಗಿನ ನೇರಕ್ಕೆ 'ಪಠ್ಯಾಂತರ' ಮಾಡಿಕೊಂಡಿರುವುದು.

ಈ ಮೂರು ಬೆಳವಣಿಗೆಗಳು ಆಳದಲ್ಲಿ ಒಂದಕ್ಕೊಂದು ತಳುಕು ಹಾಕಿಕೊಂಡಿರುವುದನ್ನು, ಒಂದು ಇನ್ನೊಂದಕ್ಕೆ ಪೂರಕವಾಗಿ ಕೆಲಸ ಮಾಡುವುದನ್ನು ಬಹುಷಃ ಹೆಚ್ಚಾಗಿ ವಿವರಿಸಬೇಕಾಗಿಲ್ಲ. ಇವುಗಳ ಅಂತರ್ ಸಂಬಂಧ ಸಂಕೀರ್ಣವಾದದ್ದಾದರೂ ಅವುಗಳ ಪರಿಣಾಮಗಳು ಇಂದು ಎಲ್ಲರನ್ನು ತಾಕುತ್ತಿರುವುದರಿಂದ ಮೀಸಲಾತಿ ಒಳಗೊಂಡಂತೆ ಇಂದು ಯಾವುದೇ ಸಾಮಾಜಿಕ ವಿಷಯದ ಬಗ್ಗೆ ಚರ್ಚೆ ಆವರಣದ ಹೊರಗೆ ಅರ್ಥಪೂರ್ಣವಾಗಲಾರದು.

– ೨ –

ಕೆಲವು ದಶಕಗಳ ಹಿಂದೆ ಕಿಂಚಿತ್ತಾದರೂ ಉಳಿದಿದ್ದ ಪ್ರಭುತ್ವದ

ಸಾಮಾಜಿಕ ಹೊಣೆಗಾರಿಕೆ ಇಂದು ಮಾಯವಾಗಿದೆ. ಖಾಸಗೀಕರಣ ದಿಂದ ಮಾತ್ರ ಶ್ರೇಷ್ಠತೆ, ಪ್ರಗತಿ ಸಾಧ್ಯವೆಂಬ ನಂಬಿಕೆ ಪ್ರಭುತ್ವದ ಈ ಬೇಜವಾಬ್ದಾರಿಯನ್ನು ಸಮರ್ಥಿಸುತ್ತಿದೆ. ಇದಕ್ಕೆ ನಮ್ಮ ಶಿಕ್ಷಣ, ಉದ್ಯೋಗ ಮತ್ತು ಕೃಷಿ ನೀತಿಯಲ್ಲಾಗಿರುವ ಮಹತ್ತರ ಬದಲಾವಣೆಗಳಿಗಿಂತಲೂ ಹೆಚ್ಚಿನ ಪುರಾವೆ ಬೇಕಿಲ್ಲ. ಶಿಕ್ಷಣ ಕ್ಷೇತ್ರವೊಂದನ್ನೇ ಗಮನಿಸಿದರೆ, ಸ್ವಾತಂತ್ರ್ಯ ಬಂದ ಮೊದಲ ವರ್ಷಗಳಿಂದಲೂ, ಶಿಕ್ಷಣದ ಮೇಲಿನ ವೆಚ್ಚ ಒಟ್ಟಾರೆ ಆಯವ್ಯಯದಲ್ಲಿ ಕನಿಷ್ಟ ೬% ಆದರೂ ಇರಬೇಕೆಂಬ ಸಲಹೆ ಕಾಗದದ ಮೇಲೆ ಉಳಿದಿದೆ. ಕಳೆದ ಐವತ್ತು ವರ್ಷಗಳಲ್ಲಿ ಅದು ೩% ಕ್ಕಿಂತಲೂ ಹೆಚ್ಚಾಗಿಲ್ಲ. ಬದಲಿಗೆ ಅಷ್ಟೇನೂ ಮೂಲಭೂತವಲ್ಲದ ಸೌಕರ್ಯಗಳಿಗೆ ಮಾಡುತ್ತಿರುವ ವೆಚ್ಚ ಏರುತ್ತಲೇ ಇದೆ. ಶಿಕ್ಷಣದ ಮೇಲೆ ಹಣ ಹೂಡಿಕೆ ಏರುವುದಿರಲಿ, ಇಂದು ಸರ್ಕಾರಗಳು ಶಿಕ್ಷಣದಿಂದ ದೂರ ಸರಿಯುತ್ತಾ, ಅದನ್ನು ಸಂಪೂರ್ಣವಾಗಿ ಖಾಸಗೀವಲಯಕ್ಕೆ ಬಿಟ್ಟುಕೊಡಲು ತುದಾಗಲಿನಲ್ಲಿ ನಿಂತಿದೆ. ಶಿಕ್ಷಣವನ್ನು ಒಂದುಕಡೆ ಮಾರುಕಟ್ಟೆ ಸರಕನ್ನಾಗಿಸಿ, ಇನ್ನೊಂದೆಡೆ ಮೀಸಲಾತಿ ಬಗ್ಗೆ ಮಾತನಾಡುವ ಪ್ರಭುತ್ವಕ್ಕೆ ಮೀಸಲಾತಿ ಬಗ್ಗೆ ಗಂಭೀರ ಯೋಜನೆ ಇರಲು ಹೇಗೆ ಸಾಧ್ಯ? ಶಿಕ್ಷಣದ ವೆಚ್ಚ ಹೆಚ್ಚಾಗುತ್ತಿದ್ದ ಹಾಗೆಯೇ ಶಿಕ್ಷಣದ ಅವಕಾಶಗಳು ಕಡಿಮೆಯಾಗುತ್ತಿವೆ. ಹೀಗೆ ಕಡಿಮೆಯಾಗುತ್ತಿರುವ ಅವಕಾಶದಿಂದ ಕಂಗಾಲಾಗಿರುವ ಮಧ್ಯಮ ವರ್ಗ, ಮೇಲ್ಜಾತಿ ಜನರ ಕೆಂಗಣ್ಣು, ಈ ಸನ್ನಿವೇಶಕ್ಕೆ ಉಂಟಾಗಲು ಕಾರಣವಾಗಿರುವ ಮೂಲ ಸಮಸ್ಯೆಯತ್ತ ತಿರುಗದೆ, ದಲಿತರ ಮತ್ತು ಇತರ ಹಿಂದುಳಿದವರ ಮೇಲೆ ಬಿದ್ದಿದೆ. ಇದು ನಿಜವಾದ ದುರಂತ.

ಖಾಸಗೀಕರಣದಿಂದಾಗಿ ಇಡೀ ಭಾರತದ ಶಿಕ್ಷಣ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಲುಕಿರುವ ಪ್ರತಿಕವೆಂದರೆ, ಈ ದೇಶದ ಉನ್ನತ ಶಿಕ್ಷಣ ನೀತಿಯನ್ನು ರೂಪಿಸುವ ಸಮಿತಿಯ ಸಂಚಾಲಕರಾಗಿ ಅಂಬಾನಿ ಮತ್ತು ಬಿರ್ಲಾಗಳು ನೇಮಕಗೊಂಡಿರುವದು. NDA ಅಧಿಕಾರದಲ್ಲಿ ಇದ್ದಾಗ ವಾಜಪೇಯಿಯವರಿಂದ ನೇಮಕಗೊಂಡ ಈ ಸಮಿತಿ ತನ್ನ ವರದಿಯಲ್ಲಿ ಯಾವ ಲಜ್ಜೆ, ಹಿಂಜರಿಕೆಯೂ ಇಲ್ಲದ ಹಾಗೆ 'ಸರ್ಕಾರ ಉನ್ನತ ಶಿಕ್ಷಣದಿಂದ ಹಿಂತೆಗೆಯಬೇಕೆಂಬ' ಅಮೂಲ್ಯ ಸಲಹೆ ನೀಡಿದೆ. ನಿಜವಾಗಿ ಗಮನಿಸಬೇಕಾದ ಅಂಶ ಇದು. ಆದರೆ ಇಂದು ಏನಾಗುತ್ತಿದೆ? ಮೀಸಲಾತಿ ಚಳುವಳಿ ನಡೆಸುತ್ತಿರುವ ಯಾರೊಬ್ಬರೂ ಶಿಕ್ಷಣದ ಖಾಸಗೀಕರಣದ ಬಗ್ಗೆ, ಆಯವ್ಯಯದಲ್ಲಿ ಶಿಕ್ಷಣದ ಮೇಲೆ ಹಣ ಹೂಡಿಕೆ ಹೆಚ್ಚಿಸುವುದರ ಬಗ್ಗೆ, ಚಕಾರವೂ ಎತ್ತಿಲ್ಲ. ಈ ಮೌನ ಏನನ್ನು ಸೂಚಿಸುತ್ತದೆ? 'ದುಡ್ಡಿದ್ದವರಿಗೆ ಮಾತ್ರ ಶಿಕ್ಷಣ' ಎಂಬ 'ಉಳ್ಳವರ ಮೀಸಲಾತಿ' ವಿರುದ್ಧ ಯಾಕೆ ಮೀಸಲಾತಿ ವಿರೋಧಿಗಳು ಸುಮ್ಮನಿದ್ದಾರೆ?

ಮೀಸಲಾತಿಯನ್ನು ಉಳಿಸಿಕೊಂಡೇ ಎಲ್ಲರಿಗೂ ನ್ಯಾಯ ದೊರಕಿಸಿಕೊಡುವ 'ಪ್ಯಾಕೇಜ್ ಫಾರ್ಮುಲಾ'ವನ್ನು ತಾನು ಕಂಡು ಹಿಡಿಯುವ ಭರವಸೆಕೊಟ್ಟು ಸರ್ಕಾರ ಈ ಚಳುವಳಿದಾರರ ಮನವೊಲಿಸುವ ವ್ಯಥ ಪ್ರಯತ್ನವನ್ನು ಮಾಡುತ್ತಿದೆ. (ಆದಿವಾಸಿಗಳ ಅಭಿವೃದ್ಧಿ ಪ್ಯಾಕೇಜಿನ ಹಾಗೇ ಇದೂ ನೆನೆಗುದಿಗೆ ಬೀಳುವ ಬಗ್ಗೆ ಯಾರೊಬ್ಬರೂ ಸಂಶಯ ತಾಳಬೇಕಾದ್ದಿಲ್ಲ.) ಆದರೆ ಇನ್ನೊಂದು ಕಡೆ, ಸೀಟುಗಳನ್ನು ಹೆಚ್ಚು ಮಾಡುವುದರ ವಿರುದ್ಧ ನಮ್ಮ ಕಾಮೆಡ್-ಕೆ ಜನಕರಲ್ಲೊಬ್ಬರಾದ ಜಾಲಪ್ಪನವರಿಂದ ಹಿಡಿದು, IIT, IIM ನಂಥ ಸಂಸ್ಥೆಗಳ ಮುಖ್ಯಸ್ಥರೂ ಧ್ವನಿ ಎತ್ತಿದ್ದಾರೆ. ಸೀಟುಗಳನ್ನು ಹೆಚ್ಚು ಮಾಡಿದರೆ ಶ್ರೇಷ್ಟತೆಗೆ ಧಕ್ಕೆಯಾಗುತ್ತದೆ. ಈಗಿರುವ ಸೌಲಭ್ಯಗಳೇ ಸಾಕಷ್ಟು ಇಲ್ಲ ಎನ್ನುವುದು ಈ ಶಿಕ್ಷಣ ತಜ್ಞರ ವಾದ. ಆದರೆ ಎಲ್ಲರಿಗೂ ಸೀಟು ದೊರಕಿಸುವ ಪ್ಯಾಕೇಜ್ ಫಾರ್ಮುಲಾ ಯಾವ ಚಮಾತ್ಕರದಿಂದ ಈ ಸಮಸ್ಯೆಯನ್ನು ಬಗೆ ಹರಿಸಬಲ್ಲದು? ಇದಕ್ಕೆ ಒಟ್ಟಾರೆ ಶಿಕ್ಷಣದ ಮೇಲಿನ ಹಣ ಹೂಡಿಕೆಯನ್ನು-ಅದು ಪ್ರಾಥಮಿಕವಿರಲಿ, ಉನ್ನತವಿರಲಿ- ಹೆಚ್ಚು ಮಾಡದೆ ಬೇರೆ ಪರಿಹಾರವಿರಲು ಸಾಧ್ಯವಿಲ್ಲ. ಆದರೆ ಹೀಗೆ ಹಣ ಹೂಡಲು ಜಾಗತೀಕರಣ-ಖಾಸಗೀಕರಣದ ವಿಷವರ್ತುಲದಲ್ಲಿ ಸಿಕ್ಕಿಬಿದ್ದಿರುವ ಪ್ರಭುತ್ವಕ್ಕೆ ಸಾಧ್ಯವಿಲ್ಲ. ಉನ್ನತ ಶಿಕ್ಷಣವನ್ನು 'non-merit sector' ಎಂಬ ಪಟ್ಟಿಗೆ ಸೇರಿಸಬೇಕು ಎನ್ನುವ ವಿಶ್ವ ಬ್ಯಾಂಕ್‌ನ ಷರತ್ ಅನ್ನು ಸದ್ದಿಲ್ಲದೆ ಒಪ್ಪಿಕೊಂಡು ಬಿಟ್ಟಿರುವ ಭಾರತ ಸರ್ಕಾರಕ್ಕೆ, ವಿಶ್ವ ವಾಣಿಜ್ಯ ಸಂಸ್ಥೆ, ವಿಶ್ವ ಬ್ಯಾಂಕ್‌ಗಳ ಫತ್ವಾಗಳನ್ನು ತಿರಸ್ಕರಿಸುವ ಚೈತನ್ಯ, ಸ್ಥೈರ್ಯ ಬರುವವರೆಗೆ ಎಲ್ಲರಿಗೂ ಶಿಕ್ಷಣದ ಅವಕಾಶ-ಹಕ್ಕುಗಳು ದೊರೆಯಲು ಸಾಧ್ಯವಿಲ್ಲ. ಈ ಮೂಲ ವಿಷಯ ಪ್ರಸ್ತುತದಲ್ಲಿ ಚರ್ಚೆಯ ವ್ಯಾಪ್ತಿಗೂ ಬಂದಿಲ್ಲ. ಮೀಸಲಾತಿ ಪರ ಇರುವವರೂ ಕೂಡ ಖಾಸಗೀವಲಯದಲ್ಲೂ ಮೀಸಲಾತಿ ಇರಬೇಕೆಂಬ ವಾದವನ್ನು ಮುಂದಿಡುತ್ತಿದ್ದಾರೆಯೇ ಹೊರತು ಖಾಸಗೀಕರಣವೇ ಸಾಮಾಜಿಕ ನ್ಯಾಯದ ಪರಮ ಶತ್ರು ಎನ್ನುವ ಖಚಿತ ಧೋರಣೆಯಿಂದ ಹೋರಾಟ ರೂಪಿಸುತ್ತಿಲ್ಲ. ಖಾಸಗೀ ವಲಯದಲ್ಲಿ ಮೀಸಲಾತಿ ಬೇಕೆಂಬ ಬೇಡಿಕೆ, ಖಾಸಗೀಕರಣಕ್ಕೆ ಇನ್ನಷ್ಟು ಸಮರ್ಥನೆ ಒದಗಿಸಬಲ್ಲದೇ ವಿನಃ ಮೀಸಲಾತಿಗಂತೂ ಅಲ್ಲ ಎನ್ನುವ ಅಸಲೀ ಸತ್ಯವನ್ನು ನಾವು ಅರಿಯಬೇಕಾಗಿದೆ.

ಮೀಸಲಾತಿ ಚರ್ಚೆ



ಕೆಲವು ದಶಕಗಳ ಹಿಂದೆ ಕಿಂಚಿತ್ತಾದರೂ ಉಳಿದಿದ್ದ ಪ್ರಭುತ್ವದ ಸಾಮಾಜಿಕ ಹೊಣೆಗಾರಿಕೆ ಇಂದು ಮಾಯವಾಗಿದೆ. ಖಾಸಗೀ ಕರಣದಿಂದ ಮಾತ್ರ ಶ್ರೇಷ್ಠತೆ, ಪ್ರಗತಿ ಸಾಧ್ಯ ವೆಂಬ ನಂಬಿಕೆ ಪ್ರಭುತ್ವದ ಈ ಬೇಜವಾಬ್ದಾರಿ ಯನ್ನು ಸಮರ್ಥಿಸುತ್ತಿದೆ. ಇದಕ್ಕೆ ನಮ್ಮ ಶಿಕ್ಷಣ, ಉದ್ಯೋಗ ಮತ್ತು ಕೃಷಿ ನೀತಿಯಲ್ಲಾಗಿರುವ ಮಹತ್ತರ ಬದಲಾವಣೆಗಳಿಗಿಂತಲೂ ಹೆಚ್ಚಿನ ಪುರಾವೆ ಬೇಕಿಲ್ಲ. ಶಿಕ್ಷಣ ಕ್ಷೇತ್ರವೊಂದನ್ನೇ ಗಮನಿಸಿದರೆ, ಸ್ವಾತಂತ್ರ್ಯ ಬಂದ ಮೊದಲ ವರ್ಷಗಳಿಂದಲೂ, ಶಿಕ್ಷಣದ ಮೇಲಿನ ವೆಚ್ಚ ಒಟ್ಟಾರೆ ಆಯವ್ಯಯದಲ್ಲಿ ಕನಿಷ್ಟ ೬% ಆದರೂ ಇರಬೇಕೆಂಬ ಸಲಹೆ ಕಾಗದದ ಮೇಲೆ ಉಳಿದಿದೆ.

– ೩ –

ನಮ್ಮ ಬಹುತೇಕ ಮಾಧ್ಯಮ-ಅದರಲ್ಲೂ ಬಹು ಪ್ರಭಾವಶಾಲಿಯಾದ ದೃಶ್ಯ ಮಾಧ್ಯಮ-ಇಡೀ ಮೀಸಲಾತಿ ವಿವಾದವನ್ನು ಒಂದು ಸುದ್ದಿ ಸರಕನ್ನಾಗಿ ನೋಡಿದೆಯೇ ವಿನಃ ಅದರ ಎಲ್ಲ ರಾಜಕೀಯ-ಸಾಮಾಜಿಕ ಆಯಾಮಗಳನ್ನು ಚರ್ಚೆಗೆ ಒಳಪಡಿಸುವ ಗೋಜಿಗೆ ಹೋಗಿಲ್ಲ. ಇದನ್ನು ಕೇವಲ ಈ ಮಾಧ್ಯಮಗಳ ನ್ಯೂನತೆ ಎಂದು ಭಾವಿಸಲಾಗದು ಯಾಕೆಂದರೆ ಈ ವಿಷಯ ಕುರಿತಂತೆ ಗಂಭೀರ ಚರ್ಚೆಗೆ ಮೇಲ್ವರ್ಗ-ಮೇಲ್ಜಾತಿ ಮಾಧ್ಯಮಗಳ ಪರಿಧಿಯಲ್ಲಿ ಜಾಗವೇ ಇಲ್ಲ. ಖಾಸಗೀ ಟಿ.ವಿ ಛಾನೆಲ್ಲುಗಳೇ ಖಾಸಗೀಕರಣದ ಕೂಸುಗಳಾದದ್ದರಿಂದ ಇವುಗಳಲ್ಲಿ ಖಾಸಗಿಕರಣ, ಜಾಗತೀಕರಣದ ವಿರುದ್ಧದ ಧ್ವನಿಯನ್ನು ಅಪೇಕ್ಷಿಸುವುದೇ ಮೂರ್ಖತನ. ಹೀಗಾಗಿ ಕೆಲವೇ ವಿದ್ಯಾರ್ಥಿ ಸಮೂಹ ಹೂಡಿದ ಮುಷ್ಕರಗಳನ್ನೇ ಒಂದು ದೊಡ್ಡ, ಜನಪ್ರಿಯ ಚಳುವಳಿ ಎಂಬುದಾಗಿ ಬಿಂಬಿಸುವುದೇ ಇವುಗಳ ಮುಖ್ಯ ಕಾಯಕವಾಗಿದೆ. ಈ ಮುಷ್ಕರ ನಿರತ ವಿದ್ಯಾರ್ಥಿಗಳ ಹಿನ್ನೆಲೆ ಏನು? ಇದರ ಹಿಂದಿ

ಪ್ರೇರಣೆ ಯಾವ ಮೂಲದ್ದು ಎಂಬುದನ್ನು ಶೋಧಿಸುವ ಗೋಜಿಗೇ ಹೋಗದೆ ಇರುವುದಕ್ಕೂ ಇದೇ ಕಾರಣವಿರಬಹುದು.

ಇಲ್ಲೇ ಇನ್ನೊಂದು ಅಂಶವನ್ನು ನಾವು ಗಮನಿಸಬೇಕು. ಮುಷ್ಕರ ನಿರತ ವೈದ್ಯರುಗಳ ಮೇಲೆ ನಡೆದ ಲಾಠಿ ಚಾರ್ಜ್ ಪೋಲೀಸು ಕಾರ್ಯಾಚರಣೆಗಳ ದೃಶ್ಯಗಳನ್ನು ಅತ್ಯಂತ ಕಳಕಳಿಯಿಂದ, ಮಾನವೀಯತೆಯ ದೃಷ್ಟಿಕೋನದಿಂದ ತೋರಿಸಿದ ಈ ಮಾಧ್ಯಮಗಳು ಮೀಸಲಾತಿ ವಿರೋಧಿ ಮನಸ್ಸುಗಳ ಹಿಂದೆ ಕೆಲಸಮಾಡುತ್ತಿರುವ ಕ್ರೌರ್ಯವನ್ನು, ಅಸಹನೆ-ಅಮಾನವೀಯತೆಯ ಮಜಲನ್ನು ಯಾವ ಗಂಭೀರ ವಿಶ್ಲೇಷಣೆಗೂ ಒಳಪಡಿಸಲಿಲ್ಲ. ತಮ್ಮ ಜೀವಿತದ ಹಕ್ಕುಗಳಿಗಾಗಿ ಕನಿಷ್ಠ ಸೌಲಭ್ಯಗಳಿಗಾಗಿ ಮುಷ್ಕರ ಹೂಡುವ ಕಾರ್ಮಿಕರ, ಶ್ರಮಿಕ ವರ್ಗದವರ ಮೇಲೆ ಸುಲಭವಾಗಿ ಎಸ್ಮಾ ಮುಂತಾದ ಕರಾಳ ಶಾಸನಗಳನ್ನು ಬಳಸುವ ಸರ್ಕಾರ, ಮುಷ್ಕರ ನಿರತ ವೈದ್ಯರ ಬಗ್ಗೆ ಅಂಥ ಪ್ರಸ್ತಾಪವನ್ನೂ ಮಾಡಲಿಲ್ಲ. ಮೀಸಲು ವಿರೋಧಿ ಚಳುವಳಿದಾರರ ಬಗ್ಗೆ ಸರ್ಕಾರದ ಸಹಾನುಭೂತಿ ಪರೋಕ್ಷವಾಗಿಯಾದರೂ ಇದೆ ಎನ್ನುವುದಕ್ಕೆ ಇದು ಮೌನ ಸಾಕ್ಷಿಯಂತಿದೆ ಇದರ ಅರ್ಥ ಅವರ ವಿರುದ್ಧ 'ಎಸ್ಮಾ' ಬಳಸಬೇಕಿತ್ತು ಎಂದೇನಲ್ಲ ಆದರೆ ಪ್ರಭುತ್ವದ ಸೂಕ್ಷ್ಮ ತಾರತಮ್ಯತೆಯನ್ನು ನಾವು ಇಲ್ಲಿ ಗಮನಿಸಬೇಕಾದ್ದು ಮುಖ್ಯ.

ಇದೆಲ್ಲಾ ಇರಲಿ, ನಮ್ಮ ಮಾಧ್ಯಮಗಳಂತೂ ಮುಷ್ಕರ ನಿರತರನ್ನು ತ್ಯಾಗದೇವತೆಗಳಂತೆ, ಹೊಸನಾಡನ್ನು ಕಟ್ಟಲು ಹೋರಾಡುತ್ತಿರುವ ದೇಶ ಪ್ರೇಮಿಗಳಂತೆ, ಶೋಷಣೆಯ ವಿರುದ್ಧ ಸಾಮಾಜಿಕ ನ್ಯಾಯಕ್ಕಾಗಿ ಧ್ವನಿ ಎತ್ತಿರುವ ಯುವಕ ವೀರರಂತೆ ಬಿಂಬಿಸಿತು. ಆಸ್ಪತ್ರೆಯಲ್ಲಿ ಕೆಲಸ ಮಾಡಿಕೊಂಡಿರಬೇಕಾದ ವೈದ್ಯರು, ಪ್ರತಿಭಟನೆಯ ಅಂಗವಾಗಿ ಬೂಟು ಪಾಲೀಶು ಮಾಡುವುದು, ಸ್ತೆಥೊಸ್ಕೋಪ್ ಬದಲು ಕಸಬರಿಕೆ ಇಟ್ಟುಕೊಂಡು ನೆಲ ಗುಡಿಸುವ ದೃಶ್ಯಗಳು ಇಡೀ ದೇಶದ ಮನಸಾಕ್ಷಿಯನ್ನು ಕದಡುವ ಪ್ರತಿಮೆಗಳಾಗಿ ಮೂಡಿ ಬಂದವು. ಆದರೆ ಯಾವ ಟಿ.ವಿ. ಚಾನೆಲ್ಲು ಕೂಡ, ಈ ಪ್ರತಿಮೆಗಳ ಹಿಂದಿನ ಸಾಂಕೇತಿಕವನ್ನು, ಈ ಸಾಂಕೇತಿಕತೆ ಸೂಚಿಸುವ ಮನಸ್ಥಿತಿಯನ್ನು ಕುರಿತು ಪ್ರಶ್ನಿಸುವ, ವಿಚಾರ ಮಾಡುವ ಗೋಜಿಗೇ ಹೋಗಲಿಲ್ಲ. ದೆಹಲಿಯ ಒಬ್ಬ ದಲಿತ ವಿದ್ಯಾರ್ಥಿ ಕೇಳಿದಂತೆ, "ಬೂಟ್ ಪಾಲಿಶ್, ಕಸ ಹೊಡೆಯುವುದನ್ನೇ ಇವರು ಯಾಕೆ ಮಾಡುತ್ತಾರೆ? ಇದು ಯಾರ 'ಮೂಲ ಕಸುಬು? ಯಾವ ಜಾತಿಗಳನ್ನು ಇವು ಸಾಂಕೇತಿಕವಾಗಿ ವಿಡಂಬನೆ ಮಾಡುತ್ತಿವೆ?" ಎಂಬ ಪ್ರಶ್ನೆಯನ್ನು ಚರ್ಚೆಯ ನೇಪಥ್ಯಕ್ಕೆ ತರುವ ಪ್ರಯತ್ನವನ್ನು ಯಾವ ಮಾಧ್ಯಮಗಳೂ ಮಾಡಲಿಲ್ಲ ಎಂಬುದನ್ನು ಮರೆಯದಿರೋಣ. ಮೀಸಲಾತಿಯಿಂದ ನಾವು ಪೊರಕೆ ಕೈಹಿಡಿಯಬೇಕಾಗಿದೆ ಎಂಬ ಸಾಂಕೇತಿಕತೆಯ ಹಿಂದೆ, ಯಾವಾಗಲೂ ಕಸಪೊರಕೆ ಹಿಡಿಯುವವರು ಸ್ತೆಥಾಸ್ಕೋಪುಗಳನ್ನು ಹಿಡಿಯಲು ಹೊರಟಿರುವುದು ಶುದ್ಧ ಅನ್ಯಾಯವೆಂಬುದು ಈ ದೃಷ್ಟ ಪ್ರತಿಮೆಗಳ ಹಿಂದಿನ 'ರಿವರ್ಸ್ ಲಾಜಿಕ್' ಎಂಬುದು ನಮ್ಮ ಸೂಕ್ಷ್ಮಮತಿ ಮಧ್ಯಮವರ್ಗದ ತಲೆಯೊಳಗೆ ಹೋಗಲೇ ಇಲ್ಲ.

ಇಲ್ಲಿ ನಮ್ಮ ಮಾಧ್ಯಮಗಳು ತಯಾರು ಮಾಡುವ ಜನಾಭಿಪ್ರಾಯದ ಬಗ್ಗೆ ಹೇಳಲೇಬೇಕು. ಐಶ್ವರ್ಯ ರೈ ಅಭಿಷೇಕ್ ಬಚ್ಚನ್‌ನನ್ನು ಮದುವೆಯಾಗುತ್ತಾಳೋ ಇಲ್ಲವೋ ಎನ್ನುವುದನ್ನೂ, ಮೀಸಲಾತಿ ಇರಬೇಕೇ ಬೇಡವೇ ಎಂಬುದನ್ನು ಒಂದೇ ತೀವ್ರತೆ, ಭಾವೋದ್ರೇಕದಿಂದ ತೋರಿಸುವ ಮಾಧ್ಯಮಗಳಿಗೆ ಎರಡೂ ವಿಷಯಗಳು ಕೇವಲ ಸುದ್ದಿಯಷ್ಟೇ. ಹೀಗೆ ಸುದ್ದಿಯನ್ನೇ ಒಂದು ಗ್ರಾಹಕವಸ್ತುವಿನಂತೆ ಪ್ರೇಕ್ಷಕರಿಗೆ ಉಣಬಡಿಸುತ್ತಾ, ಸುದ್ದಿಯ ಆಳ-ವಿಸ್ತಾರಗಳ ಬಗ್ಗೆ ಎಳ್ಳಷ್ಟೂ ಆಸಕ್ತಿ ಉಳಿಯದ ಹಾಗೆ ನೋಡಿಕೊಳ್ಳುವುದು ಈ ಮಾಧ್ಯಮಗಳ ಪರಮ ಉದ್ದೇಶವಿದ್ದಂತೆ ತೋರುತ್ತದೆ. ದಿನದ ೨೪ ಗಂಟೆಯೂ ಸುದ್ದಿಯನ್ನೇ ಬಂಡವಾಳ ಮಾಡಿಕೊಂಡಿರುವ ಟಿ.ವಿ. ಚಾನೆಲ್‌ಗಳಿಗೂ, ಚಕಚಕನೆ ಇಮೇಜುಗಳು ಬದಲಾಗುತ್ತಾ ಯಾವ ದೃಶ್ಯವೂ ಮನಸ್ಸಿನಾಳಕ್ಕೆ ಇಳಿಯದ ಹಾಗೆ ಸಾಗುವ MTV ಶೋಗಳಿಗೂ ಆಶಯದಲ್ಲಿ ಏನೂ ವ್ಯತ್ಯಾಸವಿದ್ದಂತಿಲ್ಲ. ಜತೆಗೆ ಜನಾಭಿಪ್ರಾಯವೆಂದರೆ ಕೇವಲ ಅನಿಸಿಕೆಗಳನ್ನು ಗುಡ್ಡೆ ಹಾಕುವ, ಆ ಅಭಿಪ್ರಾಯಗಳ ಹಿಂದಿನ ಪ್ರೇರಣೆ ಅಥವಾ ಸಾಮಾಜಿಕ ಧೋರಣೆಗಳ ಬಗ್ಗೆ ಯಾವ ವಿಶ್ಲೇಷಣೆಯನ್ನು ಮಾಡದ, ಅವರವರ ಭಾವಕ್ಕೆ ತಕ್ಕಂತೆ ಅವರವರ ವಿಚಾರ ಎನ್ನುವುದನ್ನೇ 'ಪ್ರಜಾಪ್ರಭುತ್ವ'ದ ಲಕ್ಷಣವೆಂಬಂತೆ ಬಿಂಬಿಸುವುದು ಈ ಚಾನೆಲ್‌ಗಳ ಚಾಳಿಯಾಗಿದೆ. ಅಲ್ಲದೆ ಎಲ್ಲ ಗಂಭೀರ ಹಾಗೂ ಸಂಕೀರ್ಣ ವಿಚಾರಗಳನ್ನೂ 'ಹೌದು ಅಥವಾ ಇಲ್ಲ' ಎಂಬ ಸರಳ ಸೂತ್ರಕ್ಕೆ ಇಳಿಸಿ, SMS ಮೂಲಕ ಅಭಿಪ್ರಾಯ ಸಂಗ್ರಹಿಸುವುದೇ ಜನಾದೇಶವೆಂಬಂತೆ ಬಿಂಬಿಸುವುದು ಇಂದು ಸಾಮಾನ್ಯವಾಗಿದೆ. "ನೀವು ಮೀಸಲಾತಿ ಪರವೇ, ವಿರೋಧಿಯೇ (ಅಥವಾ, ನಕ್ಸಲಿಸಂನಿಂದ ರಾಷ್ಟ್ರದ ಆಂತರಿಕ ಭದ್ರತೆಗೆ ಧಕ್ಕೆಯಾಗಿದೆಯೆ?) ಎಂಬಂಥ ಪ್ರಶ್ನೆಗಳೇ ಅಸಂಬದ್ಧ, ಅತಾರ್ಕಿಕ ಮತ್ತು ಜ್ಞಾನ ವಿದ್ರೋಹಿಯಾದದ್ದು. ಪ್ರಶ್ನೆಗಳಲ್ಲಿ ಒಂದನ್ನು ಆಯ್ಕೆ ಮಾಡಬೇಕು ಎಂದ ಕೂಡಲೇ ಉತ್ತರ ಸರಳವಾಗುತ್ತಾ ಯಾವ ವಿಶ್ಲೇಷಣೆ, ಅರಿವನ್ನೂ ಬೇಡದ ಮನಸ್ಥಿತಿಯೊಂದು ನಿರ್ಮಾಣವಾಗುತ್ತದೆ. ನಿಮಗೆ ಯಾವ ಬ್ರಾಂಡ್ ಸೋಪು ಇಷ್ಟ ಎಂಬ ಮಾರುಕಟ್ಟೆ ಸರ್ವೆ ವಿಧಾನಕ್ಕೂ 'ಹೌದು-ಅಲ್ಲ' ಎಂಬಂಥ ಜನಾಭಿಪ್ರಾಯ ಸಂಗ್ರಹಣೆಗೂ ಯಾವುದೇ ವ್ಯತ್ಯಾಸವಿಲ್ಲ. ಹೀಗೆ ಜೀವನಾವಕಾಶ ಮತ್ತು ಮಾನವ ಹಕ್ಕುಗಳಂಥ ಗಂಭೀರ ವಿಷಯವಾದ ಮೀಸಲಾತಿ ವಿಚಾರ ಕೂಡ ಮಾರುಕಟ್ಟೆ ಸರ್ವೆಯ ಮಟ್ಟದಿಂದ ಮೇಲೇಳದಂತೆ ನೋಡಿಕೊಳ್ಳುವ ಕೆಲಸವನ್ನು ಮಾಧ್ಯಮಗಳು ಸಮರ್ಥವಾಗಿ ನಡೆಸಿಕೊಂಡು ಬಂದಿವೆ.

ಐಶ್ವರ್ಯ ರೈ ಅಭಿಷೇಕ್ ಬಚ್ಚನ್‌ನನ್ನು ಮದುವೆಯಾಗುತ್ತಾಳೋ ಇಲ್ಲವೋ ಎನ್ನುವುದನ್ನೂ, ಮೀಸಲಾತಿ ಇರಬೇಕೇ ಬೇಡವೇ ಎಂಬುದನ್ನು ಒಂದೇ ತೀವ್ರತೆ, ಭಾವೋದ್ರೇಕದಿಂದ ತೋರಿಸುವ ಮಾಧ್ಯಮಗಳಿಗೆ ಎರಡೂ ವಿಷಯಗಳು ಕೇವಲ ಸುದ್ದಿಯಷ್ಟೇ. ಹೀಗೆ ಸುದ್ದಿಯನ್ನೇ ಒಂದು ಗ್ರಾಹಕವಸ್ತುವಿನಂತೆ ಪ್ರೇಕ್ಷಕರಿಗೆ ಉಣಬಡಿಸುತ್ತಾ, ಸುದ್ದಿಯ ಆಳ-ವಿಸ್ತಾರಗಳ ಬಗ್ಗೆ ಎಳ್ಳಷ್ಟೂ ಆಸಕ್ತಿ ಉಳಿಯದ ಹಾಗೆ ನೋಡಿಕೊಳ್ಳುವುದು ಈ ಮಾಧ್ಯಮಗಳ ಪರಮ ಉದ್ದೇಶವಿದ್ದಂತೆ ತೋರುತ್ತದೆ. ದಿನದ ೨೪ ಗಂಟೆಯೂ ಸುದ್ದಿಯನ್ನೇ ಬಂಡವಾಳ ಮಾಡಿಕೊಂಡಿರುವ ಟಿ.ವಿ. ಚಾನೆಲ್‌ಗಳಿಗೂ, ಚಕಚಕನೆ ಇಮೇಜುಗಳು ಬದಲಾಗುತ್ತಾ ಯಾವ ದೃಶ್ಯವೂ ಮನಸ್ಸಿನಾಳಕ್ಕೆ ಇಳಿಯದ ಹಾಗೆ ಸಾಗುವ MTV ಶೋಗಳಿಗೂ ಆಶಯದಲ್ಲಿ ಏನೂ ವ್ಯತ್ಯಾಸವಿದ್ದಂತಿಲ್ಲ.

ಹೀಗೆ ತಯಾರಾದ ಅಭಿಪ್ರಾಯಗಳೇ ಮಧ್ಯಮವರ್ಗದ ಚಿಂತನಾ ಕ್ರಮವನ್ನು ರೂಪಿಸುತ್ತಿದೆ. ಜತೆಗೆ ತಮ್ಮದೇ ವರ್ಗ/ಜಾತಿಯ ಒಡನಾಟದಿಂದ ಲಭ್ಯವಾದ ಸೀಮಿತ ಅನುಭವ ಕೂಡ ಈ ಚಿಂತನಾ ಕ್ರಮ ಬೆಳೆಯದಂತೆ ತಡೆಯುತ್ತದೆ. ಇವೆರಡರ ಮೊತ್ತವೇ ಸಾಮಾನ್ಯ ಜ್ಞಾನದ ರೂಪದಲ್ಲಿ ನಮ್ಮ ಬಹುತೇಕ ಮಧ್ಯಮವರ್ಗದ ಮನಸ್ಸನ್ನು ನಿರ್ದೇಶಿಸುತ್ತಿರುವುದು ಹೀಗೆ ಒಂದು ಒದುಬಲ್ಲ ಮಧ್ಯಮವರ್ಗವನ್ನು ಸಂವೇದನಾರಹಿತರನ್ನಾಗಿರಿಸಿ, ಅವರನ್ನು ಕೇವಲ ವಿಚಾರಗಳ ಗ್ರಾಹಕರನ್ನಾಗಿಸುವ ಕೆಲಸದಲ್ಲಿ ನಮ್ಮ ಮಾಧ್ಯಮಗಳು ಸದಾಕಾರ್ಯಪ್ರವೃತ್ತವಾಗಿರುತ್ತವೆ. ಇಂಥ ಅನಾಸ್ತು ಮತ್ತು ವಿಚಾರಶೂನ್ಯತೆಯೇ ನಮ್ಮ ಪ್ರಜಾಪ್ರಭುತ್ವದ ಮೂಲ ಬಂಡವಾಳವಾದ್ದರಿಂದ, ಶೋಷಕ ಪ್ರಭುತ್ವಕ್ಕೆ ಆಧುನಿಕ ಮಾಧ್ಯಮಗಳು ಹಿತೈಷಿಗಳಂತೆಯೇ ಕಾಣುತ್ತವೆ. ಬೆಂಗಳೂರಿನ ಲಕ್ಷಾಂತರ ರೂಪಾಯಿ ಸಂಬಳ ಪಡೆಯುವ, ಅತ್ಯಂತ ಸಂಭಾವಿತರಂತೆ ಕಾಣುವ ಯಾವುದೇ ಮೆರಿಟಡ್ ವ್ಯಕ್ತಿಗಳನ್ನು ನೀವು ತಡವಿ ನೋಡಿ, ಆಳದಲ್ಲಿ ಅವರಿಗಿರುವ ಕೋಮುಭಾವನೆಯೂ, ಮೀಸಲಾತಿ ವಿರೋಧವೂ ನಿಚ್ಚಳವಾಗಿ ಹುದುಗಿರುವುದು ಕಾಣುತ್ತದೆ.

ಆದರೆ ರಾಷ್ಟ್ರೀಯ ಜ್ಞಾನ ಆಯೋಗದ ಅಧ್ಯಕ್ಷರಾದ, ತಮ್ಮ ಕ್ಷೇತ್ರದಲ್ಲಿ ಅತ್ಯಂತ ಬುದ್ಧಿವಂತರಾದ, ಪಿಟ್ರೋಡಾ ಅವರಾಗಲೀ, ಅಷ್ಟೇ ಚಾಣಾಕ್ಷರಾದ ಸಂಪಾದಕರಾಗಲೀ ಯಾಕೆ ಮೀಸಲಾತಿ ವಿರೋಧಿಗಳ ಬಗ್ಗೆ ಅತ್ಯಂತ ಕಳಕಳಿ ಉಳ್ಳವರಾಗಿದ್ದಾರೆ? ಸಾಮಾನ್ಯ ಮಧ್ಯಮವರ್ಗಕ್ಕೆ ಹೋಲಿಸಿದರೆ, ಇವರ ಬುದ್ಧಿಮತ್ತೆ, ಪಾಂಡಿತ್ಯ ಮೇಲ್ಮಟ್ಟದ್ದೇ. ಇಂಥವರು ಕೂಡ ಮೀಸಲಾತಿ ಸಮಾನತೆ, ಶ್ರೇಷ್ಠತೆ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಕಂಟಕ ಎಂಬಂತೆ ಮಾತನಾಡುತ್ತಿದ್ದಾರೆ. ಎಂದರೆ, ಈ ಮೀಸಲಾತಿಯಲ್ಲೇ ಏನೋ ದೋಷವಿರಬೇಕು ಎಂದು ಯಾರಿಗಾದರೂ ಅನಿಸಿಬಿಡುತ್ತದೆ. ಆದರೆ ಈ ಪಂಡಿತರುಗಳ ವಾದಕ್ಕೆ ಸಮರ್ಥನೆ ಒದಗುವುದು ಇವರುಗಳು ಮೀಸಲಾತಿ ವಿರೋಧಕ್ಕೆ ಬಳಸುವ 'ಜನಪರ' ಎಂಬಂತೆ ತೋರುವ ಪರಿಕಲ್ಪನೆಗಳೂ ಕಾರಣ. ಹೀಗೆ ಪ್ರಗತಿ ಪರರು ಬಳಸುವ ಪರಿಕಲ್ಪನೆಗಳು ಮತ್ತು ನುಡಿಗಟ್ಟುಗಳು ಈಗ ಪ್ರತಿಗಾಮಿ ತತ್ವಗಳನ್ನು ಸಮರ್ಥಿಸಲು ಬಳಕೆಯಾಗುತ್ತಿದೆ. ಈ ವಿರೋಧಾಭಾಸದ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸದೆ, ಮೀಸಲಾತಿ ವಿರೋಧಿಗಳಿಗೆ ಪ್ರಬಲವಾದ ಪ್ರತಿರೋಧ ಒಡ್ಡುವುದು ಅಸಾಧ್ಯ. ಮೇಲೆ ಸೂಚಿಸಲಾದ ಮೂರನೇ ಕಾರಣ ಇಂಥ ವಿಪರ್ಯಾಸದ ವಿಶ್ಲೇಷಣೆಗೆ ಸಂಬಂಧ ಪಟ್ಟಿದೆ.

– ೪ –

ನಮ್ಮ ಪ್ರಜಾಪ್ರಭುತ್ವಗಳು ಸಮಾನತೆ, ಸಾಮಾಜಿಕ ನ್ಯಾಯ, ಸಮಾನಾವಕಾಶ ಇತ್ಯಾದಿ ಪ್ರಜಾತಾಂತ್ರಿಕ ಆಶಯಗಳಿಗೆ ಎಂದೋ ತಿಲಾಂಜಲಿಯನ್ನಿತ್ತಿವೆ. ಈಗಿನ ಎಲ್.ಪಿ.ಜಿ. ಯುಗದಲ್ಲಂತೂ, ಈ ಮೌಲ್ಯಗಳು ಯಾವುದೋ ಕಾಲದ ಕಂದಾಚಾರದ ಪದ್ಧತಿಯಂತೆ ಕಾಣುತ್ತಿವೆ. ಆದರೆ ಈ ಮೌಲ್ಯಗಳನ್ನು ಬಹಿರಂಗವಾಗಿ ಗಾಳಿಗೆ ತೂರಿ, ತಮ್ಮ ನಿಜವಾದ ಸಾಮ್ರಾಜ್ಯಶಾಹಿ ಶೋಷಕ ಬಣ್ಣವನ್ನು ತಾವೇ ಬಯಲು ಮಾಡಿಕೊಳ್ಳುವ ರಿಸ್ಕನ್ನು ನಮ್ಮ ಪ್ರಜಾಪ್ರಭುತ್ವ ಬಯಸದು, ಹೀಗಾಗಿ ಅದಕ್ಕೆ ಸದಾ ಜನತಾಂತ್ರಿಕ ಪರಿಭಾಷೆಯನ್ನೇ ಉಪಯೋಗಿಸಬೇಕಾದ ಅನಿವಾರ್ಯತೆ ಇದೆ.

ಆದರೆ ಒಂದುಕಡೆ ಜನ ತಾಂತ್ರಿಕ ಪರಿಭಾಷೆಯನ್ನು ಬೆಳೆಸುತ್ತಾ ಇನ್ನೊಂದು ಕಡೆ ಅಪ್ಪಟ ಜನ ವಿರೋಧಿ ಅಪ್ರಜಾತಾಂತ್ರಿಕ ಕಾರ್ಯಗಳನ್ನೇ ತನ್ನ ಆಡಳಿತ ನೀತಿಯನ್ನಾಗಿಸುವ ವಿರೋಧಾಭಾಸದ ಸಂಕಷ್ಟವನ್ನು ಎದುರಿಸಲು ಅದು ದಾರಿಯೊಂದನ್ನು ಕಂಡು ಕೊಂಡಿದೆ. ಅದೇಂದರೆ, ಜನಪರ ಪರಿಭಾಷೆ/ ಪರಿಕಲ್ಪನೆಗಳ ಅರ್ಥವನ್ನೇ ತಿರಿಚುವ, ಹೊಸ ಭಾಷ್ಯ ಬರೆಯುವ ಟೀಕಾಚಾರ್ಯರನ್ನು ಪೋಷಿಸುವುದು, ಮತ್ತು ಈ ಪಂಡಿತರುಗಳ ವ್ಯಾಖ್ಯಾನವನ್ನೇ ತನ್ನ ವಿಶೇಷಗುಣವನ್ನಾಗಿಸಿಕೊಳ್ಳುವುದು. ಮೀಸಲಾತಿ ಚರ್ಚೆಯಲ್ಲಿ ಈಗ ಬಳಸಲಾಗುತ್ತಿರುವ ಪರಿಭಾಷೆ ಇಂಥ ಹೊಸ ಭಾಷ್ಯಕ್ಕೆ ಒಳ್ಳೆ ಉದಾಹರಣೆ.

ಮೀಸಲಾತಿ ವಿರೋಧಿಗಳು ಕೂಡ ಇಂದು ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಅವಕಾಶಗಳೆಂಬ ಹತಾರಗಳನ್ನೇ ಬಳಸುತ್ತಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಮಂಡಲ್ ಕಾಲಕ್ಕೆ ಹೋಲಿಸಿದರೆ, ಇವುಗಳ ಬಳಕೆ ಇನ್ನೂ ಹೆಚ್ಚಿನ ತೀವ್ರತೆ ವ್ಯಾಪ್ತಿ ಹಾಗೂ ಸಮರ್ಥನೆಯನ್ನು ಪಡೆದುಕೊಂಡಿದೆ. ಮೀಸಲಾತಿ ಸಾಮಾಜಿಕ ನ್ಯಾಯದ ವಿರೋಧಿ. ಯಾಕೆಂದರೆ ಅದು ಜಾತಿ ಆಧಾರದ ಅರ್ಹರನ್ನು ತುಳಿಯುತ್ತದೆ ಎಂಬ ವಾದದ ಹಿಂದೆ ಕೆಲಸಮಾಡುತ್ತಿರುವ 'ಸಮಾನತೆ' ಯಾವ ರೀತಿಯದು? ಇಲ್ಲಿ ಸಮಾನತೆ ಎನ್ನುವುದನ್ನು ಅದರ ಸಾಮಾಜಿಕ ಆಯಾಮದಿಂದ ಹೊರಗೆ ತಂದು, ಕೇವಲ ಶುಷ್ಕ ಗಣಿತದ ಲೆಕ್ಕಾಚಾರದ ಮಟ್ಟದಲ್ಲಿ ಕೆಲಸ ಮಾಡುವ ಪರಿಕಲ್ಪನೆಯನ್ನಾಗಿಸುವ ಪ್ರಯತ್ನವಿದೆ. ಪ್ರಾಥಮಿಕ ಹಂತದಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ನೀಡಿ ನಂತರ ಎಲ್ಲರೂ 'ಸಮಾನರಾಗಿ ಸ್ಪರ್ಧಿಸುವಂತೆ ಮಾಡುವುದೇ 'ಸಾಮಾಜಿಕ ನ್ಯಾಯ' ಎನ್ನುವುದು ಇದೇ ತರ್ಕದ ಮುಂದುವರೆದ ಭಾಗ. 'ಕೋಟಾ ವಿದ್ಯಾರ್ಥಿಗಳು' ಎಂಬಿಬಿಎಸ್ ಪರೀಕ್ಷೆ ಪಾಸು ಮಾಡುವುದಾದರೆ, ಎಂಡಿ, ಎಂ.ಎಸ್‌ನಲ್ಲಿ ಮೀಸಲಾತಿ ಯಾಕೆ ಎಂಬ ಸವಾಲು ಕೂಡ ಇದೇ ವರ್ಗಕ್ಕೆ ಸೇರಿದ ಇನ್ನೊಂದು ತರ್ಕ.

ಈ ತರ್ಕ ಇನ್ನೂ ಮುಂದುವರೆದು ಕೋಟಾ ವ್ಯವಸ್ಥೆಯಿಂದ ಸಾಮರಸ್ಯ ಹಾಳಾಗುವುದಲ್ಲದೆ, ಕೋಟಾ "ದಯೆ"ಯಿಂದ ಸೀಟು ಪಡೆದುಕೊಂಡವರು ಕೀಳರಿಮೆಯಿಂದ ನರಳುತ್ತಾರಾದ್ದರಿಂದ ಅವರು ಒಳ್ಳೆಯ ವೃತ್ತಿಪರ ಕಸುಬುದಾರರಾಗುವುದಿಲ್ಲ ಎಂಬ ವಿತಂಡವಾದದವರೆಗೂ ಹಬ್ಬಿದೆ. ಮೀಸಲಾತಿ ಸೌಲಭ್ಯ ಪಡೆದು ಕೀಳರಿಮೆ ಅನುಭವಿಸುತ್ತಿರುವವರ ಸರ್ವೆಯನ್ನಾಗಲೀ, ಅವರ ಮಾನಸಿಕ ಸ್ಥಿತಿಗಳ ಮನೋ ವೈಜ್ಞಾನಿಕ ಅಧ್ಯಯನ ಮಾಡಿದ್ದರ ಬಗ್ಗೆಯಾಗಲೀ ಇವರ ಬಳಿ ಯಾವ ಮಾಹಿತಿ ಇದೆ? ಒಂದು ವೇಳೆ "ಮೀಸಲಾತಿ ಪ್ರೇರಿತ ಕೀಳರಿಮೆ" ಎಂಬುದೊಂದು ಇದೆ ಎಂಬುದಾದರೆ ಅದಕ್ಕೆ ಮೀಸಲಾತಿ ನಿರ್ಮೂಲನದಿಂದ ಏನು ಪರಿಹಾರ ಸಿಕ್ಕಂತಾಗುತ್ತದೆ?.

ಮೀಸಲಾತಿಗೆ ನಿಜವಾದ ಅರ್ಥಬರುವುದು ಅದು ಒಟ್ಟಾರೆ ಸಮಸಮಾಜ ನಿರ್ಮಾಣದ ಭಾಗವಾಗಿದ್ದಾಗ ಮಾತ್ರ.

ಇಲ್ಲಿ ಗಮನಿಸಬೇಕಾದ ಅಂಶ ಇದು; ಈ ವಿತಂಡವಾದದಲ್ಲಿ ದಲಿತರ, ಹಿಂದುಳಿದವರ್ಗದವರ ಬಗ್ಗೆ ಸಹಾನುಭೂತಿಯ ಧ್ವನಿ ತೋರಿಕೆಗೆ ಮಾತ್ರ ಇರುವಂಥದ್ದು ಆದರೆ ಅದು ನಿಜವಾದ ಸಹಾನುಭೂತಿಯಲ್ಲ; ಬದಲಿಗೆ ಮೇಲ್ಜಾತಿ ಗರ್ವವನ್ನು ಮುಚ್ಚಿಹಾಕಲು ಬಳಸಲಾಗುತ್ತಿರುವ ತಂತ್ರ ಮಾತ್ರ, ಯಾಕೆಂದರೆ, ಮೀಸಲಾತಿ ಸಹಾನುಭೂತಿ–ಅನುಕಂಪದಿಂದ ಬರುವಂತಹದ್ದೇನೂ ಅಲ್ಲವಲ್ಲ.

ಮೀಸಲಾತಿ ವಿರೋಧಿಗಳು ಕೂಡ ಇಂದು ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಅವಕಾಶಗಳೆಂಬ ಹತಾರಗಳನ್ನೇ ಬಳಸುತ್ತಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಮಂಡಲ್ ಕಾಲಕ್ಕೆ ಹೋಲಿಸಿದರೆ, ಇವುಗಳ ಬಳಕೆ ಇನ್ನೂ ಹೆಚ್ಚಿನ ತೀವ್ರತೆ ವ್ಯಾಪ್ತಿ ಹಾಗೂ ಸಮರ್ಥನೆಯನ್ನು ಪಡೆದುಕೊಂಡಿದೆ. ಮೀಸಲಾತಿ ಸಾಮಾಜಿಕ ನ್ಯಾಯದ ವಿರೋಧಿ. ಯಾಕೆಂದರೆ ಅದು ಜಾತಿ ಆಧಾರದ ಅರ್ಹರನ್ನು ತುಳಿಯುತ್ತದೆ ಎಂಬ ವಾದದ ಹಿಂದೆ ಕೆಲಸಮಾಡುತ್ತಿರುವ 'ಸಮಾನತೆ' ಯಾವ ರೀತಿಯದು? ಇಲ್ಲಿ ಸಮಾನತೆ ಎನ್ನುವುದನ್ನು ಅದರ ಸಾಮಾಜಿಕ ಆಯಾಮದಿಂದ ಹೊರಗೆ ತಂದು, ಕೇವಲ ಶುಷ್ಕ ಗಣಿತದ ಲೆಕ್ಕಾಚಾರದ ಮಟ್ಟದಲ್ಲಿ ಕೆಲಸ ಮಾಡುವ ಪರಿಕಲ್ಪನೆಯನ್ನಾಗಿಸುವ ಪ್ರಯತ್ನವಿದೆ. ಪ್ರಾಥಮಿಕ ಹಂತದಲ್ಲಿ ಎಲ್ಲರಿಗೂ ಸಮಾನ ಶಿಕ್ಷಣ ನೀಡಿ ನಂತರ ಎಲ್ಲರೂ ಸಮಾನರಾಗಿ ಸ್ಪರ್ಧಿಸುವಂತೆ ಮಾಡುವುದೇ 'ಸಾಮಾಜಿಕನ್ಯಾಯ' ಎನ್ನುವುದು ಇದೇ ತರ್ಕದ ಮುಂದುವರೆದ ಭಾಗ. 'ಕೋಟಾ ವಿದ್ಯಾರ್ಥಿಗಳು' ಎಂಬಿಬಿಎಸ್ ಪರೀಕ್ಷೆ ಪಾಸು ಮಾಡುವುದಾದರೆ, ಎಂಡಿ, ಎಂ.ಎಸ್‌ನಲ್ಲಿ ಮೀಸಲಾತಿ ಯಾಕೆ ಎಂಬ ಸವಾಲು ಕೂಡ ಇದೇ ವರ್ಗಕ್ಕೆ ಸೇರಿದ ಇನ್ನೊಂದು ತರ್ಕ.

ಇನ್ನು ಜಾತೀಯತೆ ವಿಷಯಕ್ಕೆ ಬಂದರಂತೂ ಸರಿಯೇ ಸರಿ. ಮೀಸಲಾತಿ ಜಾತಿ ಪ್ರಜ್ಞೆಯನ್ನು ಇನ್ನಷ್ಟು ಹೆಚ್ಚಿಸುವುದರಿಂದ ಅದು ಒಂದು ಪ್ರತಿಗಾಮಿ, ಹಾಗೂ ಅನಾರೋಗ್ಯಕರ ಚಿಂತನೆ ಎಂಬಂತೆ ಕೂಡ ಮಾತು ಕೇಳಿಬರುತ್ತಿದೆ. ಇಲ್ಲಿ ಕೂಡ 'ಜಾತಿನಿರ್ಮೂಲನೆ' ಎಂಬ ಪ್ರಗತಿಪರ ಪರಿಕಲ್ಪನೆಯನ್ನೇ ಬಳಸಿ ಮೀಸಲಾತಿ ವಿರೋಧಿ ತರ್ಕವನ್ನು ಬೆಳೆಸಲಾಗುತ್ತಿದೆ.

ಇವೆಲ್ಲಕ್ಕಿಂತಲೂ ಹೆಚ್ಚಿನ ಅಪಾಯಕ್ಕೆ ಒಳಗಾಗಿರುವುದು ಸಮಾನತೆ ಎಂಬ ಪರಿಕಲ್ಪನೆ. ಜಾಗತೀಕರಣದ ಈ ಯುಗದಲ್ಲಂತೂ ಸಮಾನತೆ ಪದದ ದುರ್ಬಳಕೆಯಾದಷ್ಟು ಬಹುಶ ಇನ್ನಾವುದೂ ಆಗಿಲ್ಲ. ಸ್ವಾತಂತ್ರ್ಯ ಎಂದರೆ ಮುಕ್ತ ಮಾರುಕಟ್ಟೆ ಸಮಾನತೆ ಎಂದರೆ ಎಲ್ಲ ವೈರುಧ್ಯ, ವಿಭಿನ್ನತೆಗಳನ್ನು ಮೀರಿದ ಒಂದು ಏಕರೂಪ ಹಾಗೂ ವಿಶ್ವಾತ್ಮಕವಾದ ಅಮೂರ್ತ ವಸ್ತುವಾಗಿ ಬಿಟ್ಟಿದೆ. ಆದರೆ ಸಮಾನತೆ ಒಂದು ವಸ್ತುವಲ್ಲ; ಅದು ಸಂಬಂಧಗಳನ್ನು ಸೂಚಿಸುವ ಒಂದು ಪ್ರಕ್ರಿಯೆ. ಇದನ್ನು ಗಮನಿಸಿಯೇ, ಖ್ಯಾತ ಮನಶಾಸ್ತ್ರಜ್ಞ ಸಾಂಸ್ಕೃತಿಕ ಚಿಂತಕ ಎರಿಕ್ ಫ್ರಾಮ್, "In Contemporery Capitalist society the meaning of equality has been trans formed. By equality one referas to the equality of automation, of men who have lost their individuatty. Equality today means 'sameness' rather Than 'oneness", ಎನ್ನುತ್ತಾನೆ.

ಮೀಸಲಾತಿ ವಿರೋಧಿಗಳು ಸಮಾನತೆ ಎನ್ನುವಾಗ sameness ಎಂಬ ಅರ್ಥದಲ್ಲಿ ಬಳಸುತ್ತಾರೆಯೇ ವಿನಃ Oneness ಎಂಬ ಅರ್ಥದಲ್ಲಲ್ಲ. ಇಡೀ ಸಮಾಜವೇ ವಿವಿಧ ರೀತಿಯ ಅಸಮಾನತೆಯಿಂದ ತುಂಬಿ ತುಳುಕುತ್ತಿರುವಾಗ ಏಕರೂಪ (sameness) ಎಂಬ ಮಾತೇ ಅಸಂಬದ್ಧವಾದದ್ದು; ಸಾಮಾಜಿಕ ಸತ್ಯಗಳಿಗೆ ವಿಮುಖವಾಗಿರುವ ಅವಾಸ್ತವ ಆದರ್ಶ. ಹಾಗೆಯೇ ತಾರತಮ್ಯಗಳನಳಿಸದ ಹೊರತು 'ಎಲ್ಲರೂ ಒಂದು' ಎನ್ನುವುದು ಕೇವಲ ಘೋಷಣೆಯಾಗಿ ಮಾತ್ರ ಉಳಿಯುತ್ತದೆ.

ಆದರೆ ಸಮಾನತೆ–ಎಲ್ಲರೂ ಒಂದೇ ಎಂಬುವುದು ಎಲ್ಲರಿಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಡುವುದರ ಮೂಲಕ ಸಾಧಿಸಬಹುದಾದದ್ದು. ಮೀಸಲಾತಿ ಎನ್ನುವುದು ಸಮಾನ ಅವಕಾಶಗಳನ್ನು ಸೃಷ್ಟಿ ಮಾಡುವ ಸಾಧನ ಮತ್ತು ಸಮ ಸಮಾಜವನ್ನು ನಿರ್ಮಿಸಲು ಅಗತ್ಯವಾದ ಮಾರ್ಗಗಳಲ್ಲಿ ಒಂದು. ಮೀಸಲಾತಿಗೆ ನಿಜವಾದ ಅರ್ಥಬರುವುದು ಅದು ಒಟ್ಟಾರೆ ಸಮಸಮಾಜದ ನಿರ್ಮಾಣದ ಭಾಗವಾಗಿದ್ದಾಗ ಮಾತ್ರ. ಆದರೆ ಈ ವಿಶಾಲವಾದ ಚೌಕಟ್ಟಿನಿಂದ ಹೊರಗಿಟ್ಟು ಅದನ್ನು ಅಧಿಕಾರ ರಾಜಕಾರಣದ ಸಲಕರಣೆಯಂತೆ ಮಾತ್ರ ಬಳಸಲ್ಪಡುತ್ತಿರುವುದರಿಂದ, ಮೀಸಲಾತಿ ಪರ–ವಿರೋಧ ವಾದಗಳು ಇನ್ನೊಂದು ರಾಜಕೀಯ ದಾಳದಾಟವಾಗಿಬಿಟ್ಟಿದೆ. ಈಗ ಎದ್ದಿರುವ ವಿವಾದವನ್ನು ಅದರೆಲ್ಲಾ ಆಳ-ವಿಸ್ತಾರಗಳಲ್ಲಿ ಶೋಧಿಸಿದಾಗ ಮಾತ್ರ ಮೀಸಲಾತಿ ವಿರೋಧಕ್ಕೆ ತಾತ್ವಿಕ ಪ್ರತಿರೋಧ ಒಡ್ಡಲು ಸಾಧ್ಯ. □

ಮೀಸಲಾತಿ ಚರ್ಚೆ

ದಕ್ಷಿಣದ ಮೀಸಲಾತಿ ಪ್ರಯೋಗ

ವೆಂಕಟೇಶ್ ರಾಮಕೃಷ್ಣನ್
ಮತ್ತು ಇತರರು
ಅನು: ಸತ್ಯಪ್ರಕಾಶ್ ಎಂ.ಆರ್

ಶೈಕ್ಷಣಿಕ ರಂಗದಲ್ಲಿ ಮೀಸಲಾತಿಯ ಅನುಷ್ಠಾನದ ಬಗ್ಗೆ ಯಾವುದೇ ಅನುಭವವಿಲ್ಲದ ಉತ್ತರ ಭಾರತದ ಬಹುತೇಕ ರಾಜ್ಯಗಳಿಂದ ಈ ರೀತಿಯ ಭಾವನಾತ್ಮಕ ವಾದಸರಣಿ ಕೇಳಿ ಬರುತ್ತಿರುವುದು ಹಾಸ್ಯಾಸ್ಪದ. ಆದರೆ ಈ ಕುರಿತು ಸಾಕಷ್ಟು ಪ್ರಯೋಗಗಳನ್ನು ಮಾಡಿರುವ ದಕ್ಷಿಣದ ನಾಲ್ಕು ರಾಜ್ಯಗಳು ಹಾಗೂ ಸ್ವಲ್ಪಮಟ್ಟಿಗಿನ ಪ್ರಯೋಗ ಕಂಡಿರುವ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಂದ ಮೀಸಲಾತಿಯನ್ನು ವಿರೋಧಿಸುವ ಯಾವುದೇ ಗಂಭೀರಪ್ರತಿಕ್ರಿಯೆಗಳು ಹೊರಬಂದಿಲ್ಲ. ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡುವ ಈ ರಾಜ್ಯಗಳು ಶಿಕ್ಷಣ ರಂಗದಲ್ಲಿ ಮೀಸಲಾತಿ ನೀತಿಯನ್ನು ಮತ್ತದರ ಅನುಷ್ಠಾನವನ್ನು ಸಾರಾಸಗಟಾಗಿ ಬೆಂಬಲಿಸುತ್ತಿವೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಈ ರಾಜ್ಯಗಳಲ್ಲಿ ಒಟ್ಟಾರೆ ಮೀಸಲಾತಿ ವ್ಯವಸ್ಥೆ ಶೈಕ್ಷಣಿಕ ರಂಗದಲ್ಲಿ ಹಾಸುಹೊಕ್ಕಾಗಿರುವುದರಿಂದ ಇಲ್ಲಿಂದ ಕೇಳಿಬರುತ್ತಿರುವ ಪ್ರತಿಕ್ರಿಯೆಗಳು ಸಮತೋಲನ ಕಾಯ್ದುಕೊಂಡಿದೆ.



ದಕ್ಷಿಣ ರಾಜ್ಯಗಳಲ್ಲೊಂದಾದ ತಮಿಳು ನಾಡಿನ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬಹಳ ಕಾಲದಿಂದಲೂ ಮೀಸಲಾತಿ ಜಾರಿಯಲ್ಲಿದೆ. ಆದರೂ ಈ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಗುಣಮಟ್ಟದಲ್ಲಾಗಲೀ, ಘನತೆಯಲ್ಲಾಗಲೀ ಕುಂದುಂಟಾಗಿಲ್ಲ ಎನ್ನುತ್ತಾರೆ ಅಣ್ಣಾ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಎಂ. ಆನಂದಕೃಷ್ಣನ್.

ಇತರ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದನ್ನು ಕುರಿತ ಉದ್ದೇಶಿತ ವಿವಾದಾತ್ಮಕ ಮಸೂದೆ ಮೀಸಲಾತಿ ವಿರೋಧಿ ವಾದಗಳಿಗೆ ಕಾರಣವಾಗಿದೆ. 'ಮೀಸಲಾತಿ, ಪ್ರತಿಭೆ ಮತ್ತು ಗುಣಮಟ್ಟಕ್ಕೆ ಕೊಡಲಿಪೆಟ್ಟು ಕೊಡುತ್ತದೆ', 'ವಿಶೇಷವಾಗಿ ಮೇಲ್ಜಾತಿಗಳ ಬಡ ವರ್ಗಗಳಿಗೆ ಮಾರಕವಾಗುತ್ತದೆ' ಎಂಬುದು ಮೀಸಲಾತಿ ವಿರೋಧಿ ಧೋರಣೆಗಳ ವಾದ. ಪರಿಶಿಷ್ಟ ಜಾತಿ–ಪಂಗಡಗಳು ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಅನುಕೂಲಸ್ಥ ವರ್ಗದವರು ಮೀಸಲಾತಿಯ ಲಾಭ ಪಡೆಯುತ್ತಿರುವುದರಿಂದ ನಿಜವಾಗಲೂ ಮೀಸಲಾತಿಯ ಅವಶ್ಯಕತೆಯಿರುವ ಅಸಹಾಯಕರಿಗೆ ಮೀಸಲಾತಿ ವ್ಯವಸ್ಥೆ ಯಿಂದ ಯಾವುದೇ ರೀತಿಯ ಪ್ರಯೋಜನವಾಗುತ್ತಿಲ್ಲ ಎಂಬ ವಾದ ಸಹಾ ಕೇಳಿಬರುತ್ತಿದೆ. ಐಐಟಿ ಮತ್ತು ಐಐಎಂನಂತಹ ಉನ್ನತ ಶಿಕ್ಷಣ ಸಂಸ್ಥೆಗಳು, ವೃತ್ತಿಪರ ವಿದ್ಯಾಸಂಸ್ಥೆಗಳಲ್ಲಿ ಮೀಸಲಾತಿ ಒದಗಿಸುವುದು ಸಾಮಾಜಿಕ ದುರಂತಕ್ಕೆ ಕಾರಣವಾಗುತ್ತದೆ ಎಂಬುದು ಮೀಸಲಾತಿ ವಿರೋಧಿ ಧೋರಣೆಗಳ ಸಾರಾಂಶ.

ಶೈಕ್ಷಣಿಕ ರಂಗದಲ್ಲಿ ಮೀಸಲಾತಿಯ ಅನುಷ್ಠಾನದ ಬಗ್ಗೆ ಯಾವುದೇ ಅನುಭವವಿಲ್ಲದ ಉತ್ತರ ಭಾರತದ ಬಹುತೇಕ ರಾಜ್ಯಗಳಿಂದ ಈ ರೀತಿಯ ಭಾವನಾತ್ಮಕ ವಾದಸರಣಿ ಕೇಳಿಬರುತ್ತಿರುವುದು ಹಾಸ್ಯಾಸ್ಪದ. ಆದರೆ ಈ ಕುರಿತು ಸಾಕಷ್ಟು ಪ್ರಯೋಗಗಳನ್ನು ಮಾಡಿರುವ ದಕ್ಷಿಣದ ನಾಲ್ಕು ರಾಜ್ಯಗಳು ಹಾಗೂ ಸ್ವಲ್ಪಮಟ್ಟಿಗಿನ ಪ್ರಯೋಗ ಕಂಡಿರುವ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಂದ ಮೀಸಲಾತಿಯನ್ನು ವಿರೋಧಿಸುವ ಯಾವುದೇ ಗಂಭೀರಪ್ರತಿಕ್ರಿಯೆಗಳು ಹೊರಬಂದಿಲ್ಲ. ಗುಣಮಟ್ಟದ ಶಿಕ್ಷಣ ಕ್ಕೆ ಒತ್ತು ನೀಡುವ ಈ ರಾಜ್ಯಗಳು ಶಿಕ್ಷಣ ರಂಗದಲ್ಲಿ ಮೀಸಲಾತಿ ನೀತಿಯನ್ನು ಮತ್ತದರ ಅನುಷ್ಠಾನವನ್ನು ಸಾರಾಸಗಟಾಗಿ ಬೆಂಬಲಿಸುತ್ತಿವೆ. ಇವೆಲ್ಲಕ್ಕಿಂತಲೂ ಮುಖ್ಯವಾಗಿ ಈ ರಾಜ್ಯಗಳಲ್ಲಿ ಒಟ್ಟಾರೆ ಮೀಸಲಾತಿ ವ್ಯವಸ್ಥೆ ಶೈಕ್ಷಣಿಕ ರಂಗದಲ್ಲಿ ಹಾಸುಹೊಕ್ಕಾಗಿರುವುದರಿಂದ ಇಲ್ಲಿಂದ ಕೇಳಿಬರುತ್ತಿರುವ ಪ್ರತಿಕ್ರಿಯೆಗಳು ಸಮತೋಲನ ಕಾಯ್ದುಕೊಂಡಿದೆ.

ಈ ಎಲ್ಲ ರಾಜ್ಯಗಳು ಸಹಾ ಮೀಸಲಾತಿ ವ್ಯವಸ್ಥೆಯನ್ನು ಕುರಿತು ಸಮತೋಲನ ಪಡೆದುಕೊಳ್ಳುವ ಮುಂಚೆ ಸಾಕಷ್ಟು ಸಂಘರ್ಷಮಯ ಪರಿಸ್ಥಿತಿಗಳನ್ನು ಎದುರಿಸಿರುವುದು ಈಗ ಇತಿಹಾಸ. ಆದ್ದರಿಂದ ಈ ರಾಜ್ಯಗಳಸಾಮಾಜಿಕ ಚಳವಳಿಕಾರರು ಹಾಗೂ ಬಹುತೇಕ ಶಿಕ್ಷಣ ತಜ್ಞರು ಪ್ರಸ್ತುತ ಚಾಲ್ತಿಯಲ್ಲಿರುವ ಮೀಸಲಾತಿ ವಿರೋಧಿ ವಾದಗಳನ್ನು ತಳ್ಳಿಹಾಕುತ್ತಾರೆ.

ಐತಿಹಾಸಿಕವಾಗಿ ಶೋಷಣೆಗೆ ಒಳಗಾದ ಸಮುದಾಯಗಳಿಗೆ ಶೈಕ್ಷಣಿಕ ರಂಗದಲ್ಲಿ ಮೀಸಲಾತಿ ಒದಗಿಸುವ ಪರಿಕಲ್ಪನೆ ದಕ್ಷಿಣ ಭಾರತದಲ್ಲಿ ಸುಮಾರು ಒಂದು ಶತಮಾನದ ಹಿಂದೆಸ್ವಾತಂತ್ರ್ಯ ಸಂಗ್ರಾಮದ ಜತೆಜತೆಗೆ ಬೇರೂರಿತು. ಸ್ವಾತಂತ್ರ್ಯ ಸಂಗ್ರಾಮದ ಜತೆ ಆರಂಭವಾದ ಬಹಳಷ್ಟು ಕಾರ್ಯಕ್ರಮಗಳು ಈ ಪ್ರದೇಶದಲ್ಲಿ ಜಾತಿ ನಿರ್ಮೂಲನೆಯ ಉದ್ದೇಶ ಹೊಂದಿರುವ ಸಾಮಾಜಿಕ ಸುಧಾರಣಾ ಚಳವಳಿಗಳ ಹಿನ್ನೆಲೆ ಹೊಂದಿದೆ. ಹಿರಿಯ ಪತ್ರಕರ್ತ ಹಾಗೂ ಸಾಮಾಜಿಕ ವಿಶ್ಲೇಷಕ ಬಿ. ಆರ್.ಪಿ. ಭಾಸ್ಕರ್ ಹೇಳುವಂತೆ ಸಾಮಾಜಿಕ ಸುಧಾರಣೆಯ ಈ ಪರಂಪರೆ, ಬೇರೆ ಬೇರೆ ಪ್ರಾಂತ್ಯಗಳು ಮೀಸಲಾತಿ ಮತ್ತು ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ಅರ್ಥೈಸಿಕೊಳ್ಳುವಲ್ಲಿ ಉಂಟಾಗಿರುವ ವೈಪರಿತ್ಯಗಳನ್ನು ನಿರ್ಧರಿಸುವ ಪ್ರಮುಖ ಅಂಶ.

ಹಿಂದುಳಿದ ವರ್ಗಗಳು ಮತ್ತು ತುಳಿತಕ್ಕೆ ಒಳಗಾದಇತರ ಸಮುದಾಯಗಳ ಸಾಮಾಜಿಕ ಮತ್ತು ರಾಜಕೀಯ ಒತ್ತಾಸೆಯನ್ನು ಒಳಗೊಂಡ ಕ್ರಾಂತಿಕಾರಿ ದ್ರಾವಿಡ ಚಳವಳಿ ಗಳ ಹಿನ್ನೆಲೆ ಹೊಂದಿರುವ ತಮಿಳುನಾಡು ಶೈಕ್ಷಣಿಕ ರಂಗದಲ್ಲಿ ಮೀಸಲಾತಿಯ ಪರಿಕಲ್ಪನೆಯನ್ನು ಮೊದಲಿಗೆ ಜಾರಿಗೆ ತಂದ ರಾಜ್ಯ. ಶಿಕ್ಷಣ ರಂಗದಲ್ಲಿ ಹಾಗೂ ನಾಗರೀಕ ಸೇವಾ ವಲಯದಲ್ಲಿ ಮೀಸಲಾತಿ ನೀಡುವ ಯೋಜನೆ ಸುಮಾರು ೧೯೨೧ರಷ್ಟು ಹಿಂದೆಯೇ ಮದ್ರಾಸ್ ಸಂಸ್ಥಾನದಲ್ಲಿ ಆರಂಭವಾಯಿತು. ಈ ಸಂಬಂಧ ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಪರಿಗಣಿಸಿ ಬ್ರಿಟಿಷ್ ಆಡಳಿತಮೀಸಲಾತಿಯನ್ನು ಅನುಷ್ಠಾನಗೊಳಿಸುವ ನಿರ್ಣಯ ಕೈಗೊಂಡಿತ್ತು. ನಂತರದ ದಶಕಗಳಲ್ಲಿ ಜಾರಿಯಲ್ಲಿದ್ದ ಮೀಸಲಾತಿ ವ್ಯವಸ್ಥೆಯ ತೊಡಕುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಒಟ್ಟಾರೆ ಮೀಸಲಾತಿ ವ್ಯವಸ್ಥೆ ಮರುವ್ಯಾಖ್ಯಾನಕ್ಕೊಳಗಾಯಿತು.

ಈ ಪ್ರಕ್ರಿಯೆ ಸ್ವಾತಂತ್ರ್ಯಾನಂತರವೂ ಮುಂದುವರೆಯಿತು. ಡಿಎಂಕೆ ಮತ್ತು ಅಣ್ಣಾ ಡಿಎಂಕೆಯಂತಹ ದ್ರಾವಿಡ ಪಕ್ಷಗಳು 'ಆರ್ಥಿಕ ಶ್ರೇಣಿ' ಮತ್ತು ತೀರ ಹಿಂದುಳಿದ ವರ್ಗಗಳೆಂದು ತಾರ್ಕಿಕವಾಗಿ ವಿಭಾಗೀಕರಿಸಿದ್ದರಿಂದಾಗಿ ಶೈಕ್ಷಣಿಕ ರಂಗದಲ್ಲಿ ಮೀಸಲಾತಿಯ ಪ್ರಮಾಣ ಶೇ. ೬೯ರಷ್ಟು ಏರಿಕೆ ಕಂಡಿತು. ರಾಜ್ಯದಲ್ಲಿರುವ ಪರಿಶಿಷ್ಟ

ಜಾತಿ ಮತ್ತುಪಂಗಡಗಳು, ಹಿಂದುಳಿದ ವರ್ಗಗಳು ಹಾಗೂ ತೀರಾ ಹಿಂದುಳಿದ ವರ್ಗಗಳ ಜನಸಂಖ್ಯೆಗನು ಗುಣವಾಗಿ ಮೀಸಲಾತಿಯ ಪ್ರಮಾಣವನ್ನು ನಿಗದಿ ಗೊಳಿಸಲಾಗಿದೆ.

ರಾಷ್ಟ್ರಮಟ್ಟದಲ್ಲಿ ಮಂಡಲ್ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಶೇ. ೨೭ರಷ್ಟು ಮೀಸಲಾತಿಯನ್ನು ಅನುಷ್ಠಾನಗೊಳಿಸುವ ಮುಂಚೆಯೇ ತಮಿಳುನಾಡಿನಲ್ಲಿ ಶೆ. ೬೯ರಷ್ಟು ಮೀಸಲಾತಿ ಜಾರಿಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಸರ್ವೋಚ್ಛ ನ್ಯಾಯಾಲಯ ಶೈಕ್ಷಣಿಕ ರಂಗದಲ್ಲಿನ ಮೀಸಲಾತಿಯನ್ನು

ಶೇ. ೫೦ಕ್ಕೆ ಸೀಮಿತಗೊಳಿಸಿತ್ತು. ಮೀಸಲಾತಿಯ ಪ್ರಮಾಣವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ತಮಿಳುನಾಡಿನ ಬಹಳಷ್ಟು ಮೀಸಲಾತಿ ವಿರೋಧಿ ಸಂಘಟನೆಗಳ ಪ್ರಯತ್ನಗಳ ಫಲವಾಗಿ ಸರ್ವೋಚ್ಛ ನ್ಯಾಯಾಲಯ ಈ ಆಜ್ಞೆ ನೀಡಿತ್ತು. ಆದರೆ ನಂತರ ಅಧಿಕಾರಕ್ಕೆ ಬಂದ ದ್ರಾವಿಡ ಪಕ್ಷಗಳ ನೇತೃತ್ವದ ಸರ್ಕಾರಗಳ ನಿರಂತರ ಯೋಜನೆಗಳು ಮೀಸಲಾತಿ ವಿರೋಧಿ ಪ್ರಯತ್ನಗಳನ್ನು ತಡೆಗಟ್ಟುವಲ್ಲಿ ಯಶಸ್ವಿಯಾದವು. ಈ ಎಲ್ಲಾ ಕ್ರಮಗಳ ಪರಿಣಾಮವಾಗಿ ೧೯೯೪ ರಿಂದ ತಮಿಳುನಾಡಿನಲ್ಲಿ ಅಸ್ತಿತ್ವದಲ್ಲಿರುವ ಶೇ. ೬೯ರಷ್ಟು ಮೀಸಲಾತಿ ನೀತಿ, ಸಂವಿಧಾನದ ೯ನೇ ಪರಿಚ್ಛೇದದ ಭಾಗವಾಗಿದ್ದು ನ್ಯಾಯಾಂಗ ವಿಚಾರಣೆಯ ವ್ಯಾಪ್ತಿಯನ್ನು ಮೀರಿದೆ. ತಮಿಳುನಾಡಿನಲ್ಲಿ ಕೆಲವು ಮೂಲಭೂತವಾದಿ ಹಿಂದುತ್ವ ಸಂಘಟನೆಗಳನ್ನು ಹೊರತುಪಡಿಸಿ ಉಳಿದೆಲ್ಲ ರಾಜಕೀಯ ಪಕ್ಷಗಳು ಮೀಸಲಾತಿ ವ್ಯವಸ್ಥೆಯನ್ನು ಬೆಂಬಲಿಸುತ್ತವೆ.

ಕರ್ನಾಟಕ ಮತ್ತು ಕೇರಳ ರಾಜ್ಯದಲ್ಲೂ ಬಹುತೇಕ ತಮಿಳುನಾಡು ಮಾದರಿ ಮೀಸಲಾತಿ ವ್ಯವಸ್ಥೆಯ ಕೆಲವು ಆಶಯಗಳು ಪುನರಾವರ್ತನೆಗೊಂಡಿದೆ. ೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಪ್ರಥಮಾರ್ಧದಲ್ಲಿಯೇ ಈ ಎರಡೂ ರಾಜ್ಯಗಳು ಶೈಕ್ಷಣಿಕ ರಂಗದಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಒದಗಿಸಿತ್ತು. ಈ ವ್ಯವಸ್ಥೆ ಕಾಲಕಾಲಕ್ಕೆ ಮಾರ್ಪಾಡಿಗೆ ಒಳಗಾಗುತ್ತಿತ್ತು. ಬ್ರಿಟಿಷ್ ಆಡಳಿತದಡಿ ಟ್ರಾವಾಂಕೋರ್, ಕೊಚ್ಚಿ ಮತ್ತು ಮೈಸೂರು ಸಂಸ್ಥಾನಗಳು ಸಾರ್ವಜನಿಕ ಬೆಂಬಲದೊಂದಿಗೆ ಶೈಕ್ಷಣಿಕ ರಂಗದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸಿದವು. ಈ ಪರಂಪರೆ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಸಾಮಾಜಿಕ ನ್ಯಾಯ ಪರಿಕಲ್ಪನೆಯ ಅವಿಭಾಜ್ಯ, ಅಂಗವಾಗಿ ಕೈಗೊಂಡ ಸಕಾರಾತ್ಮಕ ಕ್ರಮಗಳೆಂದು ಸ್ವಾಗತಿಸಲು ಸಾಧ್ಯವಾಯಿತು. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ. ರವಿವರ್ಮಕುಮಾರ್, 'ಕರ್ನಾಟಕ ದಲ್ಲಿ ಮೀಸಲಾತಿ ವ್ಯವಸ್ಥೆ ಸಾಮಾಜಿಕ ನ್ಯಾಯ ಪರಿಕಲ್ಪ ನೆಯ ಅವಿಭಾಜ್ಯ ಅಂಗ ಎಂದು ಮಕ್ಕಳಿಗೆ ಶಾಲೆಗಳ ಲ್ಲಿಯೇ ಕಲಿಸಿಕೊಡಲಾಗುತ್ತದೆ" ಎನ್ನುತ್ತಾರೆ.

ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಮೀಸಲಾತಿ ಪ್ರಕ್ರಿಯೆ ಸ್ವಲ್ಪ ತಡವಾಗಿ ಆರಂಭವಾಯಿತು. ೧೯೭೦ರದಶಕದಲ್ಲಿ ಆಂಧ್ರಪ್ರದೇಶ, ೧೯೮೦ರ ದಶಕದಲ್ಲಿ ಗುಜರಾತ್ ಹಾಗೂ ೧೯೯೦ರ ದಶಕದಲ್ಲಿ ಮಹಾರಾಷ್ಟ್ರ ರಾಜ್ಯಗಳಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸಲಾಯಿತು.

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಶೇ. ೫೦ರಷ್ಟು ಮೀಸಲಾತಿ ಇದ್ದು, ಶೇ. ೩೨ರಷ್ಟು ಇತರ ಹಿಂದುಳಿದ ವರ್ಗಗಳಿಗೆ ಮತ್ತು ಶೇ. ೧೮ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನಿಗಧಿಪಡಿಸಲಾಗಿದೆ. ಮೀಸಲಾತಿ ವ್ಯವಸ್ಥೆಯ ಫಲವಾಗಿ ೧೯೭೭ರಿಂದ ೨೦೦೦ ವರೆಗೆ ಸುಮಾರು ೨೫ ಸಾವಿರಕ್ಕೂ ಹೆಚ್ಚಿನ ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವೃತ್ತಿಪರ ಕಾಲೇಜುಗಳಿಗೆ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಪ್ರೊ. ರವಿವರ್ಮ ಕುಮಾರ್ ಹೇಳುತ್ತಾರೆ. ಕೇರಳ ರಾಜ್ಯದಲ್ಲಿ ಶೇ. ೫೦ರಷ್ಟು ಹಾಗೂ ಆಂಧ್ರಪ್ರದೇಶದಲ್ಲಿ ಶೇ. ೪೯.೫ ರಷ್ಟು ಮೀಸಲಾತಿ ಇದೆ.

ಕಳೆದ ಕೆಲವು ದಶಕಗಳಲ್ಲಿ ಈ ರಾಜ್ಯಗಳಲ್ಲಾದ ಕೆಲವು ಪ್ರಮುಖ ಬೆಳವಣಿಗೆಗಳು ಮೀಸಲಾತಿ ವಿರೋಧಿ ವಾದಗಳಿಗೆ ಸವಾಲೆಸೆದಿದೆ. ಸಮಾಜದ ಕಟ್ಟಕಡೆಯ ಸಮುದಾಯಕ್ಕೆ ಉನ್ನತವಾದ ಸಾಮಾಜಿಕ ಸ್ಥಾನಮಾನ ತಂದುಕೊಡುವಲ್ಲಿ ಮೀಸಲಾತಿ ವ್ಯವಸ್ಥೆವಹಿಸುವ ಪಾತ್ರ ಅತ್ಯಂತ ಪ್ರಮುಖವಾದುದು ಎನ್ನುವುದಕ್ಕೆ ಹಿರಿಯ ಕಾಂಗ್ರೆಸ್ ನಾಯಕ ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಅವರ ಜೀವನ ಹಾಗೂ ರಾಜಕೀಯ ಯಶಸ್ಸು ಸ್ಪಷ್ಟ ನಿದರ್ಶನ. ಮೀಸಲಾತಿ ವ್ಯವಸ್ಥೆ ಇಲ್ಲವಾಗಿದ್ದಲ್ಲಿ ತಾವು ಈ ಮಟ್ಟಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ ಎಂದು ಮೊಯಿಲಿ ಅಭಿಪ್ರಾಯಪಡುತ್ತಾರೆ. ತಾವು ಪದವಿಯ ಮೊದಲೆರಡು ವರ್ಷ ಸಾಮಾನ್ಯ ವಿದ್ಯಾರ್ಥಿಯಾಗಿದ್ದು ನಂತರ ತರಗತಿಯಲ್ಲಿ ಹೆಚ್ಚಿನ ಅಂಕ ಪಡೆದದ್ದನ್ನು ನೆನಪಿಸಿಕೊಳ್ಳುವ ಅವರು, "ನಮ್ಮ ಸಮಾಜ ಎಲ್ಲರನ್ನೂ ಒಳಗೊಳ್ಳುವಂತಹದ್ದಾಗಿರಬೇಕು. ಐಐಎಂಗಳು ಉಳ್ಳವರಿಗೆ ಮಾತ್ರ ಮೀಸಲಾಗಬಾರದು. ಮೀಸಲಾತಿ ವ್ಯವಸ್ಥೆಯಲ್ಲಿ ತೊಡಕಿದ್ದರೆ ಶಿಕ್ಷಣ ತಜ್ಞರು, ಪ್ರಾಜ್ಞರು ಅದನ್ನು ಪುನರ್‌ರಚಿಸಲಿ" ಎಂದು ಸಲಹೆ ನೀಡುತ್ತಾರೆ.

ಲೇಖಕ ಮತ್ತು ಸಾಮಾಜಿಕ ವಿಶ್ಲೇಷಕಹಾಗೂ ಒಸ್ಮಾನಿಯ ವಿಶ್ವವಿದ್ಯಾನಿಲಯದ ರಾಜಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಕಾಂಚಾ ಐಲಯ್ಯ ಮತ್ತು ಆಂಧ್ರದ ಮಾಜಿ ಗೃಹಮಂತ್ರಿ ಮತ್ತು ತೆಲುಗುದೇಶಂ ಪಕ್ಷದ ನಾಯಕ ಟಿ. ದೇವೇಂದರ್ ಗೌಡ್ ಕೂಡ ಮೊಯಿಲಿ ಅವರ ವಾದವನ್ನು ಬೆಂಬಲಿಸುತ್ತಾರೆ. ಪ್ರೊ. ಐಲಯ್ಯ ಅವರ ಪ್ರಕಾರ, ಮೀಸಲಾತಿ ವ್ಯವಸ್ಥೆ ಇಲ್ಲವಾಗಿದ್ದಲ್ಲಿ ಇತರ ಹಿಂದುಳಿದ ವರ್ಗಗಳ ಜನ ಮಧ್ಯಯುಗ

ಅಣ್ಣಾ ವಿಶ್ವವಿದ್ಯಾಲಯದ ಕ್ಯಾಂಪಸ್

ದಲ್ಲಿಯೇ ಕೊಳೆಯಬೇಕಾಗಿತ್ತು. 'ಮೀಸಲಾತಿ ವ್ಯವಸ್ಥೆಯ ಫಲವಾಗಿ ನನ್ನಂತಹವರು ಸಮಾಜದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಯಿತು,' ಎಂದು ಗೌಡ್ ಹೇಳುತ್ತಾರೆ. ಮೀಸಲಾತಿಯಿಂದಾಗಿ ದಕ್ಷಿಣ ಭಾರತದ ನಾಲ್ಕೂ ರಾಜ್ಯಗಳಲ್ಲಿನ ಇತರೆ ಹಿಂದುಳಿದ ವರ್ಗಗಳು ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಿದ್ದಾರೆ.

ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ. ಎಂ. ಆನಂದಕೃಷ್ಣನ್, ಮೀಸಲಾತಿ ಮತ್ತು ಪ್ರತಿಭೆಯ ವಿಚಾರವಾಗಿ ಮಾತನಾಡುತ್ತಾ, ಮೀಸಲಾತಿಯಿಂದ ಪ್ರತಿಭೆ ಮತ್ತು ಗುಣಮಟ್ಟಕ್ಕೆ ಧಕ್ಕೆ ಉಂಟಾಗುತ್ತದೆ ಎಂಬ ವಾದವನ್ನು ಪುಷ್ಟೀಕರಿಸಲು ಸಾಕಷ್ಟು ಆಧಾರಗಳಿಲ್ಲ ಎನ್ನುತ್ತಾರೆ. ಚೆನ್ನೈನ ಅಣ್ಣಾ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಗಳೂ ಆಗಿರುವ ಆನಂದಕೃಷ್ಣನ್, ಮೀಸಲಾತಿ ಪಡೆಯುವ ವಿದ್ಯಾರ್ಥಿಗಳು ಪ್ರತಿಭೆಯಿಲ್ಲದವರು, ಐಐಟಿ ಮತ್ತು ಐಐಎಂಗಳ ಗುಣಮಟ್ಟಕ್ಕೆ ಹೊಂದಿಕೊಳ್ಳಲಾಗದವರು ಎಂಬ ವಾದ ತಪ್ಪು ಎನ್ನುತ್ತಾರೆ. "ಮೀಸಲಾತಿ ವಿಚಾರವನ್ನು ಭಾವನಾತ್ಮಕವಾಗಿ ಪರಿಭಾವಿಸಲಾಗುತ್ತಿದ್ದು, ವಿನಾಕಾರಣ ರಾಜಕೀಯ ಬಣ್ಣ ನೀಡಲಾಗುತ್ತಿದೆ. ತಮಿಳುನಾಡಿನ ಅಣ್ಣಾ ವಿಶ್ವವಿದ್ಯಾನಿಲಯ, ಭಾರತಿದಾಸನ್ ಮತ್ತು ತಿರುಚ್ಚಿ ವಿಶ್ವವಿದ್ಯಾನಿಲಯಗಳು, ಆಂಧ್ರದ ಒಸ್ಮಾನಿಯಾ ಮತ್ತು ಆಂಧ್ರ ವಿಶ್ವವಿದ್ಯಾನಿಲಯಗಳು ಮತ್ತಿತರ ಪ್ರಮುಖ ಭಾರತೀಯ ವಿಶ್ವವಿದ್ಯಾನಿಲಯಗಳಲ್ಲಿ ಮೀಸಲಾತಿ ಹಿಂದಿನಿಂದಲೂ ಜಾರಿಯಲ್ಲಿದೆ. ಆದರೂ ಈ ವಿಶ್ವವಿದ್ಯಾನಿಲಯಗಳ ಗುಣಮಟ್ಟವೇನೂ ಕಡಿಮೆಯಾಗಿಲ್ಲ' ಎನ್ನುತ್ತಾರೆ.

ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿರುವ ಮೀಸಲಾತಿಯಿಂದಾಗಿ ಬರುವ ಸೀಟುಗಳನ್ನು ತುಂಬ ಬಲ್ಲ ಪ್ರತಿಭಾವಂತ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳಿಂದ ಬರಲು ಸಾಧ್ಯವಿಲ್ಲ ಎಂದರೆ ತಪ್ಪಾಗುತ್ತದೆ ಎಂದು ಆನಂದಕೃಷ್ಣನ್ ವಾದಿಸುತ್ತಾರೆ. 'ಪ್ರತಿವರ್ಷ ಐಐಟಿಗಳಿಗೆ ಸುಮಾರು ೫,೦೦೦ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ ಎಂದು ಭಾವಿಸುವುದಾದರೆ, ಶೇ. ೨೭ರಷ್ಟು ಅಂದರೆ ಸುಮಾರು ೧,೩೫೦ ಸೀಟ್‌ಗಳನ್ನು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾಗಿಡಬಹುದು. ಪ್ರತಿವರ್ಷ ಐಐಟಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿದೆ. ಹೀಗಿರುವಾಗ ಒಂದು ಲಕ್ಷ ವಿದ್ಯಾರ್ಥಿಗಳಲ್ಲಿ ೧,೩೫೦ ವಿದ್ಯಾರ್ಥಿಗಳು ಸಿಗುವುದಿಲ್ಲ ಎಂದು ವಾದಿಸುವುದರಲ್ಲಿ ಅರ್ಥವಿಲ್ಲ'. ಎನ್ನುತ್ತಾರೆ ಆನಂದ ಕೃಷ್ಣನ್. ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವ ಪ್ರಮಾಣದಲ್ಲಿ ಸಾಮಾನ್ಯ ವರ್ಗ ಮತ್ತು ಮೀಸಲಾತಿ ಪಡೆದ ವರ್ಗಗಳ ನಡುವೆ ಅಷ್ಟೇನೂ ವ್ಯತ್ಯಾಸ ಕಂಡುಬರುವುದಿಲ್ಲ ಎಂದು ಗುರುತಿಸಿರುವ ಇವರು, 'ಮೀಸಲಾತಿಯಿಂದ ಬಂದ ವಿದ್ಯಾರ್ಥಿಗಳು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉನ್ನತ ಸ್ಥಾನಕ್ಕೇರುವಲ್ಲಿ ತಮಗೆ ದೊರೆತಿರುವ ವಿರಳಅವಕಾಶ ಎಂದು ಭಾವಿಸಿ ಹೆಚ್ಚಿನ ಪರಿಶ್ರಮ ವಹಿಸಿ ವಿದ್ಯಾಭ್ಯಾಸ ನಡೆಸುವುದನ್ನು ಅಣ್ಣಾ ವಿಶ್ವವಿದ್ಯಾನಿಲಯದ ಉಪ-ಕುಲಪತಿಯಾಗಿದ್ದಾಗ ನಾನು ಸ್ವತಃ ಕಂಡಿದ್ದೇನೆ" ಎಂದು ತಮ್ಮ ಅನುಭವ ಹಂಚಿಕೊಳ್ಳುತ್ತಾರೆ.

ಗುಣಮಟ್ಟಕ್ಕೆ ತೊಡಕುಂಟಾಗುತ್ತದೆ ಎಂಬ ನೆಪವೊಡ್ಡಿ ಬ್ರ್ಯಾಂಡ್ ಹೆಸರು ಹೊಂದಿರುವ ವಿದ್ಯಾಸಂಸ್ಥೆಗಳಲ್ಲಿ ಮೀಸಲಾತಿ ಜಾರಿಗೊಳಿಸುವುದನ್ನು ನಿರಾಕರಿಸುತ್ತಿರುವ ಕ್ರಮ, ನಮ್ಮ ಪರಂಪರೆಯ ದೊಡ್ಡ ಸಾಮಾಜಿಕ ಪಿಡುಗನ್ನು ನೆನಪಿಸುತ್ತದೆ. ಹಿಂದೆ ಕೆಳಜಾತಿಗಳ ಜನ ದೇವಾಲಯಗಳನ್ನು ಪ್ರವೇಶಿಸಿದರೆ, ಮೈಲಿಗೆಯಾಗುತ್ತದೆ ಎಂಬ ಕಾರಣ ನೀಡಿ ಅವರನ್ನು ದೇವಸ್ಥಾನಗಳಿಂದ ದೂರವಿಟ್ಟಿದ್ದು ಸತ್ಯ. ನಂತರ ಕೆಳಜಾತಿಗಳ ಜನ ಮಂದಿರಗಳನ್ನು ಪ್ರವೇಶಿಸಿದಾಗ ಯಾವರೀತಿಯ ಮೈಲಿಗೆಯಾಗದೇ ಇದ್ದದ್ದೂ ಸತ್ಯ. ಪ್ರಸ್ತುತ ನಡೆಯುತ್ತಿರುವ ಮೀಸಲಾತಿ ಚರ್ಚೆ ಅದೇ ಮಾದರಿಯದು," ಎನ್ನುತ್ತಾರೆ ಆನಂದಕೃಷ್ಣನ್.

ಮೀಸಲಾತಿ ವಿರೋಧಿ ಶಕ್ತಿಗಳು ಹೇಳುತ್ತಿರುವ ಪ್ರತಿಭೆಯ ಪರಿಕಲ್ಪನೆ ಇಂಗ್ಲಿಷ್ ಭಾಷೆಯ ಪ್ರೌಢಿಮೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ, ಬುದ್ಧಿಶಕ್ತಿಯನ್ನಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಐಐಎಂ- ಅಹಮದಾಬಾದ್‌ನ ಪ್ರೊ. ಅನಿಲ್ ಕೆ. ಗುಪ್ತ. "ಇದು ತೀರ ಅಸಂಬದ್ಧವಾದ ಮಾನದಂಡ. ನಿಜವಾಗಿ ಪ್ರತಿಭೆಯ ಮಾನದಂಡ ಇದಲ್ಲ." ರಾಷ್ಟ್ರೀಯ ಅನ್ವೇಷಣಾ ಪ್ರತಿಷ್ಠಾನದ ಪ್ರಶಸ್ತಿ ಪಡೆಯುವವರಲ್ಲಿ ಶೇ ೬೦ರಿಂದ ೭೦ರಷ್ಟು ಮಂದಿ ಶಾಲೆಯನ್ನು ಅರ್ಧಕ್ಕೆ ಬಿಟ್ಟವರು ಎಂಬುದನ್ನು ನಾವು ಗಮನಿಸಬೇಕು ಎಂದು ಗುಪ್ತ ಸಲಹೆ ನೀಡುತ್ತಾರೆ.

ಐಐಟಿ ಮತ್ತು ಐಐಎಂಗಳಂತಹ ಶಿಕ್ಷಣ ಸಂಸ್ಥೆಗಳು ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಸಾಧಿಸಿರುವ ಎಲೀಟ್‌ಗಳ ಸ್ವತ್ತಾಗಬೇಕೆಂದು ಮೇಲ್ಜಾತಿಯ ಕೆಲವು ವರ್ಗಗಳು 'ಪ್ರತಿಭೆ ವರ್ಸಸ್ ಮೀಸಲಾತಿ' ಷಡ್ಯಂತ್ರ ಹೂಡಿದ್ದಾರೆ ಎಂದು ಪ್ರೊ. ಕಾಂಚಾ ಐಲಯ್ಯ ಅಭಿಪ್ರಾಯ ಪಡುತ್ತಾರೆ. ಹೆಚ್ಚಿನ ಪ್ರಮಾಣದ ಮೀಸಲಾತಿಯ ಹೊರತಾಗಿಯೂ ಸಾಮಾಜಿಕ-ರಾಜಕೀಯ ಮಟ್ಟದಲ್ಲಿ



ಪರಿವರ್ತನೆಯ ಹರಿಕಾರರಾದ ನಾರಾಯಣ ಗುರು ಮತ್ತು ಪೆರಿಯಾರ್

> 'ಪ್ರತಿವರ್ಷ ಐಐಟಿಗಳಿಗೆ ಸುಮಾರು ೫,೦೦೦ ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ ಎಂದು ಭಾವಿಸುವುದಾದರೆ, ಶೇ. ೨೭ರಷ್ಟು ಅಂದರೆ ಸುಮಾರು ೧,೩೫೦ ಸೀಟ್‌ಗಳನ್ನು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾಗಿಡಬಹುದು. ಪ್ರತಿವರ್ಷ ಐಐಟಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸುವ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ಒಂದು ಲಕ್ಷಕ್ಕೂ ಹೆಚ್ಚಿದೆ. ಹೀಗಿರುವಾಗ ಒಂದು ಲಕ್ಷ ವಿದ್ಯಾರ್ಥಿಗಳಲ್ಲಿ ೧,೩೫೦ ವಿದ್ಯಾರ್ಥಿಗಳು ಸಿಗುವುದಿಲ್ಲ ಎಂದು ವಾದಿಸುವುದರಲ್ಲಿ ಅರ್ಥವಿಲ್ಲ'.

ದಕ್ಷಿಣ ಭಾರತದ ರಾಜ್ಯಗಳಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಆರ್ಥಿಕ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ. "ಮೀಸಲಾತಿಯಿಂದ ಮಾತ್ರ ಇದು ಸಾಧ್ಯವಾಯಿತು ಎಂದರೂ ತಪ್ಪಿಲ್ಲ. ಆರ್ಥಿಕವ್ಯವಸ್ಥೆ ಉತ್ತಮವಾಗಿ ಕೆಲಸ ಮಾಡುವುದಾದರೆ ಅದರಿಂದ ಬರುವ ಉತ್ಪನ್ನಗಳನ್ನು ಮಾರಾಟ ಮಾಡುವುದಾದರೂ ಯಾರಿಗೆ? ದಲಿತರಿಗೆ, ಇತರ ಹಿಂದುಳಿದ ವರ್ಗಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ಅಲ್ಲವೆ? ಕರಿಯರಿಗೆ ಸಮಾನ ಅವಕಾಶ ನೀಡಿದ ನಂತರತಾನೆ ಅಮೆರಿಕಾದ ಆರ್ಥಿಕ ವ್ಯವಸ್ಥೆ ಅದ್ಭುತವಾದ ಬೆಳವಣಿಗೆ ಕಂಡಿದು? ಶೋಷಿತ ವರ್ಗಗಳ ಜತೆ ಅಧಿಕಾರ ಹಂಚಿಕೊಂಡು, ಅಭಿವೃದ್ಧಿಯ ಪಥದಲ್ಲಿ ನಾವೆಲ್ಲರೂ ಒಟ್ಟಿಗೇ ನಡೆಯಬೇಕು," ಎನ್ನುತ್ತಾರೆ ಪ್ರೊ. ಐಲಯ್ಯ.

ಮೀಸಲಾತಿ ವ್ಯವಸ್ಥೆಯ ಕೆಲವು ಅಂಶಗಳ ಬಗ್ಗೆ ಸ್ವಲ್ಪಮಟ್ಟಿಗಿನ ಟೀಕೆ ಸಹಾ ವ್ಯಕ್ತವಾಗಿದೆ. ಬೆಂಗಳೂರು ಮೂಲದ ಐಸೆಕ್ ಸಂಸ್ಥೆಯ ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿ ಅಧ್ಯಯನ ಕೇಂದ್ರದ ಮುಖ್ಯಸ್ಥ ಪ್ರೊ. ಜಿ. ಕೆ. ಕಾರಂತ್ , ಉನ್ನತ ಶಿಕ್ಷಣಕ್ಕೆ ಅಡಿಯಿರಿಸುವ

ದಾರಿಯನ್ನು ಸುಗಮಗೊಳಿಸಿತೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಅಳವಡಿಸುವುದರಲ್ಲಿ ಅರ್ಥವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. 'ರಾಜ್ಯ ಸರ್ಕಾರ ಮಾತೃ ಭಾಷೆಯೇ ಕಲಿಕೆಯ ಮಾಧ್ಯಮವಾಗಬೇಕೆಂಬ ನೀತಿ ಹೊಂದಿರುವುದರಿಂದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯ ಮೇಲೆ ಹಿಡಿತ ಸಾಧಿಸಲಾಗದೆ ಸೀಮಿತವಾಗಿ ಉಳಿದು ಬಿಡುತ್ತಾರೆ. ಹೀಗಾಗಿ ಇಂತಹ ವಿದ್ಯಾರ್ಥಿಗಳು ಪದವಿಗಳನ್ನು ಪಡೆದರೂ ಕೆಲಸ ಪಡೆಯಲಾಗುವುದಿಲ್ಲ.' ಮೀಸಲಾತಿಯ ಲಾಭವನ್ನು ಕೇವಲ ನಗರಗಳಲ್ಲಿರುವ ಎರಡನೇ ಪೀಳಿಗೆಯ ಇತರೆ ಹಿಂದುಳಿದ ವರ್ಗಗಳಜನ ಮಾತ್ರ ಪಡೆಯುತ್ತಿದ್ದಾರೆ ಎನ್ನುವ ಪ್ರೊ. ಕಾರಂತ್, "ಹಣ

೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಮೊದಲಾರ್ಧದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಇತರ ಸುಧಾರಣಾ ಚಳವಳಿಗಳ ಜತೆಯಲ್ಲಿಯೇ ಸಾಮಾಜಿಕ ಸುಧಾರಣಾ ಚಳವಳಿಗಳು ಹಾಗೂ ಮೀಸಲಾತಿ ಹೋರಾಟಗಳು ಈ ಪ್ರಾಂತ್ಯದಲ್ಲಿ, ವಿಶೇಷವಾಗಿ ದಕ್ಷಿಣದ ರಾಜ್ಯಗಳಲ್ಲಿಬೆಳೆದು ಬಂದಿವೆ. ಇದು ಪ್ರಜಾಪ್ರಭುತ್ವವಾದಿ ಆಶಯಗಳ ಹಾಗೂ ಸಾಮಾಜಿಕ ಪೃಥಕ್ಕರಣದ ಘಟ್ಟವಾಗಿತ್ತು. ಸುಧಾರಣಾ ಚಳವಳಿಗಳ ಮೂಲಕ ಸಮುದಾಯಗಳ ನಡುವೆ ಉತ್ತಮ ಸಹಕಾರ ಇತ್ತು. ಬ್ರಾಹ್ಮಣರ ಸುಧಾರಣಾ ಚಳವಳಿಗಳ ನಾಯಕರು ಇತರ ಹಿಂದುಳಿದ ವರ್ಗಗಳ ಚಳವಳಿಗೆ ಬೆಂಬಲ ನೀಡಿದ್ದೇ ಅಲ್ಲದೆ, ಎರಡೂ ಗುಂಪುಗಳು ಕೈಜೋಡಿಸಿ ಮುಸ್ಲಿಮರಲ್ಲಿ ಸುಧಾರಣೆಯ ಹಾದಿ ತುಳಿದವರಿಗೆ ಚೈತನ್ಯ ತುಂಬಿದರು

ಸಂಪಾದಿಸಲು ಜನ ನೂರಾರು ಹೊಸ ಮಾರ್ಗಗಳನ್ನು ಹುಡುಕಿಕೊಂಡಿರುವುದರಿಂದ, ಆರ್ಥಿಕ ಶೋಷಣೆಹಾಗೂ ಸಾಮಾಜಿಕ ಶೋಷಣೆಯ ನಡುವೆ ಸಾಕಷ್ಟು ವೈಪರೀತ್ಯಗಳನ್ನು ಗುರುತಿಸಬಹುದು. ಬಡತನ ರೇಖೆಗಿಂತ ಮೇಲಿರುವವರನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಹೊರಗಿಡಲು ನಮಗೆ ಸಾಧ್ಯವಾಗಿದೆ. ಆದರೆ ಮೀಸಲಾತಿಯ ಅವಶ್ಯಕತೆಯಿಲ್ಲದ ಈ ಸಮುದಾಯಗಳ ಉನ್ನತ ವರ್ಗಗಳನ್ನು ಹೊರಗಿಡುವ ಮಾರ್ಗ ನಮಗಿನ್ನು ಲಭ್ಯವಾಗಿಲ್ಲ.' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಉನ್ನತ ಶಿಕ್ಷಣದಲ್ಲಿ ನೀಡಲು ಯೋಜಿಸಿರುವ ಮೀಸಲಾತಿ ಯಶಸ್ವಿಯಾಗಬೇಕೆಂದರೆ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು ಎನ್ನುತ್ತಾರೆ ಪ್ರೊ. ಗುಪ್ತ. ಲೇಖಕ ಹಾಗೂ ಸಾಮಾಜಿಕ ಹೋರಾಟಗಾರ ಅಚ್ಯುತ್ ಯಾಗ್ನಿಕ್ ಹೇಳುವಂತೆ, ಗುಜರಾತ್‌ನ ಬಹಳಷ್ಟು ಅಲೆಮಾರಿ ಸಮುದಾಯಗಳು, ಮೀಸಲಾತಿ ಪಟ್ಟಿಗೆ ಸೇರದ ಪಂಗಡಗಳು ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರು ಪ್ರಾಥಮಿಕ ಶಿಕ್ಷಣದ ಅವಕಾಶ ಪಡೆಯಲು ಇನ್ನೂ ಸಾಧ್ಯವಾಗಿಲ್ಲ. "ಗುಜರಾತ್‌ನಲ್ಲಿರುವ ಇತರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸುಮಾರು ೨೦ ಮುಸ್ಲಿಮ್ ಸಮುದಾಯಗಳಿವೆ. ಆದರೆ ಈ ಸಮುದಾಯಗಳಿಗೆ ಆಡಳಿತಶಾಹಿಯಿಂದ ಒಂದು ಸರ್ಟಿಫಿಕೇಟ್ ಪಡೆಯುವುದು ಸಹಾ ಕಷ್ಟದ ಕೆಲಸ" ಎನ್ನುತ್ತಾರೆ ಯಾಗ್ನಿಕ್.

ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಪ್ರೊ. ರಾಧಾಕೃಷ್ಣನ್, ನ್ಯಾಯಾಂಗದ ನಿಧಾನಗತಿಯ ಧೋರಣೆ ಹಾಗೂ ಸಾಂವಿಧಾನಿಕ ಅವಕಾಶಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವ ರಾಜಕಾರಣಿಗಳಿಂದಾಗಿ ಮೀಸಲಾತಿಯಂತಹ ವ್ಯವಸ್ಥೆಅಪಾಯವನ್ನು ಎದುರಿಸುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ.

ಈ ಆತಂಕಗಳೇನೇ ಇದ್ದರೂ ಈ ರಾಜ್ಯಗಳು ಒಟ್ಟಾರೆ ಮೀಸಲಾತಿ ವ್ಯವಸ್ಥೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಐತಿಹಾಸಿಕ, ಸಾಮಾಜಿಕ ಹಾಗೂ ರಾಜಕೀಯ ಕಾರಣಗಳಿಂದಾಗಿ ದಕ್ಷಿಣದ ಈ ರಾಜ್ಯಗಳು ಮೀಸಲಾತಿಯನ್ನು ಬೆಂಬಲಿಸುತ್ತಿರುವುದಕ್ಕೆ ಹಾಗೂ ಉತ್ತರದ ಕೆಲವು ರಾಜ್ಯಗಳು ಕಟುವಾಗಿ ವಿರೋಧಿಸುತ್ತಿವೆ ಎನ್ನುತ್ತಾರೆ ಭಾಸ್ಕರ್.

೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಮೊದಲಾರ್ಧದಲ್ಲಿ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಇತರ ಸುಧಾರಣಾ ಚಳವಳಿಗಳ ಜತೆಯಲ್ಲಿಯೇ ಸಾಮಾಜಿಕ ಸುಧಾರಣಾ ಚಳವಳಿಗಳು ಹಾಗೂ ಮೀಸಲಾತಿ ಹೋರಾಟಗಳು ಈ ಪ್ರಾಂತ್ಯದಲ್ಲಿ, ವಿಶೇಷವಾಗಿ ದಕ್ಷಿಣದ ರಾಜ್ಯಗಳಲ್ಲಿಬೆಳೆದು ಬಂದಿವೆ. ಇದು ಪ್ರಜಾಪ್ರಭುತ್ವವಾದಿ ಆಶಯಗಳ ಹಾಗೂ ಸಾಮಾಜಿಕ ಪೃಥಕ್ಕರಣದ ಘಟ್ಟವಾಗಿತ್ತು. ಸುಧಾರಣಾ ಚಳವಳಿಗಳ ಮೂಲಕ ಸಮುದಾಯಗಳ ನಡುವೆ ಉತ್ತಮ ಸಹಕಾರ ಇತ್ತು. ಬ್ರಾಹ್ಮಣರ ಸುಧಾರಣಾ ಚಳವಳಿಗಳ ನಾಯಕರು ಇತರ ಹಿಂದುಳಿದ ವರ್ಗಗಳ ಚಳವಳಿಗೆ ಬೆಂಬಲ ನೀಡಿದ್ದೇ ಅಲ್ಲದೆ, ಎರಡೂ ಗುಂಪುಗಳು ಕೈಜೋಡಿಸಿ ಮುಸ್ಲಿಮರಲ್ಲಿ ಸುಧಾರಣೆಯ ಹಾದಿ ತುಳಿದವರಿಗೆ ಚೈತನ್ಯ ತುಂಬಿದರು," ಎನ್ನುತ್ತಾರೆ ಭಾಸ್ಕರ್. ಜಾತಿ ನಿರ್ಮೂಲನೆ ಹಾಗೂ ಶೋಷಣೆಯ ವಿರುದ್ಧ ನಡೆದ ಚಳವಳಿಗಳು ಇತರ ಸುಧಾರಣಾ ಚಳವಳಿಗಳ ಜತೆ ಬೆಸೆದುಕೊಳ್ಳದ ಪ್ರದೇಶಗಳಲ್ಲಿ ದುರದೃಷ್ಟವಶಾತ್ ಈಗ ಅಂತಹ ವಾತಾವರಣ ಉಳಿದಿಲ್ಲ ಎಂದು ದುಃಖ ವ್ಯಕ್ತಪಡಿಸಿದ ಭಾಸ್ಕರ್, ವ್ಯಾಪಕವಾದ ನಿರುದ್ಯೋಗ ಸಮಸ್ಯೆ ತಲೆ ಎತ್ತಿರುವುದರಿಂದ ಮೀಸಲಾತಿ ವಿಚಾರವನ್ನು ವಸ್ತುನಿಷ್ಠವಾಗಿ ಚರ್ಚೆ ಮಾಡುವ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿ ಸಹಾ ನಮ್ಮ ನಡುವೆ ಇಲ್ಲಎನ್ನುತ್ತಾರೆ. "ಉದ್ಯೋಗಕ್ಕಾಗಿ ತೀವ್ರ ಸ್ಪರ್ಧೆ ಇರುವುದರಿಂದ, ಮೀಸಲಾತಿಯು ತಮ್ಮ ಅವಕಾಶಗಳನ್ನು ನುಂಗಿಹಾಕುತ್ತದೆಎಂದೇ ಭಾವಿಸಿರುವ ಉನ್ನತ ವರ್ಗಗಳು, ಐತಿಹಾಸಿಕವಾಗಿ ನಡೆದಿರುವ ಸಾಮಾಜಿಕ ದಬ್ಬಾಳಿಕೆ ಹಾಗೂ ಶೋಷಣೆಯಿಂದ ಕೆಳಜಾತಿಗಳಿಗಾಗಿರುವ ನೋವನ್ನು, ನಕಾರಾತ್ಮಕ ಪರಿಣಾಮವನ್ನು ಸರಿಪಡಿಸುವುದರ ಬಗ್ಗೆ ಯೋಚಿಸುವುದೂ ಇಲ್ಲ." ಎಂದು ಭಾಸ್ಕರ್ ಅಭಿಪ್ರಾಯಪಡುತ್ತಾರೆ. (ಸೌಜನ್ಯ: ಫ್ರಂಟ್‌ಲೈನ್) □

ಸಂವಾದ




ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅವರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮೀಸಲಾತಿ ವಿರೋಧಿಸಿ ದೇಶಾದ್ಯಂತ ವ್ಯಾಪಕ ಚರ್ಚೆ-ಹೋರಾಟಗಳು ನಡೆಯುತ್ತಿವೆ. ಆದರೆ ಈ ಚರ್ಚೆ-ಹೋರಾಟಗಳಲ್ಲಿ ಯಾವುದೇ ಸಾಮಾಜಿಕ ಕಾಳಜಿಯಾಗಲಿ, ವಸ್ತುಸ್ಥಿತಿಯಾಗಲಿ ಕಂಡು ಬರುತ್ತಿಲ್ಲ. ಬದಲಾಗಿ ಕೇವಲ ಆವೇಶ ಮತ್ತು ತಪ್ಪು ತಿಳವಳಿಕೆಗಳು ಎಲ್ಲರನ್ನು ದಾರಿ ತಪ್ಪಿಸುತ್ತಿವೆ. ತಳ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಯಲ್ಲಿ ಸೇರದಂತೆ ತಡೆಯುವ ವ್ಯವಸ್ಥಿತ ಪಿತೂರಿ ಈ ಎಲ್ಲಾ ಪ್ರಯತ್ನಗಳ ಹಿಂದೆ ಕೆಲಸ ಮಾಡುತ್ತಿರುವುದು ಸ್ಪಷ್ಟವಾಗಿಯೇ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಮೀಸಲಾತಿ ಕುರಿತು ಗಂಭೀರ ಚರ್ಚೆಯನ್ನು 'ಸಂವಾದ' ಕೈಗೊಳ್ಳುತ್ತಿದೆ. ನಾಡಿನ ಕೆಲವು ಪ್ರಮುಖ ಚಿಂತಕರಿಗೆ ಈ ಕುರಿತಂತೆ ಪ್ರಶ್ನಾವಳಿಯನ್ನು ಕಳುಹಿಸಿಕೊಡಲಾಗಿತ್ತು. ಉತ್ತರ ಬಂದ ಕೆಲವನ್ನು ಇಲ್ಲಿ ಪ್ರಕಟಿಸಲಾಗಿದೆ. ಉಳಿದವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು. – ಸಂಪಾದಕ

ಪ್ರಶ್ನೆಗಳು

೧. ಸಾಮಾಜಿಕ ಅಸಮಾನತೆಗೆ ಬಲಿಯಾಗಿರುವ ತಳಸಮುದಾಯಗಳ ಅಭಿವೃದ್ಧಿಗೆ ಮೀಸಲಾತಿಗಿಂತ ಬೇರೆ ಉತ್ತಮ ಮಾರ್ಗಗಳಿವೆಯೇ?

೨. ಮೀಸಲಾತಿಯಿಂದ 'ಪ್ರತಿಭೆ' ಹಾಳಾಗುತ್ತದೆಯೇ? ಅಥವಾ ಪ್ರತಿಭಾನ್ವೇಷಣೆಗೆ ದಾರಿಯಾಗುತ್ತದೆಯೇ? ಜಾತಿಗೂ ಪ್ರತಿಭೆಗೂ ಸಂಬಂಧವಿದೆಯೇ?

೩. ಮೀಸಲಾತಿಗೆ, ಜಾತಿಗೆ ಬದಲು ಆರ್ಥಿಕ ಸ್ಥಿತಿ ಮಾನದಂಡವಾಗಬೇಕೆಂಬ ವಾದ ಇದೆ. ಇದರ ಬಗ್ಗೆ ನಿಮ್ಮ ನಿಲುವೇನು? ಹೀಗೆ ಮಾಡಿದರೆ 'ಪ್ರತಿಭೆ'ಗೆ ಅನ್ಯಾಯವಾಗುವುದಿಲ್ಲವೆ?

೪. ಸಾರ್ವಜನಿಕ ಕ್ಷೇತ್ರಗಳೆಲ್ಲಾ ಈಗ ಖಾಸಗಿಯಾಗುತ್ತಿವೆ. ಆದರೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನಿರಾಕರಿಸಲಾಗುತ್ತಿದೆ. ಇದರ ಬಗೆಗೆ ನಿಮ್ಮ ನಿಲುವೇನು?

೫. ಉನ್ನತ ಶಿಕ್ಷಣ ಕ್ಷೇತ್ರದಲ್ಲಿನ 'ಪಾವತಿ ಸೀಟು'ಗಳ (Payment or Capitation seats) ಬಗ್ಗೆ ನಿಮ್ಮ ಅಭಿಪ್ರಾಯವೇನು? 'ಪಾವತಿ ಸೀಟು'ಗಳಿಂದ ಪ್ರತಿಭೆಗೆ ಹಾನಿಯಾಗುವುದಿಲ್ಲವೆ?

ಮನುಷ್ಯ ಜಾತಿಯೆಲ್ಲಾ ಪ್ರತಿಭಾನ್ವಿತವೇ!

ಡಾ॥ ಎಲ್. ಬಸವರಾಜು

ಖ್ಯಾತ ವಿದ್ವಾಂಸರು, ಚಿಂತಕರು



ಮೀಸಲಾತಿ ಚರ್ಚೆ

೧. ಮೀಸಲಾತಿಗೆ ಬದಲಾಗಿ ಇರುವ ಉತ್ತಮ ಮಾರ್ಗವೆಂದರೆ ಈ ಮುಂದಿನದೊಂದೆ:

ಆ ತಳಸಮುದಾಯದ ಮಕ್ಕಳಿಗೆ ಐದರ ವಯಸ್ಸಿನಿಂದಲೇ ಅತ್ಯುತ್ತಮ ವಸತಿ ಶಿಕ್ಷಣ ವ್ಯವಸ್ಥೆ, ಹದಿನೇಳನೇ ವಯಸ್ಸಿನವರೆಗೆ ಉತ್ತಮ ಸಜ್ಜಿನಿಂದ-ಅತ್ಯುತ್ತಮ ಶಿಕ್ಷಕರಿಂದ ನಡೆಯುವಂತಾಗಲಿ

ದೇವರಿಗೆ ತೆಗೆದಿಡುವ ಮೀಸಲು ಬೇರೆಯಲ್ಲ, ಈ ತಳವರ್ಗದವರಿಗೆ ತೆಗೆದಿಡುವ ಮೀಸಲು ಬೇರೆಯಲ್ಲ. ಇದು ದುರ್ಬಳಕೆಯಾಗಬಾರದು.

೨. ಮೀಸಲಾತಿಯಿಂದ ಪ್ರತಿಭೆ ಹಾಳಾಗುವುದೆಂದರೆ-ತಳವರ್ಗದ ಬಹಸಂಖ್ಯಾತಾರೆಲ್ಲಾ ಬುದ್ಧಿವಂತರಾದರೆ ತನ್ನನ್ನು ಸೀಯುವವರಿರುವುದಿಲ್ಲವೆಂದರ್ಥವೇ ಹೊರತು-ಅನ್ಯ ಜಾತಿಯವರಲ್ಲಿ ಯಾರೂ ಬುದ್ಧಿವಂತರೇ ಇಲ್ಲವೆಂದರ್ಥವಲ್ಲ, ಬೀಜ ನಟ್ಟರೆ ಮೊಳೆಯುತ್ತದೆ. ಬೇಟೆಯಾಡುತ್ತ ಕಾಲಕಳೆದ ವಾಲ್ಮೀಕಿ ನಾರದನ ಉಪದೇಶದಿಂದ ವಿಚಾರವಂತನಾಗಿ ಮಹರ್ಷಿಯಾಗುತ್ತಾನೆ, ಮಹಾಕವಿ ಪುರಾಣ ಕವಿಯಾಗುತ್ತಾನೆ. ಮಾದರಚೆನ್ನಯ್ಯನಿಗಿಂತ ಮಹಾತ್ಮನಿದ್ದಾನೆಯೇ? ಬಾಬಾ ಸಾಹೇಬ ಅಂಬೇಡ್ಕರರಿಗಿಂತ ಯುಗಪುರಷನಿದ್ದಾನೆಯೇ?

ಮನುಷ್ಯ ಜಾತಿಯೆಲ್ಲಾ ಪ್ರತಿಭಾನ್ವಿತವೇ! ಯಾವೊಂದು ಜಾತಿಗೆ ಮಾತ್ರವೇ ಅದು ಮೀಸಲಾದುದಲ್ಲ.

೩. ಈ ದೇಶದ ಊರೂರಿನಲ್ಲಿ ಶೂದ್ರವರ್ಗದ ಹಲವಾರು ಶ್ರೇಣೀಕೃತ ಜಾತಿಗಳೂ, ಊರಿಂದ ಹೊರಗೆ ಪರಿಶಿಷ್ಟಜಾತಿಗಳೂ, ಕಾಡಿನಲ್ಲಿ ಗುಡ್ಡಗಾಡು ಜನರೂ-ಎಲ್ಲರೂ ಅನಾಮತ್ತಾಗಿ ಅನಕ್ಷರಸ್ತರು ಶ್ರಮಜೀವಿಗಳು ಬಡವರು ತಿರಸ್ಕೃತರು ಅವಮಾನಿತರು! ಇವರೆಲ್ಲಾ ಅವರವರ ಜೀವನೋಪಾಯದ ಆಧಾರದ ಮೇಲೆಯೇ ಹಲವಾರು ಜಾತಿಗಳಾಗಿ ವಿಂಗಡಗೊಂಡಿದ್ದಾರೆ. ಈ ಜಾತಿಗಳನ್ನೆಲ್ಲಾ ಜನಗಣತಿ ಮಾಡಿ ಗುರುತಿಸಿಕೊಂಡು ಆಯಾ ಜಾತಿಯ ಜನಸಂಖ್ಯೆಯ ಆಧಾರದ ಮೇಲೆಯೇ ಮೀಸಲಾತಿಯ ಪ್ರಮಾಣವನ್ನು ನಿರ್ಧರಿಸಬೇಕು. ಇದರಲ್ಲಿ ನ್ಯಾಯ ವಿತರಣೆ ಇದೆಯೇ ಹೊರತು ಸಿಕ್ಕಿದವರಿಗೆಲ್ಲಾ ಸೂರೆಯೆಂಬುದೇನೂ ಇಲ್ಲ. ಮತ್ತೆ ಮೇಲ್ವರ್ಗದವರಲ್ಲಿಯೇ ಯಾರಾದರೂ "ದುರದೃಷ್ಟ ಕಾರಣಗಳಿಂದಾಗಿ ನಿರ್ಗತಿಕರಾಗಿದ್ದರೆ-ಅಂಥವರಿಗೂ ಒಂದಿಷ್ಟಂಶದ ಮೀಸಲಾತಿಯನ್ನು ಕಲ್ಪಿಸುವುದರಲ್ಲಿ ಅನೌಚಿತ್ಯವೇನು ಇಲ್ಲ.

ನಮ್ಮ ಆದರ್ಶ ಎಲ್ಲರೂ ಸುಖವಾಗಿರಬೇಕೆಂದು ಹೊರತು ತೋಳ ಮತ್ತು ಮೇಕೆ ಕಥೆಯನುಸಾರ ಯಾರು ಯಾರ ಮೇಲಾಗಲಿ ಸೇಡು ತೀರಿಸಿಕೊಳ್ಳುವುದಲ್ಲವೇ ಅಲ್ಲ.

೪. ಇದುವರೆಗೆ ಪ್ರಸ್ತಾಪಿಸಿದ ಪರಿಶಿಷ್ಟಜಾತಿಯವರು, ಪರಿಶಿಷ್ಟವರ್ಗದವರು, ಇತರ ಹಿಂದುಳಿದವರು ಮತ್ತು ಬಡಬಗ್ಗರೆ ಈ ಭಾರತದ ಮೂಲನಿವಾಸಿಗಳೂ ಅದರ ಒಡೆಯರೂ ಆಗಿರುವರು. ಅವರಿಗಿಂತ ಖಾಸಾ ಮತ್ತು ಖಾಸಗಿಯೆಂಬವರು ಯಾರು ಇಲ್ಲ. ಈಚೀಚೆಗೆ ಯಾವುದಕ್ಕೂ ಹೇಸದೆ ದುಡ್ಡು ಮಾಡಿಕೊಂಡು ಉದ್ಯಮಗಳನ್ನು ಹೂಡಿಕೊಂಡು ಯಾರನ್ನು ಅವರು ಚಾಕರಿಗೆ ನೇಮಿಸಿಕೊಳ್ಳಬೇಕೆಂದಿರವರೋ ಅವರೊಡನೆ ಈ ಉದ್ಯಮಿಗಳು ರಾಜನಿಗೆ ಪಾಳೇಗಾರರು ಕಪ್ಪಕಾಣುಕೆ ಕೊಟ್ಟಂತೆ ಗೌರವದಿಂದಲೇ ವ್ಯವಹರಿಸಬೇಕು-ಇಲ್ಲದಿದ್ದರೆ!

೫. ಎಲ್ಲ ಕ್ಷೇತ್ರದಲ್ಲಿ ಗುಣಮಟ್ಟವನ್ನು ಹೆಚ್ಚಿಸಿಕೊಂಡು ಮಿಕ್ಕ ಮುಂದುವರಿದ ರಾಷ್ಟ್ರಗಳಿಗೆ ಸರಿಮಿಗಿಲಾಗಿ ಸಮರ್ಥರಾಗಬೇಕು ಸಂಪದ್ಯುಕ್ತರಾಗಬೇಕು ಎಂದಿರುವ ನಾವು ಪ್ರತಿಭೆ ಮತ್ತು ಸಾಮಾಜಿಕ ನ್ಯಾಯವನ್ನು ಮೀರಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ-ಲೈಂಗಿಕ ದಂಧೆಗೆ ಸಮಕಟ್ಟುವ ಪಾವತಿ ಸೀಟುಗಳ ವ್ಯವಹಾರವನ್ನು ನಿಷೇಧಿಸಬೇಕು.

ಸಂಸಾರ ನಡೆಸಲು ವರಮಾನ ಸಾಲದಾದರೆ ಸೂಳೆಗಾರಿಕೆ ನಡೆಸಬಹುದೇನು?

ಪ್ರತಿಭೆಯ ಪರಿಧಿಯನ್ನು ವಿಸ್ತರಿಸಿ, ಮೀಸಲು ಅನುಪಾತವನ್ನು ಸರಿದೂಗಿಸುವಷ್ಟು ಹೆಚ್ಚಿಸಿ ಆ ಪಾವತಿ ಸೀಟುಗಳ ಹೀನಾಯದಿಂದ ಪಾರಾಗಬೇಕು.

ವಿದ್ಯಾ ಸಂಸ್ಥೆಗಳನ್ನು ನಡೆಸುವವರು ತಮಗೆ ಬೇಕಾಗಿರುವ ಹೆಚ್ಚುವರಿ ಆರ್ಥಿಕ ಪರಿಪೂರ್ಣತೆಗಾಗಿ ಪ್ರತಿಭೆಯನ್ನು ಧಿಕ್ಕರಿಸದ ಮತ್ತು ಮಾನಮರ್ಯಾದೆಯ ಬೇರೆ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ. □

ಹತ್ತು ಹೆಜ್ಜೆ ಹಿಂದೆ, ಒಂದು ಹೆಜ್ಜೆ ಮುಂದೆ

ಜಿ. ರಾಜಶೇಖರ್
ಖ್ಯಾತ ಚಿಂತಕರು

ಮೀಸಲಾತಿ ಚರ್ಚೆ

೧. ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ, ಸಮಾಜದಲ್ಲಿ ಸಮಾನತೆಯನ್ನು ಸಾಧಿಸುವ ಟ್ಟಿನಲ್ಲಿ ಸರಕಾರ ಕೈಗೊಳ್ಳಬಹುದಾದ ಒಂದು ಕಾರ್ಯ ಮ. ಆದರೆ ಕೇವಲ ಅಷ್ಟರಿಂದಲೇ ತಳಸಮುದಾಯ ಳು ಅಭಿವೃದ್ಧಿ ಹೊಂದುವುದು ಸುತಾರಾಂ ಸಾಧ್ಯವಿಲ್ಲ. ಈಗಾಗಲೇ ಶಿಕ್ಷಣ ಪಡೆಯುವ ವಯಸ್ಸು ಮೀರಿರುವ ಕೆಳ ಜಾತಿಯವರನ್ನು ಏನು ಮಾಡುತ್ತೀರಿ? ಅದೂ ಅಲ್ಲದೆ ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣವನ್ನು ಕೈಬಿಡುವವ ಲ್ಲಿಯೂ ಕೆಳಜಾತಿಯವರದ್ದೇ ಅತ್ಯಧಿಕ ಸಂಖ್ಯೆ; ಇವ ಲ್ಲಿಯೂ ಹುಡುಗಿಯರದ್ದು ಇನ್ನು ಅತ್ಯಧಿಕ ಪ್ರಮಾಣ. ಈ ಜನ ವರ್ಗಗಳನ್ನು ಯಾವ ಪ್ರಮಾಣದ ಮೀಸಲಾತಿ ಯೂ ಒಳಗೊಳ್ಳಲಾರದು.

ತಳಸಮುದಾಯಗಳ ಸಮಗ್ರ ಅಭಿವೃದ್ಧಿಗೆ ಭೂ ಸುಧಾರಣೆ, ಕನಿಷ್ಟ ಉದ್ಯೋಗದ ಭರವಸೆ, ಜೊತೆಗೆ ಆರೋಗ್ಯ ಅನ್ನ ವಸತಿಗಳ ಕನಿಷ್ಟ ಮಟ್ಟದ್ದಾದರೂ ಖಾತರಿ ನೀಡುವ ಯೋಜನೆ ಮತ್ತು ಎಲ್ಲರಂಗಗಳಲ್ಲೂ ಮಹಿಳೆಯರಿಗೆ ವಿಶೇಷ ಮೀಸಲಾತಿ ಈ ಕಾರ್ಯಕ್ರಮಗಳು ಇಗಿಂದೀಗ ಜಾರಿಗೆ ಬರಬೇಕಾಗಿದೆ. ಕೇರಳ ಮತ್ತು ಪ. ಬಂಗಾಳಗಳನ್ನು ಬಿಟ್ಟರೆ, ದೇಶದ ಇತರ ಎಲ್ಲ ರಾಜ್ಯಗಳಲ್ಲೂ ಭೂಸುಧಾರಣೆ ಈಗ ಮರವೆಗೆ ಸಂದಿರುವ ಸಂಗತಿಯಾಗಿದೆ. ಕೇಂದ್ರ ಸರಕಾರ ಇತ್ತೀಚೆಗೆ ಜಾರಿಗೊಳಿಸಿರುವ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ದೇಶದ ಕೆಲವೇ ಜಿಲ್ಲೆಗಳಿಗೆ ಸೀಮಿತವಾಗಿದ್ದು ಈಗಿನ್ನು ಅನುಷ್ಠಾನದ ಹಂತದಲ್ಲಿದೆ. ವೈದ್ಯಕೀಯ ಶಿಕ್ಷಣ ಮತ್ತು ಶುಶ್ರೂಷೆಗಳ ಮಿತಿ ಮೀರಿದ ಖಾಸಗೀಕರಣದಿಂದಾಗಿ ಆರೋಗ್ಯವೆನ್ನುವುದು ಈಗ ನಮ್ಮ ಬಡವರ ಕೈಗೆ ಎಟಕದಿರುವ ಭಾಗ್ಯವಾಗಿದೆ. ಈ ಸನ್ನಿವೇಶದಲ್ಲಿ ಮೀಸಲಾತಿ ಸಮಾನತೆಯ ಆರಂಭದಿಂದ ಹತ್ತು ಹೆಜ್ಜೆ ಹಿಂದೆ ಸರಿದು, ಒಂದು ಹೆಜ್ಜೆ ಮುಂದೆ ಇಟ್ಟಂತಾಗಿದೆ.

೨. ಮೀಸಲಾತಿ ವಿರೋಧಿಗಳು ಉದ್ದೇಶ ಪೂರ್ವ ಕವಾಗಿ ಕೌಶಲವನ್ನೇ ಪ್ರತಿಭೆ ಎಂದು ವಾದಿಸುತ್ತಿದ್ದಾರೆ. ಕೌಶಲ ಕಲಿಕೆಯಿಂದ ಬರುವಂತಹದ್ದು ಮತ್ತು ಸಾಮು ದಾಯಿಕ ಸ್ವರೂಪದ್ದು. ಪ್ರತಿಭೆಯಾದರೋ ವ್ಯಕ್ತಿಗತ. ಐನ್‌ಸ್ಟೀನ್ ಒಬ್ಬ ಪ್ರತಿಭಾವಂತ ವಿಜ್ಞಾನಿ. ಹಾಗೆಂದು ವಿಜ್ಞಾನ ಕಲಿತ ಎಲ್ಲರೂ ಐನ್‌ಸ್ಟೀನ್ ಆಗಲು ಸಾಧ್ಯವಿಲ್ಲ. ಮೀಸಲಾತಿಯ ಉದ್ದೇಶ ವಿಜ್ಞಾನ ತಂತ್ರಜ್ಞಾನಗಳ ಶಿಕ್ಷಣ ದಲ್ಲಿ ಮತ್ತು ತತ್ಸಂಬಂಧಿ ಉದ್ಯೋಗಗಳಲ್ಲಿ ಕೆಳಜಾತಿಯವ ರಿಗೆ ಅವಕಾಶಗಳನ್ನು ಕಲ್ಪಿಸುವುದೇ ಹೊರತು ಅವರನ್ನು ಐನ್‌ಸ್ಟೀನ್‌ಗಳನ್ನಾಗಿ ಪರಿವರ್ತಿಸುವುದಲ್ಲ. ಹಾಲಿ ನಮ್ಮ ಇಂಜಿನಿಯರುಗಳು ಮತ್ತು ವೈದ್ಯರು ವೃತ್ತಿಕೌಶಲ ಉಳ್ಳವರಿ ರಬಹುದು; ಆದರೆ ಅವರನ್ನು ಪ್ರತಿಭಾವಂತರೆಂದು ಕರೆಯಲು ಸಾಧ್ಯವಿಲ್ಲ. ಸೂಕ್ತ ಕಲಿಕೆ ತರಬೇತಿಗಳಿದ್ದರೆ ಈ ವೃತ್ತಿ ಕೌಶಲವನ್ನು ಯಾರಾದರೂ ಮೈಗೂಡಿಸಿಕೊಳ್ಳ ಬಹುದು. ಹಾಗೆ ನೋಡಿದರೆ ನಮ್ಮ ವೃತ್ತಿ ನಿರತ ಕೆಳಜಾತಿಗಳಲ್ಲಿ ಇರುವಷ್ಟು ಕೌಶಲ, ನಮ್ಮ ಮೇಲು ಜಾತಿಗಳವರಲ್ಲಿ ಯಾವತ್ತೂ ಇರಲಿಲ್ಲ. ಮೀಸಲಾತಿಯಿಂದ ಈ ಕೌಶಲ್ಯಗಳು ಇನ್ನಷ್ಟು ಉಜ್ವಲವಾಗಲು ಸಾಧ್ಯವಿದೆ. ದಕ್ಷಿಣ ಭಾರತದಲ್ಲಿ ಮೀಸಲಾತಿಗೆ ನೂರು ವರ್ಷಗಳ ಇತಿಹಾಸವಿದೆ; ಇಲ್ಲಿ ನೀವು ಹೇಳುವ 'ಪ್ರತಿಭೆ'ಗೆ ಎಲ್ಲಿ ಕುತ್ತು ಬಂದಿದೆ.

ಮೀಸಲಾತಿ ವಿರೋಧಿಗಳು ಉದ್ದೇಶ ಪೂರ್ವ ಕವಾಗಿ ಕೌಶಲವನ್ನೇ ಪ್ರತಿಭೆ ಎಂದು ವಾದಿಸುತ್ತಿದ್ದಾರೆ. ಕೌಶಲ ಕಲಿಕೆಯಿಂದ ಬರುವಂತಹದ್ದು ಮತ್ತು ಸಾಮುದಾಯಿಕ ಸ್ವರೂಪದ್ದು. ಪ್ರತಿಭೆ ಯಾದರೋ ವ್ಯಕ್ತಿಗತ. ಐನ್‌ಸ್ಟೀನ್ ಒಬ್ಬ ಪ್ರತಿಭಾವಂತ ವಿಜ್ಞಾನಿ. ಹಾಗೆಂದು ವಿಜ್ಞಾನ ಕಲಿತ ಎಲ್ಲರೂ ಐನ್‌ಸ್ಟೀನ್ ಆಗಲು ಸಾಧ್ಯವಿಲ್ಲ. ಮೀಸಲಾತಿಯ ಉದ್ದೇಶ ವಿಜ್ಞಾನ ತಂತ್ರಜ್ಞಾನಗಳ ಶಿಕ್ಷಣ ದಲ್ಲಿ ಮತ್ತು ತತ್ಸಂಬಂಧಿ ಉದ್ಯೋಗಗಳಲ್ಲಿ ಕೆಳಜಾತಿಯವ ರಿಗೆ ಅವಕಾಶಗಳನ್ನು ಕಲ್ಪಿಸುವುದೇ ಹೊರತು ಅವರನ್ನು ಐನ್‌ಸ್ಟೀನ್‌ಗಳನ್ನಾಗಿ ಪರಿವರ್ತಿ ಸುವುದಲ್ಲ. ಹಾಲಿ ನಮ್ಮ ಇಂಜಿನಿಯರುಗಳು ಮತ್ತು ವೈದ್ಯರು ವೃತ್ತಿಕೌಶಲ ಉಳ್ಳವರಿ ರಬಹುದು; ಆದರೆ ಅವರನ್ನು ಪ್ರತಿಭಾವಂತ ರೆಂದು ಕರೆಯಲು ಸಾಧ್ಯವಿಲ್ಲ. ಸೂಕ್ತ ಕಲಿಕೆ ತರಬೇತಿಗಳಿದ್ದರೆ ಈ ವೃತ್ತಿ ಕೌಶಲವನ್ನು ಯಾರಾದರೂ ಮೈಗೂಡಿಸಿಕೊಳ್ಳಬಹುದು.

೩. ಈಗಾಗಲೇ ಉಳ್ಳವರಿಗೆ ಈ ಸಮಾಜದ ಎಲ್ಲ ಅವಕಾಶ, ಸೌಕರ್ಯ ಮತ್ತು ಉಪಭೋಗಗಳಲ್ಲೂ ಮೀಸಲಾತಿ ಇದೆ. ಅವಶ್ಯವಿದ್ದರೆ ತಾವು ಕಡುಬಡವರಿಗಿಂತ ಬಡವರು ಎಂದು ಸೋಗು ಹಾಕುವ ವಿದ್ಯೆಯನ್ನು ಇವರಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಆರ್ಥಿಕ ಮಾನದಂಡವೇ ಮೀಸಲಾತಿಗೆ ಆಧಾರವೆಂದಾದರೆ ನಾಳೆಯಿಂದಲೇ ಇವರು ತಮ್ಮ ವರಮಾನದ ಬಗ್ಗೆ ತಾಸೀಲ್ದಾರರ ಸರ್ಟಿಫಿಕೇಟು ಮಾಡಿಸಿ ಚಿಂದಿ ಬಟ್ಟೆತೊಟ್ಟು ಸಂದರ್ಶನಗಳಿಗೆ ಹಾಜರಾಗುತ್ತಾರೆ. ನಮ್ಮ ಸರಕಾರಿ ಕಚೇರಿಗಳು, ಬ್ಯಾಂಕು ಹಾಗೂ ಇನ್ಶೂರೆನ್ಸ್ ಕಂಪನಿಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಅಧಿಕಾರ ರೂಢರಾಗಿರುವ ಮೇಲು ಜಾತಿಯ ಮುಖ್ಯಸ್ಥರುಗಳಲ್ಲಿ ಎಂತಹ ಜಾತೀಯತೆ ಮನೆ ಮಾಡಿದೆ ಎಂದರೆ, ಅವರು ಕೆಳಜಾತಿಯವರಿಗೆ ಒಂದು ಸ್ಥಾನವನ್ನು ಬಿಟ್ಟುಕೊಡುವುದಿಲ್ಲ.

೪. ಖಾಸಗಿ ಕ್ಷೇತ್ರದಲ್ಲಿ ಕೂಡ ಮೀಸಲಾತಿಯನ್ನು ಅವಶ್ಯ ಕಡ್ಡಾಯಗೊಳಿಸಬೇಕು. ಖಾಸಗಿ ಉದ್ಯಮಗಳೇನೂ ಪಾಳೆಯ ಪಟ್ಟುಗಳಲ್ಲ. ಅವು ಈ ದೇಶದ ಸಂವಿಧಾನ ಮತ್ತು ಸಾರ್ವಭೌಮ ಪ್ರಭುತ್ವದ ಅಡಿಯಲ್ಲಿಯೇ ತಮ್ಮ ವ್ಯವಹಾರ ನಡೆಸಿಕೊಂಡು ಹೋಗಬೇಕು. ಅದೂ ಅಲ್ಲದೆ ಸಾಲ, ನೆರವು, ರಿಯಾಯಿತಿ ಮತ್ತು ತಮ್ಮ ಮಾರುಕಟ್ಟೆಯ ಸಂರಕ್ಷಣೆಗಾಗಿ ಈ ಖಾಸಗಿ ಉದ್ಯಮಗಳು ಸರಕಾರವನ್ನೇ ಅವಲಂಬಿಸಿವೆ. ಯಾವ ದೇಶದಲ್ಲೂ ಖಾಸಗಿ ಉದ್ಯಮವೆನ್ನುವುದು ಸಂಪೂರ್ಣ ಖಾಸಗಿಯಾಗಿರುವುದಿಲ್ಲ. ತಮ್ಮ ಲಾಭ, ಅನುಕೂಲಗಳಿಗಾಗಿ ಅವು ಸರಕಾರದ ಮಧ್ಯ ಪ್ರವೇಶವನ್ನು ಸದಾ ಬಯಸುವಂತಹವು. ನಮ್ಮ ದೇಶದಲ್ಲಂತೂ ಹೆಚ್ಚಿನ ಖಾಸಗಿ ಉದ್ಯಮಗಳು ಸರಕಾರಿ ಕೃಪಾ ಪೋಷಿತವೇ. ಹಾಗಾಗಿ ಸರಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ಕಡ್ಡಾಯಗೊಳಿಸುವುದು ಕಷ್ಟವಲ್ಲ.

೫. ಉನ್ನತ ಶಿಕ್ಷಣದಲ್ಲಿ ಪಾವತಿ ಸೀಟುಗಳು ಮಾತ್ರವಲ್ಲ, ಶಿಕ್ಷಣ ಕ್ಷೇತ್ರದ ಎಲ್ಲ ಹಂತಗಳಲ್ಲೂ ಇರುವ ತೀವ್ರ ತಾರತಮ್ಯವನ್ನು ಸಹ ನಾನು ವಿರೋಧಿಸುತ್ತೇನೆ. ಉಳ್ಳವರಿಗೊಂದು, ಬಡವರಿಗೊಂದು ಎಂಬ ತಾರತಮ್ಯ ನಮ್ಮಲ್ಲಿ ನರ್ಸರಿ ಶಾಲೆಗಳಿಂದಲೇ ಪ್ರಾರಂಭವಾಗುತ್ತದೆ. ಇದು ಕೊನೆಗೊಳ್ಳಲೇಬೇಕು. ಈಗ ಅತ್ಯಂತ ಪ್ರತಿಷ್ಠಿತವಾಗಿ ಬಿಟ್ಟಿರುವ ತಾಂತ್ರಿಕ ಶಿಕ್ಷಣವನ್ನು, ಆ ಕ್ಷೇತ್ರದಲ್ಲಿ ಸೀಟುಗಳನ್ನು ಹೆಚ್ಚಿಸುವುದು ಮತ್ತು ಮೀಸಲಾತಿಯ ಮುಖಾಂತರ ಹೆಚ್ಚು ಪ್ರಜಾಸತ್ತಾತ್ಮಕಗೊಳಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಿಕ್ಷಣದ ಗುಣಮಟ್ಟದಷ್ಟೇ ಅದು ಎಷ್ಟು ಜನರಿಗೆ ದೊರಕುತ್ತದೆ ಎಂಬ ಸಂಖ್ಯೆಯೂ ಮುಖ್ಯ. ಪಾವತಿ ಸೀಟುಗಳಿಂದ ಪ್ರತಿಭೆಗೆ ಹಾನಿಯಾಗುತ್ತದೋ ಬಿಡುತ್ತದೋ ಎಂಬ ಪ್ರಶ್ನೆ ಒತ್ತಟ್ಟಿಗಿರಲಿ. ಈ ಸೀಟುಗಳನ್ನು ಪಡೆದು ಪದವೀಧರರಾದ ಡಾಕ್ಟರುಗಳು, ಇಂಜಿನಿಯರುಗಳು ಈ ಸಮಾಜವನ್ನು ಹೇಗೆ ಮುಕ್ಕಿ ತಿನ್ನುತ್ತಿದ್ದಾರೆ ಎಂಬ ಬಗ್ಗೆ ಒಂದು ಕ್ಷಣ ಯೋಚಿಸಿ. □

ಮೀಸಲಾತಿಯ ಅಗತ್ಯವಿಲ್ಲದ ಕಾಲಕ್ಕಾಗಿ ಈಗ ಹೆಚ್ಚಿನ ಮೀಸಲಾತಿ

ಡಾ|| ಯು.ಆರ್ ಅನಂತಮೂರ್ತಿ
ಖ್ಯಾತ ಸಾಹಿತಿಗಳು, ಚಿಂತಕರು

ಮೀಸಲಾತಿ ಚರ್ಚೆ

೧. ಮೀಸಲಾತಿಗಿಂತ ಬೇರೆ ಮಾರ್ಗ ಈಗ ಇಲ್ಲ. ಆದರೆ ಮೀಸಲಾತಿಯನ್ನು ನಾವು ಮೀಸಲಾತಿಯ ಅಗತ್ಯವೇ ಇಲ್ಲದ ಕಾಲವನ್ನು ಬರುವಂತೆ ಮಾಡಲು ಬಳಸಬೇಕು. ಅಂದರೆ ಈಗಿಂದೀಗಲೇ ಕಾಮನ್ ಸ್ಕೂಲ್ (ಸಮಾನ ಶಾಲೆಗಳು)ಗಳಲ್ಲಿ ಎಲ್ಲಾ ಮಕ್ಕಳು ಯಾವ ಬೇದವು ಇಲ್ಲದೆ ಕೊನೆಯ ಪಕ್ಷ ಹತ್ತನೆ ತರಗತಿಯ ತನಕ ಓದಬೇಕು. ಈಗಿರುವಂತಹ ತುಂಬಾ ದುಬಾರಿಯ ಖಾಸಗಿ ಶಾಲೆಗಳು ಹೀಗೆ ಮುಂದುವರಿಯುತ್ತಾ ಹೋದರೆ ಜಾತಿ ಅಸಮಾನತೆಗಿಂತಲೂ ಹೆಚ್ಚು ದುಷ್ಟವಾದ ಅಸಮಾನತೆಯನ್ನು ನಾವು ಸೃಷ್ಟಿಸುತ್ತೇವೆ. ಆದ್ದರಿಂದ ಎಲ್ಲಾ ಮಕ್ಕಳಿಗೂ ಒಂದೇ ಬಗೆಯ ಸಮಾನ ಶಿಕ್ಷಣವನ್ನು ಕೊಡಲು ಪ್ರಾರಂಭ ಮಾಡಬೇಕು.

೨. ಜಾತಿಗೂ ಪ್ರತಿಭೆಗೂ ಯಾವುದೇ ಸಂಬಂಧವಿಲ್ಲ. ಮೇಲು ಜಾತಿಯವರಿಗೆ ಮಿದುಳಿನ ಪ್ರತಿಭೆ ಇದ್ದರೆ, ಎಲ್ಲಾ ಕಸುಬುದಾರರಿಗೂ ತಮ್ಮ ಮೈಯಲ್ಲೇ, ತಮ್ಮ ಬೆರಳುಗಳಲ್ಲೇ, ತಮ್ಮ ಕಣ್ಣುಗಳಲ್ಲೆ ಇನ್ನೊಂದು ಬಗೆಯ ಪ್ರತಿಭೆ ಇದೆ ಎಂಬುದನ್ನು ತಿಳಿದಿರಬೇಕು. ಅವರ ಮೆದುಳಿನ ಪ್ರತಿಭೆ ಅಜ್ಞಾತವಾಸದಲ್ಲಿದೆ. ಅದು ಹೊರ ಬರಲು ಸಮಾನತೆ ದೊರೆಯಬೇಕು.

೩. ನಾನು ಬಡ ಬ್ರಾಹ್ಮಣ ಕುಟುಂಬದಿಂದ ಹುಟ್ಟಿ ಬಂದವನು. ಆದರೆ ನಮ್ಮ ಮನೆಯ ಬಡತನ ನನ್ನ ಬೆಳವಣಿಗೆಗೆ ಅಡ್ಡಿಯಾಗಲಿಲ್ಲ. ಏಕೆಂದರೆ ಇಡೀ ಮನೆ ನಮ್ಮ ಕಡು ಬಡತನದಲ್ಲೂ ನನ್ನನ್ನು ವಿದ್ಯಾವಂತನನ್ನಾಗಿ ಮಾಡಲು ಹೆಣಗಿತು. ಆದರೆ ಶೂದ್ರ ಸಮುದಾಯದಲ್ಲಿ ಈ ಬಗೆಯ ಕಲಿಸುವ ಉತ್ಸಾಹ ಇರುವುದಿಲ್ಲ. ಏಕೆಂದರೆ ಬಹಳ ಚಿಕ್ಕ ವಯಸ್ಸಿನಲ್ಲಿಯೇ ದೈಹಿಕ ದುಡಿಮೆಯಿಂದ ಮಕ್ಕಳು ಸಂಪಾದಿಸಲು ಸುರುಮಾಡುತ್ತಾರೆ. ಒಬ್ಬ ಕರ ಮನೆಯ ಹುಡುಗ ಎಷ್ಟೇ ಬುದ್ಧಿವಂತನಿದ್ದರೂ, ಚಿಕ್ಕ ವಯಸ್ಸಿನಲ್ಲಿಯೇ ತಂದೆಯ ಶಾಪಿಗೆ ಹೋ ಮುವತ್ತು ರೂಪಾಯಿಯನ್ನಾದರು ಗಳಿಸಬಲ್ಲವನಾ ತ್ತಾನೆ. ಆದ್ದರಿಂದ ಈ ಬಗೆಯ ಎಲ್ಲಾ ಹಿಂದುಳಿದ ಜಾ ಗಳಲ್ಲೂ ಇರುವ ಯುವಕರಿಗೆ ಅವರ ಹತ್ತನೆ ತರಗತಿ ವರೆವಿಗೂ ಕಲಿಯುವುದು ಕಡ್ಡಾಯವಾಗ ಬೇಕಂ ಮೀಸಲಾತಿಯಿಂದಾಗಿ ಶೂದ್ರ ವರ್ಗದ ಕುಟುಂಬ ತಮ್ಮ ಮಕ್ಕಳನ್ನು ಓದಿಸಲು ತಯಾರಾಗು ತ್ತಾರೆ.

೪. (ಇದರ ಬಗ್ಗೆ ತುಮಕೂರು ಸಾಹಿತ್ಯ ಸ ಳನದಲ್ಲೆ ಹೇಳಿದ್ದೇನೆ) ಈ ಖಾಸಗಿ ಕ್ಷೇತ್ರದಲ್ಲೂ ಮೀ ಲಾತಿ ಇರಲೇಬೇಕು ಇದನ್ನ ಒಪ್ಪಿಕೊಳ್ಳದ ಮಲ್ಟಿನ್ಯಾಷನ ಗಳಿಗೆ ನಮ್ಮ ದೇಶದಲ್ಲಿ ವ್ಯಾಪಾರ ಮಾಡಲು ಅವಕ ಕೊಡಕೂಡದು. ಏಕೆಂದರೆ ನಮ್ಮ ಸ್ಲೋಗನ್ ಇದಾ ಬೇಕು. "ಮೀಸಲಾತಿಯ ಅಗತ್ಯವಿಲ್ಲದ ಕಾಲಕ್ಕಾಗಿ ಹೆಚ್ಚಿನ ಮೀಸಲಾತಿ" (ಮೋರ್ ರಿಜರ್‌ವೇಷನ್ ಎಂಡ್ ರಿಜರ್‌ವೇಷನ್)

೫. ಪೇಮೆಂಟ್ ಸೀಟುಗಳು ಇರಕೂಡ ದುಡ್ಡಿನಿಂದ ವಿದ್ಯೆಯನ್ನು ಕೊಳ್ಳಬಹುದೆಂಬ ಅಭಿ ಯವೇ ತಪ್ಪು.

'ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಇರಲೇಬೇಕು'

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆ



ಮೀಸಲಾತಿ ಚರ್ಚೆ

೧. ತಳಸಮುದಾಯಗಳವರ ಆಸಕ್ತಿ–ಅಭಿರುಚಿಗೆ ಅನುಗುಣವಾದ ಸೂಕ್ತ ಶಿಕ್ಷಣ ನೀಡಿದರೆ ಅದರಿಂದ ಉದ್ಯೋಗ, ಉದ್ಯೋಗದಿಂದ ಆರ್ಥಿಕ ಭದ್ರತೆ, ಆರ್ಥಿಕ ಭದ್ರತೆಯಿಂದ ಸಾಮಾಜಿಕ ಸ್ಥಾನ–ಮಾನಗಳು ತಾನೇ ತಾನಾಗಿ ಲಭ್ಯವಾಗುವುದರಲ್ಲಿ ಸಂಶಯವಿಲ್ಲ. ಆಗ ಸಾಮಾಜಿಕ ಅಸಮಾನತೆಯೂ ಇಲ್ಲವಾಗುವುದು.

೨. ಮೀಸಲಾತಿಯಿಂದ ಪ್ರತಿಭೆ ಹಾಳಗುವುದಿಲ್ಲ. ಪ್ರತಿಭೆ ಇದ್ದವರು ಎಲ್ಲಾದರೂ ಬದುಕಬಲ್ಲರು. ಪ್ರತಿಭೆ ಯಾರೊಬ್ಬರ ಸೊತ್ತಲ್ಲ. ಮೀಸಲಾತಿ ಪ್ರತಿಭಾನ್ವೇಷಣೆಗೆ ದಾರಿಯಾಗುವುದು. ಉತ್ತಮ ತಳಿಯ ಬೀಜಕ್ಕೆ ಉತ್ತಮ ಭೂಮಿ ದೊರೆತಂತಾಗಿ ಉತ್ಕೃಷ್ಟ ಫಲ ದೊರೆಯುವುದು. ಪ್ರತಿಭೆಗೂ ಜಾತಿಗೂ ಸಂಬಂಧವಿಲ್ಲ. ಪ್ರತಿಭಾ ಪುರಸ್ಕಾರದ ಕೊರತೆಯಿಂದ ಪ್ರತಿಭಾಪಲಾಯನ ನಿರಂತರವಾಗಿ ನಡೆಯುತ್ತಿದೆ.

೩. ಜಾತಿಗೂ ಪ್ರತಿಭೆಗೂ ಸಂಬಂಧವಿಲ್ಲ ಎಂದಾದರೆ ಇಂದಿನ ಮೀಸಲಾತಿಯ ಪರ, ವಿರೋಧ ಚಳುವಳಿಗೆ ಅರ್ಥವಿಲ್ಲವಾಗುವುದು. 'ಪ್ರತಿಭೆ'ಯನ್ನೇ ಒಂದು ಜಾತಿಯಾಗಿ ಪರಿಭಾವಿಸಿ ಜಾತ್ಯತೀತ ಭಾವನೆಯಿಂದ ಪ್ರತಿಭೆಯನ್ನು ಪೋಷಿಸುವುದಾದಲ್ಲಿ ಭಿನ್ನಮತ ತೊಲಗುವುದು. ವ್ಯಕ್ತಿಯೊಬ್ಬನ ವ್ಯಕ್ತಿಗತ ಆಸ್ತಿಯಾಗಿರುವಂತೆ ರಾಷ್ಟ್ರದ ಆಸ್ತಿಯಾಗಿ ಪರಿಗಣಿಸಿ ಪೋಷಿಸಬೇಕಾದ್ದು ಇಂದಿನ ತುರ್ತು ಅಗತ್ಯ. ಜಾತ್ಯತೀತ ಭಾರತದಲ್ಲಿ ಆರ್ಥಿಕ ಸ್ಥಿತಿಯೇ ಮಾನದಂಡವಾಗಬೇಕಿತ್ತು. ಆದರೆ ರಾಷ್ಟ್ರವನ್ನಾಳಿದ, ಆಳುತ್ತಿರುವ ರಾಷ್ಟ್ರನಾಯಕರು 'ಮತಾಧಾರಿತ' ರಾಜಕಾರಣ ಮಾಡುತ್ತ ಬಂದದ್ದರಿಂದ ಆರ್ಥಿಕ ಸ್ಥಿತಿ ಮಾನದಂಡವಾಗಲಿಲ್ಲ. ಇದೂ ಒಂದು ಮಾನದಂಡವಾಗಿದ್ದರೆ ಎಲ್ಲ ಜಾತಿಗಳ ಬಡವರ್ಗದ ಪ್ರತಿಭಾವಂತರಿಗೂ ಅವಕಾಶ ದೊರೆತು ಪ್ರತಿಭೆಗೆ ಅನ್ಯಾಯವಾಗುತ್ತಿರಲಿಲ್ಲ.

೪. ಜಾಗತೀಕರಣ, ಖಾಸಗೀಕರಣ, ಉದಾರಿಕರಣಗಳೆಲ್ಲವೂ ಗುಣಮಟ್ಟವನ್ನಾಧರಿಸಿದ ಪರಿಕಲ್ಪನೆಗಳಾಗಿವೆ. ವಿಭಿನ್ನ ತಂತ್ರಜ್ಞಾನ ಬಯಸುವುದು ಪ್ರತಿಭೆಯನ್ನೇ ಹೊರತು ಮೀಸಲಾತಿಯನ್ನಲ್ಲ. ಭಾರತದಂತಹ ದೇಶಗಳಲ್ಲಿ ಜಾತಿಯ ಸಂಖ್ಯಾಬಲ ರಾಷ್ಟ್ರದ ಆಳ್ವಿಕೆಗೆ ದಾರಿಯಾಗುತ್ತಿರುವುದು ಪ್ರಜಾಪ್ರಭುತ್ವದ ಅಣಕವಾಗಿದೆ. ಗುಣಮಟ್ಟ ಆಧಾರಿತ ಸ್ಪರ್ಧಾ ಪ್ರಪಂಚದಲ್ಲಿ ಜಾತಿ, ಧರ್ಮ, ಜನಾಂಗಗಳಂತಹ ಸಾಂಪ್ರದಾಯಕ ಅಂಶಗಳು ಗೌಣವಾಗುತ್ತವೆ. ಗುಣಮಟ್ಟ ಮತ್ತು ಪ್ರತಿಭೆಗಳು ಎಲ್ಲ ಕಡೆಗೂ ದುಬಾರಿ ಬೆಲೆಗೆ ಕೊಳ್ಳಲ್ಪಡುತ್ತವೆ. ಸ್ಪರ್ಧಾ ಪ್ರಪಂಚದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಪ್ರತಿಭೆಯನ್ನು ಆಧರಿಸುವುದು ಅನಿವಾರ್ಯ.

೫. 'ಖಾಸಗೀಕರಣ' ಉನ್ನತ ಶಿಕ್ಷಣಕ್ಕೂ ಆವರಿ

ಶ್ರೀ ಶಿವಮೂರ್ತಿ ಮುರುಘಾ ಶರಣರು
ಶ್ರೀ ಮುರುಘಾ ಮಠ, ಚಿತ್ರದುರ್ಗ

ಮೀಸಲಾತಿ ಚರ್ಚೆ

'ಆರ್ಥಿಕ ಸ್ಥಿತಿ' ಮಾನದಂಡವಾಗಬಾರದು

೧. ಇಂದು ಹಣವುಳ್ಳವರು ಹೆಚ್ಚಾಗಿ ಮೊರೆ ಹೋಗುತ್ತಿರುವ ಸಕಲ ಸವಲತ್ತುಗಳುಳ್ಳ ರೆಸಿಡೆನ್ಸಿಯಲ್ ಇಂಗ್ಲಿಷ್ ಶಾಲೆಗಳನ್ನು ಕನಿಷ್ಠ ಪ್ರತಿ ತಾಲ್ಲೂಕಿಗೊಂದು ತಳಸಮುದಾಯದವರಿಗಾಗಿಯೇ ತೆರೆದು, ಪ್ರಾಥಮಿಕ ಹಂತದಿಂದಲೇ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ಬಂದರೆ ಮೀಸಲಾತಿಯ ಪ್ರಸ್ತಾಪವೇ ಬರುವುದಿಲ್ಲ. ಆದರೆ ಕ್ಲಿಷ್ಟಗೊಂಡಿರುವ ಇಂದಿನ ವ್ಯವಸ್ಥೆಯಲ್ಲಿ ಅದು ಅಸಾಧ್ಯ. ಹಾಗಾಗಿ ಈ ಸಂದರ್ಭದಲ್ಲಿ ತಳಸಮುದಾಯಗಳ ಅಭಿವೃದ್ಧಿಗೆ ಮೀಸಲಾತಿಯೇ ಅತ್ಯಂತ ಉತ್ತಮ ಮಾರ್ಗ.

೨. ಮೀಸಲಾತಿಯಿಂದ 'ಪ್ರತಿಭೆ' ಹಾಳಾಗುತ್ತದೆ ಎಂಬುದೇ ಅಪ್ಪಟಸುಳ್ಳು. ಅಸ್ಪೃಶ್ಯತೆ ರುದ್ರನರ್ತನ ಮಾಡುತ್ತಿದ್ದ ಕಾಲಗರ್ಭದಿಂದಲೇ ಜಗತ್ತಿನ ಮಹಾ ಪ್ರತಿಭಾವಂತರಲ್ಲಿ ಒಬ್ಬರಾದ ಡಾ|| ಬಿ.ಆರ್. ಅಂಬೇಡ್ಕರ್ ಹೊಳಿಕೊಂಡು ಹೊರಬಂದಿಲ್ಲವೆ? ಮೀಸಲಾತಿ ಪ್ರತಿಭಾವಂತ ತಳಸಮುದಾಯದ ಮಕ್ಕಳಲ್ಲಿನ ಪ್ರತಿಭಾನ್ವೇಷಣೆಗೆ ದಾರಿಯಾಗುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಡಾ|| ಬಿ.ಆರ್. ಅಂಬೇಡ್ಕರ್ ಅವರ ಉದಾಹರಣೆ ಒಂದೇ ಸಾಕು. ಜಾತಿಗೂ ಪ್ರತಿಭೆಗೂ ಸಂಬಂಧವಿಲ್ಲ ಎಂಬುದನ್ನು ಡಂಗುರ ಹೊಡೆದು ಹೇಳುತ್ತದೆ. ಸಾಲುಮರದ ತಿಮ್ಮಕ್ಕ, ಸಿರಿಯಜ್ಜಿ ಹಾಗೂ ಎಂ.ಎಸ್. ಸುಬ್ಬುಲಕ್ಷ್ಮಿ ಅವರನ್ನು ಒಂದೇ ತಕ್ಕಡಿಯಲ್ಲಿಟ್ಟು ನೋಡಿದಾಗ 'ಪ್ರತಿಭೆ' ಎಂದರೆ ಏನು ಎಂಬುದು ಅರ್ಥವಾಗುತ್ತದೆ.

೩. ತಳಸಮುದಾಯಗಳ ಅಭಿವೃದ್ಧಿಯೇ ಮುಖ್ಯ ಉದ್ದೇಶವಾಗಿಟ್ಟುಕೊಂಡಾಗ ಉಳಿದ ಯಾವ ಮಾನದಂಡದ ಅಗತ್ಯವಿಲ್ಲ. ಸಾವಿರಾರು ವರ್ಷಗಳಿಂದ ತಳಸಮುದಾಯಗಳನ್ನು ವ್ಯವಸ್ಥಿತವಾಗಿ ಅಕ್ಷರ ವಂಚಿತರನ್ನಾಗಿ ಮಾಡಿಕೊಂಡು ಬಂದ ಮೇಲು ಸಮುದಾಯಗಳು ಇದನ್ನು ಅರ್ಥಮಾಡಿಕೊಳ್ಳಬೇಕು, ಸಹಕರಿಸಬೇಕು. ಈ ದೇಶದಲ್ಲಿ ಬಡತನವೇ ತುಂಬಿಕೊಂಡಿರುವಾಗ 'ಆರ್ಥಿಕ ಸ್ಥಿತಿ' ಮಾನದಂಡವಾದರೆ ಮತ್ತೆ ತಳಸಮುದಾಯಗಳು ವ್ಯವಸ್ಥಿತವಾಗಿ ತುಳಿಯಲ್ಪಡುತ್ತಾವೆ ಆಗ ಸಹಜವಾಗಿಯೇ ಅವರಲ್ಲಿನ ಪ್ರತಿಭೆಗಳಿಗೆ ಅನ್ಯಾಯವಾಗುತ್ತದೆ.

೪. ನಮ್ಮ ದೇಶದ ರಾಜಕಾರಣಿಗಳು ಖಾಸಗೀಕರಣಕ್ಕೆ ಒಪ್ಪಿಕೊಂಡಿದ್ದರಲ್ಲಿ ಮೀಸಲಾತಿಯನ್ನು ನಿರ್ವೀರ್ಯಗೊಳಿಸುವ ತಂತ್ರವೂ ಒಂದು ಎಂಬುದು ನನ್ನ ಆಲೋಚನೆ. ಖಾಸಗಿ ವ್ಯಕ್ತಿಗಳು ದೊಡ್ಡಮೊತ್ತದ ಬಂಡವಾಳ ಹೂಡಿರಬಹುದು. ಆದರೆ ಹಣ ಮಾಡುವುದೊಂದೇ ಮುಖ್ಯವಾಗಬಾರದಲ್ಲವೆ? ವ್ಯವಹಾರದಲ್ಲಿ ಮಾನವೀಯತೆಯ ಸ್ಪರ್ಶ ಇರಬೇಕಲ್ಲವೆ? ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಗೆ ಅವಕಾಶ ಇರಬೇಕೆಂಬುದೇ ನನ್ನ ಸ್ಪಷ್ಟ ನಿಲುವು. ಪ್ರತಿಭಾವಂತ ತಳಸಮುದಾಯದ ಮಕ್ಕಳಿಗೆ ಮತ್ತಷ್ಟು ವಿಶೇಷ ತರಬೇತಿ ನೀಡಿ ಪ್ರೋತ್ಸಾಹಿಸಿದಾಗ ಬಂಡವಾಳಶಾಹಿಗಳು ತಳಸಮುದಾಯದವರ ಕಣ್ಣಿನಲ್ಲಿ, ಜಗಕ್ಕೆ ಆದರ್ಶ ವ್ಯಕ್ತಿಗಳಾಗುತ್ತಾರಲ್ಲವೆ?

೫. 'ಪಾವತಿ ಸೀಟು'ಗಳ ಹಾವಳಿಯಿಂದಾಗಿ ಹಣವುಳ್ಳವರು ಉನ್ನತಶಿಕ್ಷಣವನ್ನು ಹರಾಜು ಹಾಕುವ ಮಟ್ಟಕ್ಕೆ ಕೊಂಡೊಯ್ಯುತ್ತಾರೆ ಎಂಬುದು ನನ್ನ ನಿಲುವು. 'ಪಾವತಿ ಸೀಟು'ಗಳನ್ನು ಕೊಡಲೇಬೇಕಾದ ಅನಿವಾರ್ಯತೆ ಬಂದಾಗ ಮೂರು ಮುಖ್ಯ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸಬೇಕಾಗುತ್ತದೆ: ಒಂದು ಇರುವ ಮೀಸಲಾತಿಗೆ ಧಕ್ಕೆಯಾಗದಂತೆ ಹೆಚ್ಚುವರಿ ಸೀಟುಗಳನ್ನು ಕೊಡಬೇಕು. ಎರಡು, ಹೆಚ್ಚುವರಿ ಪಾವತಿ ಸೀಟುಗಳಲ್ಲೂ ಮೀಸಲಾತಿಯನ್ನು ಅನುಸರಿಸಬೇಕು ಮತ್ತು ಮೂರು, ಹೆಚ್ಚುವರಿ ಸೀಟುಗಳಲ್ಲಿ ೧೦% ಕ್ಕಿಂತ ಹೆಚ್ಚಾಗಬಾರದು. ಆಗ ಇದರಿಂದ ಪ್ರತಿಭೆಗೆ ಯಾವ ಹಾನಿಯೂ ಆಗುವುದಿಲ್ಲ. □

ಎಲ್ಲ ಜಾತಿ ಪ್ರತಿಭೆಯ ಪೋಷಣೆ ಆದರಣೀಯ

...ದೆ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ನೀಡುವ ಅನುದಾನವನ್ನು ಸರ್ಕಾರ ಕಡಿತಗೊಳಿಸುತ್ತಿದೆ. ವಿದೇಶಿ ಕಂಪನಿಗಳು ಶಿಕ್ಷಣ ಕ್ಷೇತ್ರಕ್ಕೂ ಕಾಲಿಡುತ್ತಿವೆ. ಉನ್ನತ ಶಿಕ್ಷಣ ಸಂಸ್ಥೆಗಳು ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು ಎನ್ನುವ ಸರ್ಕಾರದ ಧೋರಣೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 'ಪಾವತಿ ಸೀಟು'ಗಳ ಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಪ್ರತಿಭೆಗೆ ಪ್ರತ್ಯೇಕ ಸ್ಥಳಾವಕಾಶ ನೀಡುವುದರಿಂದ ಪ್ರತಿಭೆ ಮುರುಟದಂತೆ, ಪಲಾಯನವಾಗದಂತೆ ನೋಡಿಕೊಳ್ಳಬೇಕು. ಅದಕ್ಕೆ ರಾಷ್ಟ್ರದ, ಸಮಾಜದ, ಉಳ್ಳವರ ನೆರವು ಅಪೇಕ್ಷಣೀಯ.

ಮೀಸಲಾತಿ ಯಾವ ಆಧಾರವನ್ನುಳ್ಳದ್ದು ಎಂಬುದ ಪ್ರಮುಖ ಪ್ರಶ್ನೆ. ಅದೇನು ಜಾತಿ ಆಧಾರಿತವೇ? ಭಾಷೆ ಆಧಾರಿತವೇ? ಧರ್ಮ ಆಧಾರಿತವೇ? ಆರ್ಥಿಕ ಆಧಾರಿತವೇ?

ಮೀಸಲಾತಿ ಶಿಕ್ಷಣ ಪಡೆಯುವಲ್ಲಿ ಮಾತ್ರ ಇದ್ದರೆ ಒಳ್ಳೆಯದು. ಉದ್ಯೋಗದಲ್ಲಿ ಇರುವುದಾದರೂ ಒಂದು ತಲೆಮಾರಿಗೆ ಮಾತ್ರ ಸೀಮಿತವಾಗಿರಬೇಕು. ಆಗ ತಳವರ್ಗದ ಇತರ ಕುಟುಂಬವರ್ಗದವರಿಗೂ ಅದರ ಸೌಲಭ್ಯ ದೊರೆಯುವಂತಾಗುವುದು. ರಾಮಕೃಷ್ಣ ಹೆಗಡೆಯವರ ಮೀಸಲಾತಿಯಂತೆ ಎಲ್ಲ ಜಾತಿ, ವರ್ಗಗಳಲ್ಲಿರುವ ಎಲ್ಲ ಬಡವರಿಗೂ ಆರ್ಥಿಕ ಸಾಮರ್ಥ್ಯದ ಆಧಾರದ ಮೇಲೆ ಮೀಸಲಾತಿ ಕೊಡುವುದು ಸಾಮಾಜಿಕ ನ್ಯಾಯವಾಗಬಹುದೇನೋ? ಮೀಸಲಾತಿ ಸಾರ್ವಜನಿಕ ಹಿತದೃಷ್ಟಿಯಿಂದ ಇರಬೇಕೇ ಹೊರತು ರಾಜಕೀಯ ಚದುರಂಗದಾಟದ ದಾಳವಾಗಬಾರದು. ಇಲ್ಲದವರ ನೋವಿಗೆ ಮಿಡಿಯುವಂತಾಗಬೇಕು. ಅವಕಾಶವಂಚಿತರಿಗೆ ಅವಕಾಶ ಕಲ್ಪಿಸಲು ಮೀಸಲಾತಿ ಬೇಕು. ಶಿಕ್ಷಣ ಸೌಲಭ್ಯ, ಆರ್ಥಿಕ ಸೌಲಭ್ಯ ಗಳನ್ನು ಕೊಟ್ಟು ಅಬಲರನ್ನು ಸಬಲರನ್ನಾಗಿಸುವುದು ಉದ್ಯೋಗ ಮೀಸಲಾತಿಗಿಂತ ಶ್ರೇಷ್ಠವಾದುದು. ಮೀನು ತಿನ್ನುವುದಕ್ಕಿಂತ ಮೀನು ಹಿಡಿಯುವುದನ್ನು ಕಲಿಸು ವುದು ಉತ್ತಮ.

ಜಾತಿ ಆಧಾರಿತ ಪ್ರತಿಭೆ ರಾಷ್ಟ್ರದ ಸಂಪತ್ತು. ಅದನ್ನು ಪೋಷಿಸಬೇಕಾದ್ದು ಎಲ್ಲರ ಕರ್ತವ್ಯ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಭಾ ಪುರಸ್ಕಾರದ ವಿದ್ಯಾರ್ಥಿವೇತನ ನೀಡುತ್ತಿವೆ. NCERT ಯವರು National Talent Search Program ಪರೀಕ್ಷೆ ನಡೆಸಿ ರಾಷ್ಟ್ರಮಟ್ಟದಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಿ ಅವರಿಗೆ ಉಚಿತ ಶಿಕ್ಷಣ ನೀಡುತ್ತಿದೆ. National Merit Scholarship ನೀಡುತ್ತಿದೆ.

ಭಾರತದ ಸಾಮಾಜಿಕ ರಚನೆ ವಿಶಿಷ್ಟವಾದುದು. ಜಾತಿ, ವರ್ಣ ಆಧಾರಿತವಾದದ್ದು. ಯಾವುದೇ ಜಾತಿ, ವರ್ಗದ ಪ್ರತಿಭೆಯನ್ನು ಗುರುತಿಸಿ ಪೋಷಿಸಿದರೆ ಯಾರೂ ಆಕ್ಷೇಪಿಸುವುದಿಲ್ಲ. ಎಲ್ಲ ಜಾತಿಯ ಪ್ರತಿಭಾವಂತಿಕೆಯ ಪೋಷಣೆ ಸರ್ವಾದರಣೀಯ. ಪ್ರತಿಭೆಯನ್ನು ಜಾತಿ, ವರ್ಣಗಳಿಗೆ ಜೋಡಿಸಿದಾಗ ಪ್ರತಿರೋಧ ಸಹಜವಾಗಿಯೇ ವ್ಯಕ್ತವಾಗುತ್ತದೆ. □

ಪ್ರತಿಭೆ ಎಂದರೆ ಇಂಗ್ಲಿಷ್ ಮಾತನಾಡುವುದೇ?

ಮೀಸಲಾತಿ ಚರ್ಚೆ

ಪ್ರೊ॥ ಕೆ. ಮರುಳಸಿದ್ದಪ್ಪ
ಖ್ಯಾತ ರಂಗ ತಜ್ಞರು, ಚಿಂತಕರು



೧ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸಲು ಮೀಸಲಾತಿಗಿಂತ ಉತ್ತಮ ಮಾರ್ಗ ಸದ್ಯಕ್ಕೆ ಮತ್ತೊಂದಿಲ್ಲವೆಂಬುದು ಖಚಿತವಾಗಿರುವ ಸಂಗತಿಯಾಗಿದೆ. ಮನುವಾದವು ಕೆಳಜಾತಿಗಳಿಗೆ ವಿಧಿಸಿದ ಆರ್ಥಿಕ ಹಾಗೂ ಸಾಮಾಜಿಕ ಬಹಿಷ್ಕಾರವು ಐದುಸಾವಿರ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದು ಈ ದೇಶದ ಬಹು ಸಂಖ್ಯಾತರು ಇಷ್ಟು ದೀರ್ಘಕಾಲ, ಅಕ್ಷರ ವಂಚಿತರಾಗಿದ್ದರೆಂಬುದು ಎಲ್ಲರಿಗೂ ಗೊತ್ತಿರುವ ಸತ್ಯ. ಅದರ ಫಲವಾದ ಸಾಮಾಜಿಕ ತಾರತಮ್ಯ ಹಾಗೂ ಅನ್ಯಾಯಗಳನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ಸ್ವಾತಂತ್ರ್ಯ ಬಂದ ಮೇಲೂ ನಡೆಯಲಿಲ್ಲವೆಂಬುದು, ಇಂದಿನ ಎಲ್ಲ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಕೇವಲ ಕಾನೂನು ರಚಿಸುವುದರಿಂದ ಇದು ಸಾಧ್ಯವಾಗುವುದಿಲ್ಲ. ಸಮಾನ ಶಿಕ್ಷಣ, ಭೂಮಿಯ ನ್ಯಾಯಯುತವಾದ ಹಂಚಿಕೆ, ಜಾತಿ ವಿನಾಶ, ಆಡಳಿತ ವಿಕೇಂದ್ರೀಕರಣ ಮುಂತಾದ ಹಾದಿಯಲ್ಲಿ ಶ್ರದ್ಧಾಪೂರ್ವಕವಾಗಿ ಈ ದೇಶ ಮುನ್ನಡೆದಿದ್ದರೆ, ಬಹುಶಃ ಇಪ್ಪತ್ತೊಂದನೆಯ ಶತಮಾನದಲ್ಲಿ ಅವಕಾಶ ವಂಚಿತರೇ ಇರುತ್ತಿರಲಿಲ್ಲವಾದುದರಿಂದ ಅವರು ಖಂಡಿತಾ ಮೀಸಲಾತಿಗಾಗಿ ಹಾತೊರೆಯುತ್ತಿರಲಿಲ್ಲವೆನಿಸುತ್ತದೆ.

ಉಳಿದ ವಿಚಾರಗಳನ್ನು ಬದಿಗಿರಿಸಿ, ಸಮಾನ ಶಿಕ್ಷಣವೊಂದನ್ನು ಮಾತ್ರ, ಇಲ್ಲಿ ವಿಶೇಷವಾಗಿ ಪ್ರಸ್ತಾಪಿಸಬಹುದಾಗಿದೆ. ಎಲ್ಲ ಮಕ್ಕಳಿಗೂ ಒಂದೇ ಬಗೆಯ ಪ್ರಾಥಮಿಕ ಶಾಲ ಶಿಕ್ಷಣವನ್ನು ಕೊಡಲಾಗದ ವ್ಯವಸ್ಥೆ, ಸಹಜವಾಗಿಯೇ ಸಾಮಾಜಿಕ ಏರು ಪೇರುಗಳನ್ನು ಸೃಷ್ಟಿಸುತ್ತದೆ. ಐ.ಎ.ಎಸ್. ಅಧಿಕಾರಿಗಳು, ಶಾಸಕರು, ಮಂತ್ರಿ ಮಹೋದಯರು, ಉದ್ದಿಮೆಗಾರರು ಪ್ರಾಧ್ಯಾಪಕರು, ವಿಜ್ಞಾನಿಗಳ ಮಕ್ಕಳೊಡನೆ, ಸಮಾನ ಸಲಿಗೆ ಹಾಗೂ ಸ್ನೇಹಭಾವದಿಂದ ಬಡ ಕೂಲಿ ಕಾರ್ಮಿಕರು ಮತ್ತು ರೈತರ ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ಓದುವಂತಾದರೆ, ಸಮಾಜದಲ್ಲಿ ಕ್ರಾಂತಿಕಾರಕ ಸುಧಾರಣೆ ತರಲು ಸಾಧ್ಯವಿದೆ. ಶಿಕ್ಷಣ, ಆರೋಗ್ಯದಂತಹ ಬದುಕಿನ ಮೂಲಭೂತ ಅಗತ್ಯಗಳ ವಿತರಣೆಯಲ್ಲಿಯೇ ತೀವ್ರ ತಾರತಮ್ಯವಿರುವಾಗ ಸಮಾನತೆ ಬಗೆಗೆ ಮಾತನಾಡಲು ನಮಗೆ ಹಕ್ಕಿರಲು ಸಾಧ್ಯವೇ ಇಲ್ಲ. ವರ್ಷವೊಂದಕ್ಕೆ ನಾಲ್ಕು ಲಕ್ಷ ರೂಪಾಯಿ ಫೀ ವಸೂಲಿ ಮಾಡಲು ವಸತಿ ಶಿಕ್ಷಣ ಪ್ರಾಥಮಿಕ ಶಾಲೆಗಳು ಬೆಂಗಳೂರಿನಲ್ಲಿಯೇ ಅಸ್ತಿತ್ವದಲ್ಲಿವೆ. ಮತ್ತೊಂದೆಡೆ ದನದ ಕೊಟ್ಟಿಗೆಯಂತಹ ಮುರುಕಲು ಕಟ್ಟಡಗಳಲ್ಲಿ ಯಾವುದೇ ಸಜ್ಜು ಸಲಕರಣೆಗಳಿಲ್ಲದೆ ಅಶಿಸ್ತಿನ ಪ್ರತಿರೂಪದಂತಿರುವ ಶಿಕ್ಷಕರನ್ನು ನೇಮಿಸಿಕೊಂಡು ಸರ್ಕಾರವು ನಡೆಸುತ್ತಿರುವ ಪ್ರಾಥಮಿಕ ಶಾಲೆಗಳಲ್ಲಿ ನೂರಕ್ಕೆ ಎಂಬತ್ತು ಭಾಗ ಮಕ್ಕಳು ಕಲಿಯುತ್ತಿದ್ದಾರೆ. ಇಂತಹ ಶಾಲೆಗಳಲ್ಲಿ ಓದಿಯೂ ಪ್ರಗತಿ ಸಾಧಿಸಿ, ಕಾಲೇಜು ಸೇರಿದ ಹುಡುಗ ಹುಡುಗಿಯರು ತೀವ್ರವಾದ 'ಕೀಳರಿಮೆ'ಯಿಂದ ಬಳಲುತ್ತಿರುತ್ತಾರೆ. ಡ್ಯಾಡಿ ಮಮ್ಮಿ ಸ್ಕೂಲುಗಳಿಂದ ಬಂದ ಮಕ್ಕಳ ಇಂಗ್ಲಿಷ್ ಮಾತುಗಾರಿಕೆ ಎದುರು ಅವರು ದಂಗಾಗಿ ಬಿಡುತ್ತಾರೆ; ಇಲ್ಲವೇ ಹತಾಶೆಯಿಂದ ಪುಂಡ ಪೋಕರಿಗಳಾಗಿ ಮಾರ್ಪಡುವುದು ಉಂಟು. ಇವರಿಗೆ ಭರವಸೆ ಎಲ್ಲಿದೆ? ಆತ್ಮವಿಶ್ವಾಸ ಮೂಡಿಸಲು ಏನು ಮಾಡಬೇಕು? ಈ ಅನಿಷ್ಟ ಪರಿಸ್ಥಿತಿಗೆ ಯಾರು ಹೊಣೆ? ಇದನ್ನೆಲ್ಲ ನಮ್ಮ ಮಧ್ಯಮ ಹಾಗೂ ಮೇಲುವರ್ಗದ ಉಳ್ಳವರು ಯೋಚಿಸುವುದೇ ಇಲ್ಲ.

ಮೀಸಲಾತಿಗೆ ಜಾತಿಗೆ ಬದಲು ಆರ್ಥಿಕ ಸ್ಥಿತಿ ಮಾನದಂಡವಾಗಬೇಕೆಂಬ ಅಭಿಪ್ರಾಯದ ಬಗೆಗೆ ಚರ್ಚಿಸುವಾಗ, ಈ ಸಂಬಂಧವಾಗಿ ಲೋಹಿಯಾ ನೀತಿ ಗಮನಾರ್ಹವಾಗಿದೆ. ಮೇಲು ಜಾತಿಯಲ್ಲಿ ಹುಟ್ಟಿರುವುದು, ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿತಿರುವುದು, ವಂಶ ಪಾರಂಪರ್ಯವಾಗಿ ಆಸ್ತಿಯನ್ನು ಹೊಂದಿರು ವುದು, ಈ ಮೂರು ಅಂಶಗಳನ್ನು ವರ್ಗ ನಿರ್ಧರಿಸಲು, ಅನುಸರಿಸಬೇಕೆಂದು ಅವರು ಹೇಳಿದ್ದಾರೆ. ಕೀಳರಿಮೆಯನ್ನು ಹೋಗಲಾಡಿಸಿ, ವ್ಯಕ್ತಿಯಲ್ಲಿ ಆತ್ಮ ವಿಶ್ವಾಸ ಕುದುರಿಸುವಲ್ಲಿ ಈ ಮೂರು ಅಂಶಗಳು ಅತ್ಯಗತ್ಯವಾಗಿರುವುದರಿಂದ ಈ ಸೂತ್ರ ಅಂಗೀಕರಾರ್ಹವಾಗಿದೆ.

ಇನ್ನು, ಪೌಷ್ಟಿಕ ಆಹಾರದ ಕೊರತೆಯಿಂದ ಮಕ್ಕಳು ನಲುಗುತ್ತಿರುವುದು, ಮತ್ತೊಂದು ಸಮಸ್ಯೆ. ಅಪೌಷ್ಟಿಕತೆಯಿಂದ, ಮಕ್ಕಳು ಕಾಯಿಲೆಗಳಿಂದ, ಬಳಲುತ್ತಿರುವ ಜಗತ್ತಿನ ಮೂರನೇ ಒಂದು ಭಾಗ ಪ್ರಮಾಣದ ಮಕ್ಕಳು,
ಭಾರತದಲ್ಲಿಯೇ ವಾಸಿಸುತ್ತಿದ್ದಾರೆ, ಎಂಬುದಾಗಿ ವಿ
ಸಂಸ್ಥೆಯ ಅಧಿಕೃತ ವರದಿ ಹೇಳುತ್ತಿದೆ. ಮಧ್ಯಾಹ್ನ
ಊಟ, ಉಚಿತ ಪಠ್ಯ ಪುಸ್ತಕ ಹಾಗೂ ಸಮವ
ವಿತರಣೆಗಳಂತಹ ಸರ್ಕಾರಿ ನೆರವು, ಸಮಸ್ಯೆ
ಭಯಾನಕತೆಯನ್ನು ಸ್ವಲ್ಪ ಮಟ್ಟಿಗೆ ಮರೆಮಾಚು
ದಾದರೂ, ಈ ದೇಶದಲ್ಲಿ ಬಡಮಕ್ಕಳ ಶಾಲಾ ಶಿಕ್ಷಣ
ಬವಣೆಗೆ ಹೋಲಿಸಬಹುದಾದ ಅನ್ಯಾಯ ಮತ್ತೊಂದಿ
ಸ್ಯಾಮ್ ಪಿತ್ರೋಡ ನೇತೃತ್ವದಲ್ಲಿ ಜ್ಞಾನಾಧಾರಿತ ಸಮಾ
ನಿರ್ಮಾಣಕ್ಕಾಗಿ ನೇಮಿಸಿದ ಸಮಿತಿಯ ಪ್ರಮುಖ ಶಿ
ರಸ್ಸುಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ ಸುಧಾರಣೆ
ವಿಶೇಷ ಮಹತ್ವ ನೀಡಲಾಗಿದೆ, ಎಂದು ಗೊತ್ತಾಗಿ
ಅಗತ್ಯ ವಿರುವವರಿಗೆ ವಸತಿ ಸಹಿತ, ನಾಲ್ಕು ಲಕ್ಷ ಪ್ರಾ
ಮಿಕ ಶಾಲೆಗಳನ್ನು ಕೇಂದ್ರ ಸರ್ಕಾರವೇ ದೇಶಾದ್ಯಂ
ಆರಂಭಿಸಿ, ಗುಣಮಟ್ಟದ ದೃಷ್ಟಿಯಿಂದ ಯಾವುದೇ ಶ್ರೇ
ಖಾಸಗಿ ಶಾಲೆಗೆ ಸಮನವಾಗಿರುವಂತೆ ಎಲ್ಲ ಸಜ್ಜು ಸ
ರಣೆಗಳನ್ನು ಒಸಗಿಸಿಬೇಕೆಂದು ಅವರು ಶಿಫಾರಸು ಮಾ
ಲಿದ್ದಾರೆ. ಇದಕ್ಕೆ ಎಷ್ಟೇ ಹಣ ಒದಗಿಸಬೇಕಾದರ
ಮಾರ್ಗೋಪಾಯಗಳನ್ನು ಈ ಶಾಲೆಗಳ ಆಡಳಿತ ನಿ
ಹಣೆ ಸ್ಥಳೀಯ ಸಂಸ್ಥೆಗಳ ಮೂಲಕವೇ ನಡೆ
ಬೇಕೆಂದೂ ಅವರು ಸೂಚಿಸಿದ್ದಾರೆ. ಸೂಚಿಸ
ಗಿದೆಯೆಂದು, ಯೂರೋಪಿಯನ್ ದೇಶಗಳ
ಶ್ರೀಮಂತರೂ ಧೀಮಂತರೂ ತಮ್ಮ ಮಕ್ಕಳನ್ನು ಸರ್ಕಾ
ಶಾಲೆಗಳಿಗೇ ಸೇರಿಸುತ್ತಾರೆ. ಇಲ್ಲಿಯೂ ಅದು ಸಾಧ್ಯವಾ
ಬೇಕಲ್ಲವೇ? ಹತ್ತನೆಯ ತರಗತಿಯವರೆಗೆ ಉತ್ತ
ಗುಣಮಟ್ಟದ ಸಮಾನ ಶಿಕ್ಷಣ ವಿತರಣೆ ಸಾಧ್ಯವಾದ
ದೇಶದ ಎಲ್ಲ ಮಕ್ಕಳೂ ಸಮಾನವಾಗಿ ಸ್ಪರ್ಧಿಸಲು ತ
ವಾತಾವರಣ ಸೃಷ್ಟಿಯಾಗುತ್ತದೆ. ಊಟಕ್ಕಿಲ್ಲದೆ, ನಿಲ್ಲ
ನೆಲೆಯಿಲ್ಲದೆ, ಕೃಶವಾಗಿ ಕೊರಗುತ್ತಿರುವ ಮಕ್ಕಳನ
ಉಂಡು ತಿಂದು ತೇಗಿ ದಷ್ಟಪುಷ್ಟವಾಗಿರುವ ಮ
ಳೊಂದಿಗೆ ಒಟ್ಟಿಗೆ ನಿಲ್ಲಿಸಿ, ಓಡುವ ಸ್ಪರ್ಧೆ ಏರ್ಪಡಿಸಿದ
ಯಾರು ಗೆಲ್ಲುತ್ತಾರೆಂದು ಹೇಳಲು ತೀರ್ಪುಗಾರ
ಬೇಕಿಲ್ಲ. ಇಂದಿನ ಶಾಲಾ ಶಿಕ್ಷಣ ವ್ಯವಸ್ಥೆ ಇಂತಹ ಕ್ರೂ
ವ್ಯಂಗ್ಯವನ್ನೇ ಸಾರಿ ಹೇಳುತ್ತಿರುವುದರಿಂದ ಶಿಕ್ಷಣದ
ಮತ್ತು ಸಮಾಜದಲ್ಲಿ ಅಸಮಾನತೆ ಇರುವವರೆ
ಮೀಸಲಾತಿ ಮುಂದುವರಿಯಲೇಬೇಕಾಗುತ್ತದೆ.

೨. ಮೀಸಲಾತಿಯಿಂದ ಪ್ರತಿಭೆ ಹಾಳಾಗುತ್ತ
ಎಂಬುದು ಬಹುದೊಡ್ಡ ಸುಳ್ಳಿನ ಕಂತೆ. ಮಹಾರಾ
ಮತ್ತು ದಕ್ಷಿಣ ಭಾರತದ ರಾಜ್ಯಗಳಲ್ಲಿ ಸ್ವಾತಂತ್ರ್ಯ ಪೂರ್ವ
ಕಾಲದಿಂದಲೂ ಕೆಳಜಾತಿಗಳಿಗೆ ಮೀಸಲಾತಿಯಿದೆ. ಆದ
ದೇಶದ ಅತಿ ಹೆಚ್ಚಿನ ಪ್ರತಿಭಾ ಶಾಲಿಗಳಿಗೆ ಈ ಕಾಲ
ಲ್ಲಿಯೇ, ದಕ್ಷಿಣ ಭಾರತ ಜನ್ಮ ನೀಡಿದೆ. ರಾಷ್ಟ್ರೀಯ
ಮಟ್ಟದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅವರಿಗೇ ಸಿಂ
ಪಾಲು ಜಯ ಸಿಕ್ಕಿದೆ. ಭಾರತದ ಉಳಿದ ಪ್ರದೇಶ
ಲೊಂದಿಗೆ ಹೋಲಿಸಿದಾಗ ಇಲ್ಲಿನ ಜನಜೀವನ ಮ
ಸಾಕಷ್ಟು ಸುಧಾರಿಸಿದೆ. ಸರಾಸರಿ ತಲಾ ಆದಾಯ ಹೆಚ್ಚಿ
ಪ್ರಮಾಣದಲ್ಲಿದೆ. ವಿದ್ಯಾವಂತರು ಹಾಗೂ ಅಕ್ಷ
ಜ್ಞಾನವುಳ್ಳವರ ಸಂಖ್ಯೆಯ ಪ್ರಮಾಣ ಗಣನೀಯವಾಗಿ ಬೆ

ದೆ. ಮಹಿಳೆಯರ ಬಗೆಗೆ ಉದಾರ ಸಾಮಾಜಿಕ ತಿಯಿರುವುದರಿಂದ ಹೆಣ್ಣು ಮಕ್ಕಳ ಭ್ರೂಣ ಹತ್ಯೆ ುಂತಾದ ಅಮಾನವೀಯ ಘಟನೆಗಳು ಕಡಿಮೆ ಪ್ರಮಾಣ ಲ್ಲಿವೆ. ಮೀಸಲಾತಿಯು ಪ್ರತಿಭೆಗೆ ಧಕ್ಕೆ ತಂದಿದ್ದರೆ, ವೆಲ್ಲಾ ಸಾಧ್ಯವಿತ್ತೇ?

ಮನುವಾದಿ ಮೀಸಲಾತಿಯು ಮೇಲ್ವರ್ಗದವರಿಗೆ ಾರಿಯಲ್ಲಿದ್ದ ಪ್ರಾಚೀನ ಕಾಲದಲ್ಲಿ ನೂರಕ್ಕೆ ಹತ್ತು ಜನರ ತಿಭೆಗೆ ಮಾತ್ರ ಅಭಿವ್ಯಕ್ತಿ ಪಡೆಯಲು ಅವಕಾಶವಿತ್ತು. ಈಗ, ಪ್ರತಿಭಾನ್ವೇಷಣೆಗೆ ನೂರಾರು ಮಾರ್ಗಗಳಿವೆ. ಬಹು ೊಡ್ಡ ಪ್ರಮಾಣದಲ್ಲಿ ವಿವಿಧ ಸಮುದಾಯಗಳ ಪ್ರತಿಭೆ, ಈಗ ಅಭಿವ್ಯಕ್ತಿ ಪಡೆಯುತ್ತಿದೆ. ವಂಶ ಪಾರಂಪರ್ಯವಾಗಿ ಂದೇ ವೃತ್ತಿ ಅನುಸರಿಸುತ್ತಿದ್ದ ಜನ ಈಗ ಬೇರೆ ಬೇರೆ ಭಿನ್ನ ಕಾಯಕಗಳಲ್ಲಿ ತೊಡಗಿರುವುದರಿಂದ, ಉತ್ಪಾದನೆ ದಲ್ಲಿ ವಿನೂತನ ಶೈಲಿ ಗೋಚರವಾಗುತ್ತಿದೆ. ಮಾನವ ಂಪನ್ಮೂಲಗಳ ಳಕೆಯ ದೃಷ್ಟಿಯಿಂದ ಇದೊಂದು ಪೂರ್ವ ಸಾಧನೆ ಎಂದು ಗುರುತಿಸದಿರುವುದು ಬಹು ೊಡ್ಡ ಅನ್ಯಾಯ.

ಇನ್ನು ಪ್ರತಿಭೆ ಎಂದರೆ ಏನು? ಹರಳು ಹುರಿದಂತೆ ಇಂಗ್ಲಿಷ್ ಮಾತನಾಡಲು ಬರುವುದು ಮಾತ್ರ ಪ್ರತಿಭೆಯೆ ್ಯಾಕರಣ ಶುದ್ಧ ಕನ್ನಡ ಬರೆಯಬಲ್ಲವನು ಮಾತ್ರ ಶ್ರೇಷ್ಠ ರಹಗಾರನೇ? ಕಸದ ಬುಟ್ಟಿಯಂತೆ ತಲೆ ತುಂಬ ೂರಾರು ಕ್ವಿಜ್ ಮಾಹಿತಿಗಳನ್ನು ತುಂಬಿಕೊಂಡಿರುವುದು ತಿಭೆಯೇ? ನೆನಪಿನ ಶಕ್ತಿಯನ್ನೇ ಮುಖ್ಯವಾಗಿ ಪರಿಗಣಿ ವ ನಮ್ಮ ಶಾಲಾ ಕಾಲೇಜುಗಳ ಪರೀಕ್ಷಾ ಪದ್ಧತಿ ತಿಭೆಯನ್ನು ನ್ಯಾಯ ಬದ್ಧವಾಗಿ ಅಳೆಯುತ್ತಿದೆಯೇ? ಮ್ಮ ದೇಶದ ಒಟ್ಟಾರೆ ಶಿಕ್ಷಣ ಕ್ರಮ ಸಹಜ ಪ್ರತಿಭೆಯ ವಿಷ್ಕಾರಕ್ಕೆ ಪೂರಕವಾಗಿದೆಯೇ? ಇದನ್ನೆಲ್ಲಾ ವೈಜ್ಞಾನಿಕ ಾಗಿ ಪರಿಶೀಲಿಸಬೇಕಾಗುತ್ತದೆ. ಇದೆಲ್ಲವನ್ನು ಗಮನಿಸದೆ ವಸರದ ತೀರ್ಪು ಕೊಡುವುದು ಮೂರ್ಖತನದ ಪರ ಾವಧಿ ಎನ್ನಬೇಕಾಗುತ್ತದೆ.

೩. ಮೀಸಲಾತಿಗೆ ಜಾತಿಗೆ ಬದಲು ಆರ್ಥಿಕ ಸ್ಥಿತಿ ಾನದಂಡವಾಗಬೇಕೆಂಬ ಅಭಿಪ್ರಾಯದ ಬಗೆಗೆ ಚರ್ಚೆ ುವಾಗ, ಈ ಸಂಬಂಧವಾಗಿ ಲೋಹಿಯಾ ನೀತಿ ಗಮ ಾರ್ಹವಾಗಿದೆ. ಮೇಲು ಜಾತಿಯಲ್ಲಿ ಹುಟ್ಟಿರುವುದು, ಇಂಗ್ಲಿಷ್ ಭಾಷೆಯನ್ನು ಚೆನ್ನಾಗಿ ಕಲಿತಿರುವುದು, ವಂಶ ಾರಂಪರ್ಯವಾಗಿ ಆಸ್ತಿಯನ್ನು ಹೊಂದಿರುವುದು, ಈ ೂರು ಅಂಶಗಳನ್ನು ವರ್ಗ ನಿರ್ಧರಿಸಲು, ಅನುಸರಿಸ ೇಕೆಂದು ಅವರು ಹೇಳಿದ್ದಾರೆ. ಕೀಳರಿಮೆಯನ್ನು ೋಗಲಾಡಿಸಿ, ವ್ಯಕ್ತಿಯಲ್ಲಿ ಆತ್ಮ ವಿಶ್ವಾಸ ಕುದುರಿಸುವಲ್ಲಿ ಈ ಮೂರು ಅಂಶಗಳು ಅತ್ಯಗತ್ಯವಾಗಿರುವುದರಿಂದ ಈ ೂತ್ರ ಅಂಗೀಕಾರಾರ್ಹವಾಗಿದೆ.

ಈ ಸೂತ್ರದಂತೆ–ಮೂರು ಅಂಶಗಳಲ್ಲಿ ಅರ್ಹತೆ ುದ್ದರೆ, ಮೇಲುವರ್ಗವೆಂದೂ, ಎರಡು ಅಂಶಗಳಿದ್ದಾಗ ುಧ್ಯಮವರ್ಗವೆಂದೂ, ಒಂದೇ ಒಂದು ಅಂಶವಿದ್ದರೆ ಳವರ್ಗವೆಂದೂ ವಿಂಗಡಿಸಲಾಗುತ್ತದೆ. ಈ ಮಾನದಂಡ ಒಪ್ಪಿಕೊಂಡರೆ, ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತೈದು ಾಗದ ಜನತೆ ಮೂರು ಅಂಶಗಳನ್ನು ಹೊಂದಿಲ್ಲ ಂಬುದು ಗಮನಾರ್ಹವಾಗುತ್ತದೆ. ಆರ್ಥಿಕ ಸ್ಥಿತಿ, ಂಬುದು ಗಣಿಸಬೇಕಾದ ಒಂದೇ ಒಂದು ಅಂಶ. ಆದು ರಿಂದ ಮೇಲು ಜಾತಿಗೆ ಸೇರಿದ, ಇಂಗ್ಲಿಷ್ ಪರಿಚ ಯವೂ ಇಲ್ಲದ, ಆಸ್ತಿವಂತನೂ ಕೆಳವರ್ಗಕ್ಕೇ ಸೇರಬೇಕಾ ಗುತ್ತದೆ. ಆದರೆ ಕೆಳಜಾತಿಯಿಂದ ಬಂದವರಲ್ಲಿ ಕೆಲವೇ

ಮೀಸಲಾತಿಯೇ ಅತ್ಯುತ್ತಮ ಮಾರ್ಗ

ಶ್ರೀ ತೋಂಟದ ಸಿದ್ಧಲಿಂಗಸ್ವಾಮಿಗಳು
ಶ್ರೀ ತೋಂಟದಾರ್ಯ ಮಠ, ಡಂಬಳ–ಗದಗ

ಮೀಸಲಾತಿ ಚರ್ಚೆ

೧. ಸಾಮಾಜಿಕ ಅಸಮಾನತೆಗೆ ಬಲಿಯಾಗಿರುವ ತಳಸಮುದಾಯಗಳ ಅಭಿವೃದ್ಧಿಗೆ ಮೀಸಲಾತಿಯೇ ಅತ್ಯುತ್ತಮ ಮಾರ್ಗ. ಇದನ್ನು ಅರ್ಹರಿಗೆ ತಲುಪುವಂತೆ ನೋಡಿಕೊಳ್ಳ ಬೇಕಾದದ್ದು ತುಂಬಾ ಅಗತ್ಯ.

೨. ಮೀಸಲಾತಿಗೂ, ಪ್ರತಿಭೆಗೂ, ಜಾತಿಗೂ ಒಂದಕ್ಕೊಂದು ಸಂಬಂಧ ಇಲ್ಲ.

೩. ಮೀಸಲಾತಿ ಅಮಾನವೀಯ ಅಸ್ಪೃಶ್ಯ ಜನರಿಗಾಗಿಯೇ ವಿನಾ ಆರ್ಥಿಕ ದುರ್ಬಲರಿಗಲ್ಲ. ಇದರಿಂದ ಪ್ರತಿಭೆಗೆ ಯಾವುದೇ ಅನ್ಯಾಯವಾಗುವುದಿಲ್ಲ. ಅಸ್ಪೃಶ್ಯರಿಗಾಗುವ ಅವಮಾನ, ನೋವು ಮೇಲ್ವರ್ಗದ ಬಡವರಿಗಿರುವುದಿಲ್ಲ.

೪. ಖಾಸಗೀಕರಣದಲ್ಲಿ ಮೀಸಲಾತಿಯನ್ನು ಕಡ್ಡಾಯಗೊಳಿಸಬೇಕು. ಇಲ್ಲದೆ ಹೋದರೆ ದಲಿತರಿಗೆ ಈ ದೇಶದಲ್ಲಿ ಬದುಕೇ ಇಲ್ಲ.

೫. ಅಭಿವೃದ್ಧಿ ಪರ ಕಾಲೇಜುಗಳಲ್ಲಿ ಕ್ಯಾಪಿಟೇಶನ್ ಶುಲ್ಕ ಅನಿವಾರ್ಯ. ಆದರೆ, ಆ ಸೀಟು ಹಂಚಿಕೆಯಾಗು ವಾಗಲೂ ಕೂಡ ಸಾಧ್ಯವಾದಷ್ಟು ಅಸ್ಪೃಶ್ಯರಿಗೆ ಹಾಗೂ ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಥಮ ಆದ್ಯತೆ ಕೊಡಬೇಕು. □

ಕೆಲವರು, ಇತ್ತೀಚಿನ ಕಾಲಮಾನದಲ್ಲಿ ಆಸ್ತಿವಂತರೂ, ಇಂಗ್ಲಿಷ್ ಪರಿಣತರೂ, ಆಗಿದ್ದಾರೆಂಬುದು ಸುಳ್ಳಲ್ಲ ವಾದರೂ, ಅವರು ಸಹ–ಎರಡು ಅಂಶಗಳ ದೃಷ್ಟಿಯಿಂದ ಮಾತ್ರ ಅರ್ಹರಾಗಿದ್ದು, ಮಧ್ಯಮವರ್ಗಕ್ಕೆ ಸೇರುತ್ತಾರೆ. ಮೀಸಲಾತಿಯ ಸೌಲಭ್ಯ ಪಡೆದು, ಹೀಗೆ ಮಧ್ಯಮ ವರ್ಗಕ್ಕೆ ಸೇರಿರುವ 'ಕೆನೆಪದರ'ದ ಮಂದಿ, ತಮ್ಮ ಆತ್ಮ ಸಾಕ್ಷಿಯನ್ನು ಕೇಳಿದರೆ, ತಮ್ಮ ಮಕ್ಕಳಿಗೆ ಮೀಸಲಾತಿ ಕೇಳ ಲಾರರೆಂಬ ನನ್ನ ದೃಢವಾದ ಅಭಿಪ್ರಾಯ. ಇವರ ತ್ಯಾಗದ ಫಲವನ್ನು ಅವರ ಜಾತಿಗೇ ಸೇರಿದ ಕಡು ಬಡವರು ಪಡೆಯುತ್ತಾರೆಂಬುದರಿಂದ, 'ಕೆನೆಪದರ'ವನ್ನು ಮೀಸಲಾತಿ ಯಿಂದ ಹೊರಗಿಡಬೇಕೆಂಬ ನೀತಿಯನ್ನು ತಾತ್ವಿಕವಾಗಿ ನಾನು ಒಪ್ಪುತ್ತೇನೆ; ಮತ್ತು ಮೇಲ್ಜಾತಿಯ ಕಡು ಬಡವ ರಿಗೂ ಮೀಸಲಾತಿ ಸೌಲಭ್ಯ ವಿಸ್ತರಣೆಯಾಗಬೇಕೆಂದು ಹೇಳುತ್ತೇನೆ.

೪. ಸಾರ್ವಜನಿಕ ಕ್ಷೇತ್ರಗಳು ಖಾಸಗೀಕರಣಗೊಳ್ಳ ದಂತೆ ನೋಡಿಕೊಳ್ಳುವುದು ನಾಗರಿಕ ಸಮಾಜದ ಆದ್ಯ ಕರ್ತವ್ಯ. ಇದಕ್ಕಾಗಿ ಅಗತ್ಯ ಬಿದ್ದರೆ ಹೋರಾಟಗಳು ರೂಪಿತಗೊಳ್ಳಬೇಕು. ವಿಶ್ವ ಬ್ಯಾಂಕ್ ಹಾಗೂ ವಿಶ್ವವಾಣಿಜ್ಯ ಒಕ್ಕೂಟದ ದಲ್ಲಾಳಿಗಳಂತಿರುವ ಹೊಣೆಗೇಡಿ ಸರ್ಕಾರ ಗಳು ಈ ದಿಕ್ಕಿನಲ್ಲಿ ಮುನ್ನುಗ್ಗುತ್ತಿರುವಾಗ ಖಾಸಗಿ ವಲ ಯವೂ ಮೀಸಲಾತಿಯನ್ನು ಒಪ್ಪಿಕೊಳ್ಳಲೇಬೇಕು. ಕೇಂದ್ರ ಸರ್ಕಾರವೇ ಈ ಬಗೆಗೆ ಸ್ಪಷ್ಟ ನಿಲುವಿಗೆ ಬಂದು, ಕಾನೂನು ರಚನೆ ಮಾಡಬೇಕು. ವಾಸ್ತವವಾಗಿ ಮೀಸಲಾತಿ ತಪ್ಪಿಸುವ ಹುನ್ನಾರವಾಗಿಯೇ ಸರ್ಕಾರಿ ಸ್ವಾಮ್ಯದ ಉದ್ದಿ ಮೆಗಳನ್ನು ಖಾಸಗಿಯವರಿಗೆ ಹಸ್ತಾಂತರ ಮಾಡಲಾಗು ತ್ತಿದೆ, ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲದಿಲ್ಲ.

೫. ನಮ್ಮ ದೇಶದಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವು ಖಾಸಗೀಕರಣಗೊಳ್ಳುತ್ತಿರುವುದು ಅತ್ಯಂತ ಕಳವಳ ಕಾರಿಯಾದ ಅಂಶವಾಗಿದೆ. ಉನ್ನತ ಶಿಕ್ಷಣದಲ್ಲಿ 'ಪಾವತಿ ಸೀಟು'ಗಳ ಪರಿಕಲ್ಪನೆಯೇ ಅನೈತಿಕವಾದರೂ ಅರಣ್ಯ ನ್ಯಾಯವನ್ನು ಒಪ್ಪುವ ಅನಾಗರಿಕ ಸಮಾಜದಲ್ಲಿ ಮಾತ್ರ ಶಕ್ತಿಯಿದ್ದವರು ಬದುಕುತ್ತಾರೆ; ಅಂತೆಯೇ ನಮ್ಮ 'ನಾಗರಿಕ' ಸಮಾಜದಲ್ಲಿ ದುಡ್ಡಿದ್ದವನೇ ದೊಡ್ಡಪ್ಪನಾಗಿ ಮೆರೆಯುತ್ತಾನೆ; ಜ್ಞಾನದ ಉನ್ನತ ಕೇಂದ್ರಗಳಲ್ಲಿಯೇ ಹಣದ ಥೈಲಿಗೆ ಅಗ್ರ ಮನ್ನಣೆ ದೊರೆಯುತ್ತಿದೆ.

ಇದು ಆಶ್ಚರ್ಯ ಪಡುವ ಸಂಗತಿ, ಎಂದು ನನಗನಿಸುವುದಿಲ್ಲ. ಪ್ರಾಚೀನ ಕಾಲದಿಂದಲೂ ನಮ್ಮ ದೇಶ ದಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗಿದೆ. ಅಂದು ನಮ್ಮ ಋಷಿಮುನಿಗಳು ಕಾಡಿನಲ್ಲಿ ನಡೆಸುತ್ತಿದ್ದ ಆಶ್ರಮ ಶಾಲೆಗಳ ಲ್ಲಿಯೂ ಕೇವಲ ವಿಪ್ರೋತ್ತಮರು, ರಾಜಮಹಾರಾಜರು ಮತ್ತು ಭಾರಿ ಶ್ರೀಮಂತ ವರ್ತಕರ ಮಕ್ಕಳಿಗೆ ಮಾತ್ರ ಪ್ರವೇ ಶವಿತ್ತು. ಯಾರೋ ಒಬ್ಬ ಅಧಿಕ ಪ್ರಸಂಗಿ ಶಂಭೂಕ ಅಥವಾ ಏಕಲವ್ಯ ನಿಯಮ ಮೀರಿ ಒಳಗೆ ನುಸುಳಲು ಪ್ರಯತ್ನ ಪಟ್ಟರೆ, ಉಗ್ರ ಶಿಕ್ಷೆ ವಿಧಿಸುತ್ತಿದ್ದರು. ಆದರೆ ಪ್ರಜಾ ಪ್ರಭುತ್ವ ಯುಗದಲ್ಲಿಯೂ ಪಾಳೆಯಗಾರಿ ಸಂಸ್ಕೃತಿಯ ಪಳೆಯುಳಿಕೆಯಂತೆ ನಮ್ಮ ಶಿಕ್ಷಣ ವ್ಯವಸ್ಥೆ ಕಾಣಿಸಿಕೊಳ್ಳು ತ್ತಿರುವುದು ಮಾತ್ರ ನಾಚಿಕೆಗೇಡಿನ ವಿಚಾರ. ತಥಾಕಥಿಕ 'ಪ್ರತಿಭಾವಂತರು', ಇದನ್ನು ಏಕೆ ಪ್ರತಿಭಟಿಸುತ್ತಿಲ್ಲವೆಂದರೆ, ಹಣವಂತರು ಮತ್ತು ಮೇಲ್ವರ್ಗದವರೇ ಈ ವ್ಯವಸ್ಥೆಯ ಊರುಗೋಲಾಗಿರುವುದರಿಂದ ಇಂತಹ ಪ್ರತಿಭಟನೆಗೆ ಬೇಕಾದ ಆತ್ಮ ಸ್ಥೈರ್ಯವೇ ಬುದ್ಧಿವಂತರಿಗಿಲ್ಲವಾಗಿದೆ. ಈ ಪಾವತಿ ಸೀಟುಗಳು ಮೇಲ್ವರ್ಗದ ಶ್ರೀಮಂತರ ಮೂರ್ಖ ಮಕ್ಕಳಿಗಾಗಿ ವ್ಯವಸ್ಥೆ ಕಲ್ಪಿಸುವ ಮೀಸಲಾತಿಯಾಗಿದೆ ಎಂಬುದೇ ನನ್ನ ನಿಶ್ಚಿತ ಅಭಿಪ್ರಾಯ. □

ಕಡ್ಡಾಯ ವಿದಿಗಳು ಅನಿವಾರ್ಯ

೧. **ಭಾ**ರತದ ಸದ್ಯದ ಸಾಮಾಜಿಕ ರಚನೆಯನ್ನು ಎರಡು ವಿಧಗಳಲ್ಲಿ ವಿಂಗಡಿಸಿಕೊಂಡು ನೋಡಬಹುದು

ಅ. ಸಾಂಸ್ಕೃತಿಕ ರಚನೆ: ಕುಟುಂಬ, ಧರ್ಮ, ಮನೋಭಾವನೆ, ಇವುಗಳಿಂದ ರೂಪಿತ ವ್ಯಕ್ತಿ

ಇ. ಪ್ರಭುತ್ವದ ರಚನೆ: ಪಶ್ಚಿಮ ಪ್ರಭಾವ ಅಥವಾ ಮಾದರಿಯಲ್ಲಿ ರೂಪಿತ, ಚುನಾವಣೆ ಅಸೆಂಬ್ಲಿ

ಒಟ್ಟಾರೆಯಾಗಿ ಸಾಂಸ್ಕೃತಿಕ ಸಮಾಜ ರೂಪುಗೊಂಡಿರುವುದು ಪರಂಪರೆ, ಧರ್ಮ ನಂಬಿಕೆ ಅವನ್ನೊಳಗೊಂಡ ವ್ಯಕ್ತಿಗಳಿಂದ, ಅವ್ಯಕ್ತಿ ರೂಪಿಸಿದ ಸಂಸ್ಥೆಗಳಿಂದ ರೂಪಿತವಾದರೆ, ಪ್ರಭುತ್ವ ಸಮಾಜ ಬಲವಂತವಾದ (ಬಲ ಬೇಸಿ ಕಾರ್ಯನಿರ್ವಹಿಸಬಹುದಾದ) ಸಂಸ್ಥೆ, ಕಾನೂನು, ಸೈನ್ಯ ಅಸ್ಸೆಂಬ್ಲಿಗಳನ್ನು ಹೊಂದಿರೂಪುಗೊಂಡಿದೆ. ಈ ಮೇಲೆ ಕಂಡ ವರ್ಗೀಕರಣವೆನಿದ್ದರೂ ಅಧ್ಯಯನಕ್ಕೆ ಅನುಕೂಲವಾಗಲಿ ಎಂದು ಮಾಡಿಕೊಂಡದ್ದೆ ವಿನಃ ಶಾಶ್ವತವಾದ ಭೇದಗಳೇನಲ್ಲ ಇವೇನು ಪರಸ್ಪರ ಬೇರೆ–ಬೇರೆಯಾಗಿ ಕಾರ್ಯಾನಿರ್ವಹಿಸಿ, ಎರಡು ದ್ವಿಮಾನ ವೈರುಧ್ಯದಲ್ಲಿ ಕೆಲಸ ಮಾಡುವಂತ ಸಂಪೂರ್ಣ ಭಿನ್ನ ವಲಯಗಳಲ್ಲ. ಬದಲಾಗಿ ಪರಸ್ಪರ ಪ್ರಭಾವ, ಹಸ್ತಕ್ಷೇಪ ಹಲವು ವೇಳ ಪೂರಕವಾಗಿ ಕೆಲಸ ಮಾಡುವಂತಹವುಗಳೇ ಆಗಿವೆ.

ಈ ಎರಡು ವಲಯಗಳಲ್ಲಿ ಸಾಮಾಜಿಕ ಅಸಮಾನತೆ ನಿವಾರಿಸುವ ಕೆಲಸ ಹಿಂದಿನಿಂದ ನಡೆದು ಬಂದಿರುವುದು ಕಾಣಬಹುದು. ಅಂದರೆ ಸಾಂಸ್ಕೃತಿಕ ವಲಯದಲ್ಲಿ, ಶಾಲೆಗಳ ಸ್ಥಾಪನೆ, ವಸತಿ ನಿಲಯ. ಸ್ಕಾಲರ್ ಶಿಫ್ ನೀಡುವುದು. ಹಾಗೆ ಪ್ರಭುತ್ವ ವಲಯದಲ್ಲಿ ಮೀಸಲಾತಿ ಎಂಬಂಥ ಕಾನೂನು ಇತ್ಯಾದಿ ಇತ್ತೀಚಿಗಿನ ಸಂದರ್ಭದಲ್ಲಿ ಯಾವುದೇ ರಾಜಕಾರಣಿಗೆ ತಮ್ಮ ಜಾತಿಗೆ ಶಾಲೆ, ವಸತಿ ಸ್ಥಾಪಿಸುವ ಕೆಲಸವೇನು ದೊಡ್ಡದಲ್ಲ ಮತ್ತು ಸಾಂಸ್ಥಿಕ ವಲಯದ ಮೇಲೆ ಪ್ರಭುತ್ವ ಪ್ರಭಾವ ಇತ್ತೀಚೆಗೆ ದೊಡ್ಡ ಮಟ್ಟದಲ್ಲಿರುವುದನ್ನು ಕಾಣಬಹುದು ಸಾಂಸ್ಥಿಕವಲಯದ ಸಂಸ್ಥೆಗಳ ಹೇಳಿಗೆ–ಅಭಿವೃದ್ಧಿ ಪ್ರಭುತ್ವ ವಲಯದವರ ಪ್ರಭಾವವೇ ಇರುವುದು ಕಾಣಸಿಗುತ್ತದೆ. ಈ ದೃಷ್ಟಿಯಲ್ಲಿ ಅಸಮಾನತೆ ನಿವಾರಣೆಗೆ ಸಾಂಸ್ಥಿತಿಕ ವಲಯ ಕೆಲಸ ಜೊತೆಗೆ ಪ್ರಭುತ್ವದ ಕಾರ್ಯ ಚಟುವಟಿಕೆ ಸಹ ತೀರ ಮುಖ್ಯ. ಅದಕ್ಕೆಂದೆ ಮೀಸಲಾತಿ ಕಡ್ಡಾಯ ವಿದಿಗಳು ಅನಿವಾರ್ಯ

ಆದ್ದರಿಂದ ಸಾಂಸ್ಥಿಕ ವಲಯದಲ್ಲೇ ಅಸಮಾನತೆ ನಿವಾರಿಸಿ ಬಿಡಬಹುದು ಎಂಬ ವಾದ ಅಷ್ಟು ಸರಿಯಲ್ಲ ಈ ರೀತಿಯ ವಾದಗಳೇನಿದ್ದರೂ ನಮ್ಮ ಸಮಾಜದ ಘರ್ಷಣೆ ತೀಕ್ಷ್ಣವಾಗುವ ಮುಂಚಿಗಿನ ಸ್ಥಿತಿಯನ್ನು ಮಾತ್ರ ಗಮನದಲ್ಲಿ ಇಟ್ಟುಕೊಂಡು ಮಾತನಾಡುತ್ತಿರುತ್ತಾರೆ. ಆದ್ದರಿಂದಲೇ ಇಂತಹವರು ಹಿಂದೆಯೇ ಭಾರತದಲ್ಲಿ ಎಲ್ಲ ಇತ್ತು. ಶಿಕ್ಷಣ ಸಂಪೂರ್ಣವಾಗಿತ್ತು. ಬಂತಹ ವಾದ ಮಂಡಿಸುತ್ತ ನನ್ನ ಪ್ರಕಾರ ಇವರ ಸಮಸ್ಯೆ ಏನೆಂದರೆ, ಅವರೆಲ್ಲಾ ಕಾಲ್ಪನಿಕ ಲೋಕವೊಂದರಲ್ಲಿ ಸಮಸ್ಯೆ ಬಗೆಹರಿಸಲೆತ್ನಿಸುತ್ತಾರೆ. ಆದರೆ ಪ್ರಭುತ್ವ ಸಮಾಜದಲ್ಲಿ ಹುಟ್ಟಿದ ಜಾತಿಯ–ಸಮಸ್ಯೆ 'ಅಸಮಾನತೆ'ಯನ್ನು ಕಲ್ಪಿನ ಲೋಕದಲ್ಲಿ ಬಗೆಹರಿಸಲು ಸಾಧ್ಯವಿಲ್ಲ. ಇದಕ್ಕೆ ಸಾಕಷ್ಟು ಮಿತಿ ಇದೆ ಈಗಾಗಲೇ ಹೇಳಿರುವಂತೆ ಸ್ವತಂತ್ರ್ಯೋತು ಸಂದರ್ಭದಲ್ಲಿ ಆಧುನಿಕ ಪ್ರಭುತ್ವದ 'ಅಧಿಕಾರ' ಮಹತ್ತರ ಪಾತ್ರ ವಹಿಸುತ್ತಿದೆ. ಈ ಸನ್ನಿವೇಶದಲ್ಲಿ ಅಸಮಾನತೆಯನ್ನು ತುಂಬಾ ಕಾಳಜಿಯಲ್ಲಿ ಪರಿಹರಿಸಬೇಕು ಎಂದು ಚಿಂತಿಸುವವರಿಗೆ ಮೀಸಲಾತಿ ಮುಖ್ಯ ವಿಷಯವಾಗುತ್ತದೆ.

> **ಜಾತಿಯನ್ನು ಮೀಸಲಾತಿ ವ್ಯಾಪ್ತಿ ಒಳಗೆ ತಂದಾಗ ಭಾರತ ಸಮಾಜದಲ್ಲಿ ಹೊಸ–ಹೊಸ ಕೇಂದ್ರಗಳು ಸೃಷ್ಟಿಯಾದವು. ಹಳೆ ವಸಾಹತು ಸಂಸ್ಥೆಗಳು ವಿಸ್ತಾರಗೊಂಡವು, ಹೊಸ ನಗರಗಳು ಬೆಳೆದವು. ಹಾಗೆ ಭಿನ್ನ ಜಾತಿಗಳಿಗೆ ಹೊಸ ಅವಕಾಶ ತೆರೆದವು,**

ಈ ಪ್ರಭುತ್ವ ವಲಯದಲ್ಲಿ ಕೆಲಸ ಮಾಡುವ ಸಾಮಾಜಿಕ ಅಂಗಗಳ ಚುನಾವಣೆ ಇದರಲ್ಲಿ ಜನರು ವಹಿಸುವ ಮುಖ್ಯ ಪಾತ್ರ, ರಾಜಕೀಯ ಪರ ಅದನ್ನು ರೂಪಿಸುವಿಕೆ, ಅದರೊಂದಿಗೆ ಹೊಂದಿರುವ ಜನ ಸಂಬಂಧ ರಚನೆ ಪಾಶ್ಚಾತ ಮಾದರಿಯದು ಅದರ ಕಾರ್ಯ ವೈಖರಿ, ಜನರ ಪ್ರತಿಸ್ಪಂದನೆ/ಹೋರಾಟ ಭಾರತಿಯವೇ ಆದವು. ಭಾರತೀಯವೇ ಆಗಿ ಅದು ಮರುಸೃಷ್ಟಿ ಪಡೆದಂತಹವುಗಳು. ಹಾಗಾಗಿ ಮೀಸಲಾತಿ ವಿರುದ್ಧ ವಾದ ಬೆಳೆಸುತ್ತ ಹೊಸ ಶಬ್ಧ ವಾಕ್ಯ ಪ್ರಯೋಗ ಮಾಡುತ್ತಿರುವುದೇನಿದೆ ಅಂತವರ ಅಪೇಕ್ಷೆ ಕೆಳಜಾತಿ ಕೆಳಸ್ತರದಲ್ಲೇ ಉಳಿಯಬೇಕು ಎಂಬುದಾಗಿದೆ.

ಪ್ರೊ|| ಕಾರ್ಲೋಸ್

ಖ್ಯಾತ ವಿದ್ವಾಂಸರು, ಚಿಂತಕರು



ಮೀಸಲಾತಿ ಚರ್ಚೆ

ನನ್ನ ಪ್ರಕಾರ ಈ ಮೀಸಲಾತಿಗೆ ವಿರೋಧ ...ತ್ತಿರುವುದಕ್ಕೆ ಕಾರಣ, ಕೇವಲ ಮೇಲ್ಜಾತಿ–ಮೇಲ್ವ... ರಿಗೆ ಅನ್ಯಾಯವಾಗುತ್ತಿದೆ ಎಂಬ ವಾದಗಳಲ್ಲಿ ಮಾ... ಅನೇಕ ವೇಳೆ ಯಾವ ಅರ್ಹತೆ ಇಲ್ಲದೆ ಕೇವಲ ... ಲಾತಿ ಮೂಲಕ ಅನೇಕ ಸ್ಥಾನದಲ್ಲಿ ಕುಳಿತಿರುವ ವ್ಯ... ಅವರ ಕಾರ್ಯ ಶೈಲಿ ವರ್ತನೆಗಳು 'ಮೀಸಲಾತಿ ... ವರೆಲ್ಲಾ ಹೀಗೆ' ಅನ್ನವಂತ ಭಾವನೆ ಸೃಷ್ಟಿ ಮಾಡು... ವುದು ಸಹ ಆಗಿದೆ. ಆದ್ದರಿಂದಲೇ ಮೀಸಲಾತಿ ... ವರ ಮಟ್ಟದಲ್ಲೇ ಪ್ರತಿ ಹುದ್ದೆಗೆ ಅರ್ಹರಾರು– ಅನ... ಎಂಬ ದೃಷ್ಟಿಯೊಂದು ಬರಬೇಕು.

ಇನ್ನೊಂದು ಮುಖ್ಯವಿಚಾರ ಎಂದರೆ, ... ಏಕೈಕವಾದ ಸದೃಷ್ಟಿ ಎಂಬ ಭ್ರಮೆ. ಏಕೆಂದರೆ, ಮೀ... ತಿಗೆ ಉತ್ತರ ಭಾರದಂತ ದಕ್ಷಿಣ ಭಾರತದಲ್ಲಿ ವಿರ... ವಿಲ್ಲ. ಇಲ್ಲಿ OBC ಗಳೂ ಮೀಸಲಾತಿ ವ್ಯಾಪ್ತಿಗೆ ... ವುದು ಕಾರಣವಿರಬಹುದು. ಆದರೆ, ಉತ್ತರ ಭಾ... ದಂತಹ ಅವೇರ್‌ನೆಸ್ ಇಲ್ಲದೆ ಇರುವ ಸಮಾಜ... ರಿಂದಲೇ ಮೀಸಲಾತಿ ವಿರೋಧಗಳಿರುವುದು ಕಾ... ಹುದು. ಇಂತಹ ಸಂದರ್ಭದಲ್ಲಿ ಫೆಡರಲ್ ರಾಜ... ರಚನೆ ಎಷ್ಟು ಅಗತ್ಯ ಎಂಬುದನ್ನು ಗಮನಿಸಬಹುದು.

೨. ಜಾತಿಯನ್ನು ಮೀಸಲಾತಿ ವ್ಯಾಪ್ತಿ ... ತಂದಾಗ ಭಾರತ ಸಮಾಜದಲ್ಲಿ ಹೊಸ–ಹ... ಕೇಂದ್ರಗಳು ಸೃಷ್ಟಿ ಯಾದವು. ಹಳೆ ವಸಾಹತು ... ಕಾಲದ ಸಂಸ್ಥೆಗಳು ವಿಸ್ತರಿತಗೊಂಡವು, ಹೊಸ ನಗ... ಬೆಳೆದವು. ಹಾಗೆ ಭಿನ್ನ ಜಾತಿಗಳಿಗೆ ಹೊಸ ಅವ... ತೆರೆದವು. ಈ ಮೀಸ ಲಾತಿ ಎಂಬ ಸುಧಾರಣ ... ಹಲವು ಸ್ಪೇಸ್‌ಗಳಲ್ಲಿ ಹಲವು ಕೆಳಜಾತಿ ಜನರ ಪ್ರಜ್ಞೆ... ವಿಸ್ತರಿಸುವಂತೆ ಮಾಡಿ, ಹೊಸ ಕ್ಷೇತ್ರಗಳ ಪ್ರ... ರಹದಾರಿಯನ್ನು ನಿರ್ಮಿಸಿಕೊಟ್ಟಿತ್ತು ಎನ್ನುವುದು ... ನಂಬಿಕೆ. ಉದಾ: ಒಬ್ಬ ದಲಿತ ವ್ಯಕ್ತಿ ಪಕ್ಕದ ಮನೆ/ಊ... ದಲಿತ ವ್ಯಕ್ತಿ ಈ ಅನುಕೂಲ ಕೆಲಸ ಪಡೆದಾಗ ... ಮಗನಿಗೋ ಮೊಮ್ಮ ನಿಗೋ ಅದನ್ನು ತಿಳಿಸಿ, ... ಉದ್ದಾರ ಆಗು ಎಂದಾಗ ಅದು ಕೇವಲ ತನ್ನ ಕುಟು... ಚೆನ್ನಾಗಿರಬೇಕು ಎಂಬ ಸ್ವಾರ್ಥ ಮಾತ್ರವಾಗಿ... ಮಾತ್ರದಲ್ಲಿ ಅದೊಂದು ಹೊಸ ರೀತಿಯ ... ನಿರ್ಮಾಣ ಏಜನ್ಸಿಯ ಕೆಲಸವು ಆಗಿರುತ್ತದೆ ಎ... ನೋಡಬೇಕು.

ಈ ರೀತಿಯ ಸ್ಪೇಶಿಯಲ್ ಅಭಿವೃದ್ಧಿ ನಡೆ... ಇದರ ಒಳಗೆ ಬಂದ ವರ್ಗ, ಸಮಾಜಜಾತಿಗಳು ಆಧ... ಸ್ವಾತಂತ್ರ್ಯವೊಂದನ್ನು ಪಡೆದವು. ವಿದ್ಯಾಭ್ಯಾಸ ಕೆಲವು ... ಗಳಿಗೆ ಎಂಬ ಪರಂಪರಾಗತ ಹಿಂಸೆ ಇಲ್ಲಿಂದ ಹೊ... ತಕ್ಷಣ, ಹೊಸ ಪ್ರತಿಭೆ ಬರಲು ಅವಕಾಶ ವಾಗು... ಎಂಬುದು ನನ್ನ ನಂಬಿಕೆ. ಇದು ಭಾರತೀಯ ಸಮ... ದಲ್ಲಿ ಸಿಕ್ಕು ಹೊಸ ಶಿಕ್ಷಣ ಹೊಸ ಮಾಹಿತಿಯನ್ನು ... ಸಂಸ್ಕೃತಿಯವರು ಹಂಚಿಕೊಳ್ಳುವ ಸಾಧ್ಯತೆ ಸೃಷ್ಟಿಸಿತು. ... ಸೌಲಭ್ಯ ಹೊಸ ಕ್ಷೇತ್ರಕ್ಕೆ ಬಂದ ವ್ಯಕ್ತಿಗಳಲ್ಲಿ ಹೊಸ ... ಸ್ಥೈರ್ಯ ಬರುವಾಗ ಹೊಸರೀತಿ ಸ್ಪರ್ಧೆ, ಹೊಸರೀತಿ...

ದ್ಧಿವಂತಿಕೆ ಸಮಾಜವನ್ನು ಅದುವರೆಗೆ ಕಾಣದಿರುವ ಹೊಸ ಆಯಾಮದಿಂದ ನೋಡುವಂತ ಪ್ರತಿಭೆ ಸೃಷ್ಟಿಯಾವು. ಬರಿ ಅಂಕ ಗಳಿಸುವ, ಕಂಠಪಾಠ ಮಾಡಿ ಸವೆವ ಪ್ರತಿಭೆಗಿಂತ ಪ್ರತಿ ಆಧುನಿಕ ಕ್ಷೇತ್ರಗಳಲ್ಲಿ, ಹೊಸ-ಹೊಸ ಸೃಜನಶೀಲತೆ ಇರುವ ಪ್ರತಿಭೆ ಭಾರತಕ್ಕೆ ಸಿಗುದು ಈ ಮೀಸಲಾತಿ ಎಂಬುದರ ಮೂಲ ಎಂಬುದು ನಂಬಿಕೆ.

'ಪ್ರತಿಭೆ' ಎಂಬುದನ್ನು ಹೊಸ ಅರ್ಥದಲ್ಲಿ ನೋಡಕು. ಒಬ್ಬ ವಿದ್ಯಾರ್ಥಿಗೆ ಚಿತ್ರಕಲೆಯ ಪ್ರತಿಭೆ, ಇನ್ನೊ ಹಾಡುಗಾರಿಕೆ, ಒಬ್ಬನ ಮ್ಯಾನೆಜೆಂಟ್ 'ಪ್ರತಿಭೆ' ...ನೋರ್ವರ ಗಣಿತ ಪ್ರತಿಭೆ. ಸಮಾನ ಎಂಬಂತೆ ...ಡಬೇಕು, ಆಗ 'ಪ್ರತಿಭೆ'ಗೆ ಕಂಠಪಾಠ ಒಪ್ಪಿಸುವುದು ...ಬ ವಸಹಾತು ಅರ್ಥವನ್ನು ನಿವಾರಿಸಬಹುದು. ಆಗ ...ಭೆ' ಇಲ್ಲದೆ ಇರುವ ವ್ಯಕ್ತಿಗಳೇ ಇಲ್ಲ ಎಂಬುದು ಅರಿ ಬರುತ್ತದೆ. ಜೊತೆಗೆ 'ಪ್ರತಿಭೆ'ಗೆ ಇರುವ ವಸಹಾತು ಅರ್ಥವನ್ನು ಅಲ್ಲಗಳೆದರೆ ಒಂದೇ ಜಾತಿ/ಗುಂಪಿನ ...ಗೆ ಪ್ರತಿಭೆ ಇದೆ ಎನ್ನುವುದು ದಡ್ಡತನ ಎಂಬುದು ಅರಿ ಬರುತ್ತದೆ.

೩. ಇದು ಮುಖ್ಯವಾದ ಪ್ರಶ್ನೆ. ಈಗ ಕೆಲವು ಜಾತಿ ಕಳೆದ ಹಲವಾರು ವರ್ಷಗಳಿಂದ ಮೀಸಲಾತಿ ...ದು I. A.S. I.P.S ಅಧ್ಯಾಪಕರು. ಮಂತ್ರಿ ಇತ್ಯಾದಿ ...ನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂತಹವರ ...ಳಿಗೆ ಮೀಸಲಾತಿ ನೀಡುವುದು ಅನಾವಶ್ಯಕ. ಈಗಾ ...ೇ ಮೀಸಲಾತಿ ಪಡೆದವರು, ಮತ್ತೆ ಮೀಸಲಾತಿ ...ತ್ತಿಗೆ ಬರಬಾರದು. ಈ ರೀತಿಯ ಚಳುವಳಿ ಕೆಳಸ್ತರದ ...ತಿಗಳಲ್ಲೇ ಬರಬೇಕು. ನಿಜವಾಗಿ ಸಮಾನತೆ ಪರವಾಗಿ ...ವರು ಈ ರೀತಿ ಚಳುವಳಿ ಆರಂಭಿಸಬೇಕು. ಇಂತಹ ...ವಳಿ ಆರಂಭವಾದಗ ಜಾತಿ ವಿರುದ್ಧ ಮೀಸಲಾತಿ ...ವಾಗಿ ಮಾತನಾಡುವಾಗಲೂ ಆರ್ಥಿಕ ಅಸಮಾನತೆ ...ದ ಗಮನಿಸಲು ಸಾಧ್ಯವಾಗುತ್ತದೆ. ಒಂದು ಹಂತಕ್ಕೆ ...ಾಜ ಬೆಳೆದಾಗ ಎಲ್ಲಾ ಜಾತಿಯ ಆರ್ಥಿಕ ದುಸ್ಥಿತಿ ...ತರಿಗೂ ಮೀಸಲಾತಿ ಸಿಗುವ ಪರಿಸ್ಥಿತಿ ನಿರ್ಮಾಣ ...ಬಹುದು. ಈ ರೀತಿ ಆದಾಗ 'ಪ್ರತಿಭೆ' (ನಾನು ...ೆ ಅರ್ಥೈಸಿದ ರೀತಿಯಲ್ಲಿ)ಗೆ ಅನ್ಯಾಯದ ಪ್ರಶ್ನೆ ...ವುದಿಲ್ಲ. ಒಂದನೇ ತಲೆಮಾರಿನಲ್ಲಿ ಮೀಸಲಾತಿ ಪಡೆ ...ದು ಎರಡನೆ ತಲೆಮಾರಿನಲ್ಲಿ ಪಡೆಯಬಾರದು ಅಂತ ...ದೆ ಕೆಳಜಾತಿಯ ಹೊಸ ಜನರು ಈ ಸೌಲಭ್ಯ ಪಡೆದು ...ಸ ಪ್ರತಿಭೆಗಳ ಸೃಷ್ಟಿಗೆ ಕಾರಣವಾಗುತ್ತಾರೆ.

೪. ಈ ಮೂರನೆ ಪ್ರಶ್ನೆಗೆ ಕೊಟ್ಟ ಉತ್ತರವನ್ನೆ ...ರಿಸಿ ಕೊಂಡು ಹೇಳುವುದಾದರೆ ಖಾಸಗಿ/ ...ರ್ವಜನಿಕ ವಾದ ವ್ಯತ್ಯಾಸವೇನು ಬರುವುದಿಲ್ಲ. ...ದಲನೇ ತಲೆ ಮಾರಿನವರು ಈ ಸೌಲಭ್ಯ ಪಡೆದರೆ, ...ತನೇ ತಲೆಮಾರಿ ನವರೂ ಅವರ ದಕ್ಷತೆಗೆ ತಕ್ಕ ಹಾಗೆ ...ದೆ ಬರಬೇಕು, ಬರುತ್ತಾರೆ. ಅಷ್ಟೇ ಅಲ್ಲದೆ ಈ ...ಸಲಾತಿ ಆಯಾ ಕ್ಷೇತ್ರ ಗಳ ಗುಣಗಳಿಗೆ ...ಗುಣವಾಗಿ ನಿರ್ಧಾರಿತ ವಾಗಬೇಕು.

೫. ಸಮಾನತೆ ಪರವಾಗಿ, ಅಸಮಾನತೆ ವಿರುದ್ಧ ಮೀಸಲಾತಿ ಬೆಂಬಲಿಸುವ ನಾವು ಸಹಜವಾಗಿ ...ವತಿ ಸೀಟ್'ನ್ನು ವಿರೋಧಿಸಬೇಕು. ಅದು ಖಾಸಗಿ ...ವಾದರೂ ಸರಿ, ಸಾರ್ವಜನಿಕವಾದರು ಸರಿ 'ಪಾವತಿ ...' ಅನ್ನು ನಿರ್ಬಂಧಿಸಿ ಬಿಡುವುದು ಉತ್ತಮ. ಮೀಸ ಪರವಾದಿಗಳೂ 'ಪಾವತಿಸೀಟ್' ವಿರುದ್ಧವೂ ...ರಾಡಬೇಕು. □

ಸಂಪತ್ತಿನ ಸಾಮಾಜೀಕರಣವಾಗಬೇಕು

ಡಾ॥ ಸಿದ್ದನಗೌಡ ಪಾಟೀಲ್
ರಾಜ್ಯ ಕಾರ್ಯದರ್ಶಿ, ಸಿ.ಪಿ.ಐ

ಮೀಸಲಾತಿ ಚರ್ಚೆ

ಪ್ರತಿಭೆಯನ್ನು ಅಂಕಗಳಿಂದ ಅಳೆಯಲಾಗದು. ಅಂಕಗಳು ಅರ್ಹತೆಯ ಒಂದು ಮಾನದಂಡ ಮಾತ್ರ.

೧. ಪ್ರಸ್ತುತ ಸಮಾಜೋ ಆರ್ಥಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಅಸಮಾನತೆಗೆ ಒಳಗಾಗಿರುವ ತಳಸಮುದಾಯಗಳ ಅಭಿವೃದ್ಧಿಗೆ ಮೀಸಲಾತಿಯೇ ಅನಿವಾರ್ಯ ಮಾರ್ಗ. ಸಮಾಜದ ಎಲ್ಲ ಜನ ವರ್ಗ ತಮ್ಮ ಪ್ರಾತಿನಿಧ್ಯವನ್ನು ಶಿಕ್ಷಣ, ಉದ್ಯೋಗ ಆಡಳಿತ ರಂಗದಲ್ಲಿ ಪಡೆಯಬೇಕಾಗುತ್ತದೆ. ಆದರೆ 'ಜಾತಿ ವ್ಯವಸ್ಥೆ'ಯ ಕಾರಣದಿಂದಾಗಿ ನಮ್ಮ ದೇಶದ ಬಹುಜನಾಂಗ ಮೂಲ ಸೌಲಭ್ಯಗಳಿಂದ ವಂಚಿತವಾಗಿದೆ. ಈ ಸಮಸ್ಯೆಯ ಶಾಶ್ವತ ಪರಿಹಾರಕ್ಕಾಗಿ ಸಂಪತ್ತಿನ ಸಾಮಾಜೀಕರಣವಾಗಬೇಕು. ಹಾಗೇ ಸೌಲಭ್ಯ, ಉತ್ಪಾದನಾ ಪ್ರಕ್ರಿಯೆಯಲ್ಲಿ ಪಾಲು. ಉತ್ಪಾದಿತ ಸಂಪತ್ತಿನಲ್ಲಿ ಪಾಲು, ಆಡಳಿತ ವ್ಯವಸ್ಥೆಯಲ್ಲಿ ಸರ್ವಜನಭಾಗಿತ್ವ ದೊರಕಬೇಕಾದರೆ ಮೀಸಲಾತಿಯೆ ಸಧ್ಯದ ಸಂದರ್ಭದ ಉತ್ತಮ ಪರಿಹಾರ.

೨. ಮೀಸಲಾತಿಯಿಂದ 'ಪ್ರತಿಭೆ' ಹಾಳಾಗುವುದಿಲ್ಲ. ಪ್ರತಿಭೆಯನ್ನು ಅಂಕಗಳಿಂದ ಅಳೆಯಲಾಗದು. ಅಂಕಗಳು ಅರ್ಹತೆಯ ಒಂದು ಮಾನದಂಡ ಮಾತ್ರ. ಅರವತ್ತು ಅಂಕ ಪಡೆದವನನ್ನು ಐವತ್ತೊಂಬತ್ತು ಅಂಕ ಪಡೆದವನಿಗಿಂತ ಪ್ರತಿಭಾವಂತ ಎಂದು ಹೇಳಿದರೆ ಅವೈಜ್ಞಾನಿಕವಾಗುತ್ತದೆ. ಇಷ್ಟಕ್ಕೂ ಮೀಸಲಾತಿಯೆಂದರೆ ವಿಷಯದ ಜ್ಞಾನವಿಲ್ಲದವರಿಗೆ ಅವಕಾಶ ಎಂಬುದಲ್ಲ. ನಿರ್ದಿಷ್ಟ ವಿಷಯ ಜ್ಞಾನ ಪಡೆದು, ಸಾಮಾಜಿಕವಾಗಿ ತಲೆ ತಲಾಂತರದಿಂದ ಸೌಲಭ್ಯಗಳ ಲಾಭ ಪಡೆದು ಮುಂದಿದ್ದವರಿಗಿಂತ ಕೊಂಚ ಕಡಿಮೆ ಅಂಕ ಪಡೆದಿರುತ್ತಾರೆ ಅಷ್ಟೇ. ಅವರಲ್ಲಿ ಪ್ರತಿಭೆಗೆ ಕೊರತೆ ಏನಿರುವುದಿಲ್ಲ. ಅವಕಾಶ ಸಿಕ್ಕರೆ ಪ್ರತಿಭೆ ಗೊತ್ತಾಗುತ್ತದೆ. ಇನ್ನೊಂದು ಕಡೆ ಅವಕಾಶ ಪ್ರತಿಭಾನ್ವೇಷಣೆಗೆ ಸಹಾಯಕವಾಗುತ್ತದೆ. ಜಾತಿಗೂ ಪ್ರತಿಭೆಗೂ ಯಾವುದೇ ಸಂಬಂಧವಿಲ್ಲ. ಇದು ಅವೈಜ್ಞಾನಿಕವಾದ ನಂಬಿಕೆ. ಪ್ರತಿಭೆ ಅಧ್ಯಯನ, ಅವಕಾಶ, ಅನುಭವಗಳಿಂದ ರೂಪುಗೊಳ್ಳುತ್ತದೆ. ಶತಶತಮಾನದಿಂದ ಸಾಮಾಜಿಕ, ಶೈಕ್ಷಣಿಕ, ಸೌಲಭ್ಯ ಪಡೆದೂ ಪ್ರತಿಭಾ ಹೀನರಾದ ಮೇಲ್ಜಾತಿಯವರೂ, ಇಂಥ ಎಲ್ಲ ಸೌಲಭ್ಯದಿಂದ ವಂಚಿತರಾಗಿ ಕಷ್ಟಪಟ್ಟು ಪ್ರತಿಭಾವಂತರಾದ ಕೆಳ ಜಾತಿಯವರೂ ನಮ್ಮ ಮುಂದೆಯೇ ಇದ್ದಾರೆ.

೩. ಮೀಸಲಾತಿಗೆ ಜಾತಿಗೆ ಬದಲಾಗಿ ಆರ್ಥಿಕ ಸ್ಥಿತಿ ಮಾನದಂಡವಾಗಬೇಕು ಎಂಬುದು ಸರಿಯಲ್ಲ. ಮೀಸಲಾತಿಯನ್ನು ಆರ್ಥಿಕ ಸ್ಥಿತಿಗೆ ಪ್ರತಿಯಾಗಿ ಸಂಘರ್ಷ ರೂಪದಲ್ಲಿ ನಿಲ್ಲಿಸಬಾರದು. ಮೀಸಲಾತಿ ಬಹುಜನಾಂಗದ ಪಾಲ್ಗೊಳ್ಳುವಿಕೆಯ ಉನ್ನತ ಧ್ಯೇಯವನ್ನು ಹೊಂದಿದೆ. ಮೀಸಲಾತಿ ಪಡೆವ ಜನರ ಮಧ್ಯೆಯೂ ಆರ್ಥಿಕವಾಗಿ ಹಿಂದುಳಿದವರಿದ್ದಾರೆ. ಆ ಕಾರಣಕ್ಕಾಗಿಯೇ 'ಕೆನೆಪದರ' ನೀತಿ ಬಂದಿದ್ದು. ಮೀಸಲಾತಿ ಸಂಖ್ಯೆಯನ್ನು ಹೊರತು ಪಡಿಸಿ ಹೆಚ್ಚಿನ ವಲಯದಲ್ಲಿ ಆರ್ಥಿಕವಾಗಿ ಹಿಂದುಳಿದ ಅಂದರೆ ಮೇಲ್ಜಾತಿಯ ಕೆಳವರ್ಗಕ್ಕೂ ಮೀಸಲಾತಿ ಕೊಡುವುದೂ ಒಳ್ಳೆಯದು. ಅರ್ಹತೆ ಪ್ರಶ್ನೆ ಬಂದಾಗ ಕೆಳಜಾತಿಯಲ್ಲೂ ಕೆಳವರ್ಗದಲ್ಲೂ ಕನಿಷ್ಠ ಅರ್ಹತೆ ಅವಶ್ಯ. ಆ ಕನಿಷ್ಠ ಅರ್ಹತೆ ಸ್ಪರ್ಧೆಯ ರೂಪದಲ್ಲಿರದೇ ಅವಶ್ಯಕತೆಯ ರೂಪದಲ್ಲಿರಬೇಕು.

೪. ಸಾರ್ವಜನಿಕ ಕ್ಷೇತ್ರಗಳು ಖಾಸಗೀಕರಣಗೊಳ್ಳುತ್ತಿವೆ ಅಷ್ಟೇ ಅಲ್ಲ, ಜಾಗತೀಕರಣದ ಪರಿಣಾಮದಿಂದಾಗಿ ಸರಕಾರಿ ಇಲಾಖೆಗಳ ಕ್ಷೇತ್ರಕ್ಕೂ ಇಂದು ಖಾಸಗೀ ಕಂಪನಿಗಳು ಲಗ್ಗೆ ಇಡುತ್ತಿವೆ. ಬರುವ ದಿನಗಳಲ್ಲಿ ಮಾನವ ಸಂಪನ್ಮೂಲದ ಬಳಕೆಯೇ ಕುಂಠಿತವಾಗುತ್ತದೆ. ಇರುವ ಉದ್ಯೋಗಗಳೂ ಖಾಸಗೀಕರಣದಿಂದಾಗಿ ಯಾವುದೇ ಸಾಮಾಜಿಕ ನ್ಯಾಯದ ಮೇಲೆ ಹಂಚಿಕೆಯಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಖಾಸಗೀ ಕ್ಷೇತ್ರದಲ್ಲಿಯೂ ಮೀಸಲಾತಿ ತರುವ ಕುರಿತು ಸರಕಾರ ಕಾನೂನು ರಚಿಸಬೇಕು. ಸರಕಾರ ಆ ಕೆಲಸ ಮಾಡುವುದಿಲ್ಲ. ಜನಾಂದೋಲನ ರೂಪಿಸಬೇಕು.

೫. ಉನ್ನತ ಶಿಕ್ಷಣದಲ್ಲಿ 'ಪಾವತಿ ಸೀಟು' ಸೌಲಭ್ಯವನ್ನು ಖರೀದಿಸುವ ಹುನ್ನಾರ. ಮೀಸಲಾತಿಯಲ್ಲಿ 'ಪ್ರತಿಭೆ'ಯ ಮಾತನಾಡುವವರು ಹಣಕ್ಕೆ ಇರುವ ಮೀಸಲಾತಿಯನ್ನು ಪ್ರಶ್ನಿಸುತ್ತಿಲ್ಲ. ಕಾರಣ ಅವರೆಲ್ಲ ಕೆಳಜಾತಿಯ ವಿರೋಧಿಗಳಾಗಿ ಮೇಲ್ವರ್ಗದ ಪರವಾಗಿಯೂ ವರ್ತಿಸುತ್ತಾರೆ. ಇದು ಬೌದ್ಧಿಕ ದಿವಾಳಿಖೋರತನ. ಖಾಸಗಿ ಶಿಕ್ಷಣ ಸಂಸ್ಥೆಗಳು ಪ್ರವೇಶ ನೀತಿಯಲ್ಲಿ ಹಣ ಕೊಟ್ಟವರಿಗೆ ಪ್ರವೇಶ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯನ್ನು ಮುಂಚಿತವಾಗಿಯೇ ಕೊಟ್ಟ ಉದಾಹರಣೆಗಳಿವೆ. ಅಲ್ಲಿ ಪ್ರತಿಭಾ ಹೀನರೇ ಆಯ್ಕೆಯಾಗುವುದು. ಪಾವತಿ ಸೀಟು ಹಣವಂತ ಮತಿಹೀನರಿಗಾಗಿ ಇರುವ ಮೀಸಲಾತಿ ಎಂದೇ ಅರ್ಥ. □

ಮೀಸಲಾತಿ ಚರ್ಚೆ

ಭಾರತೀಯ ಜಾತಿ ಮಾಧ್ಯಮಗಳ

ಸಿದ್ಧಾರ್ಥ ವರದರಾಜನ್
ಅನು:ಎಸ್.ಕೃಷ್ಣಮೂರ್ತಿ ರಾವ್

ಔಟ್‌ಲುಕ್, ದಿ ಹಿಂದೂ ಮತ್ತು ಫ್ರಂಟ್‌ಲೈನ್ ನಂತಹ ಗೌರವಾನ್ವಿತ ಪತ್ರಿಕೆ-ಮ್ಯಾಗಜಿನ್‌ಗಳು ಮತ್ತು ಕೆಲವು ಚಾನಲ್‌ಗಳ ಒಂದಿಬ್ಬರು ವರದಿಗಾರರನ್ನು ಬಿಟ್ಟರೆ ಮಾಧ್ಯಮಗಳು ಮೀಸಲಾತಿ ವಿಷಯದಲ್ಲಿ ಸಮಗ್ರವರದಿ ಮಾಡುವಲ್ಲಿ ಸೋತಿದೆ. ಸಂಪಾದಕೀಯ ಮಂಡಳಿಯಲ್ಲಿ ಜಾತಿ ವೈವಿಧ್ಯತೆ ಇದ್ದಿದ್ದರೆ ವರದಿಗಾರಿಕೆಯಲ್ಲಿ ಹೆಚ್ಚಿನ ವಸ್ತುನಿಷ್ಠತೆ ಮತ್ತು ಸಮತೋಲನ ಕಾಯ್ದು ಕೊಳ್ಳಬಹುದಿತ್ತೆನೋ? ವಿದ್ಯಾರ್ಥಿಗಳಿಗೆ ಪ್ರತಿಭಟನೆ ನಡೆಸಲು ಪರೋಕ್ಷವಾಗಿ ಕುಮ್ಮಕ್ಕು ನೀಡುವ ಮೂಲಕ ಮೀಸಲಾತಿ ವ್ಯವಸ್ಥೆಯ ಬಗ್ಗೆ ತಮಗೆ ಇರುವ ಅಸಹನೆಯನ್ನು ಮೇಲುಜಾತಿಗಳ ಸಂಪಾದಕರು ಮತ್ತು ವರದಿಗಾರರು ವ್ಯಕ್ತಪಡಿಸಿದರೇ? ಹಾಗಾದರೆ ಮಾಧ್ಯಮದ ವರದಿಗಾರಿಕೆ ಉಳ್ಳವರ ಸಂಘಟನಾ ಚಳವಳಿಯ ಭಾಗವಾಗಿತ್ತೇ?

ನನಗೆ ಮೊದಲ ಬಾರಿಗೆ ತೀವ್ರತರದ ಜಾತಿ ಸಂಬಂಧಿ ತಾರತಮ್ಯದ ಬಗ್ಗೆ ಅರಿವಾದದ್ದು ೧೯೯೫ರಲ್ಲಿ. ಆಗ ನಾನು ದಿನಪತ್ರಿಕೆಯೊಂದರ ಸಂಪಾದಕೀಯ ಬರಹಗಾರನಾಗಿದ್ದೆ. ಯುನಿವರ್ಸಿಟಿ ಕಾಲೇಜ್ ಆಫ್ ಮೆಡಿಕಲ್ ಸೈನ್ಸಸ್ (ಯುಸಿಎಂಎಸ್) ನ ಕೆಲವು ದಲಿತ ವಿದ್ಯಾರ್ಥಿಗಳು ನನ್ನನ್ನು ಕಾಣಲು ಬಂದಿದ್ದರು.

ಅಲ್ಲಿನ ಹಾಸ್ಟೆಲ್‌ನಲ್ಲಿ ವಾಸವಿದ್ದ ದಲಿತ ವಿದ್ಯಾರ್ಥಿಗಳು ಹಲವು ವರ್ಷಗಳಿಂದ ಜಾತಿ ನಿಂದನೆ ಮತ್ತು ತಾರತಮ್ಯವನ್ನು ಅನುಭವಿಸಿ ಕೊಂಡೇ ಬಂದಿದ್ದರು. ಕಾಕತಾಳೀಯವೋ ಅಥವಾ ವ್ಯವಸ್ಥೆಯ ತಾರತಮ್ಯವೋ ಇಡೀ ಹಾಸ್ಟೆಲ್ ಕಟ್ಟಡದಲ್ಲಿ ದಲಿತ ವಿದ್ಯಾರ್ಥಿಗಳಿಗೆ ಎರಡು ಮಹಡಿ ಮಾತ್ರ ಜಾಗ ಕೊಡಲಾಗಿತ್ತು. ಊಟದ ಮನೆಯಲ್ಲಿ ಅವರನ್ನು ಪ್ರತ್ಯೇಕವಾಗಿ ಕೂಡಿಸಲಾಗುತ್ತಿತ್ತು. ತಪ್ಪಿ ಬೇರೆಡೆ ಕುಳಿತವರಿಗೆ ಬೈಗುಳಗಳ ಸುರಿಮಳೆಯಾಗುತ್ತಿತ್ತು. ".bloody shaddu" ಎಂದು ಒಬ್ಬೊಬ್ಬರನ್ನು ಬೈದು ನೀನು ನಮ್ಮೊಂದಿಗೆ ಊಟ ಮಾಡುವಂತಿಲ್ಲ" ಎಂದು ಹೊರಗಟ್ಟುತ್ತಿದ್ದರು.

ತಂದೆ ತಾಯಿಯರು ಹೇಳಿದಂತೆ ಹೇಗಾದರೂ ಡಾಕ್ಟರ್ ಪದವಿ ಪಡೆದೇ ತೀರಬೇಕೆಂಬ ಹಂಬಲದಿಂದಾಗಿ ಈ ಎಲ್ಲಾ ರೀತಿಯ ಬೈಗುಳಗಳನ್ನು ಸಹಿಸಿಕೊಳ್ಳಬೇಕಾಯಿತು ಎಂದಿದ್ದರು ವಿದ್ಯಾರ್ಥಿಯೊಬ್ಬರು. ಜಾತಿ ನಿಂದನೆ ಅತಿಯಾಗಿ ಯಾವಾಗ ಹಿಂಸೆಗೆ ತಿರುಗಿತೋ ಮತ್ತು ವಿದ್ಯಾರ್ಥಿಯೊಬ್ಬರ ವಾಸದ ಕೋಣೆಯನ್ನು ಲೂಟಿ ಮಾಡಲಾಯಿತೋ ಆಗ ದಲಿತ ವಿದ್ಯಾರ್ಥಿಗಳು ಧರಣಿ ಮಾಡಲು ನಿರ್ಧರಿಸಿದರು. ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ ಅವರು ನನ್ನನ್ನು ಭೇಟಿಯಾಗಿದ್ದರು.

ವಿದ್ಯಾರ್ಥಿಗಳಿಂದ ವಿಚಾರ ತಿಳಿದ ನಂತರ ನಾನು ಪತ್ರಿಕೆಯ ಮೆಟ್ರೋ ವಿಭಾಗದ ಮುಖ್ಯಸ್ಥರನ್ನು ಯುಸಿಎಂಎಸ್‌ನ ಘಟನೆಯನ್ನು ವರದಿ ಮಾಡಲು ಕಳುಹಿಸಬೇಕೆಂದು ಕೇಳಿಕೊಂಡೆ. ಅನೇಕ ದಿವಸಗಳಾದರೂ ಘಟನೆ ವರದಿಯಾಗಲಿಲ್ಲ. ಸಂಪಾದಕೀಯ ವಿಭಾಗದಲ್ಲಿ ಮತ್ತೆ ಪ್ರಯತ್ನಿಸಿದೆ. ಆದರೂ ಪ್ರಯೋಜನವಾಗಲಿಲ್ಲ. ಕೊನೆಗೆ ನಾನೇ ವರದಿ ಮಾಡಲು ನಿರ್ಧರಿಸಿದೆ. ಅರ್ಧ ದಿವಸ ಕಾಲೇಜಿನಲ್ಲಿ ಉಳಿದುಕೊಂಡು ಸಂಬಂಧಿತ ಅಧಿಕಾರಿ ವರ್ಗದವರನ್ನು, ಸಾಮಾನ್ಯ ವರ್ಗದ ವಿದ್ಯಾರ್ಥಿಗಳನ್ನು ಮತ್ತು ಧರಣಿನಿರತ ವಿದ್ಯಾರ್ಥಿಗಳನ್ನು ಸಂದರ್ಶಿಸಿದೆ. ಆಗ ಅವರಲ್ಲೊಬ್ಬರು ನಿಧಾನವಾಗಿ ನಾಲಿಗೆತಪ್ಪಿ ".shaddu" ಎಂದು ನಿಂದಿಸಿದ್ದಾಗಿ ಒಪ್ಪಿಕೊಂಡರು. ಆದರೆ ಅದು ಪ್ರೀತಿಯ ಅಡ್ಡ ಹೆಸರು ಎಂದು ಹೇಳಲು ಮರೆಯಲಿಲ್ಲ.

ನಾನು ವರದಿಯನ್ನು ಸಂಪಾದಕೀಯ ಮಂಡಳಿಗೆ ಒಪ್ಪಿಸಿದೆ. ದಿವಸಗಳಾದರೂ ಪತ್ರಿಕೆಯಲ್ಲಿ ಅದು ಅಚ್ಚಾಗಲಿಲ್ಲ. ವರದಿ ಕಳಪೆಯಾಗಿದೆ ಎಂದಾಗಲೀ ಅಥವಾ ಪ್ರಯೋಜನವಿಲ್ಲವೆಂದಾಗಲೀ ಯಾರೂ ಹೇಳಲಿಲ್ಲ. ಆದರೆ ವರದಿಗೆ ಮಾತ್ರ ಸ್ಥಳಾವಕಾಶ ಒದಗಿ ಬರಲಿಲ್ಲ. ಧರಣಿ ಪ್ರಾರಂಭವಾಗಿ ಸರಿಸುಮಾರು ಒಂದು ತಿಂಗಳ ನಂತರ ಧಾರಾಳವಾಗಿ ಕತ್ತರಿ ಪ್ರಯೋಗಿಸಿದ ಹರಕು ಮುರುಕು ವರದಿ ಪ್ರಕಟವಾಯಿತು. ಇತರೆ ಪತ್ರಿಕೆಗಳು ಮತ್ತು ಟಿವಿ ವಾಹಿನಿಗಳಿಗೆ ಈ ಘಟನೆ ಸುದ್ದಿ ಮೌಲ್ಯವಿಲ್ಲದ ವಿಷಯವಾಗಿದ್ದು ವಿಪರ್ಯಾಸ.

ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏ
ಎಂಎಸ್) ಮತ್ತು ಇತರ ಕಾಲೇಜುಗಳಲ್ಲಿ ನಡೆದ ಮೀಸಲ
ವಿರೋಧಿ ಪ್ರತಿಭಟನೆಗಳನ್ನು ಹೋಲಿಸಿ ನೋಡಿದಾಗ ಕ
ಬರಬಹುದಾದ ವೈಪರೀತ್ಯಗಳನ್ನು ಅವಲೋಕಿಸುವ ಉದ್ದೇಶದಿ
ನಾನು ಈ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದೇನೆ. 24x7ರ ಕ್ಯಾಮೆ
ಪಹರೆ ಇದ್ದರೂ ಎಐಐಎಂಎಸ್‌ನ 'ಸಮಾನ ಅವಕಾಶಗಳಿಗ
ವೈದ್ಯರ ವೇದಿಕೆ'ಯ ಮೀಸಲಾತಿ ಪರ ಹೋರಾಟಗಳು ಎ
ವರದಿಯಾಗಲಿಲ್ಲ. ಒಂದು ವಾಹಿನಿಯಂತೂ ತಮ್ಮ 'ಪ್ರಜಾ ವ
ಗಾರ' ತಂದ ಚಿತ್ರಗಳಿಂದಲೇ ವರದಿ ಸಿದ್ಧಪಡಿಸಿ ನಾಮಕಾವಸ್ಥೆ ವ
ನಿಷ್ಠತೆ ತೋರಿಸಿತು. ಅಲ್ಲಿನ ಅವಸರದ ವರದಿಗಾ
ರಿಗೂ ಮತ್ತು ಧರಣಿ ನಿರತ ಡಾಕ್ಟರ್



ಇಕ್ಬಾಲ್

ನಡುವೆ ಹೆಚ್ಚಿನ ವ್ಯತ್ಯಾಸವೇನೂ ಕಂಡುಬರಲಿಲ್ಲ.

ಕೆಲವು ಪ್ರತಿಭಟನಕಾರರು ವಿರೋಧಿ ತಂತ್ರವಾಗಿ ಉಪಯೋ
ಗಿಸಿಕೊಂಡ ಸಂಕೇತಗಳು ಜಾತಿ ಸೂಚಕ ಮತ್ತು ಅವಮಾನಕ
ಯಾಗಿದ್ದರೂ ಯಾವ ವಾಹಿನಿಯೂ ಅದರ ಪರಿವೆಗೇ ಹೋ
ಪ್ರಸಾರ ಮಾಡಿತು. ರಸ್ತೆಗಳನ್ನು ಗುಡಿಸುವುದು, ಬೂಟುಗ
ಪಾಲಿಷ್ ಮಾಡುವುದು, ಮತ್ತು ಹಾಡುವುದರಿಂದ ಅವಮಾನಕ
ಯಾಗಿ ಹಿಂದುಳಿದ ವರ್ಗಗಳಿಗೆ "ನಿಮ್ಮ ಜಾಗಗಳಲ್ಲಿ ನೀವಿ
("ಅಪ್ನಿ ಔಕಾತ್ ಮೆ ರಹೋ") ಎಂದು ಘೋಷಣೆ ಕೂಗ
ಯಿತು. ಇವೆಲ್ಲವನ್ನೂ ಮಾಧ್ಯಮಗಳು ಹಾಗೇ ಬಿತ್ತರಿಸಿದವು. ದೇ
ಅರ್ಧಕ್ಕಿಂತ ಹೆಚ್ಚಿನ ಜನರ ವಿರುದ್ಧ ಇಂಥ ಮನಸ್ಥಿತಿಯುಳ್ಳ
'ಪ್ರತಿಭಾವಂತ' ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ತಮ್ಮ ರೋ
ಗಳಿಗೆ ಶುಶ್ರೂಷೆ ಮಾಡುವರೋ ಎಂದು ಯಾರೂ ಕೇಳಲಿ
ಡಾಕ್ಟರ್‌ಗಳ ಮುಷ್ಕರಗಳು ಮಾಧ್ಯಮಗಳಲ್ಲಿ ದೊಡ್ಡದಾಗಿ ರಾರಾ
ದರೆ ಶೋಷಿತರ ಪ್ರತಿಭಟನೆಗಳು ಸಾಮಾನ್ಯ ಜನಜೀವನಕ್ಕೆ ತೊಂ

ಮಾಡುವ "ಟ್ರಾಫಿಕ್ ಜಾಮ್"ಗಳಿಗೆ ಕಾರಣವಾಗುತ್ತವೆ. ಬಡರೋಗಿಗಳ ಸಂಕಷ್ಟಗಳವರದಿಯನ್ನು ಯಾವುದೋ ಮೂಲೆಯಲ್ಲಿ ಹಾಕಿ ಕಣ್ಣೀರೊರೆಸಲಾಗುವುದು.

ಇವೆಲ್ಲ ಹುಚ್ಚಾಟಗಳ ಮಧ್ಯೆ ಎಐಐಎಂಎಸ್‌ನ ಆಡಳಿತ ವರ್ಗ ನಡೆದುಕೊಂಡ ರೀತಿಯ ಬಗ್ಗೆ ಯಾರೂ ಚಕಾರವೆತ್ತಲಿಲ್ಲ. ಹೈಕೋರ್ಟ್ ಆದೇಶದನ್ವಯ ಎಐಐಎಂಎಸ್‌ನಲ್ಲಿ ಯಾವುದೇ ರೀತಿಯ ಧರಣಿ, ಮುಷ್ಕರ ನಡೆಸುವಂತಿಲ್ಲ. ಆದರೆ ಡಾಕ್ಟರ್‌ಗಳು ನಡೆಸಿದ ಮೀಸಲಾತಿ ವಿರೋಧಿ ಮುಷ್ಕರಗಳನ್ನು ಯಾರೂ ಪ್ರಶ್ನೆ ಮಾಡಲಿಲ್ಲ. ಅದಿರಲಿ ಮುಷ್ಕರಕ್ಕೆ ವ್ಯಾಪಾರಿಗಳಿಂದ, ಐಟಿ ವಲಯದಿಂದ ಮತ್ತು ಕಾರ್ಯಕ್ರಮಗಳ ನಿರ್ವಾಹಕರಿಂದ ಅತ್ಯುತ್ಸಾಹದ ಪ್ರೋತ್ಸಾಹ ದೊರೆಯಿತು. (ತಮ್ಮದೇ ಧರಣಿ ನಿರತ ಕೆಲಸಗಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ಕಾಯುತ್ತಿರುವ ಐಟಿ ಕಂಪನಿಗಳು ಇದಕ್ಕೆ ಆಸಕ್ತಿ ತೋರಿದ್ದು ಆಶ್ಚರ್ಯವೇನಲ್ಲ.

*ಔಟ್‌ಲುಕ್, ದಿ ಹಿಂದೂ ಮತ್ತು ಫ್ರಂಟ್ ಲೈನ್‌*ನಂತಹ ಗೌರವಾನ್ವಿತ ಪತ್ರಿಕೆ- ಮ್ಯಾಗಜೀನ್‌ಗಳು ಮತ್ತು ಕೆಲವು ಪತ್ರಿಕೆಗಳು ಮತ್ತು ಚಾನಲ್‌ಗಳ ಒಂದಿಬ್ಬರು ವರದಿಗಾರರನ್ನು ಬಿಟ್ಟರೆ ಮಾಧ್ಯಮಗಳು ಮೀಸಲಾತಿ ವಿಷಯದಲ್ಲಿ ಸಮಗ್ರವರದಿ ಮಾಡುವಲ್ಲಿ ಸೋತಿದೆ. ಸಂಪಾದಕೀಯ ಮಂಡಳಿಯಲ್ಲಿ ಜಾತಿ ವೈವಿಧ್ಯತೆ ಇದ್ದಿದ್ದರೆ ವರದಿಗಾರಿಕೆಯಲ್ಲಿ ಹೆಚ್ಚಿನ ವಸ್ತುನಿಷ್ಠತೆ ಮತ್ತು ಸಮತೋಲನ ಕಾಯ್ದುಕೊಳ್ಳಬಹುದಿತ್ತೇನೋ? ವಿದ್ಯಾರ್ಥಿಗಳಿಗೆ ಪ್ರತಿಭಟನೆ ನಡೆಸಲು ಪರೋಕ್ಷವಾಗಿ ಕುಮ್ಮಕ್ಕು ನೀಡುವ ಮೂಲಕ ಮೀಸಲಾತಿ ವ್ಯವಸ್ಥೆಯ ಬಗ್ಗೆ ತಮಗೆ ಇರುವ ಅಸಹನೆಯನ್ನು ಮೇಲುಜಾತಿಗಳ ಸಂಪಾದಕರು ಮತ್ತು ವರದಿಗಾರರು ವ್ಯಕ್ತಪಡಿಸಿದರೇ? ಹಾಗಾದರೆ ಮಾಧ್ಯಮದ ವರದಿಗಾರಿಕೆ ಉಳ್ಳವರ ಸಂಘಟನಾ ಚಳವಳಿಯ ಭಾಗವಾಗಿತ್ತೇ?

ಯಾವುದೇ ರೀತಿಯ ಅಧಿಕೃತ ದಾಖಲೆಗಳಿಲ್ಲದಿದ್ದರೂ ಮಾಧ್ಯಮಗಳಲ್ಲಿ ಮುಂದುವರೆದ ಜಾತಿಗಳ ಹತೋಟಿ ಇದೆ ಎಂಬುದು ಎಲ್ಲಾ ಪತ್ರಕರ್ತರಿಗೂ ಗೊತ್ತಿರುವ ವಿಷಯ. ೧೯೯೬ರಲ್ಲಿ ಬಿ.ಎನ್. ಉನಿಯಲ್ ನಡೆಸಿದ ಸಮೀಕ್ಷೆಯ ಪ್ರಕಾರ ದೆಹಲಿಯಲ್ಲಿ ಒಬ್ಬರೇ ಒಬ್ಬರೂ ದಲಿತ .Accredited ಪತ್ರಕರ್ತರಿರಲಿಲ್ಲ. ಕೆಲವು ದಿವಸಗಳ ಹಿಂದೆ 'ಜರ್ನಲಿಸ್ಟ್ಸ್ ಫಾರ್ ಡೆಮೊಕ್ರೆಸಿ' ಕಾರ್ಯಕ್ರಮದಲ್ಲಿ ವರದಿಯಾದಂತೆ- ಅನಧಿಕೃತವಾಗಿ, ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ Accredited ಪತ್ರಕರ್ತರ ಸಂಖ್ಯೆ ೧೦ಕ್ಕಿಂತ ಕಡಿಮೆ. ಮುಸ್ಲಿಂ ಪತ್ರಕರ್ತರ ಸಂಖ್ಯೆ ನಾನೇ ಲೆಕ್ಕ ಮಾಡಿದಂತೆ ಶೇ. ೩ಕ್ಕಿಂತ ಹೆಚ್ಚಿಲ್ಲ.

ಮಾಧ್ಯಮದ ವರದಿಗಾರಿಕೆ ಉಳ್ಳವರ ಸಂಘಟನಾ ಚಳವಳಿಯ ಭಾಗವೇ?

ಛತ್ತೀಸ್‌ಗಢದಲ್ಲಿ ಇತ್ತೀಚೆಗೆ ಆದಿವಾಸಿಗಳಿಗಾಗಿ ಆರಂಭವಾಗಬೇಕಿದ್ದ ಪತ್ರಿಕೋದ್ಯಮದ ತರಬೇತಿಯನ್ನು ನಿಲ್ಲಿಸಬೇಕಾಯಿತು. ಏಕೆಂದರೆ ತರಬೇತಿ ಪಡೆಯಲು ಅಭ್ಯರ್ಥಿಗಳೇ ಇರಲಿಲ್ಲ.

ಇದು ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಬಂದ ತಾರತಮ್ಯ ನೀತಿಯ ಪ್ರತಿಫಲ ಎಂದು ಹೇಳಿ ಸಾರಾಸಗಟಾಗಿ ತಳ್ಳಿಹಾಕುವಂತಿಲ್ಲ. ಆದರೂ ತಾರತಮ್ಯ ನಡೆದಿಲ್ಲ ಎನ್ನಲೂ ಆಗುವುದಿಲ್ಲ. ಪತ್ರಿಕೋದ್ಯಮ ಕ್ಷೇತ್ರದಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ ವಿರಳತೆಯನ್ನು ಒಪ್ಪಿಕೊಳ್ಳುವ ಧೈರ್ಯ ಮತ್ತು ಆ ನಿಟ್ಟಿನಲ್ಲಿ ಆಗಬೇಕಾದ ಸಂಕಲ್ಪ ಭಾರತೀಯ ಮಾಧ್ಯಮಗಳಲ್ಲಿ ಇಲ್ಲ.

ಒಂದು ಆದರ್ಶಮಯ ಪ್ರಪಂಚದಲ್ಲಿ ವೃತ್ತಿಪರತೆ ಮುಖ್ಯವಾದಾಗ ಪತ್ರಕರ್ತನ ಜಾತಿ, ಧರ್ಮಕ್ಕೆ ಆದ್ಯತೆ ಇಲ್ಲ. ಸಮಾಜದ ಎಲ್ಲಾ ಸ್ಥರಗಳ ಸಂಕೀರ್ಣತೆಯ ಚಿತ್ರಣ ಸಿಗಬೇಕಾದರೆ ಪತ್ರಿಕೋದ್ಯಮದಲ್ಲಿ ಬಹುಜನರ ಕೊಡುಗೆ ಅನಿವಾರ್ಯ. ವರದಿಗಾರಿಕೆಗೆ ಬೇಕಾದ ಬಹುಮುಖಿ ದೃಷ್ಟಿಕೋನ ಅತ್ಯಗತ್ಯ. ಭಾರತೀಯ ಪತ್ರಿಕೋದ್ಯಮವನ್ನು ರೋಗಗಳಾಗಿ ಕಾಡುತ್ತಿರುವ ಅನೇಕ ಸಮಸ್ಯೆಗಳು- ಕಡಿಮೆಯಾಗುತ್ತಿರುವ ಸ್ಥಳಾವಕಾಶ, ಕ್ಷೀಣಿಸುತ್ತಿರುವ ಗ್ರಾಮೀಣ ಭಾರತದ ವರದಿಗಾರಿಕೆ, ರೋಚಕತೆಮತ್ತು ಮಾರುಕಟ್ಟೆಯ ಹುಚ್ಚು, ಸುದ್ದಿಗಳಧಾರಾವಾಹೀಕರಣ- ಹೆಚ್ಚು ಹೆಚ್ಚು ದಲಿತ, ಹಿಂದುಳಿದ ವರ್ಗಗಳು ಮತ್ತು ಮುಸ್ಲಿಮರನ್ನು ಪತ್ರಿಕೆಗಳು ಮತ್ತು ಚಾನಲ್‌ಗಳು ಕೆಲಸಕ್ಕೆ ತೆಗೆದುಕೊಳ್ಳುವುದರಿಂದ ಮಾತ್ರ ಪರಿಹಾರವಾಗುವುದಿಲ್ಲ. ಆದರೆ ಕಾರ್ಯಕ್ಷೇತ್ರದಲ್ಲಿ ವೈವಿಧ್ಯತೆ ಹೆಚ್ಚಾದಂತೆ ಬರುವ ವರದಿಗಳಲ್ಲಿ, ಘಟನೆಗಳನ್ನು ಪರಿಭಾವಿಸುವ ಕ್ರಮದಲ್ಲಿ ಮೂಲಭೂತವಾದ ವ್ಯತ್ಯಾಸ ಕಾಣಸಿಗುವುದರಲ್ಲಿ ಸಂದೇಹವಿಲ್ಲ. ಇದರಿಂದ ಮಾಮೂಲಿನಂತೆಈಗ ಬರುವ ಶ್ರೀಮಂತ ನಗರ ಕೇಂದ್ರಿತ ಪತ್ರಿಕೋದ್ಯಮ ಬದಲಾಗುವುದು.

ಮೀಸಲಾತಿ ವ್ಯವಸ್ಥೆಯನ್ನು ಅಪಾಯವೆಂದು ನೋಡದೆ ಅದು ಕಾರ್ಯಕ್ಷೇತ್ರಕ್ಕೆ ವೈವಿಧ್ಯತೆ ತಂದು ಕೊಡುವ ಸಾಧನವೆಂದು ಬಳಸಿಕೊಂಡರೆ ಭಾರತದ ಪತ್ರಿಕೋದ್ಯಮಕ್ಕೆ ಹೆಚ್ಚು ಲಾಭ. ಅಭಿವೃದ್ಧಿಶೀಲ ಸಮಾಜಗಳ ಅಧ್ಯಯನ ಕೇಂದ್ರ (ಸಿಎಸ್‌ಡಿಎಸ್) ಅಂಕುರ್ ಮತ್ತು ಸರಾಯ್ ಎಂಬ ಇಬ್ಬರು ನಾಂಗ್ಲಾಮಚ್ಚಿ ಸ್ಲಂ ಹುಡುಗರಿಗೆ ಕ್ಯಾಮೆರಾ ಒದಗಿಸಿತು. ಅವರ ಮನೆಗಳು ನೆಲಸಮವಾಗುತ್ತಿದ್ದಾಗಲೇ ಈ ಇಬ್ಬರು ಹುಡುಗರು ಚಿತ್ರಿಸಿದ ದೈನಿಕ ವರದಿಗಳು ಮತ್ತು ಫ್ಲೈಶೀಟ್‌ಗಳು ಭಾರತೀಯ ಪತ್ರಿಕೋದ್ಯಮದಲ್ಲಿ ಯಾರಿಗೂ ಕಡಿಮೆ ಇಲ್ಲ. ಆಸಕ್ತರು www.sarai.net/nm.html ನೋಡಬಹುದು. ನಿಜವಾಗಿ ಸ್ಲಂ ನೆಲಸಮದ ಬಗ್ಗೆ ಬಂದ ಇತರ ವರದಿಗಳಿಗೆ ಹೋಲಿಸಿದರೆ ಈ ಇಬ್ಬರು ಮಕ್ಕಳ ವರದಿಗಾರಿಕೆ ಪರಿಣಾಮಕಾರಿಯಾಗಿದೆ.

ಡಾಕ್ಟರ್ ಗಳಾಗಬೇಕೆಂಬ ಹಂಬಲ ಹೊಂದಿರುವ ಹಿಂದುಳಿದ ವರ್ಗಗಳು ಮತ್ತು ದಲಿತವರ್ಗಗಳಿಗೆ ಸೇರಿದ ಯುವ ಪ್ರತಿಭೆಗಳು ಹೇಳುವಂತೆ, ವಿದ್ಯೆ ಯಾರ ಸ್ವತ್ತೂ ಅಲ್ಲ. ಪ್ರತಿಭೆ ತನ್ನೆಲ್ಲಾ ಆಯಾಮಗಳಿಂದ ಜಾತಿ ಮತ್ತು ಧರ್ಮವನ್ನು ಮೀರಿದ ವಿಚಾರ. ಯಾವುದೇ ಒಂದು ಸಮಾಜ ಮತ್ತುಮಾಧ್ಯಮ ಕ್ಷೇತ್ರದಲ್ಲಿರುವಂತಹ ಸಂಸ್ಥೆಗಳು ಈ ವಿಚಾರವನ್ನು ಧೃಡಪಡಿಸಿಕೊಳ್ಳದಿದ್ದರೆಮತ್ತು ಆ ನಿಟ್ಟಿನಲ್ಲಿ ಕೆಲಸ ಮಾಡದಿದ್ದರೆ ನಷ್ಟ ಆ ಸಂಸ್ಥೆಗಳಿಗೇ ಮತ್ತು ಸಮಾಜಕ್ಕೆ. ಮಾಧ್ಯಮ ಸಂಸ್ಥೆಗಳು ಪತ್ರಕರ್ತರಾಗುವ ಆಸಕ್ತಿ ಹೊಂದಿರುವ ದಲಿತ-ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತರಬೇತಿಗಳನ್ನು ಮತ್ತು ಕಾರ್ಯಾಗಾರಗಳನ್ನು ನಡೆಸುವ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಬೇಕಿದೆ.

ಮೀಸಲಾತಿ ವ್ಯವಸ್ಥೆ, ಸಹಾಯ ಧನ, ಬಂಡವಾಳ ಹೂಡಿಕೆ ಇವೆಲ್ಲವೂ ದುರ್ಬಲರಿಗೆ ಅವಕಾಶ ಕಲ್ಪಿಸಿ ಆ ಮೂಲಕ ಪ್ರತಿಭೆ ಹೊರತೆಗೆಯಲು ಬೇಕಾದ ಸಾಧನಗಳು. ಮೀಸಲಾತಿ ಪರ ಚಿಂತಕರಾದ ಯೋಗೇಂದ್ರ ಯಾದವ್, ಸತೀಶ್ ದೇಶಪಾಂಡೆ ಮತ್ತು ಪುರುಷೋತ್ತಮ್ ಅಗರ್‌ವಾಲ್ ವಾದಿಸುವಂತೆ ಯುಪಿಎ ಸರ್ಕಾರದ ಮೀಸಲಾತಿ ಧೋರಣೆ ಅತ್ಯುತ್ತಮವೇನಲ್ಲ. ಆದರೂ ಚರ್ಚೆಗೊಳಗಾಗಿ ಸಮ್ಮತಿ ಪಡೆದುಕೊಳ್ಳಬೇಕಾದ ದಾರಿಯಂತೂ ಇದಲ್ಲ. ಮೇಲು ಜಾತಿಗಳನ್ನು ಎತ್ತಿಕಟ್ಟುವಂತಹ ಸುದ್ದಿಗಾರಿಕೆ ಒಂದು ಆರೋಗ್ಯಕರ ಚರ್ಚೆಯನ್ನು ಮೊಟಕುಗೊಳಿಸುವುದೇ ಹೆಚ್ಚು. ಈ ಪರ-ವಿರೋಧಿ ಘರ್ಷಣೆಗಳ ನಡುವೆಯೂ ಮಾಧ್ಯಮ ತನ್ನ ಜವಾಬ್ದಾರಿಯನ್ನು ಕಳೆದುಕೊಳ್ಳಬಾರದು. ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮತ್ತು ಎಲ್ಲರನ್ನೂ ಒಟ್ಟಿಗೆಕೊಂಡೊಯ್ಯುವಲ್ಲಿ ಮಾಧ್ಯಮಗಳ ಪಾತ್ರ ದೊಡ್ಡದು. ಇಂತಹ ಸಂದರ್ಭದಲ್ಲಿ ಮಾಧ್ಯಮಗಳು ಸ್ವ-ವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯತೆ ಇದೆ. ಅವಕಾಶ ವಂಚಿತರಿಗೆ ತುರ್ತಾಗಿ ತರಬೇತಿ ಪ್ರಾರಂಭವಾಗಬೇಕಿದೆ. ಹೇಳಬೇಕಾದ ಎಷ್ಟೋ ಕಥೆಗಳು ಆಗ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಒಂದು ಸಮಾಜವಾಗಿ ನಾವೆಲ್ಲರೂ ಹೇಳಲು ಅವಕಾಶ ಕೊಟ್ಟಾಗ ಮಾತ್ರ ಇದು ಸಾಧ್ಯ.

ಸೌಜನ್ಯ: ದಿ ಹಿಂದೂ



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

✢ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦

✢ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೮೨, ✢ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨

✢ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೧೦೧೬, ✢ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೮೯೪

☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦೦೨೦

☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ. ಬೆಂಗಳೂರು

ಮೀಸಲಾತಿ ಚರ್ಚೆ

ಜಾತಿ ಎಂದರೆ ಅಭಿವ್ಯಕ್ತಿಯ ಕ್ರಮ

ಡಾ|| ಲಕ್ಷ್ಮೀಪತಿ ಸಿ.ಜಿ

'ಜಾತಿ'ಯನ್ನು ಎಳೆಎಳೆಯಾಗಿ ಬಿಡಿಸಿ ಸೂಕ್ಷ್ಮವಾಗಿ ನೋಡಿ, 'ಜಾತಿ' ಎಂದರೇನು? ಎಂಬುದನ್ನು ಮತ್ತಷ್ಟು ಸೂಕ್ಷ್ಮವಾಗಿ ಖಚಿತವಾಗಿ ಗ್ರಹಿಸಲು ಸಾಧ್ಯವಾಗಬಹುದು. ಜಾತಿಯನ್ನು ವಿವರಿಸಲು ಹೊಸಬಗೆಯ 'ಸಮಾಜಶಾಸ್ತ್ರೀಯ ಪ್ರತಿಭೆಯ ಅವಶ್ಯಕತೆ ಇದೆ. ಇಲ್ಲಿಯವರೆವಿಗೆ ವೈಜ್ಞಾನಿಕ ಎಂದು ಕರೆಯಲ್ಪಡುವ ಸಮಾಜಶಾಸ್ತ್ರೀಯ ಸಂಶೋಧನೆ ಕಟ್ಟಿಕೊಟ್ಟಿರುವ 'ಸಾಂಪ್ರದಾಯಿಕ' ಚೌಕಟ್ಟನ್ನು ಮೀರಬೇಕಾಗುತ್ತದೆ. ಏಕೆಂದರೆ ಜಾತಿಯ ವಿವಿಧ ಕಾಲ, ಪ್ರದೇಶ ಮತ್ತು ಸಂದರ್ಭಗಳಲ್ಲಿ ಮೂರ್ತ ಮತ್ತು ಅಮೂರ್ತ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈಗಾಗಲೇ ಜಾತಿಯನ್ನು ಕುರಿತು ನೀಡಲ್ಪಟ್ಟಿರುವ ನಿರ್ವಚನಗಳು ಅದರ ಮೂರ್ತ ಸ್ವರೂಪವನ್ನು ಹೆಚ್ಚು ಕಡಿಮೆ ಸರಿಯಾಗಿಯೇ ಗ್ರಹಿಸಿವೆ. ಏಕೆಂದರೆ ಗ್ರಾಮಾಂತರ, ಬುಡಕಟ್ಟು ಮತ್ತು ಊಳಿಗಮಾನ್ಯ ಪ್ರದೇಶಗಳಲ್ಲಿ ಜಾತಿ ಮೂರ್ತ ಸ್ವರೂಪದಲ್ಲಿ ವ್ಯಕ್ತವಾಗುತ್ತದೆ.

ಜಾತಿಯು ಭಾರತೀಯ ಸಮಾಜದ ಅತ್ಯಂತ ಸಂಕೀರ್ಣವಾದ ಸಂಸ್ಥೆಗಳಲ್ಲಿ ಒಂದು. ಎಲ್ಲಾ ಕಾಲಕ್ಕೂ ನಮ್ಮ ಸಮಾಜವನ್ನು ಪ್ರಭಾವಿಸಿದೆ. ಮುಂದೆಯೂ ಪ್ರಭಾವಿಸಲಿದೆ. ಸಮಾಜವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಸೃಜನಶೀಲ ಲೋಕದ ಜನ, ರಾಜಕಾರಣಿಗಳು, ಹೀಗೆ ಪ್ರತಿ ಗುಂಪೂ ಜಾತಿಯನ್ನು ವಿವರಿಸಿಕೊಳ್ಳಲು ಪ್ರಯತ್ನಿಸಿದೆ. 'ಜಾತಿ'ಯನ್ನು ಕುರಿತು ವಿವರಿಸುವುದು ವಿಶ್ಲೇಷಿಸುವುದು ಈ ಕಾಲದ ಶೈಕ್ಷಣಿಕ ಹಾಗೂ ಸಾಮಾಜಿಕ ವಿದ್ಯಾಮಾನವೇ ಆಗಿದೆ ಎಂದರೂ ತಪ್ಪಾಗಲಾರದು.

ಉನ್ನತ ಶಿಕ್ಷಣದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಬೇಕೆಂಬ ಪ್ರಸ್ತಾವನೆಯು ಎಬ್ಬಿಸಿದ ವಿರೋಧದ ಅಲೆಗಳು ಮತ್ತು ಅದರ ಸುತ್ತ ನೆಡೆದ ವಿದ್ಯಾಮಾನಗಳು, ಎಲ್ಲಾ ವಿದ್ವಾಂಸರಿಗಿಂತ ಹೆಚ್ಚಾಗಿ 'ಜಾತಿ'ಯನ್ನು ವಿವರಿಸಿದವು. ಈ ಬಗೆಯ ವಿವರಣೆಗಳು ಭಾರತದಲ್ಲಿ ಎಲ್ಲಾ ಕಾಲಕ್ಕೂ ದೊರಕಿವೆ. ಆ ನಿಚ್ಚಳ ಸ್ವರೂಪಗಳನ್ನು ಗ್ರಹಿಸುವ ಚಾರಿತ್ರಿಕ ಸಂದರ್ಭ ಮತ್ತು ಪರಿಪಕ್ವತೆ ಸಮಕಾಲೀನ ಸಂದರ್ಭದಲ್ಲಿ ಒದಗಿರುವಂತೆ ತೋರುತ್ತದೆ.

ನಮ್ಮ ಸಮಾಜದಲ್ಲಿ ನಡೆಯುತ್ತಿರುವ ವಿದ್ಯಮಾನಗಳಾದರೂ ಯಾವುವು? ಅವು ಜಾತಿಯನ್ನು ವಿವರಿಸುವ ಬಗೆಯಾದರೂ ಹೇಗೆ ಎಂಬುದನ್ನು ತಿಳಿದುಕೊಳ್ಳುವ ಮೊದಲು ಜಾತಿಯನ್ನು ಈಗಾಗಲೇ ವಿವರಿಸಿರುವ ರೀತಿಯನ್ನು ಸಾರಾಂಶ ರೂಪದಲ್ಲಿ ಅರ್ಥೈಸಿಕೊಳ್ಳಬಹುದು. ಜಾತಿಯನ್ನು 'ಒಳಬಾಂಧವ್ಯ ವ್ಯವಸ್ಥೆ', ರಕ್ತಸಂಬಂಧಿಗಳ ಗುಂಪು' ಶುದ್ಧ ಮತ್ತು ಅಶುದ್ಧತೆಯ ಆಧಾರದ ಮೇಲೆ ಆಹಾರ, ಉಡುಪು, ಸ್ಪರ್ಶ ಸಾರ್ವಜನಿಕ ಆಸ್ತಿಯ ಬಳಕೆಯ ಮೇಲಿನ ನಿರ್ಬಂಧ ವಿಧಿಸಿರುವ ವ್ಯವಸ್ಥೆ, ಏಣಿಶ್ರೇಣಿಯನ್ನೆ ಮೌಲ್ಯವನ್ನಾಗಿಸಿಕೊಂಡಿರುವ ವ್ಯವಸ್ಥೆ, ಹೀಗೆ ಅನೇಕ ಬಗೆಯ ವಿವರಣೆಗಳನ್ನು ನೀಡಲಾಗಿದೆ. ಆದರೆ ಇನ್ನೂ ಕೂಡ ಜಾತಿಯನ್ನು ಕುರಿತು ಪರಿಪೂರ್ಣವಾದ, ತೃಪ್ತಿಕರವಾದ ವಿವರಣೆಯನ್ನು ನೀಡುವುದು ಕಷ್ಟ ಸಾಧ್ಯವಾದ ವಿಚಾರವಾಗಿದೆ.

ಅದಕ್ಕೆ ಕೆಳಕಂಡ ಕಾರಣಗಳನ್ನು ನೀಡಬಹುದು.

೧. ಜಾತಿಯ ಅತ್ಯಂತ ಸಂಕೀರ್ಣವಾದ, ಒಳನೇಯ್ಗೆಗಳುಳ್ಳ ಸಾಂಸ್ಕೃತಿಕವಾಗಿ ಛಿದ್ರಗೊಂಡ ಚಿಕ್ಕ ಘಟಕಗಳನ್ನೊಳಗೊಂಡ ವ್ಯವಸ್ಥೆಯಾಗಿದೆ. (ಸುಮಾರು ಸದ್ಯಕ್ಕೆ ೧೦೦೦೦ ಜಾತಿ ಉಪ ಜಾತಿಗಳ ಸಂಕಲನ).

೨. ಪ್ರತಿಯೊಂದು ಘಟಕವೂ ತನ್ನ ಆರಾಧನೆ ಮತ್ತು ಆಚರಣೆಗಳ ಪ್ರತ್ಯೇಕತೆಯನ್ನು ಹೊಂದಿದೆ.

೩. ಜಾತಿಯು ಎಂದು ನಿರ್ದಿಷ್ಟ ರೂಪದಲ್ಲಿರದೆ ಆಯಾ ಚಾರಿತ್ರಿಕ ಕಾಲಘಟ್ಟಕ್ಕೆ ತಕ್ಕಂತೆ ಮೇಲ್ಮಟ್ಟದ ಲಕ್ಷಣಗಳನ್ನು ಬದಲಾಯಿಸಿಕೊಳ್ಳುತ್ತಿರುತ್ತದೆ.

೪. ತೀವ್ರ ನಾಗರಿಕರಣ, ಔದ್ಯೋಗಿಕರಣಕ್ಕೆ ಒಳಗಾಗದ ಕೆಲವು ಪ್ರದೇಶಗಳಲ್ಲಿ ಜಾತಿಯು ತನ್ನ ಪ್ರಾಚೀನ ಸ್ವರೂಪ!ವನ್ನು ಉಳಿಸಿಕೊಂಡಿರುವದರ ಜೊತೆಗೆ ಆಧುನಿಕವೂ ಆಗಿರುವುದು.

೫. ವರ್ಗ ಮತ್ತು ಜಾತಿಗಳ ಮುಖಾಮುಖಿಯಿಂದ 'ವರ್ಗದ ಕೆಲವು ಲಕ್ಷಣಗಳು ಜಾತಿಯಲ್ಲೂ, ಜಾತಿಯ ಕೆಲವು ಲಕ್ಷಣಗಳು 'ವರ್ಗ'ದಲ್ಲಿಯೂ ಕಂಡು ಬರುತ್ತವೆ.

೬. ಜಾತಿ ಮತ್ತು ಬುಡಕಟ್ಟುಗಳ ನಡುವಿನ ವ್ಯತ್ಯಾಸ ಕರಗುವುದು ಮತ್ತು ಏಕ ಕಾಲದಲ್ಲಿ ತಮ್ಮ ಅಸ್ಮಿತೆಯನ್ನಳಿಸಿಕೊಂಡು, ಅಸ್ತಿತ್ವಕ್ಕಾಗಿ ಹೋರಾಡುವುದು.

೭. ಬ್ರಿಟೀಷ್ ಮತ್ತು ಸ್ವತಂತ್ರ ಭಾರತೀಯ ಸರ್ಕಾರದ ಸಂವಿಧಾನದ ಮಧ್ಯ ಪ್ರವೇಶದಿಂದ ಜಾತಿಯ ಸಾಂಪ್ರದಾಯಿಕ ಗುಣಲಕ್ಷಣಗಳು ಕೆಲ ಮಟ್ಟಿಗೆ ಭಾರತದ ಕೆಲವು ಭಾಗಗಳಲ್ಲಿ ಕಣ್ಮರೆಯಾಗಿವೆ.

೮. ಎಡಪಂಥೀಯ ಮತ್ತು ಉದಾರವಾದಿ ಪ್ರಜಾಸತಾತ್ಮಕ ಚಳುವಳಿಗಳು, ದಲಿತ ಸಂಘಟನೆಗಳು, ರೈತ ಸಂಘ, ಗಾಂಧಿವಾದಿಗಳು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸುವ ಪ್ರಯತ್ನದ ಫಲವಾಗಿ ಸಡಿಲಗೊಂಡು ಸ್ವರೂಪ ಬದಲಾಯಿಸಿಕೊಂಡಿರುವುದು.

೯. ಜಾತಿ ಅಸ್ಮಿತೆ, ಚಾರಿತ್ರಿಕ ಅನಿವಾರ್ಯತೆ ಕೆಲವೊಮ್ಮೆ ಸಾಮಾಜಿಕ ಬದಲಾವಣೆ ಆಂದೋಳನದ ಭಾಗವಾಗಿಯೂ ಅಂತರ ಜಾತಿಯ ವಿವಾಹಗಳು ಜರುಗಿ ಜಾತಿಯು ಒಳ ಬಾಂದವ್ಯ ವ್ಯವಸ್ಥೆ, ಎಂಬ ವಿವರಣೆಗಳಿಗೆ ಧಕ್ಕೆ ಒದಗಿರುವುದು.

೧೦ ಕೆಳಜಾತಿಗಳ ಮೇಲೆ ಮೇಲ್ಜಾತಿಗಳೆಂದು ಕರೆಯಲ್ಪಟ್ಟ ಗುಂಪುಗಳಿಂದ ಭೂ ಒಡೆತನ, ಸಾಮಾಜಿಕ ಸ್ಥಾನಮಾನ ಮೊದಲಾದ ವಿಷಯಗಳ ಸಂಬಂಧ ಶೋಷಣೆ ನಡೆಯುತ್ತಿರುವುದು.

೧೧. ಅನೇಕ ಜಾತಿಗಳ ಮಠಮಾನ್ಯ ಜಾತಿ ಸಂಘಗಳ ಸ್ಥಾಪನೆ ಮತ್ತು ವೋಟು ಬ್ಯಾಂಕನ್ನು ಗಟ್ಟಿಗೊಳಿಸಿಕೊಳ್ಳುವಯತ್ನ,

೧೨. ಜಾತಿಯನ್ನು ವಿವರಿಸಲೆತ್ನಿಸುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜಾತಿಯ ಗುರುತನ್ನು ಆವಿವರಣೆಗಳನ್ನೊಳಗೊಂಡೆ ಅಭಿವ್ಯಕ್ತಿಸುತ್ತಾನೆ. ಪೌರಾತ್ಯ ಮತ್ತು ಭಾರತ ಶಾಸ್ತ್ರಜ್ಞರು (ಭಾರತೀಯರಲ್ಲದವರು) ತಾವು ನಂಬಿದ, ತಿಳಿದ, ಮಾಹಿತಿಗಳ ಆಧಾರದ ಮೇಲೆ ವಿವರಿಸುವುದು. ಇನ್ನು ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಲೇ ಹೋಗ ಬಹುದು, ಇಷ್ಟೊಂದು ಅಡೆತಡೆಗಳ ನಡುವೆ. ಜಾತಿಗೆ ಒಂದು ತೃಪ್ತಿಕರವಾದ ವಿವರಣೆ ನೀಡುವುದು ಕಷ್ಟಾ ಸಾಧ್ಯವಾದ ವಿಚಾರವಾಗಿದೆ. ಏಕೆಂದರೆ ಭಾರತದ ಸಮಸ್ತ ಜನಸಮುದಾಯ ('ಹಿಂದೂ' ಎಂದು ಕರೆಯಲ್ಪಡುವ ಧರ್ಮವನ್ನು ಹೊರತು ಪಡಿಸಿಯೂ. ಎಲ್ಲ ಧರ್ಮಗಳು ಒಳಗೊಂಡಂತೆ) ಜಾತಿ ಪದ್ಧತಿಯನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಆಚರಿಸುತ್ತದೆ, ಅಭಿವ್ಯಕ್ತಿಸುತ್ತದೆ. ಆದುದರಿಂದ 'ಜಾತಿ'ಯನ್ನು ಕುರಿತ ಒಂದು Discourse ರೂಪಿಸುವುದು ಮತ್ತಷ್ಟು ಕಠಿಣವಾದ ಕೆಲಸವಾಗುತ್ತದೆ.

'ಜಾತಿ' ನಮ್ಮ ಸಮಾಜದ 'ಅಣು' ಎಂದು ಕರೆದರೆ ಅಷ್ಟೇನೂ ತಪ್ಪಾಗಲಾರದು. ಅಣುವಿನ ರಚನೆ ಕಾರ್ಯ ಮತ್ತು ಶಕ್ತಿಯನ್ನು ವಿವರಿಸಲು ಪ್ರಾಕೃತಿಕ ವಿಜ್ಞಾನಿಗಳು ಪರಿಶ್ರಮ ಪಡುವಂತೆ ಜಾತಿಯನ್ನು ವಿವರಿಸಲು ಸಮಾಜ ವಿಜ್ಞಾನಿಗಳು ಪರಿಶ್ರಮ ಪಡುತ್ತಿದ್ದಾರೆ. 'ಅಣು'ವಿನ ಒಳಗನ್ನು ಅರಿಯ ತೊಡಗಿದಂತೆ ಅದನ್ನು ಕುರಿತ ತಿಳುವಳಿಕೆ ಹೇಗೆ ಹೆಚ್ಚ ತೊಡಗಿದೆಯೋ ಹಾಗೆಯೇ 'ಜಾತಿ'ಯನ್ನು ಎಳೆಎಳೆಯಾಗಿ ಬಿಡಿಸಿ ಸೂಕ್ಷ್ಮವಾಗಿ ನೋಡಿ, 'ಜಾತಿ' ಎಂದರೇನು? ಎಂಬುದನ್ನು ಮತ್ತಷ್ಟು ಸೂಕ್ಷ್ಮವಾಗಿ ಖಚಿತವಾಗಿ ಗ್ರಹಸಲು ಸಾಧ್ಯವಾಗಬಹುದು.

ಜಾತಿಯನ್ನು ವಿವರಿಸಲು ಹೊಸಬಗೆಯ 'ಸಮಾಜಶಾಸ್ತ್ರೀಯ ಪ್ರತಿಭೆಯ ಅವಶ್ಯಕತೆ ಇದೆ. ಇಲ್ಲಿಯವರೆವಿಗೆ ವೈಜ್ಞಾನಿಕ ಎಂದು ಕರೆಯಲ್ಪಡುವ ಸಮಾಜಶಾಸ್ತ್ರೀಯ ಸಂಶೋಧನೆ ಕಟ್ಟಿಕೊಟ್ಟಿರುವ 'ಸಾಂಪ್ರದಾಯಿಕ' ಚೌಕಟ್ಟನ್ನು ಮೀರಬೇಕಾಗುತ್ತದೆ. ಏಕೆಂದರೆ

ಜಾತಿಯ ವಿವಿಧ ಕಾಲ, ಪ್ರದೇಶ ಮತ್ತು ಸಂದರ್ಭಗಳಲ್ಲಿ ಮೂರ್ತ ಮತ್ತು ಅಮೂರ್ತ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈಗಾಗಲೇ ಜಾತಿಯನ್ನು ಕುರಿತು ನೀಡಲ್ಪಟ್ಟಿರುವ ನಿರ್ವಚನಗಳು ಅದರ ಮೂರ್ತ ಸ್ವರೂಪವನ್ನು ಹೆಚ್ಚು ಕಡಿಮೆ ಸರಿಯಗಿಯೇ ಗ್ರಹಿಸಿವೆ. ಏಕೆಂದರೆ ಗ್ರಾಮಾಂತರ, ಬುಡಕಟ್ಟು ಮತ್ತು ಊಳಿಗಮಾನ್ಯ ಪ್ರದೇಶಗಳಲ್ಲಿ ಜಾತಿ ಮೂರ್ತ ಸ್ವರೂಪದಲ್ಲಿ ವ್ಯಕ್ತವಾಗುತ್ತದೆ.

ಆದರೆ ನಾಗರೀಕರಣಗೊಂಡ ವರ್ಗದೊಡನೆ ಕಲಸಿ ಹೋದ ಜಾತಿ ವ್ಯವಸ್ಥೆಯು ಹೆಚ್ಚು ಅಮೂರ್ತವಾಗಿದ್ದು ಅದನ್ನು ವಿವರಿಸುವಲ್ಲಿ ಈಗಾಗಲೇ ಇರುವ ಜಾತಿಯನ್ನು ಕುರಿತ ಸಾಂಪ್ರದಾಯಿಕ ನಿರ್ವಚನಗಳು ಸೋಲುತ್ತವೆ. ಈಗ ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ತರುವಾಗ ಉಂಟಾದ ಪ್ರತಿಭಟನೆಯ ಸಂದರ್ಭದಲ್ಲಿ ಜಾತಿಯ ಅಮೂರ್ತ ಸ್ವರೂಪವು ಅತ್ಯುಗ್ರ ರೀತಿಯಲ್ಲಿ ವ್ಯಕ್ತವಾಯಿತು ಪ್ರತಿರೋಧವು ತನ್ನಷ್ಟಕ್ಕೆ ತಾನೇ 'ಸಮಾನತೆ'ಯ ಪರಿಭಾಷೆಯನ್ನು ಮಾತನಾಡುತ್ತಾ ಪ್ರಾಚೀನ ಜಾತಿ ವ್ಯವಸ್ಥೆಗಿಂತಲೂ ಹೆಚ್ಚು ಉಗ್ರವಾಗಿ ಮತ್ತು ಕ್ರೂರವಾಗಿ ಜಾತಿ ವ್ಯವಸ್ಥೆಯನ್ನು ಅಮೂರ್ತ ಸ್ವರೂಪದಲ್ಲಿ ಪುನರುತ್ಪಾದಿಸಿತು. ಮೇಲ್ಜಾತಿಯ ಹಿಡಿತದಲ್ಲಿರುವ ಮಾಧ್ಯಮಗಳು ಮತ್ತು ಅದರಲ್ಲಿರುವ ಬ್ರಾಹ್ಮಣ ನೌಕರರು ತಮ್ಮ ಜಾತಿಯನ್ನು ಯಾವುದೇ ಮುಚ್ಚುಮರೆಯಿಲ್ಲದೆ ಅಭಿವ್ಯಕ್ತಿಸಿದರು. ೧೯೨೦ ರ ದಶಕದಲ್ಲಿ ಮೀಸಲಾತಿಯನ್ನು ವಿರೋಧಿಸಿ ತಮ್ಮ ಜಾತಿಯನ್ನು ಹೇಗೆ ವಿಶ್ವೇಶ್ವರಯ್ಯ ಅಭಿವ್ಯಕ್ತಿಸಿದರೋ ಹಾಗೆಯೇ ಆಧುನಿಕ ಐಟಿ ವ್ಯವಸ್ಥೆಯ ಮನು ಇನ್ಫೊಸಿಸ್ ನಾರಾಯಣ ಮೂರ್ತಿ ತನ್ನ ಜಾತಿಯನ್ನು ಈ ಕಾಲಘಟ್ಟದಲ್ಲಿ ಅಭಿವ್ಯಕ್ತಿಸಿದರು. ಖ್ಯಾತ ಪತ್ರಕರ್ತ, ಬಿಜೆಪಿಯ ಅರಣ್‌ಶೌರಿಯಂತೂ ಈಗಾಗಲೇ ಮೀಸಲಾತಿ ವಿರೋಧಿ ಪುಸ್ತಕವನ್ನು ಬರೆದು ತಮ್ಮ ಜಾತಿಯನ್ನು ನಿಚ್ಚಳವಾಗಿ ಅಭಿವ್ಯಕ್ತಿಸಿದ್ದಾರೆ. ಮೀಸಲಾತಿ ವಿರೋಧಿ ಪ್ರತಿಭಟನೆಯಲ್ಲಿ ಕಂಡು ಬಂದ ಭಾಷೆ, ಸಂಕೇತ,

> **ಮೀಸಲಾತಿ ಜಾತಿ ಆಧಾರಿತವಾಗಿರಬೇಕೆಂಬ ವಾದ ವ್ಯಾಪಕವಾಗಿದೆ. ಆದರೆ ಜಾತಿ ಹಾಗೂ ಅದರ ವಿವಿಧ ಆಯಾಮಗಳನ್ನು ಕರಿತ ಚರ್ಚೆ ಒಂದು ಸೀಮಿತ ವ್ಯಾಪ್ತಿಯನ್ನು ಬಿಟ್ಟು ಬೆಳೆಯುತ್ತಲೇ ಇಲ್ಲ. ಜಾತಿ ಹಾಗೂ ಅದರ ವಿವಿಧ ರೂಪಗಳನ್ನು ಕುರಿತು ಅಪರೂಪದ ಚರ್ಚೆ ಇಲ್ಲಿದೆ.**

ಪ್ರತಿಭಟನೆಯ ವಿಧಾನ, ಸಂಹವನ ಬೆರಳಣಿಕೆಯ ಹಿಂದುಳಿದ ಜಾತಿಗಳ ಪಾಲ್ಗೊಳ್ಳುವಿಕೆ ಮೊದಲಾದವನ್ನು ಜಾತಿಯ ಸಾಂಪ್ರದಾಯಿಕ ನಿರ್ವಚನಗಳ ಚೌಕಟ್ಟಿನಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇಂಥ ಪರಿಸ್ಥಿತಿಯು ನಮ್ಮನ್ನು ಸಾಂಪ್ರದಾಯಿಕ ಜಾತಿಯ ಲಕ್ಷಣಗಳಿಲ್ಲದ ಅಮೂರ್ತ ಜಾತಿ ವ್ಯವಸ್ಥೆಯ ಸ್ವರೂಪವನ್ನು ಭಿನ್ನ ಬಗೆಯಲ್ಲಿ ನಿರ್ವಚಿಸುವ ಒತ್ತಾಯಕ್ಕೆ ಒಳಪಡಿಸುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಯಲ್ಲಿ ಜಾತಿಯನ್ನು ಕೆಳಕಂಡಂತೆ ನಿರ್ವಚಿಸಬಹುದು.

'ಜಾತಿ' ಎನ್ನುವುದು ವ್ಯಕ್ತಿಯೊಬ್ಬನು/ಳು ತಾನು ಹುಟ್ಟಿದ ಕುಟುಂಬ; ಜಾತಿಯ ಸಾಂಸ್ಕೃತಿಕ ಸಾಮಾಜೀಕರಣದಿಂದ ರೂಪುಗೊಂಡ ಅವನ/ಅವಳ ಭಾಷೆ, ಸಂಕೇತ, ಆಂಗಿಕ ಭಾಷೆ, ಮೌಲ್ಯ, ಸಾಮಾಜಿಕ ಗ್ರಹಿಕೆಯ ಸಾಮಾರ್ಥ್ಯ, ಸಮಾಜದ ಇತರ ಸಹವಾಸಿಗಳ ನಡುವಿನ ಸಂಹವನ-ಸಂಪರ್ಕ, ತನ್ನದಲ್ಲದ ಇತರ ಜಾತಿಯವರನ್ನು ಕುರಿತ ಅಥೈಸುವಿಕೆ ಕ್ರಿಯೆ-ಪ್ರತಿಕ್ರಿಯೆ, ಮೇಲರಿಮೆ-ಕೀಳರಿಮೆ, ಅಧೀನತೆ-ಅಧಿಕಾರ, ಸೃಜನಶೀಲತೆ ಜೀವನಶೈಲಿ, ಸಮಾಜದ ಭವಿಷ್ಯದನಕಾಶೆ, ಆಶಯ-ವಿಚಾರ, ಮೊದಲಾದವುಗಳೆಲ್ಲದರ ನಡುವೆ ಏರ್ಪಡುವ ಸಾವಯವ ಸಂಬಂಧದಿಂದ ರೂಪುಗೊಳ್ಳುವ ವ್ಯಕ್ತಿತ್ವ ಮತ್ತು ಅಂಥ ವ್ಯಕ್ತಿತ್ವದಿಂದ ಹೊರಹೊಮ್ಮುವ 'ಅಭಿವ್ಯಕ್ತಿ' ಯೇ ಜಾತಿಯಾಗಿದೆ. ಪ್ರತಿ ವ್ಯಕ್ತಿಯೂ ಈ ಬಗೆಯ ಅಭಿವ್ಯಕ್ತಿಯನ್ನು ಪುನುರುತ್ಪಾದಿಸತ್ತಲೇ ಇರು ತ್ತಾನೆ. ಈ ಬಗೆಯ ಪುನುರುತ್ಪಾದನೆಯ ಮೂಲಕವೇ 'ಜಾತಿ'ಯ ಅರಿವು-ಇರವು ಧೃಡಗೊಳ್ಳತೊಡಗುತ್ತದೆ.

ಜಾತಿಯನ್ನು ಕುರಿತ ಈ ಬಗೆಯ ವಿವರಣೆಯು ಬಹಳ ಅಮೂರ್ತವಾಗಿರುತ್ತದೆ. ಮತ್ತು ಅದನ್ನು ಗ್ರಹಿಸಬೇಕಾದರೆ ಕೆಲವೊಮ್ಮೆ ಸೂಕ್ಷ್ಮ ಪ್ರತಿಭೆಯ ಅವಶ್ಯಕತೆಯಿರುತ್ತದೆ. ಕೆಲವೊಮ್ಮೆ ಅನೇಕ ಜಾತಿಗಳ ನಡುವಿನ ಅಭಿವ್ಯಕ್ತಿ ಕ್ರಮ ಕಲ್ಪಿಸಿ ಹೋಗಿರಬಹುದು. ಹಾಗೆಯೇ ಪ್ರತ್ಯೇಕವಾಗಿಯೂ ಇರಬಹುದು. ಇದಕ್ಕೆ ಜಾತಿಗಳ ಕೊಡುಕೊಳ್ಳುವಿಕೆ, ಒಳಗೊಳ್ಳುವಿಕೆ ಹೊರಗಿಡುವಿಕೆ ಮತ್ತು ಲೇಖನದ ಆರಂಭದಲ್ಲಿ ವ್ಯಕ್ತ ಪಡಿಸಿರುವ ಅಂಶಗಳೂ ಕಾರಣವಾಗಿರುತ್ತವೆ. ಆದರೂ 'ಜಾತಿ'ಯ ಆಧುನಿಕ ರೂಪವೆಂದರೆ ಅಭಿವ್ಯಕ್ತಿಯೇ ಆಗಿದೆ. ಈ ಅಭಿವ್ಯಕ್ತಿಯ ಕ್ರಮವು ಸೂಕ್ಷ್ಮವಾಗಿ ತನ್ನ ಜಾತಿಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ತರಂಗಗಳನ್ನು ಹೆಣೆದು ಪರಸ್ಪರ ಅಂತ್ಯದ ಒಂದು ಜಾತಿಯ ಜಾಲವಾಗಿ ಪರಿಣಾಮಿಸಿ ಬಿಡುತ್ತದೆ. 'ಜಾತಿ ಎಂದರೆ ಅಭಿವ್ಯಕ್ತಿ'ಯ ಕ್ರಮ ಎಂಬ ನಿರ್ವಚನವನ್ನು ಕೆಲವು ಅಂಶಗಳು ಮತ್ತು ನಿದರ್ಶನಗೊಂದಿಗೆ ವಿವರಿಸಿಕೊಳ್ಳಬಹುದು.

ಭಾಷೆ: ಒಂದು ಅರ್ಥದಲ್ಲಿ ಭಾಷೆಯೇ ಸಾಮಾಜಿಕ ರಚನೆಯನ್ನು ಗ್ರಹಿಸುವ ಪ್ರಬಲ ಸಾಧನವಾಗಿದೆ. ಭಾಷೆಯೇ ಮಾನವನ ಸಕಲ ವ್ಯಕ್ತಿತ್ವದ ಅಭಿವ್ಯಕ್ತಿ ಸಾಧನವಾಗಿದ್ದು, ಜಾತಿಯನ್ನು ಭಾಷೆ ಅತ್ಯುತ್ತಮವಾಗಿ ವಿವರಿಸಬಲ್ಲದು ಜಾತಿಯನ್ನು ಅಭಿವ್ಯಕ್ತಿ ಕ್ರಮವಾಗಿ ಗ್ರಹಿಸಲು ಭಾಷೆ ಅತ್ಯುತ್ತಮ ಸಾಧನ. ಭಾಷೆಯನ್ನು ಅದರ ಸಾಂದರ್ಭಿಕ ಮತ್ತು ಧ್ವನ್ಯಾರ್ಥ ಗ್ರಹಿಸಬೇಕಾಗುತ್ತದೆ. ಭಾಷೆಯ ವಿವಿಧ ರೂಪುಗಳಾದ ಸಂಭಾಷಣೆ. ವ್ಯಾಕರಣ, ಸಾಹಿತ್ಯದಲ್ಲಿ ಜಾತಿಯು ನಿಚ್ಚಳವಾಗಿ ಅಭಿವ್ಯಕ್ತಗೊಳ್ಳುತ್ತದೆ. ತನ್ನ ರಚನೆಯಲ್ಲಿ ಮೇಲ್ನೋಟಕ್ಕೆ ಎಲ್ಲರಿಗೂ ಅನ್ವಯಿಸಬಹುದಾದ ಸಾರ್ವತ್ರಿಕ ಅಂಶದಂತೆ ಕಂಡು ಬಂದರೂ 'ಜಾತಿ' ಯನ್ನು ಧ್ವನಿಯಲ್ಲಿ ಅಡಿಗಿಸಿಟ್ಟುಕೊಂಡಿರುತ್ತದೆ. ಸಾಮಾಜೀಕರಣದ ಮೇಲೆ ಜಾತಿಯು ಉಂಟುಮಾಡಿರುವ ಪರಿಣಾಮದಿಂದ ಭಾಷೆಯು ಜಾತಿಯ ಧ್ವನಿಯಿಂದ' ತಪ್ಪಿಸಿಕೊಳ್ಳಲಾರದು ಕನ್ನಡ ಸಾಂಸ್ಕೃತಿಕ ಸಾಹಿತ್ಯ ಲೋಕದಲ್ಲಿ ಯಾರನ್ನಾದರೂ ಇತರರು ಜಾತಿವಾದಿಯೆಂದು ಆರೋಪಿಸುವುದು. ತಾನು 'ಜಾತಿವಾದಿಯಲ್ಲವೆಂದು ವೃಥಾ ಪೂರ್ವಾಗ್ರಹದಿಂದ ಆರೋಪಿಸಲಾಗಿದೆಯೆಂದು ಆರೋಪಕ್ಕೊಳಗಾಗುವುದು ನಡದೇ ಇರುತ್ತದೆ. ವಾಸ್ತವವೆಂದರೆ ಪ್ರಜ್ಞಾಪೂರ್ವ 'ಜಾತಿಯಿಂದ ತಪ್ಪಿಸಿಕೊಂಡನು/ಳು 'ಜಾತಿ'ಯಿಂದ ರೂಪುಗೊಂಡ ಭಾಷೆಯ ಧ್ವನಿಯಿಂದ ತಪ್ಪಿಸಿಕೊಳ್ಳ ಲಾರದೇ ಹೋಗುತ್ತಾನೆ. ಆರೋಪ-ಪ್ರತ್ಯಾರೋಪ ಮತ್ತು ಸಮರ್ಥನೆಯಲ್ಲಿಯೇ ಜಾತಿ ಅಡಗಿರುತ್ತದೆ.

ಸಂಕೇತ: ಜಾತಿಯ ಸಂಕೇತಗಳಾದ ಕಿವಿಯಲ್ಲಿ ಧರಿಸುವ ವಾಲೆ, ಕೈಕಡಗ, ನಾಮ, ಮುದ್ರೆ, ಶಿವದಾರ, ಜನಿವಾರ ಮೊದಲಾದವು ಜಾತಿಯ ಸಂಕೇತಗಳಾಗಿ ವ್ಯಕ್ತವಾಗುತ್ತವೆ, ಎಲ್ಲರಿಗೂ ಗೊತ್ತಿರುವ ವಿಚಾರವೇ. ಬ್ರಾಹ್ಮಣ ಬನಿಯಾ. ಲಿಂಗಾಯುತ. ವೈಶ್ಯರು ಮೊದಲಾದ ಜಾತಿ

ಗಳಲ್ಲಿ ಶೇಕಡ ೯೫ ರಷ್ಟು ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಏಕ ಪ್ರಕಾರದಲ್ಲಿ ಕಾಣಿಸಿಕೊಳ್ಳುತ್ತವೆ. ಬ್ರಾಹ್ಮಣ ಮತ್ತು ಲಿಂಗಾಯುತ, ದಾರದ ಜಾತಿಗಳು ಏಕಕಾಲದಲ್ಲಿ ಜಾತಿ ಮತ್ತು ಧರ್ಮದ ಸ್ವರೂಪವನ್ನು ಪಡೆದಿವೆ. ಆದುದರಿಂದ ಯಾವುದೇ ಸಂಕೋಚವಿಲ್ಲದೆ ಈ ಜಾತಿಗಳ ಜನ ತಮ್ಮ ಜಾತಿಯನ್ನು ಸಂಕೇತದ ಮೂಲಕ ಅಭಿವ್ಯಕ್ತಿಸುತ್ತಾರೆ. ಆದುದರಿಂದ ಅವರಿಗೆ 'ಇತರ'ರಿಗಿಂತ ಹೆಚ್ಚಿನ ಸಾಮಾಜಿಕ ಸ್ಥಾನಮಾನವೂ ಲಭ್ಯವಾಗುತ್ತದೆ. ಆದರೆ ಅಸ್ಪೃಶ್ಯರೆಂದು ಕರೆಯಲ್ಪಟ್ಟಿರುವ ಜಾತಿಗಳು, ಬುಡಕಟ್ಟುಗಳು ನಗರೀಕರಣಗೊಂಡ, ಅಥವಾ ಮೇಲ್ಜಾತಿಗಳ ಜೊತೆಗೆ, ಸಾಮಾಜಿಕ ಸ್ಥಾನಮಾನಕ್ಕಾಗಿ ಸ್ಪರ್ಧೆಗಿಳಿದಾಗ ಕೀಳರಿಮೆಯ ಭಯದಿಂದ ಈ ಸಂಕೇತಗಳನ್ನು ತ್ಯಜಿಸಿದ ಉದಾಹರಣೆಗಳಿವೆ. ಬ್ರಾಹ್ಮಣರು ಲಿಂಗಾಯತರು ಆಧುನಿಕ ಕಾಸ್ಮೋಪಾಲಿಟನ್ ಜಗತ್ತಿನಲ್ಲಿ ತಮ್ಮ ಬಾಹ್ಯ ಸಂಕೇತಗಳನ್ನು ಮರೆಮಾಚಿರಬಹುದು ಆದರೆ ತ್ಯಜಿಸಬಹುದು ಆದರೆ ತಮ್ಮ ಆಚರಣೆಗಳ ಮೂಲಕ ಹೊರಡಿಸುವ ಸಂಕೇತಗಳನ್ನು ಮಾತ್ರ ಮರೆಮಾಚಲಾಗುವುದಿಲ್ಲ. ಬೆಂಗಳೂರಿನ ಐಟಿ ಕಂಪನಿಗಳಲ್ಲಿ ನಡೆಯುವ ಅಧಿಕೃತ ಭೋಜನ ಕೂಟಗಳಲ್ಲಿ ಸಸ್ಯಹಾರವನ್ನು ಕಡ್ಡಾಯ ಮಾಡಿ, ಮಾಂಸಹಾರವನ್ನು ಭೋಜನದ ಭಾಗವಾಗದಂತೆ ನಿರಾಕರಿಸಲಾಗುತ್ತದೆ. ಇಲ್ಲಿ ಮೇಲ್ನೋಟಕ್ಕೆ ಜಾತಿ ರಹಿತವಾಗಿ ಕಾಣಿಸಿಕೊಳ್ಳುವ ಸಸ್ಯಹಾರಿ ಜಾತಿಗಳು ಅಭಿವ್ಯಕ್ತಿಸುವುದಾದರು ಸಂಕೇತವಾದರೂ ಜಾತಿಯ ಮೇಲರಿಮೆ ಕೀಳರಿಮೆಯೇ ಆಗಿದೆ.

ಆಂಗಿಕ ಭಾಷೆ: ಆಂಗಿಕ ಭಾಷೆಯೂ ಕೂಡ ಜಾತಿಯಿಂದ ರೂಪುಗೊಂಡೇ ಪ್ರಕಟವಾಗುತ್ತದೆ. ಕಣ್ಣಿನ ನಡುವಿನ ಸಂಪರ್ಕ, ಆಕ್ರಮಣಕಾರಿ ಅಥವಾ ಆದೇಶಿಸುವ ಶೈಲಿಯ ಕೈ ಕಾಲುಗಳ ಚಲನೆಯ ಶೈಲಿ, ಬೆರಳು ತೋರಿಸುವ, ಹೆಗಲ ಮೇಲೆ ಕೈ ಹಾಕಿ ಸ್ಪರ್ಶಿಸುವ, ಮೆಚ್ಚುವ ಶೈಲಿಯಲ್ಲಿ ಬೆನ್ನು ತಟ್ಟುವ ಶೈಲಿ ಹಾಗೆಯೇ ತಲೆ ಕೆರೆದುಕೊಳ್ಳುವ, ದೇಹವನ್ನು ಸಂಕೋಚದಿಂದ ಕುಬ್ಜಗೊಳಿಸಿಕೊಳ್ಳುವ ಉಗ್ಗುವ. ಹೇಳಬೇಕಾದುದನ್ನು ಹೇಳಲಾಗದೇ ಮತ್ತೇನನ್ನು ಹೇಳುವ, ಸಂಕೋಚದ ನಗೆ ಬೀರುವುದು ಸೂಕ್ಷ್ಮವಾಗಿ ನೋಡಿದರೆ ಜಾತಿಯ ಅಭಿವ್ಯಕ್ತಿಯೇ ಆಗಿರುತ್ತಾರೆ. ಈ ಅಭಿವ್ಯಕ್ತಿಯ ಕ್ರಮ ತಿರುವು ಮುರವು ಆಗಬಹುದು, ಅದು ಕೆಳ ಜಾತಿಗಳೆಂದು ಕರೆಯಲ್ಪಟ್ಟ ಸಮುದಾಯಗಳು ಮೇಲ್ಜಾತಿಯ ನಿರಂತರ ಒತ್ತಾಯಕ್ಕೆ ಒಳಗಾಗಿ ಅದರಂತೆ ವರ್ತಿಸಬಹುದು ಅಪಹರಣಕ್ಕೊಳಗಾದವನು ಅಪಹರಣಕಾರವನ್ನೇ ಅಭಿಮಾನಿಸುವಂತೆ, ಅನುಸರಿಸುವಂತಿರುತ್ತದೆ. ಅದನ್ನು ಎಂ.ಎನ್. ಶ್ರೀನಿವಾಸ 'ಸಂಸ್ಕೃತಾನುಕರಣ'ವೆಂಬ ಪರಿಕಲ್ಪನೆಯನ್ನು ಮಂಡಿಸುವ ಮೂಲಕ ತಮ್ಮ ಜಾತಿಯನ್ನು ಅಭಿವ್ಯಕ್ತಿಸುತ್ತಾರೆ.

ಸಂಪರ್ಕ-ಸಂವಹನ: ವ್ಯಕ್ತಿಗಳ ನಡುವೆ ಸಂಪರ್ಕ ಅಥವಾ ಸಂವಹನ ಶೂನ್ಯದಲ್ಲಿ ಏರ್ಪಡುವುದಿಲ್ಲ. ಭೌತಿಕ ಪರಸ್ಪರ, ಮುಖಾ-ಮುಖಿ, ಸಮಾನ ಭಾಷೆ (ಮೌಖಿಕ-ಆಂಗಿಕ) ಸಮಾನ ಸಿದ್ಧಾಂತ ಪರಸ್ಪರ ಕೊಡು-ಕೊಳ್ಳುವಿಕೆ, ಸಮಾನ ಆಸಕ್ತಿ ಕ್ರೀಡೆ, ಸಮೂಹ ಮಾಧ್ಯಮ ಮತ್ತಾವುದರ ಮೂಲಕವಾದರೂ ಆಗಬಹುದು. ಸಂಪರ್ಕ ಸಂವಹನವೆಂಬುದು ಶೂನ್ಯದಿಂದ ಏರ್ಪಡುವುದಿಲ್ಲ. ಪ್ರಸ್ತುತ ಚರ್ಚೆಗಾಗಿ ಜಾತಿಯ ಬಾಹ್ಯ ಸಂಕೇತಗಳನ್ನು ತ್ಯಜಿಸಿದ್ದ ಪರಸ್ಪರರ ಜಾತಿಗಳನ್ನು ಮುಕ್ತವಾಗಿ ಘೋಷಿಸದಿದ್ದರೂ ಕೂಡ ಲೇಖನದ ಆರಂಭದಲ್ಲಿಯೇ ಪ್ರಸ್ತಾಪಿಸಿರುವಂತೆ ಜಾತಿಯ 'ಅಭಿವ್ಯಕ್ತಿ'ಯ ಕ್ರಮವಾಗಿ ಅದರಿಂದ ಹೊರಹೊಮ್ಮುವ 'ವ್ಯಕ್ತಿತ್ವ'ವೇ ಅದು ರೂಪಿಸುವ ಸಾಮಾಜಿಕ ಕೆಮಿಸ್ಟ್ರಿಯು ನಿರ್ದಿಷ್ಟ ಜಾತಿಯ ಜನರ ನಡುವೆ ಒಂದು ಬಗೆಯ ಸಾವಯವ ಜಾಲವನ್ನು ನಿರ್ಮಿಸಿ ಬಿಡುತ್ತದೆ. ಉದಾಹರಣೆಗೆ ನಾರಾಯಣ ಮೂರ್ತಿಯವರ ಇನ್ಫೊಸಿಸ್ ಸಂಸ್ಥೆಯಲ್ಲಿ ಶೇಕಾಡವಾರು ಬ್ರಾಹ್ಮಣ ನೌಕರರ ಸಂಖ್ಯೆ ಪ್ರಮಾಣ ಜಾಸ್ತಿಯಾಗಿರುತ್ತದೆ. ಹಾಗಾದರೆ ಇನ್ಫೊಸಿಸ್ ಸಂಸ್ಥೆ ಪ್ರತಿಯೊಬ್ಬ ವ್ಯಕ್ತಿಯನ್ನು ನೀನು ಬ್ರಾಹ್ಮಣನೋ ಅಲ್ಲವೂ ಕೇಳಿ ಆಯ್ಕೆ ಮಾಡಿದೆಯೇ ಎಂದರೆ ಖಂಡಿತ ಇಲ್ಲ. ಇಡೀ ವ್ಯಕ್ತಿತ್ವದ ಮೂಲಕ ಹೊರಹೊಮ್ಮುವ ಬ್ರಾಹ್ಮಣತ್ವ ಮತ್ತು ಅದು ನಿರ್ಮಿಸಿದ ಜಾತಿ ಕೆಮಿಸ್ಟ್ರಿ ತಾನೇ ತಾನಾಗಿಯೇ ಸಂಕೇತ-ಸಂವಹನದ ಜಾಲವೊಂದನ್ನು ನಿರ್ಮಿಸಿ ಅದರ ಮೂಲಕವಾಗಿ ಬ್ರಾಹ್ಮಣ ಜಾತಿಯವರೇ ಹೆಚ್ಚಿಗೆ ಪ್ರಮಾಣದಲ್ಲಿ ನೌಕರರಾಗಿ ಬಿಟ್ಟಿರುತ್ತಾರೆ. ಹಾಗೆಯೇ ಇದು ಇತರ ಜಾತಿಗಳಿಗೂ ಅನ್ವಯಿಸಬಹುದಾಗಿದೆ.

ಉನ್ನತ ಶಿಕ್ಷಣದಲ್ಲಿ ಮೀಸಲಾತಿಯ ಸಂದರ್ಭದಲ್ಲಿ ಅತ್ಯಾಧುನಿಕ ಸಂಹವನ ಸಂಪರ್ಕ ಹೊಂದಿರುವ ಮೇಲ್ಜಾತಿಗಳ ನಡುವೆ ಈ ಬಗೆಯ ಕೆಮಿಸ್ಟ್ರಿ ತೀವ್ರತರವಾಗಿ ಕೆಲಸ ಮಾಡಿತು. ಆಧುನಿಕ ಸಂವಹನ ಕ್ಷೇತ್ರದಲ್ಲಿ ಸೌಲಭ್ಯಗಳನ್ನು ವ್ಯಾಪಕವಾಗಿ ಹೊಂದಿರುವ, ಇವರ ಜಾತಿ ಸಂವಹನ ಅದ್ಭುತ ವೇಗದಲ್ಲಿ ಕೆಲಸ ಮಾಡಿತು. ಜಾತಿ ಅಭಿವ್ಯಕ್ತಿಯ 'ರುದ್ರ ಕುಣಿತ' ಇತ್ತೀಚಿನ ದಶಕಗಳಲ್ಲಿ ಇಷ್ಟು ವ್ಯಾಪಕವಾಗಿ ಹಿಂದೆಂದು ನಡೆದಿರಲಿಲ್ಲ. ಎಲ್ಲಾ ಖಾಸಗಿ ಚಾನೆಲ್‌ಗಳು ತಕ್ಷಣವೇ ಮೀಸಲಾತಿ ವಿರೋಧಿ ಚಳುವಳಿಯನ್ನು ಉದ್ಘಾಟಿಸಿ ಉದ್ದಿಪಿಸಿದವು. ಇಂದಿಗೂ S.M.S. ಗಳ ರವಾನೆಯಂತೂ ವ್ಯಾಪಕವಾಗಿಯೇ ಜರುಗಿದೆ ಕಸಗುಡಿಸುವ, ಬೂಟ್ ಪಾಲಿಶ್ ಮಾಡುತ್ತಾ ಮೇಲ್ಜಾತಿಗೆ ಸೇರಿದ ವಿದ್ಯಾರ್ಥಿಗಳು ತಾವು ಕೆಳಜಾತಿಗಳ ಕಸುಬನ್ನು ಸಾಂಕೇತಿಕವಾಗಿ ಹೀನಾಯವೆಂಬ ಸಂದೇಶವನ್ನು ಮುಟ್ಟಿಸಿರುವ ಈ ಬಗೆಯ ಸಂವಹನ ದಿನ ನಿತ್ಯವೂ ಅಭಿವ್ಯಕ್ತಗೊಳ್ಳುತ್ತಿರುತ್ತದೆ.

ನೆನಪುಗಳ ಜೋಡಣೆ ಮತ್ತು ಸೃಜನಶೀಲ ಸಾಹಿತ್ಯವು ಜಾತಿಯ ಅಭಿವ್ಯಕ್ತಿಯೇ ಆಗಿರುತ್ತದೆ. ಚರಿತ್ರೆಯೆಂದರೆ ನೆನಪುಗಳ ಜೋಡಣೆಯೇ ಆಗಿದೆ. ಈ ನೆನೆಪುಗಳ ಜೋಡಣೆಯಲ್ಲಿ ನೆನಪು ಜೋಡಿಸಿಕೊಳ್ಳುವಾಗ ತನ್ನ ಜಾತಿಯ ಅಥವಾ ತನ್ನ ಜಾತಿಯ ಅಭಿವ್ಯಕ್ತಿಗೆ ಸಮಾನವಾದ ಸಂಕೇತಗಳನ್ನು ವ್ಯಕ್ತಿಯ ಜೊತೆಗೆ ಗುರುತಿಸಬಹುದು. ಕನ್ನಡ ನವೋದಯದ ಕಾಲದ ಸಾಹಿತ್ಯವನ್ನು ಸೂಕ್ಷ್ಮವಾಗಿ ಗ್ರಹಿಸಿದವರಿಗೆ ಇದರ ಅರಿವು ಚೆನ್ನಾಗಿಯೇ ಇರುತ್ತದೆ. ಕನ್ನಡ ಸಾಹಿತ್ಯದ ಯಾವುದೇ ಸೃಜನ ಶೀಲ ಬರವಣಿಗೆಯನ್ನು ಅಭಿವ್ಯಕ್ತಿಯ ಕ್ರಮವನ್ನು ಸೃಷ್ಟಿಸಿರುವ ಭಾವ ಪ್ರಪಂಚದ ಮೂಲಕ ಆ ಬರಹಗಾರ ಇಂತಹುದೇ 'ಜಾತಿ'ಯವನೆಂದು ಹೇಳಲು ಕಷ್ಟವಾಗುವುದು.

ಮೇಲಿನ ವಿವರಣೆಗಳನ್ನು ಗಮನಿಸುವಾಗ ಜಾತಿಯೂ ತನ್ನ ಸಾಂಪ್ರದಾಯಿಕ ಬಾಹ್ಯ-ಮೂರ್ತಲಕ್ಷಣಗಳಿಂದ ಅದೆಷ್ಟೇ ದೂರವಾಗಿದ್ದರೂ ಅಭಿವ್ಯಕ್ತಿ ಕ್ರಮದಿಂದ ದೂರವಾಗದು. ಜಾತಿಯನ್ನು ಅಭಿವ್ಯಕ್ತಿ ಕ್ರಮವಾಗಿಯೇ ನಿರ್ವಚಿಸಿಕೊಳ್ಳುವುದರಿಂದ, ಜಾತಿಯನ್ನು ಕುರಿತ ಗ್ರಹಿಕೆಯಲ್ಲಿ ಒಂದು ಹೆಜ್ಜೆ ಮುಂದೆ ಸಾಗಬಹುದೆಂಬುದು ಈ ಲೇಖಕರ ನಂಬಿಕೆ. □

ಹನಿಗವನ

೧

ನಾನು ಗೂಡಿನ ಮರಿಯಾಗಿದ್ದಾಗ
ನನಗೆ ಗೂಡೇ ಇರಲಿಲ್ಲ
ನಾನೀಗ ನನ್ನೆಲ್ಲ ರೆಂಬೆ-ಕೊಂಬೆಗಳನ್ನು
ಗೂಡ ಬಟ್ಟಲಾಗಿಸಿರುವೆ
ಗೂಡಿಲ್ಲದ ಮರಿಗಳಿವೆ.

೨

ನೀನಿರುವೆ
ಎದೆ ಬಡಿತವಾಗಿ
ಸದಾ ಇದ್ದು
ಸದ್ದು ಇದ್ದು
....ಕಾಣಿಸದು
....ಕೇಳಿಸದು
ಇರವು ಅದು.

ಡಾ॥ ಲತಾ ಮೈಸೂರು

ಮೀಸಲಾತಿ: ಅಮೆರಿಕಾ ಅನುಭವ

ಪ್ರೊ॥ ಕೆವಿನ್ ಡಿ. ಬ್ರೌನ್
ಅನುವಾದ:
ಎಲ್.ಎಸ್. ಗೋಪಾಲಕೃಷ್ಣ

'ದೌರ್ಜನ್ಯವು ಯಾವಾಗಲು ಕೆಡಕಿನಿಂದ ಕೂಡಿದ್ದು ಎಂದು ತಿಳಿದಿರುವಂತಹ ಜನರು ನಾವು. ನಾವು (ಕಪ್ಪು ಜನಾಂಗದವರು) ನಮ್ಮ ಮೇಲಿನ ದೌರ್ಜನ್ಯದ ವಿರುದ್ಧ ಯಾವಾಗಲು ಹೋರಾಟ ಮಾಡುತ್ತಲೇ ಬಂದಿದ್ದೇವೆ'- ಎಂದು ಹೇಳುವ ಈ ಕಪ್ಪು ಪ್ರೊಫೆಸರ್ ಕಳೆದ ತಿಂಗಳು ಬೆಂಗಳೂರಿಗೆ ಬಂದಿದ್ದರು. ಅಮೆರಿಕಾದ ಇಂಡಿಯಾನ ವಿಶ್ವವಿದ್ಯಾಲಯದಲ್ಲಿ ಕಾನೂನು ಪ್ರಾಧ್ಯಾಪಕರಾಗಿರುವ ಪ್ರೊಫೆಸರ್ ಬ್ರೌನ್ 'ಸರ್ವೋದಯ ಕರ್ನಾಟಕ ಪಕ್ಷ' ಏರ್ಪಡಿಸಿದ್ದ ಮೀಸಲಾತಿ ಕುರಿತ ವಿಚಾರ ಸಂಕಿರಣದಲ್ಲಿ ಅಲ್ಲಿನ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡಿದರು. ಅವರ ಭಾಷಣದ ಸಂಕ್ಷಿಪ್ತ ರೂಪವನ್ನು 'ಸಂವಾದ'ದ ಓದುಗರಿಗಾಗಿ ಇಲ್ಲಿ ನೀಡಿದ್ದೇವೆ.

ಅಮೆರಿಕಾದ ಕಪ್ಪು ಜನರ ವ್ಯಕ್ತಿಯಾಗಿ ಇಲ್ಲಿಗೆ (ಬೆಂಗಳೂರಿಗೆ) ಬಂದು, ನಿಮ್ಮ ಮುಂದೆ ಮಾತನಾಡಲು ಅವಕಾಶ ಸಿಕ್ಕಿರುವುದು ನನಗೆ ದೊಡ್ಡ ಗೌರವ ಎಂದು ಭಾವಿಸುತ್ತೇನೆ.

ಭಾರತಕ್ಕೆ ಆಫ್ರಿಕನ್, ಅಮೆರಿಕನ್ ಅನೇಕ ವಿದ್ವಾಂಸರು ಬಂದು ನಿಮ್ಮನ್ನೆಲ್ಲಾ ಭೇಟಿ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತು ಹಾಗೂ ಇದು ಅತ್ಯಂತ ಮುಖ್ಯ ಎಂದು ನಾನು ಭಾವಿಸುತ್ತೇನೆ.

ನಾವು ಪರಸ್ಪರ ಮಾತನಾಡುವುದರಿಂದ ಬಹಳಷ್ಟು ಕಲಿಯಬಹುದು. ಅಂದರೆ ನಾವು ನಿಮ್ಮಿಂದ ಕಲಿಯಬಹುದು ಹಾಗೂ ನೀವು ನಮ್ಮಿಂದ ಕಲಿಯಬಹುದು. ನಮ್ಮ ಮಧ್ಯೆ ಇರುವ ಸಮಾನ ಅಂಶಗಳೇನು? ನಮ್ಮ ಮಧ್ಯೆ ಇರುವ ವ್ಯತ್ಯಾಸಗಳೇನು? ಎನ್ನುವುದರ ಬಗ್ಗೆ ತಿಳಿದು ಕೊಳ್ಳುವುದರ ಮೂಲಕ ನಮ್ಮ ಹೋರಾಟವನ್ನು ಗಟ್ಟಿಗೊಳಿಸಬಹುದು.

ಇಲ್ಲಿ ದಲಿತರು ಯಾವ ದೌರ್ಜನ್ಯದ ವಿರುದ್ಧ ಹೋರಾಡುತ್ತಿದ್ದಾರೆ ಹಾಗೂ, ನಾವು ಯಾವ ರೀತಿ ಅಮೆರಿಕದಲ್ಲಿ ಹೋರಾಟ ಮಾಡುತ್ತಿದ್ದೇವೆ ಇವುಗಳ ಮಧ್ಯೆ ಅನೇಕ ಸಮಾನ ಅಂಶಗಳು ಇವೆ ಎಂದು ನನಗೆ ಅನಿಸುತ್ತದೆ.

ಅಮೆರಿಕದ ಕಪ್ಪು ಜನಾಂಗದವರು ಹಾಗೂ ಭಾರತದ ದಲಿತರ ಸಮಸ್ಯೆಗಳು ಹೆಚ್ಚೂ ಕಡಿಮೆ ಒಂದೇ ರೀತಿಯದ್ದಾಗಿವೆ. ಸಮಾನವಾದಂತಹ ಬೇಡಿಕೆಗಳನ್ನು ಮುಂದಿಟ್ಟು ನಾವು ಹೋರಾಟ ಮಾಡುತ್ತಿದ್ದೇವೆ. ಆದುದರಿಂದ ನಮ್ಮ ಈ ಹೋರಾಟ ಭಿನ್ನ ನೆಲೆಗಳಲ್ಲಿ ನಿಂತು ಮಾಡುತ್ತಿರುವ ಸಮಾನ ಹೋರಾಟ ಎಂದು ನಾನು ಭಾವಿಸುತ್ತೇನೆ.

ಅಮೆರಿಕಾದ ಮತ್ತು ಭಾರತದ ಸಂಸ್ಕೃತಿಗಳು ಬೇರೆ ಬೇರೆ ಆಗಿದ್ದರು ಸಹಾ ನಾವಿಬ್ಬರೂ (ದಲಿತ ಜನಾಂಗ ಹಾಗೂ ಅಮೆರಿಕದ ಕಪ್ಪು ಜನಾಂಗ) ಒಬ್ಬನೇ ಶತ್ರುವನ್ನು ಎದುರಿಸುತ್ತಿದ್ದೇವೆ. ಆ ಶತ್ರುಗೆ ಬಹಳ ಧಿಮಾಕು ಇದೆ. ಜಂಭ ಇದೆ, ಬಹಳ ದವಲತ್ತು ಇದೆ. ಆತ ಬಹಳ ಕೊಬ್ಬಿದ್ದಾನೆ. ಆದುದರಿಂದ ಅವನ ವಿರುದ್ಧ ಹೋರಾಟ ಮಾಡ ಬೇಕಾದರೆ ನಮಗೆ ತುಂಬಾ ಶಕ್ತಿ ಬೇಕಾಗುತ್ತದೆ.

ನಾನು ಅಮೆರಿಕದಲ್ಲಿ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ತುಂಬಾ ಮಾತನಾಡಬಲ್ಲೆ. ಭಾರತದಲ್ಲಿ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಹೇಳುವ ಶಕ್ತಿ ನನಗೆ ಇಲ್ಲ. ಏಕೆಂದರೆ ಭಾರತದಲ್ಲಿ ನಡೆಯುತ್ತಿರುವ ದೌರ್ಜನ್ಯದ ಬಗ್ಗೆ ಪೂರ್ಣವಾದ ಮಾಹಿತಿ ಇದೆ ಎಂದು ನಾನು ಹೇಳಲಾರೆ.

ಅಮೆರಿಕದಲ್ಲಿ ಈಗ ಚಾಲ್ತಿಯಲ್ಲಿರುವ Affirmative action programme ಬಗ್ಗೆ (ಒತ್ತಾಯ ಪೂರ್ವಕ ಕ್ರಿಯಾಶೀಲತೆ) ನಾನು ಮಾತನಾಡಬೇಕು ಎಂದು ಈ ಸಭೆಯನ್ನು ಸಂಘಟಿಸಿದವರು ನನ್ನನ್ನು ಕೇಳಿಕೊಂಡಿದ್ದಾರೆ.

ನಾನು ಮೊದಲು ಆಫ್ರಿಕನ್ ಹಾಗೂ ಅಮೆರಿಕನ್ ಕಪ್ಪು ಜನಾಂಗದ ಸಂಸ್ಕೃತಿಯ ಬಗ್ಗೆ ಹೇಳಲು ಇಷ್ಟ ಪಡುತ್ತೇನೆ.

ದೌರ್ಜನ್ಯವು ಯಾವಾಗಲು ಕೆಡಕಿನಿಂದ ಕೂಡಿದ್ದು ಎಂದು ತಿಳಿದಿರುವಂತಹ ಜನರು ನಾವು. ನಾವು (ಕಪ್ಪು ಜನಾಂಗದವರು) ನಮ್ಮ ಮೇಲಿನ ದೌರ್ಜನ್ಯದ ವಿರುದ್ಧ ಯಾವಾಗಲೂ ಹೋರಾಟ ಮಾಡುತ್ತಲೇ ಬಂದಿದ್ದೇವೆ.

ನಮ್ಮ ಸಂಸ್ಕೃತಿಯ ಮೂಲದಲ್ಲೇ, ಅಸ್ತಿ ಭಾರದಲ್ಲೇ ಹೋರಾಟ ಮನೋಭಾವ ಅಡಗಿದೆ. ಅದರ ಅಸ್ತಿ ಭಾರವೇ ಹೋರಾಟದ ಮೇಲೆ ಕಟ್ಟಲ್ಪಟ್ಟಿದೆ. ನಮ್ಮನ್ನು ಆಫ್ರಿಕದಿಂದ ಬಲವಂತವಾಗಿ ಗುಲಾಮರಾಗಿ ಕರೆದುಕೊಂಡು ಹೋಗಿದ್ದು ಅತ್ಯಂತ ದೊಡ್ಡ ದೌರ್ಜನ್ಯ ಮತ್ತು ತಪ್ಪು ಎಂದು ನಾವು ಭಾವಿಸುತ್ತೇವೆ. ಬಿಳಿಜನರ ಕೆಳಗೆ ಕೆಲಸ ಮಾಡಲು ಹಚ್ಚಿದ್ದು ಇನ್ನೂ ಅತ್ಯಂತ ಕೆಟ್ಟ ದೌರ್ಜನ್ಯ ಎಂದು ಭಾವಿಸುತ್ತೇವೆ.

ಅಮೆರಿಕಾದ ಈ ಕಪ್ಪು ಜನರನ್ನು ಬೇರ್ಪಡಿಸುವ ' ಒಂದು ಚರ್ಮದ ತೊಗಲಿನ ಆಧಾರದ ಮೇಲೆ ಏನು ವ್ಯತ್ಯಾಸ ಸೃಷ್ಟಿಸಿ ಜನಾಂಗ ಭೇದಕ್ಕೆ ದಾರಿ ಮಾಡಿಕೊಡಲಾಗಿದೆಯೋ ಅದರ ವಿರುದ್ಧ ನಾವು ಹೋರಾಡುತ್ತಾ ಬಂದಿದ್ದೇವೆ.

ಬಿಳಿ ಜನಾಂಗದವರು ನಮ್ಮ ಮೇಲೆ ಮಾಡುತ್ತಿರುವ ದೌರ್ಜನ್ಯ ಸಮರ್ಥಿಸಲು ಅನೇಕ ಕಾರಣ ನೀಡಿ ವಾದಿಸಲು ಬಹಳ ಬುದ್ಧಿವಂತಿಕೆ ಪ್ರಯೋಗಿಸುತಿದ್ದರು. ಆದರೆ ಅದನ್ನು ನಾವು ಪ್ರತಿಭಟಿಸುತ್ತ ಬಂದಿದ್ದೇವೆ.

ಕರಿಯ ಜನಾಂಗವನ್ನು ಬಿಳಿಯರ ಸೇವೆಗಾಗಿಯೇ ದೇವರು ಸೃಷ್ಟಿ ಮಾಡಿದ ಎಂದು ಬಿಳಿ ಜನ ಹೇಳುತ್ತಿದ್ದರು. ಇಂತಹ ವಾದವನ್ನು ಸಹಾ ನಾವು ಖಂಡಿಸಿ, ಈ ದೌರ್ಜನ್ಯವನ್ನು ವಿರೋಧಿಸಿ ಗಟ್ಟಿ ಸಂಸ್ಕೃತಿಯೊಂದನ್ನು ಕಟ್ಟಿದೆವು.

ಬಿಳಿ ಚರ್ಮದ ವಿಜ್ಞಾನಿಗಳು ವಾದ ಮಾಡುತ್ತಾ ಬಂದರು, ಕರಿಯ ಜನಾಂಗ ಕೀಳು. ಬುದ್ಧಿಶಕ್ತಿ ಇಲ್ಲದ ಕನಿಷ್ಠರು ಎಂದು. ಈ ಆಧಾರದ ಮೇಲೆ ನಮ್ಮ ವಿರುದ್ಧದ ಅಸಮಾನತೆ ಮುಂದುವರೆಯಿತು. ಆದರೆ ೧೯೫೪ ರಲ್ಲಿ ಸರ್ವೋಚ್ಚ ನ್ಯಾಯಾಲಯದ ಮಹತ್ವದ ತೀರ್ಪಿನ ನಂತರ ಇದು ಕೊನೆಗೊಂಡಿತು.

೧೯೬೪ ರಲ್ಲಿ ಅಮೆರಿಕದ ಸಂಸತ್ ನಮಗೆ ನಾಗರಿಕ ಹಕ್ಕು

ಮಾನ್ಯ ಮಾಡಿತು. ಇದು ಬಹಳ ಮುಖ್ಯವಾದಂತಹದ್ದು.

ಈ ನಾಗರಿಕ ಹಕ್ಕು ದಕ್ಕಿದ ಮೇಲೆ ನಮ್ಮ ಮೇಲಿನ ದೌರ್ಜನ್ಯ ಕೊನೆಗೊಂಡಿತು. ಆ ಬಳಿಕ ನಮ್ಮನ್ನು ಬೇರೆ ಇಡುವಂತ ಯಾವುದೇ ಸರ್ಕಾರಿ ಕೆಲಸದ ಗುತ್ತಿಗೆದಾರ ತಪಿತಸ್ಥ ಎನ್ನಿಸುತ್ತಾನೆ. ಈ ಕ್ರೂರ ಪದ್ಧತಿ ಯಾವ ವ್ಯವಸ್ಥೆಯಲ್ಲಿಯೂ ಇರಬಾರದು ಎಂದು ಸುಪ್ರಿಂ ಕೋರ್ಟ್ ಆದೇಶದ ಬಳಿಕ, ನಮ್ಮ ನಾಗರಿಕ ಹಕ್ಕುಗಳ ದಾರಿ ಸುಗಮಗೊಂಡಿತು. ಆ ಬಳಿಕ ನಮಗೆ ಒಂದು ಬಲ ಬಂತು.

ಜನಾಂಗದ ಆಧಾರದ ಮೇಲೆ ಯಾರಾದರು ನಮ್ಮನ್ನು ಅಸಮಾನತೆಯಿಂದ ನಡೆಸಿಕೊಂಡರೆ ಅಂಥವರ ವಿರುದ್ಧ ನಾವು ಕಾನೂನಿನ ಪ್ರಕಾರ ಹೋರಾಟ ಮಾಡುವ ಅಸ್ತ್ರವಾಗಿ, ಈ ಒಂದು ನಾಗರಿಕ ಹಕ್ಕುಗಳ ಕಾನೂನು ನಮಗೆ ಒದಗಿ ಬಂದಿದೆ.

ನಮ್ಮನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಬಿಳಿ ಜನಾಂಗದ ವ್ಯಕ್ತಿ ತಾರತಮ್ಯ ತೋರಿದರೆ, ನಾವು ಸಿಡಿದೇಳುತ್ತೇವೆ.ಕಾನೂನು ಸಮರ ಸಾರುತ್ತೇವೆ. ಅಂಥ ಸಮರ ಮಾಡಿ ಜಯ ಕಂಡಿದ್ದೇವೆ.

Texico world company ಯವರು ಈ ರೀತಿ ಕರಿಜನಾಂಗದವರ ವಿರುದ್ಧ ಒಂದು ಬಾರಿ ಅಸಮಾನತೆ ತೋರಿಸಿದ್ದರು. ಇದರ ವಿರುದ್ಧ ನಾವು ಹೋರಾಟ ಮಾಡಿ ೧೭೬,೧೭೬೦ ಲಕ್ಷ ಡಾಲರ್ ಪರಿಹಾರವಾಗಿ ಆ ಕಂಪನಿಯಿಂದ ಪಡೆದೆವು. ಇದು ನಮಗೆ ನ್ಯಾಯಾಲಯ ನೀಡಿದ ಬಲ. ಈ ರೀತಿಯ ಕಾನೂನಿನ ದಾರಿಯ ಹೋರಾಟ ಮುಂದುವರೆಸಿದೆವು. ಅದರ ಜೊತೆಗೆ ನಾವು ಇನ್ನೊಂದು ಹೋರಾಟ ನಡೆಸಿದ್ದವು. ಯಾರು ಕಪ್ಪು ಜನಾಂಗದವರಿಗೆ ಕೆಲಸದಲ್ಲಿ ಅವಕಾಶವನ್ನು ನೀಡುವುದಿಲ್ಲವೋ ಅಂತಹ ಕಂಪನಿಗಳನ್ನು ಬಹಿಷ್ಕರಿಸುವ ಕೆಲವ ಮಾಡುವುದು. ಅಂದರೇ reject ಮಾಡಬೇಕು ಹಾಗೂ ನಿರಾಕರಿಸಬೇಕು, ದಿಗ್ಬಂಧನ ಹಾಕಬೇಕು ಎಂಬ ಚಳುವಳಿಯನ್ನು ಸಹ ನಡೆಸುತ್ತಾ ಬಂದಿದ್ದೇವೆ.

ಈ ರೀತಿಯ ಚಳುವಳಿಯಿಂದಾಗಿ ಮೊಟ್ಟಮೊದಲಿಗೆ ಕಂಡು ಬಂದ ಫಲ, ಇಂತಹ ಕಂಪನಿಗಳು ಹಿಂದೆಂದು ಕಾಣದ ಅಧಿಕ ಸಂಖ್ಯೆಯಲ್ಲಿ ಕಪ್ಪು ಜನಾಂಗದವರಿಗೆ ಕೆಲಸಕ್ಕೆ ಅವಕಾಶ ಮಾಡಿಕೊಟ್ಟವು.

ಕಳೆದ ೪೦ ವರ್ಷಗಳಲ್ಲಿ ನಮ್ಮ(ಕರಿಯರ) ಆರ್ಥಿಕ ಶಕ್ತಿ ಹೆಚ್ಚಾಗಿದೆ. ಅದಕ್ಕೆ ಕಾರಣ ಎರಡು ದಾರಿಗಳು, ಒಂದು ಯಾವ ಕಂಪನಿಗಳು ನಮ್ಮ ವಿರುದ್ಧ ಅಸಮಾನತೆ ತೋರಿಸುತ್ತವೋ ಅಂಥ ಕಂಪನಿಗಳ ವಿರುದ್ಧ ಕಾನೂನಿನ ಪ್ರಕಾರ ಹೋರಾಟ ಮಾಡುವುದು, ಎರಡನೆಯದ್ದು ಯಾವ ಕಂಪನಿಗಳಲ್ಲಿ ಕರಿಯರನ್ನು ಸೇರಿಸಿಕೊಳ್ಳುವುದಿಲ್ಲವೋ ಅಂಥವರ ವಿರುದ್ಧ ನಾವು ದಿಗ್ಬಂಧನ ಹಾಕಿ ಹೋರಾಟ ಮಾಡುವುದು. ಈ ಎರಡು ಮಾರ್ಗಗಳ ಮೂಲಕ ನಾವೀಗ ಆರ್ಥಿಕವಾಗಿ ಅತ್ಯಂತ ಶಕ್ತಿವಂತರಾಗಿದ್ದೇವೆ. ಏಕೆಂದರೆ ನಮ್ಮ ಉದ್ಯೋಗ ಅವಕಾಶ ಹೆಚ್ಚಿದೆ.

ಈ ೪೦ ವರ್ಷಗಳ ಹೋರಾಟದಿಂದ ನಮಗೆ ಏನು ಲಾಭವಾಗಿದೆ ಎಂದರೇ, ಈ ದೊಡ್ಡ ಕಂಪನಿಗಳ ಅತ್ಯಂತ ಉನ್ನತ ಮಟ್ಟದ ಹುದ್ದೆಗಳಲ್ಲಿ ಕಪ್ಪು ಜನಾಂಗದವರು ಹೆಚ್ಚಾಗಲು ಸಾಧ್ಯವಾಗಿದೆ. ಈ ಸುಧಾರಣೆ ಎಷ್ಟು ತೀವ್ರವಾಗಿದೆ ಎಂದರೆ, ಯಾರನ್ನು ಈ ಕಂಪನಿಗಳಿಗೆ ನಾವು ನೌಕರಿಗೆ ತೆಗೆದುಕೊಳ್ಳಬೇಕು. ಯಾರಿಗೆ ನಾವು promotion ಕೊಡಬೇಕು ಅನ್ನುವುದನ್ನು ಸಹಾ ನಿರ್ಧಾರ ಮಾಡುವಂತಹ ದೊಡ್ಡ ದೊಡ್ಡ ಹಕ್ಕುಗಳನ್ನು, ಅಧಿಕಾರವನ್ನು ಕಪ್ಪು ಜನಾಂಗ ಪಡೆಯಲಿಕ್ಕೆ ಸಾಧ್ಯವಾಗಿದೆ.

ದೊಡ್ಡ ಕಂಪನಿಗಳು ಈಗ ನಮ್ಮನ್ನು ಏಕೆ ನೌಕರಿಗೆ ತೆಗೆದುಕೊಳ್ಳುತ್ತವೆ ಅಂದರೆ, ಈ ರೀತಿಯ ವೈವಿಧ್ಯತೆಯ ತತ್ವದಿಂದಾಗಿ ಆ ಕಂಪನಿಗಳಿಗೆ ಹೆಚ್ಚು ಲಾಭವಿದೆ. ಅದರಿಂದಲೇ ಅವು ಹಣ ಮಾಡುವ ದಾರಿ ಕಂಡು ಕೊಂಡಿವೆ. ಈ ವೈವಿಧ್ಯತೆಯ ಸೊಗಸು ಅವರಿಗೆ ಅರ್ಥವಾಗಿದೆ. ಏಕೆಂದರೆ ನಮ್ಮನ್ನು ನೌಕರಿಗೆ ತೆಗೆದುಕೊಂಡರೆ ನಮ್ಮ ಆರ್ಥಿಕ ಶಕ್ತಿ ಹೆಚ್ಚುತ್ತದೆ. ನಮ್ಮಲ್ಲಿ ಆರ್ಥಿಕ ಶಕ್ತಿ ಹೆಚ್ಚಾದಾಗ ಈ ಕಂಪನಿಗಳು ಉತ್ಪಾದಿಸುವ ವಸ್ತುಗಳನ್ನು ಕೊಳ್ಳುವಂತಹ ಕರಿಯ ಜನಾಂಗದ ಪ್ರಮಾಣ ಕೂಡ ಹೆಚ್ಚಾಗುತ್ತದೆ. ಅದರಿಂದಲೇ ತಾವು ಹಣ ಗಳಿಕೆ ಪ್ರಮಾಣ ಹೆಚ್ಚಿಸಿಕೊಳ್ಳಬಹುದು ಎಂಬ ಬುದ್ಧಿವಂತಿಕೆ ಕಂಡು ಕೊಂಡಿದ್ದಾರೆ.

ಈಗ ಅನೇಕ ದೊಡ್ಡ ದೊಡ್ಡ ಕಂಪನಿಗಳಲ್ಲಿ ಕಪ್ಪು ಜನಾಂಗದವರು ಒಳ್ಳೆಯ ಹುದ್ದೆಗಳಲ್ಲಿದ್ದಾರೆ. ಈ ಬಗ್ಗೆ ಹೇಳಲು ನನಗೆ ಬಹಳ ಸಂತೋಷವಾಗುತ್ತದೆ.

ಈ ದೊಡ್ಡ ಕಂಪನಿಗಳು ಈಗ ನಮ್ಮನ್ನು ಏಕೆ ನೌಕರಿಗೆ ತೆಗೆದುಕೊಳ್ಳುತ್ತವೆ ಅಂದರೆ, ಈ ರೀತಿಯ ವೈವಿಧ್ಯತೆಯ ತತ್ವದಿಂದಾಗಿ ಆ ಕಂಪನಿಗಳಿಗೆ ಹೆಚ್ಚು ಲಾಭವಿದೆ. ಅದರಿಂದಲೇ ಅವು ಹಣ ಮಾಡುವು ದಾರಿ ಕಂಡು ಕೊಂಡಿವೆ. ಈ ವೈವಿಧ್ಯತೆಯ ಸೊಗಸು ಅವರಿಗೆ ಅರ್ಥವಾಗಿದೆ. ಏಕೆಂದರೆ ನಮ್ಮನ್ನು ನೌಕರಿಗೆ ತೆಗೆದುಕೊಂಡರೆ ನಮ್ಮ ಆರ್ಥಿಕ ಶಕ್ತಿ ಹೆಚ್ಚುತ್ತದೆ. ನಮ್ಮಲ್ಲಿ ಆರ್ಥಿಕ ಶಕ್ತಿ ಹೆಚ್ಚಾದಾಗ ಈ ಕಂಪನಿಗಳು ಉತ್ಪಾದಿಸುವ ವಸ್ತುಗಳನ್ನು ಕೊಳ್ಳುವಂತಹ ಕರಿಯ ಜನಾಂಗದ ಪ್ರಮಾಣ ಕೂಡ ಹೆಚ್ಚಾಗುತ್ತದೆ. ಅದರಿಂದಲೇ ತಾವು ಹಣ ಗಳಿಕೆ ಪ್ರಮಾಣ ಹೆಚ್ಚಿಸಿಕೊಳ್ಳಬಹುದು ಎಂಬ ಬುದ್ಧಿವಂತಿಕೆ ಕಂಡು ಕೊಂಡಿದ್ದಾರೆ.

ಈಗ ನಾವು ಹೇಗೆ ಆರ್ಥಿಕ ಶಕ್ತಿಯನ್ನು ಪಡೆದೆವು ಅನ್ನುವುದರ ಬಗ್ಗೆ ಹೇಳಲು ಇಷ್ಟ ಪಡುತ್ತೇನೆ. ಜೊತೆಗೆ ಈ ವೈವಿಧ್ಯತೆ ಏಕೆ ಈಗ ಅಗತ್ಯವಾಗಿದೆ ಎಂಬುದರ ಬಗ್ಗೆ ಸಹ ಎರಡು ಮಾತು ಹೇಳುತ್ತೇನೆ. ನಾನು ಈಗಾಗಲೇ ಹೇಳಿದಂತೆ- ನಮ್ಮ ಸುಪ್ರಿಂ ಕೋರ್ಟ್ ೧೯೫೪ಳರಲ್ಲಿ ವರ್ಣ ಭೇದ ನೀತಿ ತಪ್ಪು ಎಂದು ಸಾರಿ ಹೇಳಿತು. ನೌಕರಿಯಲ್ಲಿ ಅಸಮಾನತೆ ಇರಬಾರದು ಎಂದು ೧೯೬೪ಳರ ನಾಗರಿಕ ಹಕ್ಕುಗಳ ಕಾಯ್ದೆ ಹೇಳಿತು ಎಂಬುದನ್ನು ಈಗಾಗಲೇ ಹೇಳಿದ್ದೇನೆ.

ಈ ಎರಡು ಕಾರಣಗಳಿಂದಾಗಿ ಅಂದರೆ Supreme courtನ ತೀರ್ಪು ಹಾಗೂ ವರ್ಣ ಬೇಧ ನೀತಿಯ ಕಾಯ್ದೆ ಈ ಎರಡು ಕಾರಣಗಳಿಂದಾಗಿ ಎಲ್ಲಾ ಕಂಪನಿಗಳು reservation policyಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪ್ರಾರಂಭಿಸಿದವು. ವಿಶ್ವವಿದ್ಯಾನಿಲಯಗಳಲ್ಲಿಯೂ ಈ ಮೀಸಲಾತಿ ಜಾತಿಗೆ ಬಂತು. ಆದರೆ ೧೯೭೮ರಲ್ಲಿ Supreme court ಮುಂದೆ ಬಿಳಿಯ ಜನಾಂಗದ ವ್ಯಕ್ತಿಯೊಬ್ಬ ಈ ಮೀಸಲಾತಿಯ ವಿರುದ್ಧ ಒಂದು ದಾವೆಯನ್ನು ಹಾಕಿದ

ಈ ಬಿಳಿಯ ಜನಾಂಗದ ವ್ಯಕ್ತಿ ಹಾಕಿದ ದಾವೆಯ ಪರಿಣಾಮವಾಗಿ ನಮ್ಮ Supreme court ಮೀಸಲಾತಿ ತಪ್ಪು ಎಂದು ಹೇಳಿತು. ಹಾಗೆ ಹೇಳುವಾಗ ಸಹಾ Supreme court ಒಂದು ಮಾತನ್ನು ಹೇಳಿತು: ಜನಾಂಗದ ಆಧಾರದ ಮೇಲೆ ನೀವು ವಿಶೇಷವಾಗಿ ಆಡಳಿತಾತ್ಮಕ ಕ್ರಮಗಳ ಮೂಲಕ ಮೂಲನಿವಾಸಿಗಳಿಗೆ ವಿಶೇಷ ಸವಲತ್ತುಗಳನ್ನು ನೀಡಬಹುದೆಂದು ಹೇಳಿತು.

ಇದರ ಪರಿಣಾಮವಾಗಿ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದದ್ದರೂ, ಜನಾಂಗದ ಆಧಾರದ ಮೇಲೆ ಕಪ್ಪು ಜನರನ್ನು ಪರಿಗಣಿಸಬಹುದು ಹಾಗೂ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡಬಹುದು ಎಂಬುದಕ್ಕೆ Supreme court ಅವಕಾಶ ಮಾಡಿಕೊಟ್ಟಿತು.

ಆದರೆ ಸಂವಿಧಾನ ಬದ್ಧ ಮೀಸಲಾತಿ ಇಲ್ಲದೇ ಹೋದರೂ ಸಹಾ ಈ ರೀತಿಯ ಅವಕಾಶಗಳನ್ನು ಕೊಡುವಂತಹ ಪ್ರಕ್ರಿಯೆ ಅಮೆರಿಕಾದಾದ್ಯಂತ ಎಲ್ಲ ಕ್ಷೇತ್ರಗಳಲ್ಲೂ ಜಾರಿಗೆ ತರಲಾಯಿತು. ಹಾಗೂ ಎಲ್ಲ ವಿಶ್ವವಿದ್ಯಾಲಯಗಳನ್ನು ಮುಂದುವರೆಸಿಕೊಂಡು ಬಂದಿವೆ.

ಐತಿಹಾಸಿಕ ಕಾರಣಗಳಿಂದಾಗಿ ಜನಾಂಗಗಳ ಮಧ್ಯೆ ಭೇಧಗಳನ್ನು ಎಣಿಸಬಾರದು ಅದಕೋಸ್ಕರ ಮೀಸಲಾತಿಯನ್ನು ನೀಡಬಾರದು ಎಂದು Supreme court ಹೇಳಿದ್ದರೂ ಸಹಾ ಸಮಾಜದಲ್ಲಿ ವೈವಿಧ್ಯತೆ ಇರಬೇಕು ಎಂಬ ಕಾರಣಕ್ಕಾಗಿ ಕರಿಯ ಜನಾಂಗದವರಿಗೆ ಅವಕಾಶವನ್ನು ಕೊಡಬೇಕು ಎಂಬ ಮಾತನ್ನು Supreme court ಎತ್ತಿ ಹಿಡಿಯಿತು ಎಂಬುದನ್ನು ಗಮನಿಸಬೇಕು. ಅಂದರೆ ಜನಾಂಗಭೇದದ ಆಧಾರದ ಮೇಲೆ ನಾವು ಐತಿಹಾಸಿಕ ಕಾರಣಗಳಿಂದ ಮೀಸಲಾತಿ ಕೇಳಿದ್ದರಿಂದ Supreme court ಬೇಡ ಅಂತ ಹೇಳಿತು. ಆದರೆ ಸಮಾಜದಲ್ಲಿ ವೈವಿಧ್ಯತೆ ಇರಬೇಕು, ಎಲ್ಲಾ ಜನಾಂಗಗಳು ಸಹಾ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಬೇಕು ಎಂಬ ತತ್ವವನ್ನು ಸುಪ್ರಿಂ ಕೋರ್ಟ ಒಪ್ಪಿಕೊಂಡಿತು. ಆ ಆಧಾರದ ಮೇಲೆ ಕಪ್ಪು ಜನಾಂಗದವರಿಗೆ ಅವಕಾಶ ಕೊಡಬೇಕು ಎಂದು ಅದು ಹೇಳಿತು.

ಅಷ್ಟೇ ಅಲ್ಲದೆ, ವೈವಿಧ್ಯ ಶಿಕ್ಷಣದಲ್ಲಿ ಇರಬೇಕು. ಇದು ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಬಹಳ ದೊಡ್ಡ ಸಹಕಾರವನ್ನು ಕೊಡುತ್ತದೆ ಅನ್ನುವುದನ್ನು ಒಪ್ಪಿಕೊಂಡ Supreme court ಈ ವೈವಿಧ್ಯಮಯತೆಯ ತತ್ವದ ಆಧಾರದ ಮೇಲೆ ಕಪ್ಪು ಜನಾಂಗದವರಿಗೆ ಅವಕಾಶ ಕೊಡುವುದನ್ನು ಮುಂದುವರೆಸಬೇಕು ಎಂದೂ ಹೇಳಿತು.

ಆದರೂ ನಾವು ಕಪ್ಪು ಜನಾಂಗದವರು ಹೇಳಿಕೊಂಡು ಬಂದಿದ್ದೇವೆ; 'ಇತಿಹಾಸದಲ್ಲಿ ನಮಗೆ ದೊಡ್ಡ ಅನ್ಯಾಯವಾಗಿದೆ. ಆ ಐತಿಹಾಸಿಕ ಕಾರಣವನ್ನು ಗಮನಿಸಿ ನಮಗೆ ಮೀಸಲಾತಿ ಕೊಡಿ' ಎಂದು ಮತ್ತೆ ಮತ್ತೆ ಒತ್ತಾಯ ಮಾಡುತ್ತಾ ಬಂದಿದ್ದೇವೆ. ಆದರೆ ನಮ್ಮಲ್ಲಿನ ಉಚ್ಚನ್ಯಾಯಲಯ ಈ ವಾದವನ್ನು ನಿರಾಕರಿಸಿದೆ. ಈಗ ನಾವು ಕರಿಯ ಜನಾಂಗದವರು Supreme court ಎತ್ತಿ ಹಿಡಿದಿರುವ ಈ ವೈವಿಧ್ಯಮಯತೆಯ ತತ್ವದ ಆಧಾರದ

ಮೇಲೆಯೇ ನಾವು ಹೆಚ್ಚು ಅವಕಾಶಗಳನ್ನು ಕೇಳು ವಂತಹ ಐತಿಹಾಸಿಕ ಚಳುವಳಿಯನ್ನು ನಾವು ಈಗ ಮುಂದುವರೆಸುತ್ತಿದ್ದೇವೆ.

೨೦೦೩ ನೇ ಇಸವಿಯಲ್ಲಿ ಮತ್ತೊಮ್ಮೆ ಈ ಮೀಸ ಲಾತಿಯ ಪ್ರಶ್ನೆ-ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ-ಸುಪ್ರಿಂ ಕೋರ್ಟಿನ ಮುಂದೆ ಬಂದಿತ್ತು.

ಮಿಶಿಗನ್ University ಯಲ್ಲಿ ಈ ಕಾರ್ಯ ಕ್ರಮ ಪೂರ್ಣಪ್ರಮಾಣದಲ್ಲಿ ಜಾರಿಯಾಗಿದೆ. ಅಲ್ಲಿ ಕಡಿಮೆ ಅಂಕ ಬಂದಿದ್ದರೂ ಸಹಾ ಕಪ್ಪು ಜನಾಂಗದವರಿಗೆ ಅವ ಕಾಶವನ್ನು ನೀಡಲಾಗುತ್ತಿದೆ. Affirmative action ತತ್ವ ಅಲ್ಲಿ ಇರುವುದನ್ನು ಕಾಣಬಹುದು.

ಆದರೂ ಈ ಸಕಾರಾತ್ಮಕ ಅಥವಾ ಒತ್ತಯ ಪೂರ್ವಕ ಕ್ರಿಯಾಶೀಲತೆ (Affirmative action) ತತ್ವದ ವಿರುದ್ಧ ಅನೇಕ ಬಿಳಿಯ ಜನಾಂಗದ ವ್ಯಕ್ತಿಗಳು ಈಗಲೂ ಧ್ವನಿ ಎತ್ತಿದ್ದಾರೆ. ಹೋರಾಟ ನಡೆದೇ ಇದೆ.

ಇಡೀ ಪ್ರಪಂಚದಲ್ಲಿ ಇರುವ ಅತ್ಯಂತ 'ಶ್ರೀಮಂತ ೫೦೦ ಕಂಪನಿ'ಗಳ ಪಟ್ಟಿಯಲ್ಲಿ ಇರುವಂತಹ ಎಲ್ಲರೂ ಸಹಾ ಹಾಗೂ ಇನ್ನು ಅನೇಕ ವಿವಿಧ ಗುಂಪುಗಳು ಈ Affirmative actionಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿ ದ್ದಾರೆ. ತಮ್ಮ ಎಲ್ಲಾ ಚಟುವಟಿಕೆಗಳಲ್ಲಿ ಕಪ್ಪು ಜನರಿಗೆ ಅವಕಾಶವನ್ನು ಕೊಡುವ ಮೂಲಕ ಅವರೆಲ್ಲಾ ಸಹಕರಿ ಸುತ್ತಿದ್ದಾರೆ. ಅಷ್ಟೇ ಅಲ್ಲ, 'ನಾವು ಅಂತಾರಾಷ್ಟ್ರೀಯ ಮಟ್ಟ ದಲ್ಲಿ ಬಿಸಿನೆಸ್ ನಡೆಸಬೇಕು ಅಂದರೆ ಈ ರೀತಿಯ ವೈವಿಧ್ಯಮಯವಾದ ಕೆಲಸಗಾರರಿಂದ ಕೂಡಿದಂತಹ ಜನರು ಇದ್ದರೆ ಮಾತ್ರ ಸಾಧ್ಯ' ಎಂದು ಇವರುಗಳು ಈಗ ಹೇಳುತ್ತಿದ್ದಾರೆ.

ಪ್ರಪಂಚದ ಅತ್ಯಂತ 'ಶ್ರೀಮಂತ ೫೦೦ ಕಂಪನಿ' ಗಳ ಈ ಗುಂಪು ಸಾರ್ವಜನಿಕವಾಗಿ ಇನ್ನೂ ಒಂದು ಮಾತನ್ನು ಹೇಳುತ್ತಿದ್ದಾರೆ. ಅದು ಏನೆಂದರೆ: 'ಕಪ್ಪು ಜನಾಂಗದ ಜನರು ಕಂಪನಿಯಲ್ಲಿ ಇದ್ದರೆ ನಾವು ಹೆಚ್ಚು ಲಾಭವನ್ನು ಮಾಡಲು ಸಾಧ್ಯ'

ನಿವೃತ್ತಿ ಹೊಂದಿದ ಅನೇಕ ಮಿಲಿಟರಿ ಜನರಲ್ ಗಳು, ಸೈನ್ಯದ ಅಧಿಕಾರಿಗಳು ಸಹಾ ಈ Affirmative action ಅನ್ನು ಪೂರ್ಣ ಪ್ರಮಾಣದಲ್ಲಿ ಬೆಂಬ ಲಿಸುತ್ತಿದ್ದಾರೆ.

ಕಪ್ಪು ಜನಾಂಗದ ವ್ಯಕ್ತಿಗಳು ಇದ್ದಾಗ ಅಮೆರಿಕಾದ ಸೈನ್ಯ ಹೆಚ್ಚು ಬಲಯುತವಾಗಿರುತ್ತದೆ ಎಂಬುದನ್ನು ನಿವೃತ್ತಿ ಹೊಂದಿದ ಸೈನ್ಯದ ಅಧಿಕಾರಿಗಳು ಹೇಳುತ್ತಾ ಬಂದಿದ್ದಾರೆ.

ಕಪ್ಪು ಜನಾಂಗದ ವಿದ್ಯಾರ್ಥಿಗಳು ಇದ್ದಾಗ ಮಾತ್ರ ಶಿಕ್ಷಣ ಕ್ಷೇತ್ರದಲ್ಲಿ ನಡೆಯುವ ವಿದ್ಯೆಯ ಚಟುವಟಿಕೆಗಳು ಹೆಚ್ಚು ಗುಣಮಟ್ಟವನ್ನು ಹೊಂದಿರುತ್ತದೆ ಎಂದು ಶಿಕ್ಷಣ ತಜ್ಞರು ಹೇಳುತ್ತಾ ಬಂದಿದ್ದಾರೆ.

ಈ ಒಂದು ವೈವಿಧ್ಯತೆಯ ತತ್ವ ಅಮೆರಿಕಾದ ಸಮಾಜದಲ್ಲಿ ಎಲ್ಲರು ಒಪ್ಪುವಂತಹ ತತ್ವವಾಗಿ ಬೆಳೆದು ಬರುತ್ತಿದೆ.

ಈ ವೈವಿಧ್ಯಮಯ ತತ್ವದಿಂದಾಗಿ ಉದ್ಯೋಗದ ಅವಕಾಶ ನಮಗೆ ಹೆಚ್ಚಾಗಿದೆ. ಬೇರೆ ಬೇರೆ ಕಂಪನಿಗಳಲ್ಲಿ, ಬಿಸಿನೆಸ್‌ಗಳಲ್ಲಿ ಅತ್ಯಂತ ಉನ್ನತ ಮಟ್ಟದಲ್ಲಿ ಅಧಿಕಾರವನ್ನು ಹಿಡಿಯಲು ಇದರಿಂದ ಸಾಧ್ಯವಾಗಿದೆ. □



ಸೂಜಿಗಣ್ಣು.

ದಾರದ ತುದಿಗೆ
ಹಾಕಲು ಮರೆತು
ಹೋದ ಗಂಟು
ಚುಚ್ಚಿದ ಹಾಗೆ
ಸೂಜಿಯ ತೂರಿ
ಬಂದು ಬಿಟ್ಟಿತು
ಜೊತೆ ಜೊತೆಗೆ,
ಪ್ಯಾಂಟು, ಶೂ ಹಾಕಿ
ಬಾಗಿಲಲಿ ಹೊರಟು
ನಿಂತೇ ಬಿಟ್ಟಿರುವ ಗಂಡ
ಹೇಳಿದ್ದ ಮರೆತೆ
-ಬಿಟ್ಟಿದ್ದೆ ನಿನ್ನೆ ಷರಟಿನ
ಕಿತ್ತ ಗುಂಡಿಯ ಹಾಕೆಂದು.
ಅವಸರಕೆ ನಡುಗುವ ಕೈ,
ಹೆಂಚಿನ ಮೇಲೆ
ಹೊತ್ತ ರೊಟ್ಟಿ,
ತೂತಿನೊಳಗೆ ಕಣ್ಣಿಟ್ಟು

ಹಾಕಿದರೂ ಸೂಜಿ
ಕಣ್ಣಾಚೆಯೆ ಹಾದುಬಿಡುವ
ದಾರದ ಪರಿ-ಅಚ್ಚರಿ!
ನಾಳೆಯೂ ಹೀಗೆ
ಮರೆವು ಮರೆವಾಗಿ
ಕಾಡದೆ ಮರೆಯಲೆಂದು
ಹೊಲೆಯುತ್ತೇನೆ
ಗಂಟನು ಸೇರಿಸಿ
ಕಿತ್ತ ಗುಂಡಿಯ ಕೆಳಗೆ.

○ ಜ. ನಾ. ತೇಜಶ್ರೀ

ಆಧಾರವಿಲ್ಲದ ಕೈಗಾರಿಕೋದ್ಯಮದ ವಾದ

ದಲಿತ/ಆದಿವಾಸಿ ಮಕ್ಕಳಲ್ಲಿ ೩/೪ ರಷ್ಟು ಮಂದಿ ಮೊದಲ ತಲೆಮಾರಿನ ಅಕ್ಷರಸ್ತರು. ಬಡತನದೊಟ್ಟಿಗೆ ಶಿಕ್ಷಣದ ಗಂಧಗಾಳಿ ಇಲ್ಲದವರು ಹಾಗೂ ವೈರುಧ್ಯಕಾರಿ ಸಾಮಾಜಿಕ ವ್ಯವಸ್ಥೆಯಲ್ಲಿರುವ ಇವರನ್ನು ಶಾಲೆಯಿಂದ ಹೊರದೂಡಲಾಗುತ್ತಿದೆಯೇ ವಿನಃ, ಅವರನ್ನು ಶಾಲೆ ಬಿಟ್ಟವರೆಂದು ವಿವರಿಸುವುದು ಸೂಕ್ತವಲ್ಲ. ಆದ್ದರಿಂದ, ದಲಿತ/ಆದಿವಾಸಿ ವಿದ್ಯಾರ್ಥಿಗಳ ಶಾಲೆಬಿಟ್ಟ ಅಂಕಿ-ಅಂಶಗಳನ್ನು ಪ್ರಚಾರ ಮಾಡುತ್ತಿರುವ ಕೈಗಾರಿಕೋದ್ಯಮ ರಸ್ತೆಬದಿ ವಾದಮಾಡುವವರಂತೆ ಕಾಣುತ್ತದೆ. ಅವರು ಹೇಳದಿರುವ ಸಂಗತಿಯೆಂದರೆ, ಪ್ರೌಢ ಶಾಲೆಯ ನಂತರ ಶಾಲೆ ಬಿಡುವ ದಲಿತ/ಆದಿವಾಸಿ ವಿದ್ಯಾರ್ಥಿಗಳ ಸಂಖ್ಯೆ ಬಹುವಾಗಿ ಕ್ಷೀಣಿಸುತ್ತದೆ. ಅಲ್ಲದೆ ಅವರು ಕಾಲೇಜು ಮೆಟ್ಟಿಲೇರಿದಾಗ ಅವರು ತಮ್ಮ ಅಧ್ಯಯನದಲ್ಲಿ ಬಹುವಾಗಿ ಸುಧಾರಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಅನು: ಡೊಮಿನಿಕ್ ಡಿ

ಕಳೆದ ಕೆಲವು ವಾರಗಳಿಂದ, ಅನೇಕ ಕೈಗಾರಿಕಾ ಸಂಘಟನೆಗಳಾದ FICCI, ಮತ್ತು ಅದರಲ್ಲೂ ನಿರ್ದಿಷ್ಟವಾಗಿ CII, ಅರ್ಧಕ್ಕೆ ಶಾಲೆ ಬಿಟ್ಟ ದಲಿತ ಮತ್ತು ಆದಿವಾಸಿ ಮಕ್ಕಳ ಅಂಕಿ ಅಂಶಗಳನ್ನು ದಿನ ಪತ್ರಿಕೆ ಮತ್ತು ಟಿವಿಗಳಿಗೆ ಬಿಡುಗಡೆ ಮಾಡುತ್ತಿವೆ. ಇದು ಅಸತ್ಯವಾದುದೇನೂ ಅಲ್ಲ ಸರಿ.

ಆದರೆ, ಈ ಕೈಗಾರಿಕೋದ್ಯಮ ದಲಿತ ಮಕ್ಕಳ ಪರಿಸ್ಥಿಯ ಬಗ್ಗೆ ನಿಜವಾಗಿಯೂ ಕಾಳಜಿಯನ್ನು ಹೊಂದಿವೆಯೇ? ಅಥವಾ ಈ ಕೈಗಾರಿಕೋದ್ಯಮಗಳಿಗೆ ಇತರೆ ಹಿತಾಸಕ್ತಿಯೇನಾದರೂ ಇದೆಯಾ? ಈ ಕೈಗಾರಿಕೋದ್ಯಮ ತಾನು ಕಂಡುಕೊಂಡ ಹೊಸ ಆಯುಧ 'ದಿಂದ ಸೂಕ್ಷ್ಮ ಸೂಚನೆಗಳನ್ನು ನೀಡುತ್ತಿದೆಯಾ–ಅಂದರೆ ಇಷ್ಟೊಂದು ಸಂಖ್ಯೆಯಲ್ಲಿ ದಲಿತ ಮಕ್ಕಳು ಶಾಲೆಯಿಂದ ಹೊರಬೀಳುತ್ತಿದ್ದಾರಾದರೆ, ದಲಿತ/ಆದಿವಾಸಿಗಳಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ಇಲ್ಲವಾದ್ದರಿಂದ ಖಾಸಗೀ ವಲಯದದಲ್ಲಿ ಅವರಿಗೆ ಉದ್ಯೋಗ ಮೀಸಲಾತಿ ಇಡುವುದರಲ್ಲಿ ಅರ್ಥವಿಲ್ಲ–ಎಂಬ ಸೂಚನೆಯನ್ನು ಕೈಗಾರಿಕೋದ್ಯಮ ನೀಡುತ್ತಿದೆಯಾ? ಇದೇನಾದರೂ ನಿಜವಾದಲ್ಲಿ ಕೈಗಾರಿಕೋದ್ಯಮ ಸುಳ್ಳು ಹೇಳುತ್ತಿದೆ.

ಭಾರತ ಸರ್ಕಾರದ ವರದಿ (ಆಯ್ದ ಶೈಕ್ಷಣಿಕ ಅಂಕಿ ಅಂಶಗಳು–೨೦೦೦)ಯ ಪ್ರಕಾರ ಸುಮಾರು ೮ ಲಕ್ಷ ದಲಿತ/ಆದಿವಾಸಿ ವಿದ್ಯಾರ್ಥಿಗಳು ಡಿಗ್ರಿಯಲ್ಲಿ ಅಧ್ಯಯನ ನಡೆಸುತ್ತಿದ್ದಾರೆ ಹಾಗೂ ಸುಮಾರು ೭೭,೦೦೦ ಮಂದಿ ಸ್ನಾತಕೋತ್ತರ ಪದವಿಯಲ್ಲಿ ತೊಡಗಿದ್ದಾರೆ. ಹಾಗೆಯೇ ೩೮,೦೦೦ ದಲಿತ/ಆದಿವಾಸಿ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಓದುತ್ತಿದ್ದಾರೆ ಮತ್ತು ೧೭,೦೦೦ ಮಂದಿ ವೈದ್ಯಕೀಯ ಶಿಕ್ಷಣದಲ್ಲಿ ನಿರತರಾಗಿದ್ದಾರೆ. ಅಲ್ಲದೆ ಸುಮಾರು ೫೦,೦೦೦ ಮಂದಿ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಓದುತ್ತಿದ್ದಾರೆ.

ಹಾಗಾದರೆ, ಕೈಗಾರಿಕೋದ್ಯಮ ಬರೀ ಶಾಲೆಬಿಟ್ಟದ್ದನ್ನು ಮಾತ್ರ ಹೇಳುತ್ತಿದೆ? ಅಂದರೆ ಇಷ್ಟೊಂದು ಮಂದಿ ಉನ್ನತ/ವೃತ್ತಿಪರ ಶಿಕ್ಷಣದಲ್ಲಿ ತೊಡಗಿರುವುದು ಅವರ ದೃಷ್ಟಿಗೆ ಬಿದ್ದಿರಲಾರದೆಂದು ಭಾವಿಸಿಕೊಳ್ಳೋಣವೇ!

ವಿಶ್ಲೇಷಣೆ ಏನೂ ಇಲ್ಲದೆ ಈ ಶಾಲೆ ಬಿಡುತ್ತಿರುವ ದಲಿತ/ಆದಿವಾಸಿ ಮಕ್ಕಳ ಅಂಕಿ–ಅಂಶಗಳನ್ನು ಲೆಕ್ಕಾಚಾರ ಮಾಡುತ್ತಿರುವ ಕೈಗಾರಿಕೋದ್ಯಮ, ದಲಿತರು/ಆದಿವಾಸಿ ಜನ ಆಧುನಿಕ ಶಿಕ್ಷಣ ವ್ಯವಸ್ಥೆಗೆ ಇನ್ನೂ ಹೊಂದಿಕೊಳ್ಳಲಿಲ್ಲವಾದ್ದರಿಂದ, ಅವರು ಆಧುನಿಕವಾದ ಯಂತ್ರಗಳನ್ನು ಮತ್ತು ಬಿಸಿನೆಸ್ ಚಟುವಟಿಕೆಗಳನ್ನು ನಿಭಾಯಿಸಿಕೊಳ್ಳಲು ಕಷ್ಟವಾಗುತ್ತದೆ ಎಂಬ ಸೂಚನೆಯನ್ನು ಸೂಚಿಸುತ್ತಿದ್ದಾರೆ ತಾನೆ? ಅವರ ಈ ವಾದ ಹೇಗಿದೆಯೆಂದರೆ: "ಕೈಗಾರಿಕೋದ್ಯಮ ಸ್ಪರ್ಧಾತ್ಮಕತೆಯನ್ನು ಕಳೆದುಕೊಳ್ಳುತ್ತದೆ", 'ಇದು ಭಾರತವನ್ನು ಕೈಗಾರೀಕರಣ ಹೊಂದುವುದರಿಂದ ತಪ್ಪಿಸುತ್ತದೆ', ಮತ್ತು 'ಇದು ಖಾಸಗೀ ವಲಯದಲ್ಲಿ ಮೆರಿಟ್‌ನ್ನು ಮೀಸಲಾತಿಯ ಮೂಲಕ ಕೊಲ್ಲುತ್ತದೆ'. ಇಂಥ



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ವಾದಗಳೇಕೆ?

ದಲಿತ ಮತ್ತು ಆದಿವಾಸಿಗಳ ಜಾಣ್ಮೆಯ ಬಗ್ಗೆ ಕೈಗಾರಿಕೋದ್ಯಮ ತೀರ್ಪುಮಾಡುವ ಮೊದಲು ಈ ಕೆಳಗಿನ ಅಂಶಗಳ ಬಗ್ಗೆ ಆಲೋಚಿಸಬಾರದೇ: ಮೊದಲನೆಯದಾಗಿ, ಅರ್ಧಕ್ಕಿಂತಲೂ ಅಧಿಕ ಮಂದಿ ದಲಿತರು/ ಆದಿವಾಸಿಗಳು ಅನಕ್ಷರಸ್ಥರು; ಎರಡನೆಯದಾಗಿ, ಅಕ್ಷರಸ್ಥರಾಗಿರುವವರಲ್ಲಿ ಅರ್ಧಕ್ಕಿಂತಲೂ ಅಧಿಕ ಮಂದಿ ಪೋಷಕರು ಮೆಟ್ರಿಕ್ಯುಲೇಷನ್ ಓದದವರಾಗಿದ್ದಾರೆ; ಮೂರನೆಯದಾಗಿ, ಅಂತಹವರಲ್ಲಿ ಅನೇಕ ಮಂದಿ ಕೂಲಿಯಾಳುಗಳಾಗಿದ್ದಾರೆ; ಕೊನೆಯದಾಗಿ, ಶಾಲೆಬಿಟ್ಟ ಮಕ್ಕಳಲ್ಲಿ ಅನೇಕರು ಕುಟುಂಬದ ಆದಾಯಕ್ಕೆ ದುಡಿಯಲೇಬೇಕಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳಬೇಕಾದರೆ, ದಲಿತ/ಆದಿವಾಸಿ ಮಕ್ಕಳಲ್ಲಿ ೩/೪ ರಷ್ಟು ಮಂದಿ ಮೊದಲ ತಲೆಮಾರಿನ ಅಕ್ಷರಸ್ತರು. ಬಡತನದೊಟ್ಟಿಗೆ ಶಿಕ್ಷಣದ ಗಂಧಗಾಳಿ ಇಲ್ಲದವರು ಹಾಗೂ ವೈರುಧ್ಯಕಾರಿ ಸಾಮಾಜಿಕ ವ್ಯವಸ್ಥೆಯಲ್ಲಿರುವ ಇವರನ್ನು ಶಾಲೆಯಿಂದ ಹೊರದೂಡಲಾಗುತ್ತಿದೆಯೇ ವಿನಃ, ಅವರನ್ನು ಶಾಲೆ ಬಿಟ್ಟವರೆಂದು ವಿವರಿಸುವುದು ಸೂಕ್ತವಲ್ಲ.

ಆದ್ದರಿಂದ, ದಲಿತ/ಆದಿವಾಸಿ ವಿದ್ಯಾರ್ಥಿಗಳ ಶಾಲೆಬಿಟ್ಟ ಅಂಕಿ–ಅಂಶಗಳನ್ನು ಪ್ರಚಾರ ಮಾಡುತ್ತಿರುವ ಕೈಗಾರಿಕೋದ್ಯಮ ರಸ್ತೆಬದಿ ವಾದಮಾಡುವವರಂತೆ ಕಾಣುತ್ತದೆ.ಅವರು ಹೇಳದಿರುವ ಸಂಗತಿಯೆಂದರೆ, ಪ್ರೌಢಶಾಲೆಯ ನಂತರ ಶಾಲೆಬಿಡುವ ದಲಿತ/ಆದಿವಾಸಿ ವಿದ್ಯಾರ್ಥಿಗಳ ಸಂಖ್ಯೆ ಬಹುವಾಗಿ ಕ್ಷೀಣಿಸುತ್ತದೆ.ಅಲ್ಲದೆ ಅವರು ಕಾಲೇಜು ಮೆಟ್ಟಿಲೇರಿದಾಗ ಅವರು ತಮ್ಮ ಅಧ್ಯಯನದಲ್ಲಿ ಬಹುವಾಗಿ ಸುಧಾರಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಒಮ್ಮೆ ಅವರು ಶೈಕ್ಷಣಿಕ ಚೌಕಟ್ಟಿನಲ್ಲಿ ಸಮಾನವಾಗಿ ತೊಡಗಿಸಿಕೊಂಡಂತೆ. ಅದೇ ಶಿಕ್ಷಕರು, ಅದೇ ತರಗತಿ ಕೋಣೆಗಳು, ಅದೇ ಲೈಬ್ರರಿ ಮತ್ತು ಕಾಲೇಜುರಂಗ. ಅಲ್ಲೆಲ್ಲಾ ಅವರು ಇತರರಂತೆ ಮಾರ್ಪಾಟು ಹೊಂದುತ್ತಾರೆ. ಹೀಗಿರುವಲ್ಲಿ ಕೈಗಾರಿಕೋದ್ಯಮಿಗಳು ತಮ್ಮ ಮೊದಲ ಅಥವಾ ಎರಡನೇ ತಲೆಮಾರಿನ ಕಥೆಯನ್ನೇಕೆ ಹೇಳದೆ ಬಚ್ಚಿಡುತ್ತಾರೆ? ೧೯೦೨ರ ವಿಶ್ವವಿದ್ಯಾಲಯ ಸಮಿತಿ ವರದಿಯನ್ನು ಇಲ್ಲಿ ಹೇಳಲೇ ಬೇಕು.

೧೯೦೧ರ ಮೆಟ್ರಿಕ್ಯುಲೇಷನ್ ಫಲಿತಾಂಶಗಳ ಬಗ್ಗೆ ವಿಶ್ಲೇಷಿಸುತ್ತಾ ವರದಿ (೪೫ನೇ ಪುಟ)ಯು ಅಖಿಲ ಭಾರತ ಮಟ್ಟದ ಈ ಕೆಳಗಿನ ಅಂಕಿ–ಅಂಶಗಳನ್ನು ನೀಡುತ್ತದೆ: ಮೆಟ್ರಿಕ್ಯುಲೇಷನ್ ತೇರ್ಗಡೆಯಾದದುದರಲ್ಲಿ ಮದ್ರಾಸ್ ಶೇ.೧೯.೨, ಮುಂಬಾಯಿ ಶೇ.೩೨.೬, ಕಲ್ಕತ್ತಾ – ಶೇ.೫೩.೯ರಷ್ಟು, ಅಲಹಾಬಾದ್ – ಶೇ.೩೫.೨ ಮತ್ತು ಪಂಜಾಬ್ ೫೦.೯ ರಷ್ಟು ಆಗಿತ್ತು.

ಈ ಅಂಕಿ–ಅಂಶಗಳನ್ನು ಓದುವಾಗ ಗಮನಿಸಬೇಕಾದ ಸಂಗತಿಯೆಂದರೆ, ೧೯೦೦ರಲ್ಲಿ ಬಹುತೇಕ ವಿದ್ಯಾರ್ಥಿಗಳು ದ್ವಿಜರೇ ಆಗಿದ್ದದು. ಇವರೆಲ್ಲಾ ಅನುಕೂಲಸ್ಥ ಕುಟುಂಬಗಳಿಂದಲೇ ಬಂದವರಾಗಿದ್ದರು.

ಇವರಿಗೆ ಸಾಮಾಜಿಕ ಅಡೆತಡೆಗಳೇನೂ ಇರಲಿಲ್ಲ.

ಹಾಗೆಯೇ ಭಾರತದಲ್ಲಿ ಶಿಕ್ಷಣದ ಪ್ರಗತಿ ಸಂ. ೨ (೧೯೭೭-'೭೨) ವಿವಿಧ ಶಿಸ್ತುಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳ ಅನುತ್ತೀರ್ಣಕೊಂಡವರ ನಕಾಶೆಯನ್ನು (ಪು.೩೯-೪೫) ಈ ಕೆಳಗಿನಂತೆ ನೀಡುತ್ತದೆ: ವೈದ್ಯಕೀಯ ಶಿಸ್ತಿನಲ್ಲಿ ಅನುತ್ತೀರ್ಣರಾದವರ ಸಂಖ್ಯೆ ಶೇ.೪೭, ಇಂಜಿನಿಯರಿಂಗ್‌ನಲ್ಲಿ ಶೇ. ೩೪, ಕಲಾ ಶಿಸ್ತಿನಲ್ಲಿ ೪೯.೧ ಹಾಗೂ ಕಾನೂನು ಶಿಸ್ತಿನಲ್ಲಿ ಶೇ.೧೭.

ಇಂಥ ನಾಚಿಕೆಗೇಡಿನ ಫಲಿತಾಂಶದ ನಡುವೆಯೂ ಬ್ರಿಟಿಷ್ ಸರ್ಕಾರ ಅವರನ್ನು ವಿದ್ಯಾಭ್ಯಾಸದಲ್ಲಿ ಹುರಿದುಂಬಿಸಿತ್ತು. ಹೀಗಿರುವಾಗ ಈ ಕೈಗಾರಿಕೋದ್ಯಮಿ ಸಂಘಟನೆಗಳು ಮೊದಲನೇ ಸಲ ಆಧುನಿಕ ಶಿಕ್ಷಣಕ್ಕೆ ಎದುರಾದಾಗ ಆದ ಅನುಭವದ ತಮ್ಮ ಕಥೆಯನ್ನು ಹೇಳುವುದಿಲ್ಲ ಏಕೆ?

ಅಂದರೆ ಕೈಗಾರಿಕೋದ್ಯಮಿಗಳ ಪರವಾಗಿ ವಾದಿಸುತ್ತಿರುವವರು ಕೇವಲ ಸೋಲುಗುಳಿತನದ ವಾದಗಳನ್ನಷ್ಟೆ ಮುಂದಿಡುತ್ತಿದ್ದಾರೆ. ಈಗಾಗಲೇ ಕೈಗಾರಿಕೋದ್ಯಮಿಗಳ ನಡುವೆ ಅವರ ಸಾಮಾಜಿಕ ಸ್ನೇಹಿತರ್ಯಾರು ಇಲ್ಲ. ಹೀಗಿರುವಾಗ ಅವರು ತಮ್ಮ ಈ ನಡಾವಳಿಯನ್ನು ಮುಂದುವರಿಸಿದ್ದೇ ಆದಲ್ಲಿ ಮತ್ತಷ್ಟು ಪ್ರತ್ಯೇಕಗೊಳ್ಳುತ್ತಾರಷ್ಟೆ. ಇದು ಕೈಗಾರಿಕೋದ್ಯಮಕ್ಕೆ ಶುಭ ಸಂಗತಿಯೇನೂ ಅಲ್ಲ. ಹಾಗೆಯೇ ಭಾರತಕ್ಕೂ ಆಗದು ತಾನೇ?

ಆಂಗ್ಲ ಭಾಷೆ ಮಾತನಾಡುವ ಭಾರತೀಯರಿಗೆ ಹಬ್ಬಲ್ ಆಕಾಶ ದೂರದರ್ಶಕ ಅಪರಿಚಿತವಾದ ವಸ್ತುವೇನೂ ಅಲ್ಲ. ಆಧುನಿಕ ಖಗೋಳಶಾಸ್ತ್ರ ಈ ದೂರದರ್ಶಕವಿಲ್ಲದೆ ಪೂರ್ಣವಾಗಲಾರದು. ಈ ದೂರದರ್ಶಕವು ಆಧುನಿಕ ಖಗೋಳ-ಭೌತಶಾಸ್ತ್ರಕ್ಕೆ ಒಂದು ವರವೆಂದೇ ಹೇಳಬೇಕು. ಏಕೆಂದರೆ ಇಲ್ಲಿಯತನಕ ಖಗೋಳ ಕಾಯದ ಅತ್ಯಂತ ಸೂಕ್ಷ್ಮವಾದ ಚಿತ್ರ ತೆಗೆಯಲು ಈ ದೂರದರ್ಶಕದಿಂದ ಮಾತ್ರ ಸಾಧ್ಯವಾಗಿದೆ.

"ಎಫ್-೧೬ ಯುದ್ಧ ವಿಮಾನ ತನಗೆ ಗೊತ್ತಿಲ್ಲ"ವೆಂದು ಹೇಳಲು ಸಾಧ್ಯವೇ? ಅರಿವು ಇರುವುದಾದರೆ ಎಫ್ ೧೧೭ ಆಕಾಶದಲ್ಲಿ ಯುದ್ಧ ಮಾಡುವ ಚತುರ ವಿಮಾನವಾಗಿದೆ. ಗಲ್ಫ್ ಯುದ್ಧದ ನಂತರದಲ್ಲಿ ಯಾರಾದರೂ ಹೀಗೆಂದು ಹೇಳುವರೇನೂ: " ನನಗೆ ಪೇಟ್ರಿಯಟ್ ಕ್ಷಿಪಣಿ ಗೊತ್ತಿಲ್ಲ" ಎಂದು? ಈಗ ಅದಕ್ಕಿಂತಲೂ ಅತ್ಯಾಧುನಿಕವಾದ ಪಿ.ಎ.ಸಿ-೩ ನ್ನು ತಯಾರಾಗಿಸಲಾಗುತ್ತದೆ. ಇದು "ಹತ್ಯೆಮಾಡಲು ಹೊಡೆ" ಎನ್ನುವ ಅತ್ಯಂತ ಮುಂದುವರೆದ ತಂತ್ರಜ್ಞಾನದಿಂದ ಕೂಡಿರುವ ಆಕಾಶ ರಕ್ಷಣಾ ಕ್ಷಿಪಣಿಯಾಗಿದೆ. ಅಂದರೆ ತಾಂತ್ರಿಕ ಕ್ಷಿಪಣಿಗಳು, ಸಮೂಹನಾಶ ಶಸ್ತ್ರಾಸ್ತ್ರಗಳು, ಕ್ರೂಸ್ ಕ್ಷಿಪಣಿಗಳು ಮತ್ತು ಯುದ್ಧ ವಿಮಾನಗಳನ್ನು ನಾಚಿಸುವ ಈ ಪಿ.ಎ.ಸಿ.-೩ ಇವುಗಳೆಲ್ಲವನ್ನು ಮೀರಿಸುವ ಭಯಾನಕ ಕ್ಷಿಪಣಿಯಾಗಿದೆ. ಒಂದು ವೆಬ್ ಸೈಟ್‌ನ ಪ್ರಕಾರ ಈ ಕ್ಷಿಪಣಿ ಯಾವುದೇ ಆಕಾಶ ಕೇಂದ್ರಿತ ರಕ್ಷಣಾ ತಂತ್ರವನ್ನು ಹೊಂದಿದೆಯಲ್ಲದೆ, ಯಾವುದೇ ಕ್ಷಣದಲ್ಲಿ ಯುದ್ಧ ವಿಮಾನವನ್ನು ಕಾಯುವ ಶಕ್ತಿಯನ್ನು ಹೊಂದಿದೆ.

ಈ ಮೇಲಿನ ಯುದ್ಧ ಕ್ಷಿಪಣಿಗಳನ್ನು ತಯಾರಿಸಿದ [illegible]ನನ್ನು ನಾವು ನೆನಪಿಸಿಕೊಳ್ಳಲಾರದೆ ಹೋದಲ್ಲಿ ಆ [illegible]ಹಾನ್ ಬುದ್ಧಿವಂತನನ್ನು ಹಾಗೂ ಲಾಭವನ್ನು [illegible] ಇದ್ದುಬಿಟ್ಟೆವು? ಆತನೇ ಲಾಕ್‌ಹೀಡ್ ಮಾರ್ಟಿನ್.

೨೦೦೫ ರಲ್ಲಿ ಆತನ ಈ ಕ್ಷಿಪಣಿಗಳ ಮೌಲ್ಯ ೩೭.೨ ಬಿಲಿಯನ್ ಡಾಲರ್‌ಗಳಾಗಿದ್ದು, ಇನ್ನೂ ೭೪.೮ ಬಿಲಿಯನ್ ಡಾಲರ್ ಬೇಡಿಕೆಯನ್ನು ಹೊಂದಿದ್ದಾನೆ. ಈ ಕಂಪನಿಯು ತಂತ್ರಜ್ಞಾನದ ಶಿಖರದಂತೆ ಇದೆ. ಭಾರತವೂ ಸಹ ಈ ಲಾಕ್‌ಹೀಡ್‌ನಿಂದ ಯುದ್ಧ ಹೆಲಿಕಾಪ್ಟರ್, ಯುದ್ಧವಿಮಾನಗಳನ್ನು ಕೊಳ್ಳಲು ಚೌಕಾಸಿ ನಡೆಸುತ್ತಿದೆ. ಹೀಗಿರುವಲ್ಲಿ ಈ ಶ್ರೇಷ್ಠ ತಂತ್ರಜ್ಞಾನದ ಜಾಗತಿಕ ಕಂಪನಿಯು ಸಕಾರಾತ್ಮಕ/ವೈವಿಧ್ಯತೆಯ ಕಾರ್ಯಕ್ರಮದ ಬಗ್ಗೆ ಏನು ಹೇಳುತ್ತದೆ?

ಕೆಲವು ದಿನಗಳ ಹಿಂದೆ ನನಗೊಂದು ಪಾರ್ಸಲ್ ಬಂತು. ಅದರ ಮೇಲೆ ವಾಷಿಂಗ್‌ಟನ್ ಡಿಸಿ ಎಂದಿದ್ದು, ಡಾ. ಲಕ್ಷ್ಮಿನಾರಾಯಣ ಬೆರ್ವ ಎಂಬ ಹೆಸರಿದ್ದುದನ್ನು ಕಂಡಾಕ್ಷಣವೇ ಅದನ್ನು ತೆರೆದು ನೋಡಿದೆ. ಅತ್ಯಂತ ಯಶಸ್ವಿ ವೈದ್ಯಪಟುವಾಗಿರುವ ಬೆರ್ವ ಅಮೇರಿಕಾದಲ್ಲಿ ಆಚರಣೆಯಲ್ಲಿರುವ ಸಕಾರಾತ್ಮಕ/ವೈವಿಧ್ಯತೆಯ ಕಾರ್ಯಗಳ ಬಗ್ಗೆ ಅವರು ನನಗೆ ಮಾಹಿತಿಯನ್ನು ನಿರಂತರವಾಗಿ ನೀಡುತ್ತಿರುತ್ತಾರೆ. ಡಾ. ಬೆರ್ವ ಉತ್ತರ ಅಮೇರಿಕಾದಲ್ಲಿರುವ ದಲಿತ ಸಂಘಟನೆಗೆ ಸ್ಫೂರ್ತಿಯಾಗಿದ್ದಾರೆ.

ಡಾ. ಬೆರ್ವರವರ ಈ ಪಾರ್ಸಲ್ ವರ್ಷದ ಅತ್ಯಂತ ದೊಡ್ಡ ಬಹುಮಾನವೆಂದೇ ಪರಿಗಣಿಸುತ್ತೇನೆ. ಅದರಲ್ಲಿ ಜಗತ್ತಿನಾದ್ಯಂತ ಪ್ರಚಾರದಲ್ಲಿರುವ ವಾಷಿಂಗ್‌ಟನ್ ಪೋಸ್ಟ್‌ನ ೧೦ ಪುಟಗಳ ಬಿಸ್ಸಿನೆಸ್ ಸಪ್ಲೆಮೆಂಟ್ ಇತ್ತು. ವಾಷಿಂಗ್‌ಟನ್ ಪೋಸ್ಟ್ ಸಪ್ಲೆಮೆಂಟ್‌ನ ಶೀರ್ಷಿಕೆ ಹೀಗಿತ್ತು – **Conclusion Inclusion-** ಅಂದರೆ ಅಮೇರಿಕಾದ ಅಂತಿಮ ನಿರ್ಣಯವೆಂದರೆ, ಕಪ್ಪುಜನ ಮತ್ತು ಇತರೆ ಕುಲಸಮುದಾಯಗಳನ್ನು ಒಳಗೊಳ್ಳುವ ವಿಧಾನದಿಂದ ಮಾತ್ರ ಅಮೇರಿಕಾದ ವಾಣಿಜ್ಯವನ್ನು ಶಕ್ತಿಯುತವಾಗಿ ಕಟ್ಟಬಹುದಾಗಿದೆ. ಲಾಕ್‌ಹೀಡ್ ಎಂಬ ಆ ಶ್ರೇಷ್ಠ ತಂತ್ರಜ್ಞಾನದ ಜಾಗತಿಕ ಕಂಪನಿಯು ಅದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಪತ್ರಿಕೆಯ ಒಳಪುಟಗಳಲ್ಲಿ ಲಾಕಿಡ್‌ನ ಬೋರ್ಡ್‌ರೂಂನಲ್ಲಿರುವ ಒಂದು ಫೋಟೋವನ್ನು ಮುದ್ರಿಸಲಾಗಿತ್ತು. ಅದರಲ್ಲಿ ಲಾಕ್‌ಹೀಡ್‌ನ ಮಾಹಿತಿ ತಂತ್ರಜ್ಞಾನವನ್ನು ಮುನ್ನಡೆಸುತ್ತಿರುವ ಅಧ್ಯಕ್ಷೆಯ ಫೋಟೋ ಇತ್ತು. ಆಕೆಯ ಹೆಸರು ಲಿಂಡಾ ಗೂಡನ್ ಒಬ್ಬ ಕಪ್ಪುಜನಾಂಗದ ಮಹಿಳೆ. ಆಕೆಯ ಪ್ರಕಾರ ಕಂಪನಿಯ ೧,೨೪,೦೦೦ ಕೆಲಸಗಾರರಲ್ಲಿ ಶೇ.೨೧ರಷ್ಟು ಈ ಕಪ್ಪುಜನ ಮತ್ತು ಇತರೆ ಕುಲಸಮುದಾಯಗಳ ಅಲ್ಪಸಂಖ್ಯಾತರಿದ್ದಾರೆ. ೫೨ ಮಂದಿಯ ಉನ್ನತ ದರ್ಜೆಯ ಅಧಿಕಾರಿಗಳಲ್ಲಿ ೪ ಮಂದಿ ಅಲ್ಪಸಂಖ್ಯಾತರಿದ್ದಾರೆ, ಹಾಗೂ ೧೫ ಮಂದಿಯ ಬೋರ್ಡ್ ಆಫ್ ಡೈರೆಕ್ಟರ್ಸ್‌ನಲ್ಲಿ ಒಬ್ಬ ಕಪ್ಪು ಮಹಿಳೆ ಮತ್ತು ಒಬ್ಬ ಕಪ್ಪು ಗಂಡಸು ಇದ್ದಾರೆ. ಅಂದರೆ ಈ ಲಾಕ್‌ಹೀಡ್ 'ವೈವಿಧ್ಯತೆಯ ಆದರಿ'ಯೊಂದನ್ನು ಅಭಿವೃದ್ಧಿಪಡಿಸಿದ್ದು ಅದಕ್ಕಾಗಿ ಪೇಟೆಂಟ್ ಹಕ್ಕನ್ನು ಪಡೆಯಲು ಪ್ರಯತ್ನಿಸುತ್ತಿದೆ. "ಈ ಮಾದರಿ ಪ್ರತಿಯೊಂದು ಘಟಕದ ನೇಮಾಕಾತಿಯ ಸಾಮರ್ಥ್ಯ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಪರಿಶೀಲಿಸುತ್ತಿದ್ದು, ಉದ್ಯೋಗಿಗಳು ಮತ್ತು ಗ್ರಾಹಕರ ಸಮೀಕ್ಷೆಯನ್ನು ಮಾಡುತ್ತಿದೆ"

ವೈವಿಧ್ಯತೆಯ ಮಾದರಿ

ವಾಷಿಂಗ್‌ಟನ್ ಪೋಸ್ಟ್ ಸಪ್ಲೆಮೆಂಟ್‌ನ ಶೀರ್ಷಿಕೆ ಹೀಗಿತ್ತು – **Conclusion Inclusion-** ಅಂದರೆ ಅಮೇರಿಕಾದ ಅಂತಿಮ ನಿರ್ಣಯವೆಂದರೆ, ಕಪ್ಪುಜನ ಮತ್ತು ಇತರೆ ಕುಲಸಮುದಾಯಗಳನ್ನು ಒಳಗೊಳ್ಳುವ ವಿಧಾನದಿಂದ ಮಾತ್ರ ಅಮೇರಿಕಾದ ವಾಣಿಜ್ಯವನ್ನು ಶಕ್ತಿಯುತವಾಗಿ ಕಟ್ಟಬಹುದಾಗಿದೆ. ಲಾಕ್‌ಹೀಡ್ ಎಂಬ ಆ ಶ್ರೇಷ್ಠ ತಂತ್ರಜ್ಞಾನದ ಜಾಗತಿಕ ಕಂಪನಿಯು ಅದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಪತ್ರಿಕೆಯ ಒಳಪುಟಗಳಲ್ಲಿ ಲಾಕಿಡ್‌ನ ಬೋರ್ಡ್‌ರೂಂನಲ್ಲಿರುವ ಒಂದು ಫೋಟೋವನ್ನು ಮುದ್ರಿಸಲಾಗಿತ್ತು. ಅದರಲ್ಲಿ ಲಾಕ್‌ಹೀಡ್‌ನ ಮಾಹಿತಿ ತಂತ್ರಜ್ಞಾನವನ್ನು ಮುನ್ನಡೆಸುತ್ತಿರುವ ಅಧ್ಯಕ್ಷೆಯ ಫೋಟೋ ಇತ್ತು. ಆಕೆಯ ಹೆಸರು ಲಿಂಡಾ ಗೂಡನ್. ಆಕೆ ಒಬ್ಬ ಕಪ್ಪುಜನಾಂಗದ ಮಹಿಳೆ. ಆಕೆಯ ಪ್ರಕಾರ ಕಂಪನಿಯ ೧,೨೪,೦೦೦ ಕೆಲಸಗಾರರಲ್ಲಿ ಶೇ.೨೧ರಷ್ಟು ಕಪ್ಪುಜನ ಮತ್ತು ಇತರೆ ಸಮುದಾಯಗಳ ಅಲ್ಪಸಂಖ್ಯಾತರಿದ್ದಾರೆ.

ಎಂದು ಲಿಂಡಾ ಹೇಳುತ್ತಾರೆ. ಹೀಗೆ ಮುಂದಿನ ವಾಕ್ಯ ಮತ್ತಷ್ಟು ಪಂಚ್ ನೀಡುತ್ತದೆ: 'ಮೇಲ್ವಿಚಾರಕರ ಬೋನಸ್ ಅವರ ಘಟಕದ ದಕ್ಷತೆಯ ರ್‍ಯಾಂಕ್‌ನ್ನು ಅವಲಂಬಿಸಿರುತ್ತದೆ'. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಕಂಪನಿಯ ಮೇಲಧಿಕಾರಿಗಳ ಬೋನಸ್ ನಿರ್ಧಾರವಾಗುವುದು ವೈವಿಧ್ಯತೆಯ ಆಧಾರದಲ್ಲಿ ಮಾತ್ರ. ಲಾಕ್‌ಹೀಡ್ ಒಂದು ಪರಿಣಾಮಕಾರಿ ಸರಬರಾಜು-ವೈವಿಧ್ಯತೆಯ ಕಾರ್ಯಕ್ರಮವನ್ನು ಹೊಂದಿದೆ. ಅಂದರೆ ಎಫ್-೧೬ ವಿಮಾನ ತಯಾರಿಕೆಯಲ್ಲಿ ಕಪ್ಪುಜನ ತಯಾರಿಸಿದ ಬಿಡಿಭಾಗಗಳ ಕಂಪನಿಗಳು ಇವೆಯೆಂದರೆ ಅಚ್ಚರಿಯೇನೂ ಅಲ್ಲ.

ಹಾಗಾದರೆ ಅರ್ಹತೆಯ ಪ್ರಶ್ನೆ? "ಇವತ್ತಿನ ಬಿಸ್ಸಿನೆಸ್‌ನಲ್ಲಿ ಯಾರಾದರೂ ಏಕಮೂಲದ ಪ್ರತಿಭೆಯನ್ನು ಹುಡುಕುತ್ತಿರುವರಾದರೆ ಅದರರ್ಥ ಆ ಬಿಸ್ಸಿನೆಸ್‌ನ್ನು ಉಪ-ದರ್ಜೆಗೆ ಇಳಿಸುವುದೇ ಆಗಿದೆ" ಎಂದು ಲಾಕ್‌ಹೀಡ್‌ನ ಸಿ.ಇ.ಒ ಬಾಬ್ ಸ್ಟೀವನ್ಸ್ ಹೇಳುತ್ತಾನೆ. ಪ್ರತಿಭೆಯು ಕಪ್ಪುಜಗತ್ತಿನಲ್ಲೂ ಅಡಗಿದೆ. ಆದರೆ ಅದಕ್ಕೊಂದು ಅವಕಾಶ ಬೇಕಿದೆ. ಅಂದರೆ ಬಾಬ್ ಸ್ಟೀವನ್ಸ್ ಹೇಳುವುದು ಸರಿಯಾಗಿದೆ. ಲಾಕ್‌ಹೀಡ್ ಮಾರ್ಟಿನ್ ೨೦೦೩ರ ವೈಮಾನಿಕ ಕಪ್ಪು ಇಂಜಿನಿಯರಿಂಗ್ ಪ್ರಶಸ್ತಿಗಾಗಿ ಆಂಜೆಲಾ ಡಿ ಹ್ಯಾರಿಸನ್ ಮತ್ತು ವಿಲ್ಲಿಯಂ ಹ್ಯಾರಿಸನ್ ಆಯ್ಕೆಯಾದರು. ಇಲ್ಲಿ ಓದುಗರು ಗಮನಿಸಬೇಕಾದುದೇನೆಂದರೆ ಮೂರು ದಶಕಗಳ ಹಿಂದೆ ಈ ಅಮೇರಿಕಾದ ಕೈಗಾರಿಕಾ ನಿಗಮಗಳು CII/FICCI ಯ ಮೆರಿಟ್ ಕಲ್ಪನೆಯನ್ನೇ ಹೊಂದಿತ್ತು. ಹಾಗಾದರೆ ಭಾರತೀಯ ಕೈಗಾರಿಕೋದ್ಯಮ

– ಲಾಕ್‌ಹೀಡ್‌ಗೆ ಹೋಲಿಸಿದ್ದಲ್ಲಿ ಅತ್ಯಂತ ಸಣ್ಣದ್ದು– ಈ ಕಂಪನಿಯ ವೈವಿಧ್ಯತೆಯ ಮಾದರಿಯನ್ನು ಅನುಸರಿಸುವುದೇ?

ಮಂಡಲೋತ್ತರ ಬಾರತದಲ್ಲಿ ದ್ವಿಜರು ಅಥವಾ ಮಂಡಲ್-ವಿರೋಧಿಗಳು ಅತ್ಯಧಿಕವಾಗಿಬಿಟ್ಟಿದ್ದಾರೆ. ಸಾರ್ವಜನಿಕ ಉದ್ಯಮಗಳಾದ ಭಾರತೀಯ ಆಯಿಲ್ ONGC, NTPC, BHEL, SAIL ಕಂಪನಿಗಳು ಇನ್ನೆಂದೂ ಇಂಜಿಯರ್‌ಗಳನ್ನು, ತಾಂತ್ರಿಕರನ್ನು, ಮತ್ತು ಗುಮಾಸ್ತರನ್ನು ದೊಡ್ಡ ಮಟ್ಟದಲ್ಲಿ ನೇಮಿಸಿಕೊಳ್ಳುವುದಿಲ್ಲ. ಮಂಡಲ್ ನಂತರದಲ್ಲಿ ಈ ಸಾರ್ವಜನಿಕ ಉದ್ಯಮಗಳ ಬಿಸ್ಸಿನೆಸ್ ಬೆಳೆದಿದೆ ಆದರೆ ನೇಮಕಾತಿಯಲ್ಲಿ ಶ್ರಮಶಕ್ತಿ ಕುಸಿದಿದೆ. ಹಾಗಾದರೆ ಏನಿದು ಹೊಸ ವಿದ್ಯಮಾನ?

೧೯೯೧ರ ಆರ್ಥಿಕ ಸುಧಾರಣೆಗಳಿಂದೀಚೆಗೆ ಹೊರಗುತ್ತಿಗೆಯ ಬರಾಟೆ ಶುರುವಾಯಿತು. ಅಂದರೆ ಈ ಸಾರ್ವಜನಿಕ ಉದ್ದಿಮೆಗಳ ಸುತ್ತಲೂ ಅನೇಕ ಸಣ್ಣ ಕಂಪನಿಗಳು ಬೆಳೆದು ಬಿಲ್ಲಿಯನ್ ಮೌಲ್ಯದ ಬಿಸ್ಸಿನೆಸ್ ಅವಕಾಶಗಳನ್ನು ಸೃಷ್ಟಿಸಿತು. ಅಂದರೆ ಒಂದೇ ಒಂದು ಸರ್ಕಾರದ ಕ್ರಮವು ಸಾರ್ವಜನಿಕ ಸಂಪತ್ತನ್ನು ಮಂಡಲ್–ವಿರೋಧಿಗಳಿಗೆ ನೀಡಿತು.

ಮತ್ತೊಂದೆಡೆ ಮಂಡಲ್ ಜಾತಿಗಳು ಉತ್ತರ ಮತ್ತು ಮಧ್ಯಭಾರತದಲ್ಲಿ ಆಳುವ ಜಾತಿಗಳಾಗಿ ಬದಲಾದವು. ಈ ಜಾತಿಗಳು ಇಂದು ಭೂ ಸಂಪನ್ಮೂಲ, ಸ್ಥಳೀಯ ಸಂಸ್ಥೆಗಳು, ಸ್ಥಳೀಯ ಬಿಸ್ಸಿನೆಸ್ ಪಟ್ಟಣಗಳು ಮತ್ತು ಹಣ ಲೂಟಿಮಾಡುವ ಸರ್ಕಾರಿ ಹುದ್ದೆಗಳನ್ನು ಆಕ್ರಮಿಸಿಕೊಂಡಿವೆ. ಮಂಡಲ್ ಜಾರಿಗಾಗಿ ಸೈದ್ಧಾಂತಿಕವಾಗಿ ಹೋರಾಡಿದ ದಲಿತರು ಪಡೆದಿದ್ದಾದರೂ ಏನು ಅಥವಾ ಕಳೆದು ಕೊಂಡದ್ದು ಏನು?

ಮೀಸಲಾತಿಯಿಂದಾಗಿ ಸುಮಾರು ಐದು ಮಿಲಿಯನ್ ದಲಿತರು/ಆದಿವಾಸಿಗಳು ಸರ್ಕಾರದಲ್ಲಿ ನೌಕರಿಯನ್ನು ಗಿಟ್ಟಿಸಿದರು. ಅವರಲ್ಲಿ ಅನೇಕರು ಕಲೆಕ್ಟರ್‌ಗಳಾಗಿ, ಕಮಿಷನರ್‌ಗಳಾಗಿ, ಐಜಿ ಹುದ್ದೆ, ಡಾಕ್ಟರ್ ಮತ್ತು ವಿಜ್ಞಾನಿಗಳಾಗಿ ಕಾಣಿಸಿಕೊಂಡರು. ಅಂದರೆ ೧೯೯೦ರ ವೇಳೆಗೆ ದಲಿತ ಮಧ್ಯಮವರ್ಗದ ಉದಯ ಸಾಧ್ಯ ವಾಗುತ್ತಿತ್ತು.

ಆದರೆ, ಮಂಡಲ್ ನಂತರ ಪರಿಸ್ಥಿತಿ ಬೇರೆಯೇ ಆಗಿ ಬದಲಾಯಿತು. ೧೯೮೯–೧೯೯೧ರಲ್ಲಿ ದಿವಂಗತ ರಾಜೀವ್ ಗಾಂಧಿ ದಲಿತರು ಮತ್ತು ಆದಿವಾಸಿಗಳ ನೇಮಕಾತಿಗಾಗಿ ವಿಶೇಷ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಅದರಿಂದಾಗಿ ಸಾವಿರಾರು ಮಂದಿ ದಲಿತರು/ಆದಿವಾಸಿಗಳು ಅಧಿಕಾರಿಗಳಾದರು ಮತ್ತು ನೌಕರಸ್ಥರಾದರು. ಆದರೆ 'ನೇಮಕಾತಿ ನಿಷೇಧ' ಭೂತ ಬಂದು ವಿಆರ್‌ಎಸ್‌ನ್ನು ಜಾರಿಯಾಗಿಸಿತು. ೧೭೫೭ರ ಪ್ಲಾಸಿ ಕದನದ ನಂತರ ಬ್ರಿಟಿಷರು ಬಾರತವನ್ನು ೧೯೪೦ರ ತನಕ ಆಳಲು ಶುರು ಮಾಡಿದರು. ಈ ಅವಧಿಯಲ್ಲಿ ನೇಮಕಾತಿಯ ನಿಷೇಧವನ್ನು ಹೇರಿದ್ದರ ಬಗ್ಗೆ ಸಾಕ್ಷ್ಯಾಧಾರಗಳು ಇಲ್ಲ. ಇದು ದಲಿತರಿಗೆ ಸರ್ವನಾಶದ ಸುದ್ದಿಯಾಗಿದೆ.

> **೧೯೯೧ರ ಅನಂತರದಲ್ಲಿ ಬಾರತೀಯ ಜನಸಂಖ್ಯೆ ಬೆಳೆದಿದೆ. ಅಂದರೆ ದೇಶವು ಇಂದು ಹೆಚ್ಚು ಮಂದಿ ಅಧಿಕಾರಿಗಳನ್ನು ಬಯಸುತ್ತದೆ. ಹಾಗೆಯೇ ೧೯೯೧ರ ನಂತರ ಭಾರತೀಯ ಆರ್ಥಿಕತೆ ತೀವ್ರವಾಗಿ ಬೆಳೆದಿದೆ. ಆದ್ದರಿಂದ ದೇಶಕ್ಕೆ ಇಂದು ಹೆಚ್ಚು ಐಆರ್‌ಎಸ್ ಅಧಿಕಾರಿಗಳ ಅಗತ್ಯವಿದೆ. ೧೯೯೧ರ ನಂತರ ರೈಲ್ವೆ ಬಹುವಾಗಿ ಬೆಳೆದಿದೆ. ರೈಲ್ವೆಗೆ ಇಂದು ಐಆರ್‌ಟಿಎಸ್ ಅಧಕಾರಿಗಳ ಅಗತ್ಯವಿದೆ. ಆದರೆ, ಭಾರತೀಯ ನಾಗರಿಕಾ ಸೇವಾ ವಲಯ ತೀವ್ರವಾಗಿ ಅರ್ಧಕ್ಕೆ ಕುಸಿಯುತ್ತಿದೆ. ಇದನ್ನು ಗ್ರಹಿಸುವುದಾದರೂ ಹೇಗೆ? ಡಾ. ಮನಮೋಹನ್ ಸಿಂಗ್‌ರಿಂದ ಪ್ರೇರಿತವಾದ ಆರ್ಥಿಕ ಸುಧಾರಣೆಗಳು "ನೇಮಕಾತಿಯ ನಿಷೇಧ" ಮತ್ತು ಖಾಸಗೀಕರಣದೊಂದಿಗೆ ಏಕೆ ಆರಂಭವಾಯಿತು?**

೧೯೯೧ರ ಅನಂತರದಲ್ಲಿ ಬಾರತೀಯ ಜನಸಂಖ್ಯೆ ಬೆಳೆದಿದೆ. ಅಂದರೆ ದೇಶವು ಇಂದು ಹೆಚ್ಚು ಮಂದಿ ಅಧಿಕಾರಿಗಳನ್ನು ಬಯಸುತ್ತದೆ. ಹಾಗೆಯೇ ೧೯೯೧ರ ನಂತರ ಭಾರತೀಯ ಆರ್ಥಿಕತೆ ತೀವ್ರವಾಗಿ ಬೆಳೆದಿದೆ. ಆದ್ದರಿಂದ ದೇಶಕ್ಕೆ ಇಂದು ಹೆಚ್ಚು ಐಆರ್‌ಎಸ್ ಅಧಿಕಾರಿಗಳ ಅಗತ್ಯವಿದೆ. ೧೯೯೧ರ ನಂತರ ರೈಲ್ವೆ ಬಹುವಾಗಿ ಬೆಳೆದಿದೆ. ರೈಲ್ವೆಗೆ ಇಂದು ಐಆರ್‌ಟಿಎಸ್ ಅಧಕಾರಿಗಳ ಅಗತ್ಯವಿದೆ. ಆದರೆ, ಭಾರತೀಯ ನಾಗರಿಕಾ ಸೇವಾ ವಲಯ ತೀವ್ರವಾಗಿ ಅರ್ಧಕ್ಕೆ ಕುಸಿಯುತ್ತಿದೆ. ಇದನ್ನು ಗ್ರಹಿಸುವುದಾದರೂ ಹೇಗೆ?

೨೦೦೬, ಜನವರಿ ಒಂದರಂದು ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ೩೭,೩೩೭ ಮಂದಿ ದಲಿತರು ಮತ್ತು ಆದಿವಾಸಿಗಳು ಅಧಿಕಾರಿಗಳಾಗಿದ್ದರು. ಇಂದು ಎಷ್ಟು ಮಂದಿ ದಲಿತ/ಆದಿವಾಸಿ ಬ್ಯಾಂಕ್ ಅಧಿಕಾರಿಗಳಾಗಿ ನೇಮಕವಾಗಿದ್ದಾರೆ? ೧೯೯೬, ಜನವರಿ ಒಂದರಂದು ಸಾರ್ವಜನಿಕ ಉದ್ದಿಮೆಗಳಲ್ಲಿ ಅಂದರೆ, IOC, ONGC, BHEL, SAIL, NTPC ಗಳಲ್ಲಿ ೪೨,೯೨೪ ಮಂದಿ ದಲಿತ/ಆದಿವಾಸಿ ಅಧಿಕಾರಿಗಳಿದ್ದರು. ಈಗ ಎಷ್ಟು ಮಂದಿ ದಲಿತರು ಮತ್ತು ಆದಿವಾಸಿ ಇಂಜಿನಿಯರ್‌ಗಳು ಸಾರ್ವಜನಿಕ ಉದ್ದಿಮೆಗಳಲ್ಲಿ ಸೇರುತ್ತಿದ್ದಾರೆ?

ಡಾ. ಮನಮೋಹನ್ ಸಿಂಗ್‌ರಿಂದ ಪ್ರೇರಿತವಾದ ಆರ್ಥಿಕ ಸುಧಾರಣೆಗಳು "ನೇಮಕಾತಿಯ ನಿಷೇಧ" ಮತ್ತು ಖಾಸಗೀಕರಣದೊಂದಿಗೆ ಏಕೆ ಆರಂಭವಾಯಿತು? ಇದೇ ವೇಳೆಯಲ್ಲಿ ಚೀನಾ ದೇಶವೂ ಸಹ ಸುಧಾರಣೆಗಳನ್ನು ಅಳವಡಿಸಿಕೊಂಡಿತು. ಆದರೂ ಅಲ್ಲಿ ಉನ್ನತ ಮಟ್ಟದಲ್ಲಿರುವ ೧೦೦ ಕಂಪನಿಗಳು ಇನ್ನೂ ಸರ್ಕಾರದ ಒಡೆತನದಲ್ಲೇ ಇದೆ. ಅಂದರೆ ಚೀನಾ ದೇಶವೂ ಖಾಸಗಿ ವಲಯಕ್ಕೆ ದೊಡ್ಡ ಪಾತ್ರವನ್ನು ನೀಡಿ, ಸಾರ್ವಜನಿಕ ವಲಯ ಅದರೊಡನೆ ಸ್ಪರ್ಧಿಸುವಂತೆ ಮಾಡಿತು. ಹೀಗೆ ಚೀನಾ ದೇಶವು ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರೋತ್ಸಾಹವನ್ನು ನೀಡಿತು. ಈ ಮಾದರಿ ಅಲ್ಲಿ ಅಚ್ಚರಿಯಾದ ಬೆಳವಣಿಗೆಗೆ ಕಾರಣವಾಯಿತು. ಚೀನಾದ ತಲಾದಾಯವು ೧೮೦೦ ಬಿಲ್ಲಿಯನ್ ಡಾಲರ್ ದಾಟಿತು. ಆದರೆ ಭಾರತದ ತಲಾದಯವು ೭೩೬ ಬಿಲ್ಲಿಯನ್ ಡಾಲರ್‌ನಲ್ಲೇ ಉಳಿಯಿತು.

ನಿಜವಾಗಿ ಹೇಳುವುದಾದರೆ ಭಾರತವು ಆರ್ಥಿಕ ಸುಧಾರಣೆಗಳ ಮೂಲಭೂತ ಗ್ರಾಮರ್‌ನ್ನೇ ಅನುಸರಿಸಲಿಲ್ಲ. ಅಂದರೆ ರಿಟೈಲ್ ವಲಯದಲ್ಲಿ ವಿದೇಶಿ ಬಂಡವಾಳವನ್ನು ನೇರವಾಗಿ ಹೂಡಲು ಭಾರತ ಬಿಡಲಿಲ್ಲ. ಚೀನಾ ದೇಶವು ಜಗತ್ತಿನ ಅತಿ ದೊಡ್ಡ ರಿಟೈಲ್‌ಟೋರೆಗಳಾದ ವಾಲ್–ಮಾರ್ಟ್(ಅಮೇರಿಕಾ), ಕರ್ರೆಫೋರ್ (ಫ್ರಾನ್ಸ್), ಮತ್ತು ಟೆಸ್ಕೊ (ಬ್ರಿಟನ್)ಗಳನ್ನು ಆಹ್ವಾನಿಸಿ, ಚೀನಾದ ವಸ್ತುಗಳನ್ನು ಜಗತ್ತಿನಾದ್ಯಂತ ಹರಡುವಂತೆ ಮಾಡಿತು. ಈ ಮೂರು ಕಂಪನಿಗಳು ಚೀನಾದ ತಯಾರಿಕಾ ವಲಯವನ್ನು ಕ್ರಾಂತಿಕಾರಕವಾಗಿ ಮಾರ್ಪಡಿಸಿತು. ಹೀಗೆ ಅದರ ರಫ್ತು ೧,೧೫೦ ಬಿಲ್ಲಿಯನ್ ಡಾಲರ್ ಆಗಿ ಬೆಳೆಯಿತು. ಆದರೆ ಭಾರತದ ರಫ್ತು ೧೫೯ ಬಿಲ್ಲಿಯನ್ ಡಾಲರ್ ತಲುಪಲಷ್ಟೆ ಸಾಧ್ಯವಾಯಿತು.

ಹಾಗಾದರೆ, "ನೇಮಕಾತಿ ನಿಷೇಧ"ದ ಪಾಲಿಸಿ ತಂದು ಖಾಸಗೀಕರಣಕ್ಕೆ ಪ್ರೇರಣೆ ನೀಡಿ ಸಾರ್ವಜನಿಕ ಸಂಪತ್ತನ್ನು ಮಂಡಲ್–ವಿರೋಧಿಗಳಿಗೆ ನೀಡಲು ಬೇಕಾದ ಕಾರಣಗಳೇನಾದರೂ ಇವೆಯಾ? ಅದೇನೂ ಆರ್ಥಿಕ ವಿವೇಕವೇನೂ ಆಗಿರಲಿಲ್ಲ. ಹಾಗಾದರೆ ಅದು ಮಂಡಲ್–ವಿರೋಧಿಗಳನ್ನು ಮೆಚ್ಚಿಸುವ ರಾಜಕಾರಣವಾಗಿತ್ತೆ?

ಬಿಜೆಪಿಯು ಮಂಡಲ್–ವಿರೋಧಿ ನಿಲುವಿನಿಂದಾಗಿ ಕಾಗ್ರೆಸ್‌ನಲ್ಲಿದ್ದ ದ್ವಿಜರನ್ನು ತನ್ನೆಡೆಗೆ ಆಕರ್ಷಿಸಿತು. ಕಾಂಗ್ರೆಸ್ ಹೀಗೆ ಹೋದ ದ್ವಿಜರನ್ನು ಮರಳಿ ಬರುವಂತೆ ಮಾಡಲು "ನೇಮಕಾತಿ ನಿಷೇಧ" ಮತ್ತು ಖಾಸಗೀಕರಣವನ್ನು ತರುವ ಮೂಲಕ ಮಂಡಲ್–ವಿರೋದಿಗಳಿಗೆ ಲಾಭಪ್ರದನ್ನಾಗಿ ಪರಿವರ್ತಿಸಿತು. ಹೀಗೆ ಮಂಡಲ್ ಪ್ರತಿಪಾದಕರು ಮತ್ತು ಮಂಡಲ್–ವಿರೋದಿಗಳ ನಡುವೆ ದಲಿತರು/ಆದಿವಾಸಿಗಳು ಸ್ಯಾಂಡ್‌ವಿಚ್ ಆದರು. ಇಂದು ಪ್ರತಿದಿನ ದಲಿತರು/ಆದಿವಾಸಿಗಳು ಸರ್ಕಾರಿ ಹುದ್ದೆಗಳಿಂದ ನಿವೃತ್ತರಾಗುತ್ತಿದ್ದಾರೆ.

ಖಾಸಗೀ ವಲಯದಲ್ಲಿ ಮೀಸಲಾತಿ ಚರ್ಚೆಯು ಒಂದು ಭರವಸೆಯ ಕಿಡಿಯಾಗಿ ಬಂದಿತು. ಈ ಸಂದಿಗ್ಧ ಸಂದರ್ಭದಲ್ಲೇ ಮಂಡಲ್–೨ ನ್ನು ತಂದು ಮೀಸಲಾತಿ

ಹೊಸ ವಿದ್ಯಮಾನದ ಲಾಭ ಯಾರಿಗೆ ?

ಆ ಹೊಸ ದಲಿತಧನಿ/ಕಿಗಾಗಿ ಶೋಧ

ವಿರೋಧಿ ವಾತವರಣವನ್ನು ನಿರ್ಮಿಸುತ್ತಿದೆ. ಹಾಗಾದರೆ ಮತ್ತೊಮ್ಮೆ ದಲಿತರು ಮತ್ತು ಆದಿವಾಸಿ ಜನ ಮಂಡಲ್‌ಗಾಗಿ ದೊಡ್ಡ ಬೆಲೆಯನ್ನು ತೆತ್ತು ೨೦೧೫ರ ವೇಳೆಗೆ ಮಧ್ಯಮವರ್ಗವಾಗುವುದರಿಂದ ವಂಚಿತರಾಗುವರೇ?

ಅನೇಕ ಸಲ ಬಿಕ್ಕಟ್ಟು ಪರಿಹಾರಕ್ಕೆ ಕಾರಣವಾಗುತ್ತದೆ. ೧೯೯೧ರಿಂದ ಜಾರಿಯಲ್ಲಿರುವ ಹೊಸ ಆರ್ಥಿಕ ನೀತಿಗಳಿಂದಾಗಿ ದಲಿತ/ಆದಿವಾಸಿ ಜನ, ತಮ್ಮ ಕಾಲದ ಬಹುದೊಡ್ಡ ಬಿಕ್ಕಟ್ಟನ್ನು ಎದುರಿಸುವಂತಾಯಿತು. ಸರ್ಕಾರಿ ಉದ್ಯೋಗ ಅವರ ವಿಮೋಚನೆಗೆ ಪ್ರಮುಖ ಕಾರಣವಾಗಿತ್ತು. ಆದರೆ ಹೊಸ ಆರ್ಥಿಕ ನೀತಿಗಳಿಂದಾಗಿ ಬಂದ ಸುಧಾರಣೆಗಳು ಅವರಿಗೆ ಮಾರಕವಾಗಿವೆ.

ಹೀಗಿರುವಲ್ಲಿ, ೨೦೦೨ರಲ್ಲಿ ದಂತಕತೆಯಾದ ದಿಗ್ವಿಜಯ್ ಸಿಂಗ್ ದಲಿತರ ಆಶೋತ್ತರಗಳಿಗೆ ಸ್ಪಂದಿಸಲು ನಿರ್ಧರಿಸಿದಾಗ ಹೊಸಯುಗದ ದಲಿತರು ಒಂದು ಉತ್ತರವನ್ನು ಕಂಡರು. 'ದಲಿತ/ಆದಿವಾಸಿ ಕೋಟ್ಯಾದೀಶರು' ಎಂಬ ಹೊಸ ಘೋಷಣೆಯೊಂದಿಗೆ ಆತ ಕ್ರಾಂತಿಕಾರಕ ಸರಬರಾಜು ವೈವಿಧ್ಯತೆಯ ಕಾರ್ಯಕ್ರಮವನ್ನು ಪರಿಚಯಿಸುವ ಮೂಲಕ ಸುಮಾರು ಎರಡು ಸಾವಿರ ದಲಿತ/ಆದಿವಾಸಿ ಜನಕ್ಕೆ ಪ್ರಯೋಜನಕಾರಿಯಾದ ಬಿಸ್ಸಿನೆಸ್ ಅವಕಾಶವನ್ನು ಕಲ್ಪಿಸಿದ. ದುರಂತವೆಂಬಂತೆ ಆತ ಅಧಿಕಾರ ಕಳೆದುಕೊಂಡರೂ ದಲಿತರು ತಮ್ಮ ಭರವಸೆಯನ್ನು ಕಳೆದುಕೊಳ್ಳಲಿಲ್ಲ.

ನಾಲ್ಕು ವರ್ಷಗಳ ನಂತರದಲ್ಲಿ ಮನುವಿನ ಶಾಸನದಿಂದ ಮುಕ್ತಿ ಪಡೆಯಲು ದಲಿತರು ಮತ್ತೆ ತಮ್ಮನ್ನೇ ಕಂಡುಕೊಳ್ಳತೊಡಗಿದ್ದಾರೆ. ಜನಪ್ರಿಯವಾಗಿ **ಕೆಪಿಎಸ್** ಎಂದು ಹೆಸರಾಗಿರುವ ಡಾ. ಕೆ.ಪಿ.ಸಿಂಗ್, ಅಮೇರಿಕಾದ ಜಾರ್ಜ್‌ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದು, ಅವರು ಭೋಪಾಲ್ ಸಮಾವೇಶದ ಸಂದೇಶವನ್ನು ಮತ್ತಷ್ಟು ಕ್ರಾಂತಿಕಾರಕವಾಗಿ ಪ್ರತಿಪಾದಿಸುತ್ತಿದ್ದಾರೆ. ಇದು ದಲಿತ/ಆದಿವಾಸಿಜನಕ್ಕೆ ೨೧ನೇ ಶತಮಾನದ ಗುರಿಯಾಗಿ ಪರಿಣಮಿಸಿದೆ.

ಕೆಪಿಎಸ್ ಯಾವಾಗ ದಲಿತ ಕ್ಯಾಪಿಟಲಿಸಂ ಘೋಷಿಸಿ ಅಕ್ಟೋಬರ್ ೨೯, ೨೦೦೬ರಂದು ಮಹಾ ರ‍್ಯಾಲಿಗೆ ಆಹ್ವಾನ ನೀಡಿ, ಅಕ್ಟೋಬರ್ ೨೮-೨೯ರಂದು ಜಾಗತಿಕ ಮಟ್ಟದ ದಲಿತಸಮಾವೇಶವನ್ನು ಮುಂದಿಟ್ಟರೋ, ಅಂದಿನಿಂದಲೇ ಅವರು ಅನೇಕ ಅಭಿಮಾನಿಗಳನ್ನು ಮತ್ತು ಟೀಕಾಕಾರನ್ನು ಪಡೆದುಕೊಂಡಿದ್ದಾರೆ. ನನ್ನ ಇತ್ತೀಚಿನ ಕರ್ನಾಟಕದ ಭೇಟಿಯಲ್ಲಿ ಅಲ್ಲಿನ ದಲಿತರು ಸ್ವಲ್ಪ ಮುಗುಡದಿಂದಲೇ ಇದಕ್ಕೆ ಉತ್ಸಾಹವನ್ನು ವ್ಯಕ್ತಪಡಿಸಿದ್ದಾರೆ.

ಕೆಲವು ಕನ್ನಡ ದಲಿತರು ಹಾಗೂ ಪ್ರಗತೀಪರ ದಲಿತೇತರರು ಕೆಲವು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ: ಮೊದಲನೆಯದಾಗಿ, ಈ ಚಳುವಳಿ ಈಗಾಗಲೇ ಶಕ್ತರಾದ ಅಥವಾ ಶ್ರೀಮಂತ ದಲಿತರಿಗಾಗಿಯೋ ಎಂಬುದು?, ಎರಡನೆಯದಾಗಿ, ಈ ಚಳುವಳಿ ಶಿಕ್ಷಣವಿಲ್ಲದ, ನಿರುದ್ಯೋಗಿಗಳಾಗಿರುವ ಮತ್ತು ಬಂಡವಾಳವಿಲ್ಲದ ದಲಿತರಿಗೆ ಸ್ಪಂದಿಸುವುದಾದರೂ ಹೇಗೆ?

ಮತ್ತು ಕೊನೆಯದಾಗಿ, ದಲಿತ ಕ್ಯಾಪಿಟಲಿಸಂ ಎನ್ನುವುದು ದಲಿತ ಪರಂಪರೆಗೆ ವಿರೋಧಿಯಾದುದಲ್ಲವೇ? ಇದೇ ರೀತಿಯ ಪ್ರಶ್ನೆಗಳು ದೆಹಲಿಯಲ್ಲೂ ಕೆಪಿಎಸ್ ಪ್ರತಿಪಾದಿಸುತ್ತಿರುವ ಚಳುವಳಿಗೆ ಬಂದಿವೆ.

ಕೆಪಿಎಸ್‌ರವರ ಟೀಕಾಕಾರರಿಗೆ ನ್ಯಾಯ ಒದಗಿಸಬೇಕಾದರೆ, ಅವರು ಹೇಳುವಂತೆ ಬಂಡವಾಳ ಎಂಬುದು ದಲಿತ ಪರಂಪರೆಯಲ್ಲಿ ಇಲ್ಲ ನಿಜ. ಆದರೂ ಇಲ್ಲಿರುವ ಪ್ರಶ್ನೆಯೆಂದರೆ ಈ ಪರಂಪರೆ ಎಂಬುದು ದಲಿತರಿಗಿದ್ದ ಆಯ್ಕೆಯೇ? ನಮಗೆ ಗೊತ್ತಿರುವ ಸಂಗತಿಯೆಂದರೆ ಅನೇಕ ಪರಂಪರೆಗಳನ್ನು ದಲಿತರ ಮೇಲೆ ಹೇರಲಾಗಿರುವುದು. ಉದಾಹರಣೆಗೆ, ಮನುವಿನ ನೀತಿಯ ಪ್ರಕಾರ ದಲಿತರು ಆಸ್ತಿಯ ಹಕ್ಕನ್ನು ಹೊಂದುವಂತಿಲ್ಲ. "ನಾಯಿಗಳು ಮತ್ತು ಕತ್ತೆಗಳಷ್ಟೆ ಚಾಂಡಾಳರ ಸಂಪತ್ತು" ಎಂದು ಅರಚಿಕೊಳ್ಳುತ್ತಾನೆ ಮನು.

ಕೆಲವು ದಲಿತರು ಬಿಲ್ಲಿಯನೇರ್‌ಗಳಾದರೆ ಮನು ಖುಷಿಪಡುತ್ತಾನೆಯೇ? ಉತ್ತರ ನಕಾರಾತ್ಮಕವಾಗಿದ್ದರೆ ಕೆಪಿಎಸ್‌ನ ಟೀಕಾಕಾರರು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಇಲ್ಲವಾದರೆ ಭವಿಷ್ಯದ ದಲಿತ ಚಳುವಳಿಯ ಚರಿತ್ರೆ ಅವರನ್ನು ದೂಷಿಸೀತು!

ದಲಿತ ಬಂಡವಾಳವಾದ ಎನ್ನುವುದು ಶ್ರೀಮಂತ ದಲಿತರ ಪರವಾಗಿದ್ದು, ಬಡ-ದಲಿತರಿಗೆ ಸ್ಪಂದಿಸುತ್ತಿಲ್ಲ ಎನ್ನುವ ಪ್ರಶ್ನೆಗೆ ಈ ಕೆಳಗಿನ ಉತ್ತರ ಸಾಕೆನಿಸುತ್ತದೆ: ಟಾಟಾ ಕಂಪನಿಯಲ್ಲಿ ಗುಮಾಸ್ತ ಹುದ್ದೆಗೆ ಕನಿಷ್ಠವೆಂದರೂ ಮೆಟ್ರಿಕ್ ಪಾಸಾಗಿ, ಟೈಪಿಂಗ್ ಕೌಶಲ್ಯ ಅಗತ್ಯವಾಗಿ ಬೇಕಾಗುತ್ತದೆ. ಅಥವಾ ಟಾಟಾ ಕಂಪನಿಯಲ್ಲಿ ಇಂಜಿನಿಯರ್ ಹಾಗೂ ಮ್ಯಾನೇಜರ್ ಆಗಬೇಕಾದರೆ ಕನಿಷ್ಠವೆಂದರೂ ಬಿ.ಟೆಕ್ ಅಥವಾ ಎಂಬಿಎ ಪದವಿ ಬೇಕಾಗುತ್ತದೆ.

ಆದರೆ ಟಾಟಾ ಕಂಪನಿಗೆ ನಟ್ ಮತ್ತು ಬೋಲ್ಟ್ ಸಪ್ಲೈ ಮಾಡಲು ಅನಕ್ಷರಸ್ತ ದಲಿತ/ಆದಿವಾಸಿಗಳು ಅರ್ಹರಾಗುತ್ತಾರೆ. ಸರ್ಕಾರವೇನಾದರೂ ಮಧ್ಯ ಲೈಸೆನ್ಸ್ ಅಥವಾ ಪಿಡಬ್ಲ್ಯು ಗುತ್ತಿಗೆಗಳನ್ನು ನೀಡಲು ನಿರ್ಧರಿಸಿದಲ್ಲಿ ದಲಿತ/ಆದಿವಾಸಿಗಳಲ್ಲಿ ಯಾವ ವರ್ಗ ಪ್ರಯೋಜನ ಪಡೆಯುತ್ತದೆ? ಅವರು ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಪದವೀಧರರಾಗಿರುತ್ತಾರೆಯೇ ಅಥವಾ ಐಟಿ ವೃತ್ತಿಪರರಾಗಿರುತ್ತಾರೆಯೇ? ಅಥವಾ ಖಾಸಗೀವಲಯ ಮತ್ತು ಸರ್ಕಾರ ಅಗತ್ಯ ಪದಾರ್ಥಗಳನ್ನು – ಸ್ಟೇಷನರಿ, ಫರ್ನಿಚರ್, ವಿದ್ಯುತ್ ಉಪಕರಣಗಳನ್ನು ದಲಿತರಿಂದ ಪಡೆಯಲು ನಿರ್ಧರಿಸಿದರೆ ಸಮುದಾಯದ ಯಾವ ವರ್ಗ ಪ್ರಯೋಜನ ಪಡೆಯುತ್ತದೆ? ಕೆ.ಪಿ.ಸಿಂಗ್ ಪ್ರತಿಪಾದಿಸುವ ದಲಿತ ಕ್ಯಾಪಿಟಲಿಸಂನ ರ‍್ಯಾಲಿ ಅಮೇರಿಕಾದ ವೈವಿಧ್ಯತೆಯ ಮಾದರಿಯಿಂದ ಪ್ರೇರಿತವಾದುದು. ಮುಖ್ಯವಾದ ಸಂಗತಿಯೆಂದರೆ, ಕಪ್ಪು ಜನರ ಕ್ಯಾಪಿಟಲಿಸಂ ಎನ್ನುವುದು ಅಲ್ಪಮಟ್ಟಿಗೆ ಶಿಕ್ಷಿತರಾದ ಕಪ್ಪು ಜನರಿಂದಲೇ ಉದಯಿಸಿದ್ದು ಹೌದು. ಅಲ್ಲದೆ, ಜಗತ್ತಿನಾದ್ಯಂತ ಬಂಡವಾಳಿಗರು ಈ ಅಲ್ಪಶಿಕ್ಷಿತ ವರ್ಗದಿಂದಲೇ ಬಂದವರಾಗಿದ್ದು, ವೃತ್ತಿಪರರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತಾರಷ್ಟೆ.

ಭಾರತದಲ್ಲೂ ದಲಿತ ಕ್ಯಾಪಿಟಲಿಸಂ ಎನ್ನುವುದು ಅಲ್ಪಶಿಕ್ಷಣ ಪಡೆದ ದಲಿತರಿಂದಲೇ ಉಗಮವಾಗುವುದು. ಹೀಗಿರುವಲ್ಲಿ ಎಷ್ಟು ಮಂದಿ ದಲಿತ/ಆದಿವಾಸಿ ಇಂಜಿನಿಯರ್‌ಗಳು, ಎಂಬಿಎ ಮಾಡಿದವರು, ವಿಜ್ಞಾನಿಗಳು, ಐಟಿ ಮಾಡಿದವರು ಬಿಸ್ಸಿನೆಸ್ ಹಾಗೂ ಉದ್ಯಮಗಳನ್ನು ಆರಂಬಿಸಲು ಇಚ್ಛಿಸುತ್ತಾರೆ? ಇದೇ ಸಂಗತಿ ದಲಿತೇತರರಿಗೂ ಅನ್ವಯಿಸುತ್ತದೆ. ಇಂದು ಬಿಸ್ಸಿನೆಸ್ ಮತ್ತು ತಯಾರಿಕಾ ವಲಯದಲ್ಲಿರುವ ದಲಿತ/ಆದಿವಾಸಿಗಳು ಅಲ್ಪಮಟ್ಟಿನ ಶಿಕ್ಷಣವನ್ನಷ್ಟೆ ಪಡೆದವರಾಗಿದ್ದಾರೆ.

ಕಪ್ಪು ಜನರ ಕ್ಯಾಪಿಟಲಿಸಂ ಎನ್ನುವುದು ಅಲ್ಪಮಟ್ಟಿಗೆ ಶಿಕ್ಷಿತರಾದ ಕಪ್ಪು ಜನರಿಂದಲೇ ಉದಯಿಸಿದ್ದು ಹೌದು. ಅಲ್ಲದೆ, ಜಗತ್ತಿನಾದ್ಯಂತ ಬಂಡವಾಳಿಗರು ಈ ಅಲ್ಪಶಿಕ್ಷಿತ ವರ್ಗದಿಂದಲೇ ಬಂದವರಾಗಿದ್ದು, ವೃತ್ತಿಪರರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುತ್ತಾರಷ್ಟೆ. ಭಾರತದಲ್ಲೂ ದಲಿತ ಕ್ಯಾಪಿಟಲಿಸಂ ಎನ್ನುವುದು ಅಲ್ಪಶಿಕ್ಷಣ ಪಡೆದ ದಲಿತರಿಂದಲೇ ಉಗಮವಾಗುವುದು. ಹೀಗಿರುವಲ್ಲಿ ಎಷ್ಟು ಮಂದಿ ದಲಿತ/ಆದಿವಾಸಿ ಇಂಜಿನಿ ಯರ್‌ಗಳು, ಎಂಬಿಎ ಮಾಡಿದವರು, ವಿಜ್ಞಾನಿಗಳು, ಐಟಿ ಮಾಡಿದವರು ಬಿಸ್ಸಿನೆಸ್ ಹಾಗೂ ಉದ್ಯಮಗಳನ್ನು ಆರಂಭಿಸಲು ಇಚ್ಛಿಸುತ್ತಾಳೆ? ಇದೇ ಸಂಗತಿ ದಲಿತೇತರರಿಗೂ ಅನ್ವಯಿಸುತ್ತದೆ. ಇಂದು ಬಿಸ್ಸಿನೆಸ್ ಮತ್ತು ತಯಾರಿಕಾ ವಲಯದಲ್ಲಿರುವ ದಲಿತ/ಆದಿವಾಸಿಗಳು ಅಲ್ಪಮಟ್ಟಿನ ಶಿಕ್ಷಣವನ್ನಷ್ಟೆ ಪಡೆದವರಾಗಿದ್ದಾರೆ.

ಆರ್ಥಿಕ ಸುಧಾರಣೆಗಳಿಂದ ಬಿಕ್ಕಟ್ಟು ಸೃಷ್ಟಿಯಾದಂತೆ ಪರಿಹಾರವೂ ಸಹ ಅದರಿಂದಲೇ ಬಂದಂತೆ ಕಾಣಿಸುತ್ತದೆ. ಕೆ.ಪಿ. ಸಿಂಗ್‌ರ ಚಳುವಳಿ ಈ ರಾಷ್ಟ್ರದ ಸಂಪತ್ತು ಮತ್ತು ಸಾಂಸ್ಥಿಕ ಸಂಘಟನೆಗಳಲ್ಲಿ ಪಾಲುದಾರಿಕೆಯನ್ನು ಬಯಸುತ್ತದೆ. ಇದು ನೇರವಾಗಿ ದಲಿತ/ಆದಿವಾಸಿ ಸಮುದಾಯಗಳತ್ತ ಕೇಂದ್ರೀಕರಿಸಿದರೂ ಶ್ರಮಶಕ್ತಿಯಲ್ಲಿ ವೈವಿದ್ಯತೆಯನ್ನು ನಂಬಿದೆಯಾದ್ದರಿಂದ ದಲಿತ ವೃತ್ತಿಪರರ ಉದ್ಯೋಗವನ್ನೂ ಸಹ ನೋಡಿಕೊಳ್ಳುತ್ತದೆ. ಹಾಗಾಗಿ ಇದೊಂದು ಮಹತ್ವದ ಸುದ್ದಿ! ಶಕ್ತಿಶಾಲಿಯಾದ ದಲಿತ ಈಗ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯಿಂದ ಪ್ರಯೋಜನ ಕಾಣದ ಸಮುದಾಯದ ಕಡೆ ತಿರುಗಿದ್ದು ಸಂತೋಷದ ಸಂಗತಿಯೇ ಆಗಿದೆ. □



ಯಾವುದೇ ರಾಜ್ಯದ ಸಂವೃದ್ಧಿಯನ್ನು ಅದರ ಸಿರಿ ಸಂಪತ್ತಿನಿಂದ ಅಳೆಯಲಾಗುವುದಿಲ್ಲ. ಅಥವಾ ಆ ರಾಜ್ಯದ ಅಸಂಖ್ಯಾತ ಸೈನ್ಯದಿಂದ, ಆ ದೊರೆಯ ದಿಗ್ವಿಜಯ ದಿಂದ, ಆತ ಹೊಂದಿರುವ ಅರಮನೆಗಳು, ಅಪಾರ ರಾಣಿಯರಿಂದ ಅಲ್ಲ, ಅಲ್ಲಿ ವಾಸಿಸುತ್ತಿರುವ ಪ್ರಜೆಗಳ ನಡುವಿನ ಉತ್ತಮ ಸಂಬಂಧಗಳಿಂದ, ಮನಸ್ಸು ಮನಸ್ಸುಗಳ ನಡುವಿನ, ವಿವೇಕದಿಂದ, ದೇಶಕ್ಕೆ ದೊರೆ ದೊಡ್ಡ ವನೋ ಅಥವಾ ಪ್ರಜೆ ದೊಡ್ಡವನೋ, ದೊರೆ ಮೊದಲೋ, ಪ್ರಜೆ ಮೊದಲೋ ಎಂಬುದ ರಿಂದ ಅಲ್ಲ. ಆ ಇಬ್ಬರ ನಡುವಿನ ಸಮಾನತೆ ಯಿಂದ. ಕೊಟ್ಟು ಪಡೆಯುವ ಭಾಂದವ್ಯ ದಿಂದ. ಅರಿವಿನಿಂದ. ಇದೇ ನಿಜವಾದ ಸಂಪತ್ತು'

○ ಸಿ. ಎಚ್. ರಾಜಶೇಖರ್

ಕೋಸಲರಾಜ್ಯದಲ್ಲಿ ಇಬ್ಬರು ಸ್ನೇಹಿತರಿದ್ದರು. ಅವರು ವೃತ್ತಿಯಲ್ಲಿ ವರ್ತಕರಾಗಿದ್ದರು. ಸ್ವಭಾವ ಮತ್ತು ನಡೆತೆಯಲ್ಲಿ ತದ್ವಿರುದ್ಧರಾಗಿದ್ದರು. ಬಂಡಿಗಳಲ್ಲಿ ತಮ್ಮ ಸಾಮಾನು ಸರಕುಗಳನ್ನು ತುಂಬಿಕೊಂಡು ಊರಿಂದ ಊರಿಗೆ, ಸಂತೆ, ಜಾತ್ರೆ ಮತ್ತು ಪಟ್ಟಣಗಳಿಗೆ ತಿರುಗುತ್ತಿದ್ದರು. ಆ ಗೆಳೆಯರಲ್ಲಿ ಒಬ್ಬ ಮದ್ಯಪಾನದ ಚಟವುಳ್ಳವನು. ಮತ್ತೊಬ್ಬನಿಗೆ ಯಾವುದೇ ಕುಡಿತದ ಚಟವಿರಲಿಲ್ಲ. ಕುಡುಕನಾದವನು ಎಲ್ಲ ಒಳ್ಳೆತನವನ್ನು ದ್ವೇಷಿಸುತ್ತಿದ್ದ. ಧರ್ಮದಾರಿ ಅವನಿಗೆ ಸಲ್ಲುತ್ತಿರಲಿಲ್ಲ. ಮತ್ತೊಬ್ಬ ಒಳಿತಿಗೆ ಸ್ಪಂದಿಸುತ್ತಿದ್ದ.

ಹೀಗಿರುವಾಗ ಆ ಇಬ್ಬರು ಸ್ನೇಹಿತರು ಮಾರಾಟಕ್ಕಾಗಿ ಸಾಮಾನು ಸರಂಜಾಮುಗಳನ್ನು ತುಂಬಿದ ಬಂಡಿಗಳೊಂದಿಗೆ ಕೋಸಲದ ರಾಜಧಾನಿಯ ನಾಲ್ಕು ದಿಕ್ಕುಗಳನ್ನು ಸಂಧಿಸುವ ಚೌಕದ ಬಳಿಯಲ್ಲಿ ಬೃಹತ್ ಸಭೆಯೊಂದು ನೆರೆದಿತ್ತು. ಸಹಸ್ರಾರು ಜನರು ನೆರೆದು ಪ್ರವಚನವನ್ನು ಭಕ್ತಿ ಭಾವದಿಂದ ಆಲಿಸುತ್ತಿದ್ದರು. ಆ ಪ್ರವಚನವನ್ನು ನೀಡುತ್ತಿದ್ದವನು ಬುದ್ಧನಾಗಿದ್ದ. ಆ ಸಭೆಯನ್ನು ಸಾರ್ವಜನಿಕರ ಹಿತಕ್ಕಾಗಿ ಏರ್ಪಡಿಸಿದವನು ಆ ರಾಜ್ಯದ ದೊರೆಯಾದ ಪಸೇನದಿಯಾಗಿದ್ದ. ಆ ಇಬ್ಬರು ಗೆಳೆಯರು ಕೂಡ ಸಭೆಯಲ್ಲಿ ಪಾಲ್ಗೊಂಡರು. ಬುದ್ಧ ತನ್ನ ಪ್ರವಚನವನ್ನು ಹೀಗೆ ಮುಂದುವರಿಸುತ್ತಿದ್ದ:

'ಯಾವುದೇ ರಾಜ್ಯದ ಸಂವೃದ್ಧಿಯನ್ನು ಅದರ ಸಿರಿ ಸಂಪತ್ತಿನಿಂದ ಅಳೆಯಲಾಗುವುದಿಲ್ಲ. ಅಥವಾ ಆ ರಾಜ್ಯದ ಅಸಂಖ್ಯಾತ ಸೈನ್ಯದಿಂದ, ಆ ದೊರೆಯ ದಿಗ್ವಿಜಯದಿಂದ, ಆತ ಹೊಂದಿರುವ ಅರಮನೆಗಳು, ಅಪಾರ ರಾಣಿಯರಿಂದ ಅಲ್ಲ, ಅಲ್ಲಿ ವಾಸಿಸುತ್ತಿರುವ ಪ್ರಜೆಗಳ ನಡುವಿನ ಉತ್ತಮ ಸಂಬಂಧಗಳಿಂದ, ಮನಸ್ಸು ಮನಸ್ಸುಗಳ ನಡುವಿನ, ವಿವೇಕದಿಂದ, ದೇಶಕ್ಕೆ ದೊರೆ ದೊಡ್ಡವನೋ ಅಥವಾ ಪ್ರಜೆ ದೊಡ್ಡವನೋ, ದೊರೆ ಮೊದಲೋ, ಪ್ರಜೆ ಮೊದಲೋ ಎಂಬುದರಿಂದ ಅಲ್ಲ. ಆ ಇಬ್ಬರ ನಡುವಿನ ಸಮಾನತೆಯಿಂದ. ಕೊಟ್ಟು ಪಡೆಯುವ ಭಾಂದವ್ಯದಿಂದ. ಒಬ್ಬರು ಮತ್ತೊಬ್ಬರಿಗೆ ಕೇಡು ಬಗೆಯದೇ ಇರುವುದರಿಂದ. ಮತ್ತೊಬ್ಬರು ನನಗೆ ಕೇಡು ಬಗೆಯದೇ ಇರಲಿ ಎಂಬ ವಿವೇಚನೆಯಿಂದ, ಅರಿವಿನಿಂದ. ಇದೇ ನಿಜವಾದ ಸಂಪತ್ತು'

'ಈ ಸಂಪತ್ತಿನ ಗಳಿಕೆಗೆ ಮೂಲತಃ ಮನಸ್ಸು. ಮನಸ್ಸೇ ಸಂಪತ್ತು ಮತ್ತು ದಾರಿದ್ರ್ಯದ ಮೂಲ. ಸಮಾನತೆ ಮತ್ತು ಅಸಮಾನತೆಯ ಮೂಲ. ವಿನಾಶ ಮತ್ತು ಸೃಷ್ಟಿಯ ಮೂಲ. ಇದು ಕುಬ್ಜತೆಗೆ ಹೇಗೆ ಮೂಲವೋ ಹಾಗೆಯೇ ವಿಶ್ವಮಾನವತೆಗೂ ಮೂಲ. ಈ ಸ್ಥಿತಿಯನ್ನೆ ನಾನು 'ನಿಬ್ಬಾಣಬವೆನ್ನುವುದು' ಸಂಪತ್ತು ಎನ್ನುವುದು!'

'ಹಾಗಾಗಿ ನನ್ನ ಧರ್ಮದಲ್ಲಿ ಮನಸ್ಸಿಗೆ ಪ್ರಥಮ ಪ್ರಾಧಾನ್ಯತೆ ಈ ಮನಸ್ಸೊಂದು ಮಾಯ ಕುದುರೆ. ಈ ಕುದುರೆಯನ್ನು ಓಡಿದಂತೆ ಬಿಡಬಾರದು. ಇದು ಗಾಳಿಗಿಂತ, ಬೆಂಕಿಗಿಂತ, ಜಿಂಕೆಗಿಂತ ವೇಗ. ಈ ಮನಸ್ಸು ಆನೆಗಿಂತಲು ದೈತ್ಯ. ಎಲ್ಲರ ಮನಸ್ಸೆಂಬ ಈ ಕಾಡಾನೆ ಅಜ್ಞಾನವೆಂಬ ಕೆಸರಿನಲ್ಲಿ ಊತು ಹೋಗಿದೆ. ನಾವು ಈ ಕಾಡಾನೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯವನ್ನು ಬಳಸಿ ಮೊದಲು ಮೇಲೆತ್ತಬೇಕು. ನಂತರ ಅದನ್ನು ವಿದ್ಯೆ ಎಂಬ ಸರಪಳಿಯಿಂದ ಬಂಧಿಸಬೇಕು. ವಿವೇಕವೆಂಬ ಆಹಾರವನ್ನು ನೀಡಬೇಕು. ವಿವೇಚನೆ ಎಂಬ ನೀರನ್ನು ಕುಡಿಸಬೇಕು. ಆಗ ಅದು ಜ್ಞಾನವೆಂಬ ಶಕ್ತಿಯ ಪಡೆದು. ಅರಿವೆಂಬ ಸಾಮಾರ್ಥ್ಯವನ್ನು ತನ್ನದಾಗಿಸಿಕೊಳ್ಳುತ್ತದೆ. ಕೆಸರಿನಲ್ಲಿ ಊತ ಕಾಡನೆಯೂ ಊರಾನೆ ಆಗುತ್ತದೆ. ಅದೇ ಬೇತು ಹೊಂದಿದ ಮನಸ್ಸು! ಇದೇ ಎಲ್ಲ ಸಂಪತ್ತಿಗೂ ಮ ಧಾತು!'

'ಈ ಪರಿಶುದ್ಧವೂ, ಪರಿಪೂರ್ಣವೂ ಆದ ಮನ ತಮ್ಮದಾಗಿಸಿಕೊಳ್ಳಿ, ಸ್ವಾರ್ಥವನ್ನು, ದುಃಖವನ್ನು ನೀಗಿಕೊಳ್ಳಿ, ರಿಗೆ ಕೇಡು ಬಗೆಯಬೇಡಿ. ಉಪಕಾರಿಗಳಾಗಿ ನೀವು ಹುಟ್ಟಿದ ಮ ಋಣ ತೀರಿಸಿ ಇದೇ ನನ್ನ ಧರ್ಮದ ಸಾರ. ಇದನ್ನೇ ಸಧರ್ಮ ಅಥವಾ ಸರಿ ಧರ್ಮ ಎನ್ನುವುದು' ಎಂದು ತನ್ನ ಪ್ರ ವನ್ನು ಬುದ್ಧ ಮುಂದುವರಿಸುತ್ತಿದ್ದ.

ಈ ಪ್ರವಚನವನ್ನು ಕೇಳುವುದರಲ್ಲಿ ತಲ್ಲೀನನಾಗಿದ್ದ ಮತ ಸ್ನೇಹಿತನನ್ನು ಉದ್ದೇಶಿಸಿದ ಒಬ್ಬ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ:

'ನಮ್ಮ ದೊರೆಗೆ ಅದೇನು ಕೇಡುಗಾಲ ಬಂತೋ ಏನ ಅಥವಾ ಈ ತಲೆ ಬೋಳಿಸಿಕೊಂಡ ಈ ಬುದ್ಧ ನಮ್ಮ ದ ಅದೇನು ಮಾಟ ತಂತ್ರಗಳು ಮಾಡಿದ್ದಾನೋ ಏನೋ? ನಮ್ಮ ಕೆಲಸವಿಲ್ಲದ ಈ ಬುದ್ಧನನ್ನು ಇಲ್ಲಿಗೆ ಕರೆತಂದು ಉಪದೇಶ ಸುತ್ತಿರುವುದು ಎಂತಹ ಮೂರ್ಖತನ. ಹಸು ಹೋದ ಕಡೆಯ 'ಅಂಬಾ....!' ಎಂದು ಅರಚುತ್ತ ಹಿಂಬಾಲಿಸುವ ಕರುವಿ ಮಹಾರಾಜನನ್ನು ಈ ಬುದ್ಧ ಹಿಂಬಾಲಿಸುತ್ತಿದ್ದಾನೆ' ಎಂದ ಪ್ರತಿಕ್ರಿಯೆಯಾಗಿ ಮತ್ತೊಬ್ಬ:

'ಎಲ್ಲಕ್ಕೂ ಮನಸ್ಸೇ ಮುಖ್ಯ ಮನಸ್ಸೇ ಮಾರ್ಗದಾತ'

ಮನಸ್ಸೆಂಬ ಕಾಡಾನೆ ಅಜ್ಞಾನವೆಂಬ ಕೆಸರಿನಲ್ಲಿ ಹೂತು ಹೋಗಿದೆ. ನಾವು ಈ ಕಾಡಾನೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯವನ್ನು ಬಳಸಿ ಮೊದಲು ಮೇಲೆತ್ತಬೇಕು.

'ಗೆಳೆಯಾ ಇದೆಂತಹ ಕ್ಷುಲ್ಲಕ ಮಾತನಾಡುತ್ತಿರುವೆ? ...ನ್ಯ, ಸತ್ಯ, ಧರ್ಮ, ನ್ಯಾಯ, ನಿಷ್ಠೆ ಮತ್ತು ಮಾನ ...ಯ ಗುಣಗಳುಳ್ಳ ಉಪದೇಶಗಳನ್ನು ಸಾರ್ವಜನಿಕವಾಗಿ ...ಡಿಸುತ್ತಿರುವ ನಮ್ಮ ದೊರೆ ಪಸೇನದಿಯ ವಿವೇಕ ...ಕ್ಕೂ ಉತ್ಕೃಷ್ಟವಾದುದು ಆ ಪೂಜ್ಯರ ಉಪದೇಶ ...ಷ್ಟು ವ್ಯಾಪಾಕವಾಗಿದೆ. ಅವುಗಳ ಗುಣ ಎಷ್ಟು ಶೋಧ ...ತ್ಮಕವಾಗಿದೆ.' ಎನ್ನುತ್ತಿದ್ದಂತೆ ಅವನ ಕುಡುಕ ಮಿತ್ರ:

'ಸರಿ... ಸರಿ... ನೆಡೆ, ನೆಡೆ... ನೀನು ಕೂಡ ...ದ್ಧನ ಜಾತಿಗೆ ಸೇರಿದವನು. ತಲೆಯನ್ನು ಮಾತ್ರ ...ೋಳಿಸಿಕೊಂಡಿಲ್ಲ!' ಈ ತಲೆಬೋಳಿಸಿಕೊಂಡವರ ಏಕೈಕ ...ಬೆಂದರೆ: ಇತರರ ತಲೆ ತಿನ್ನುವುದೇ ಆಗಿದೆ. ನಡೆ, ... ಸಂಜೆ ಆಯಿತು. ನಾನು ಸುರಪಾನ ಮಾಡಬೇಕು ...ಮು ತನ್ನ ಗೆಳೆಯನನ್ನು ಬಲವಂತವಾಗಿ ಸಭೆಯಿಂದ ...ಂದ.

ಅಂದು ರಾತ್ರಿ ಆತ ಕಂಠಮಟ್ಟ ಕುಡಿದು ಗಾಡಿ ...ದ ಆಯಾ ತಪ್ಪಿ ಉರುಳಿಬಿದ್ದ. ತಣ್ಣಗೆ ಬೆಳಕು ...ಯುವಷ್ಟರಲ್ಲಿ ಆತ ವಿಧಿ ವಶನಾದ. ತನ್ನ ಜೀವದ ...ರು ತೀರಿಕೊಂಡ ಕಾರಣಕ್ಕೆ ಮತ್ತೊಬ್ಬ ವರ್ತಕ ಅತಿ ...ರ ದುಃಖಕ್ಕೆ ಒಳಗಾದ, ಆದರೂ ಅವನ ಮನದಲ್ಲಿ ...ದ್ಧನ ಬೋಧನೆ ಪ್ರತಿಧ್ವನಿಸುತ್ತಿತ್ತು. 'ಉಪಕಾರಿಗಳಾಗಿ ... ಹುಟ್ಟಿದ ತಪ್ಪಿಗೆ ಈ ಜನಗಳ ಅಪಾರ ಋಣ ತಿಂದಿ ..., ಅದನ್ನು ತೀರಿಸಬೇಕು ಹೇಗೆ ಎಂದು ...ೀಚಿಸಿದ. ಕಷ್ಟಪಟ್ಟು ಹಗಲಿರುಳು ದುಡಿದ, ತಾನು ...ಾದಿಸಿದ ಬಹು ಭಾಗವನ್ನು ಜನರ ಕಷ್ಟಗಳಿಗೆ ವಿನಿ ...ೀಗಿಸಿದ, ಊರಿಗೆ ಉಪಕಾರಿಯಾದ. ನಾಡಿನಲ್ಲಿ ...ವಂತನಾದ. ಜನಗಳು ಆತನ ಉತ್ಕೃಷ್ಟ ಗುಣವನ್ನು ...ಚ್ಚಿ ಒಂದು ಪ್ರಾಂತ್ಯಕ್ಕೆ ದೊರೆಯನ್ನಾಗಿ ಮಾಡಿದರು.

ಪ್ರಜೆಗಳ ಋಣ ಅವನ ಮೇಲೆ ಮತ್ತೂ ಹೆಚ್ಚಾ ...ತು. ಪ್ರಜೆಗಳನ್ನೆಲ್ಲಾ ತನ್ನ ಮಕ್ಕಳಂತೆ, ಎರಡು ಕಣ್ಣಿ ...ತೆ ಬಗೆದು ಕಾಪಾಡಿದ. ಆ ರಾಜ್ಯದಲ್ಲಿ ಸಮಾನತೆ, ...ಸತ್ತು, ವಿದ್ಯೆ ಮತ್ತೆ ಪ್ರಜಾಪ್ರಭುತ್ವ ವ್ಯವಸ್ಥೆ ಗೋಚರಿ ... ತನ್ನ ರಾಜ್ಯಕ್ಕೆ ತನ್ನ ಮಾನಸ ಗುರು ಅಸಂಖ್ಯಾತ ...ಗಳೊಡನೆ ಬಂದು ನೆಲೆಸಿರುವ ವಿಷಯ ತಿಳಿಯಿತು. ...ಅರ ಸಂತೋಷದಿಂದ ಬುದ್ಧನನ್ನು ಸಂಧಿಸಿದ ಆ ...ದೆ ತನ್ನ ಪರಿಚಯವನ್ನು ಮಾಡಿಕೊಂಡು ಅಪಾರ ...ಯಿಂದ ವಂದಿಸಿದ. ನಾಳಿನ ಭೋಜನಕ್ಕೆ ತಮ್ಮ ...ಗಳೊಂದಿಗೆ ಅರಮನೆಗೆ ಆಹ್ವಾನಿಸಿದ. ತನ್ನ ಬದಲಾ ...ಗೆ ತಾವೇ ಕಾರಣವೆಂದು, ತಮ್ಮ ಉಪದೇಶವೇ ...ಣವೆಂದು, ತನ್ನ ವಿನಯ ಮತ್ತು ಮುಗ್ಧತೆಯನ್ನು ...ಡಿಕೊಂಡ. ಆ ದೊರೆಯ ಆಹ್ವಾನವನ್ನು ಮನ್ನಿಸಿ ...ದಿನ ಬುದ್ಧ ಆ ದೊರೆಯ ಆತಿಥ್ಯವನ್ನು ಸ್ವೀಕರಿಸಿದ. ... ಆ ದೊರೆ ಬುದ್ಧನನ್ನು ಉದ್ದೇಶಿಸಿ

'ಹೌದು ಗುರುದೇವಾ, ನೀನು ಋಣ ಪರಿಹಾರ ... ಸರಿ...! ಯುಗ ಧರ್ಮಗಳ ಪರಿವರ್ತಕನೇ ಸರಿ...!! ...ನವೆಂಬ ಕೆಸರಿನಲ್ಲಿ ಹೂತ ಕಾಡಾನೆಗಳನ್ನು ...ಸಿದ ಮಾವುತನೇ ಸರಿ...!!!' ಎಂದು ತಲೆಬಾಗಿ ...ಸಿದ. □

'ನಾನು ಸರ್ವಜ್ಞನಲ್ಲ'



ಮಹಾಪಂಡಿತನೂ, ವೇದಾಂತಿಯೂ, ವಾಗ್ಮಿಯೂ ಆಗಿದ್ದ ಭಾರದ್ವಾಜನು ಬುದ್ಧನನ್ನು ಸಂಧಿಸಿ ಹೀಗೆ ಪ್ರಶ್ನಿಸಿದ:

'ಗೌತಮರೇ, ಈ ವಿಶ್ವ ಹೇಗೆ ಸೃಷ್ಟಿಯಾಯಿತು?'

'ಭಾರದ್ವಾಜರೇ, ನಾನು ಸರ್ವಜ್ಞನಲ್ಲ ಹಾಗಾಗಿ ನಾನು ಆ ಬಗ್ಗೆ ಉತ್ತರಿಸಲಾರೆ. ವೈದಿಕ ಧರ್ಮದ ಪ್ರಕಾರ ಈ ವಿಶ್ವದ ಸೃಷ್ಟಿ ಯಾರಿಂದ ಆಯಿತು'

'ಗೌತಮರೇ, ಈ ವಿಶ್ವದ ಸೃಷ್ಟಿ ಬ್ರಹ್ಮನಿಂದ ಆಯಿತು'

'ಭಾರದ್ವಾಜರೇ, ಪ್ರಜಾಪತಿಯಿಂದಲೂ ಆಯಿತು. ಈ ವಿಶ್ವವನ್ನು ಸೃಷ್ಟಿಸುವ ಸಲುವಾಗಿ ಪ್ರಜಾಪತಿ ತನ್ನನ್ನೆ ತಾನು ಬಲಿಕೊಟ್ಟುಕೊಂಡ ಎಂಬ ಪ್ರತೀತಿಯೂ ಇದೆ.'

'ಭಾರದ್ವಾಜರೇ, ಈ ವಾದದಲ್ಲಿ ಗೊಂದಲವಿಲ್ಲವೇ?'

'ಗೌವತಮರೇ, ಇದನ್ನೇ ಮೂರು ವೇದಗಳು ಸಾರಿ ಸಾರಿ ಹೇಳುತ್ತವೆ.'

'ಭಾರದ್ವಾಜರೇ, ಇದಕ್ಕೆ ಆಧಾರವೇನು?'

'ಗೌತಮರೇ, ವೇದಗಳ ಪ್ರಮಾಣವೇ ಆಧಾರ'

'ಭಾರದ್ವಾಜರೇ, ಮತ್ತೆ ನಾನು ಅದೇ ಪ್ರಶ್ನೆ ಕೇಳುತ್ತೇನೆ, ವೇದಗಳ ಸಾರಕ್ಕೆ ಮೂಲ ಆಧಾರಗಳೇನು?'

'ಗೌತಮರೇ, ನಂಬಿಕೆಯೇ ಆಧಾರ!'

'ಭಾರದ್ವಾಜರೇ, ಈ ನಂಬಿಕೆ ನಿಂತಿರುವುದು ಊಹೆಯ ಮೇಲಲ್ಲವೇ?'

'ಗೌತಮರೇ, ಈ ವಿಶ್ವ ಬ್ರಹ್ಮ ಅಥವಾ ಪ್ರಜಾಪತಿಯಿಂದ ಸೃಷ್ಟಿಯಾಯಿತು ಎಂಬುದನ್ನು ಅಲ್ಲಗಳೆಯುವ ನೀನು ಈ ವಿಶ್ವ ಶಾಶ್ವತವೋ ಅಶಾಶ್ವತವೋ?'

ಭಾರದ್ವಾಜರೇ: ನಾನು ಸರ್ವಜ್ಞನಲ್ಲ ಎಂಬ ಪದವನ್ನು ಮತ್ತೆ ಪುರ್ನರುಚ್ಚರಿಸುತ್ತೇನೆ! ತಮ್ಮ ಎರಡನೆಯ ಪ್ರಶ್ನೆಗೆ ನಾನು ಉತ್ತರಿಸಲು ನಿರಾಕರಿಸುತ್ತೇನೆ. ಏಕೆಂದರೆ ಇಲ್ಲಿಯೂ ಹಲವು ಗೊಂದಲಗಳಿವೆ. ಕೆಲವರು ಈ ವಿಶ್ವ 'ಶಾಶ್ವತ'ವೆಂದು ಹೇಳಿದರೆ ಮತ್ತೆ ಕೆಲವರು ಅಶಾಶ್ವತ' ಎನ್ನುತ್ತಾರೆ. 'ಸಾಂತ' ಎನ್ನುತ್ತಾರೆ ಹಾಗೆಯೇ 'ಅನಂತ' ಎನ್ನುತ್ತಾರೆ. ಸತ್ಯ ಎಂಬುದು ಯಾವಾಗಲೂ ಒಂದೇ ಆಗಿರುತ್ತದೆ ಅಲ್ಲವೆ? ಅನೇಕ ಆಗಲು ಹೇಗೆ ಸಾಧ್ಯ?

'ಗೌತಮರೇ, ಈ ಎರಡೂ ಪ್ರಶ್ನೆಯನ್ನು ನಿರಾಕರಿಸಲು ಕಾರಣವೇನು?'

'ಭಾರದ್ವಾಜರೇ, ಮನುಷ್ಯ ಮನುಷ್ಯರ ಸಂಬಂಧ 'ದಲ್ಲಿ ಈ ಊಹಾತ್ಮಕ ಸಿದ್ಧಾಂತಗಳನ್ನು ಧರ್ಮದ ಭಾಗಗಳನ್ನಾಗಿ ಮಾಡುವುದು ಸರಿಯೆ? ಏಕೆಂದರೆ ಅವುಗಳನ್ನು ಯಾರೂ ಪರೀಕ್ಷಿಸಿಲ್ಲ, ಎಂದೂ ಪರೀಕ್ಷಿಸಲು ಸಾಧ್ಯವಿಲ್ಲ. ಯಾರೂ ಎಲ್ಲವನ್ನೂ ಕಂಡಿಲ್ಲ. ತಿಳಿದಿಲ್ಲ. ನಮ್ಮ ಮಿತಿಗೆ, ಆಯುಷ್ಯಕ್ಕೆ ಕೊನೆ ಇದಿಯೇ ಹೊರತು ಜ್ಞಾನಕ್ಕೆ ಕೊನೆಯೇ ಇಲ್ಲ. ನಮ್ಮ ಬದುಕಿನ ಅಲ್ಪ ಕಾಲದಲ್ಲಿ ನಾವು ಎಲ್ಲವನ್ನೂ ತಿಳಿದೆವೆನ್ನುವುದು ತಪ್ಪು. ಎಲ್ಲ ಕಾಲದಲ್ಲಿಯೂ ಅಜ್ಞೇಯವಾದುದು ಅಥವಾ ತಿಳಿಯುವಂಥದ್ದು ಇದ್ದೇ ಇರುತ್ತೆ. ಈ ಪ್ರಶ್ನೆಗಳಿಗೆ ಉತ್ತರಿಸಲು 'ಸರ್ವಜ್ಞತೆ' ಇರುಬೇಕು. ಅದು ಯಾರಿಗೂ ಇಲ್ಲ. ಅದಕ್ಕೆ ಬದಲಾಗಿ ನಮ್ಮ ಸಮರ್ಥನೆಯನ್ನು ಹೀಗೆ ಮಂಡಿಸುವುದು ಸಮಂಜಸವಲ್ಲವೆ. ಅದೆಂದರೆ: ಸೃಷ್ಟಿಸಲ್ಪಟ್ಟಿತು ಎಂಬುದಕ್ಕೆ ಬದಲಾಗಿ ಸಂಯುಕ್ತ ವಸ್ತುಗಳಿಂದ ವಿಕಾಸ ಹೊಂದಿತು ಎಂಬುದು ಸತ್ಯಕ್ಕೆ ಸಮೀಪವಲ್ಲವೆ' ಎಂದ! ಆಗ ಭಾರದ್ವಾಜರು ಬುದ್ಧನನ್ನು ಉದೇಶಿಸಿ ಹೀಗೆ ಶ್ಲಾಘಿಸಿದರು:

'ಹೌದು ಗೌತಮರೇ, ನಿಮ್ಮ ವಾದದಲ್ಲಿ ವಿತಂಡತನವಿಲ್ಲ! ನಿಮ್ಮ ದೃಷ್ಟಿಯೂ ನೇರವೂ, ಸರಳವೂ, ಸಂಪನ್ನವೂ ಆಗಿದೆ!! ಮೂರು ವೇದಗಳು ನೂರಾರು ಋಷಿ ಮುನಿಗಳು ಬಿಡಿಸಲಾಗದ ಸಮಸ್ಯೆಯನ್ನು ಕ್ಷಣ ಮಾತ್ರದಲ್ಲಿ ಬಿಡಿಸಿದ ತಮಗೆ ವಂದನೆ!!!' ಎಂದ. □

'SAMVADA' Kannada Monthly, JULY 2006 RNI-KAR KAN/2002/9246 CPMG/KA/BGW-706/2006-0
Office of Posting: RAJAJINAGAR HO, Date of Posting: 27-28 of Every Month

ಚಿಕುಂಗುನ್ಯ: ಗಾಬರಿ ಬೇಡ: ನಿಮಗಿದು ತಿಳಿದಿರಲಿ

ಇದು ಒಂದು ವೈರಸ್ ಕಾಯಿಲೆಯೆಂದು ಖಚಿತಪಟ್ಟಿರುತ್ತದೆ. ಈ ಕಾಯಿಲೆಯಿಂದ ನರಳುವವರು ಇದ್ದಕ್ಕಿದ್ದಂತೆ ಸಾಧಾರಣದಿಂದ ತೀವ್ರ ಜ್ವರಕ್ಕೊಳಗಾಗಿ ಮೈ ಕೈ ನೋವು ತಲೆನೋವು, ಸ್ನಾಯು ಮತ್ತು ಕೀಲುಗಳಲ್ಲಿ ತೀವ್ರತರವಾದ ನೋವು, ಕಣ್ಣುಗಳು ಕೆಂಪಾಗುವಿಕೆ, ನಿಶ್ಯಕ್ತಿಗೀಡಾಗಿ ಓಡಾಡಲು ಸಹ ಅಶಕ್ತರಾಗುತ್ತಾರೆ. ಕ್ರಮೇಣ ೮-೧೦ ದಿವಸಗಳಲ್ಲಿ ತಾವಾಗಿಯೇ ಗುಣಮುಖರಾಗಿರುತ್ತಾರೆ. ಈ ರೋಗ ಮಾರಣಾಂತಿಕವಲ್ಲವೆಂಬುದನ್ನು ಮರೆಯಬಾರದು.

ಮೇಲೆ ತಿಳಿಸಿರುವ ಚಿಕುಂಗುನ್ಯ ಜ್ವರದ ಚಿಹ್ನೆಗಳು ಕಾಣಿಸಿದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆ ಸಂಪರ್ಕಿಸಿ ಚಿಕಿತ್ಸೆ ಪಡೆಯಬೇಕು.

ಈ ರೋಗ ಹರಡಲು ಈಡಿಸ್ ಈಜಿಪ್ಟೈ ಸೊಳ್ಳೆಗಳು ಕಾರಣವಾಗಿರುವುದರಿಂದ ಈ ಸೊಳ್ಳೆಗಳು ಉತ್ಪತ್ತಿಯಾಗುವ ತಾಣಗಳಾದ ನೀರು ಶೇಖರಣಾ ತೊಟ್ಟಿ, ಡ್ರಮ್‌ಗಳು, ಬ್ಯಾರಲ್‌ಗಳು ಮುಂತಾದವುಗಳಲ್ಲಿನ ನೀರನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಒಣಗಿಸಿ ಮತ್ತೆ ಭರ್ತಿ ಮಾಡಿಕೊಳ್ಳಬೇಕು ಹಾಗೂ ಇವುಗಳನ್ನು ಭದ್ರವಾದ ಮುಚ್ಚಳದಿಂದ ಮುಚ್ಚಬೇಕು. ಒಡೆದ ಟೈರು, ಪ್ಲಾಸ್ಟಿಕ್ ಕಪ್ಪು, ಒಡೆದ ಬಾಟಲಿ, ಟಿನ್ನು ತೆಂಗಿನ ಚಿಪ್ಪುಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ಏರ್ ಕಂಡೀಷನರ್, ರೆಫ್ರಿಜಿರೇಟರ್‌ಗಳಲ್ಲಿನ ನೀರನ್ನು ತೊಟ್ಟಿಗಳನ್ನು ಪ್ರತಿ ವಾರ ಖಾಲಿ ಮಾಡಿ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು. ಹಗಲಿನಲ್ಲಿ ಕಚ್ಚುವ ಈ ಸೊಳ್ಳೆಗಳು ಚಿಕುಂಗುನ್ಯ ಜ್ವರವನ್ನು ಹರಡುತ್ತವೆ. ಮಲಗುವ ವೇಳೆಯಲ್ಲಿ ಸೊಳ್ಳೆಯ ಪರದೆಯನ್ನು ಉಪಯೋಗಿಸುವುದರಿಂದ ರೋಗ ಹರಡುವುದನ್ನು ನಿಯಂತ್ರಿಸಬಹುದು.

ಆರೋಗ್ಯ ಇಲಾಖೆಯು ಕೈಗೊಂಡಿರುವ ಜ್ವರ ನಿಯಂತ್ರಣ ಕ್ರಮಗಳಿಗೆ ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.

-ಸೊಳ್ಳೆಗಳ ನಿಯಂತ್ರಣ ನಮ್ಮ ನಿಮ್ಮೆಲ್ಲರ ಕರ್ತವ್ಯ

ಕರ್ನಾಟಕ ವಾರ್ತೆ
Karnataka Information

ಸುವರ್ಣ ಕರ್ನಾಟಕದ ವರ್ಷ: 2006–07